ಅಲೆಮಾರಿ ಸಮುದಾಯಗಳ ಅಧ್ಯಯನಮಾಲೆ

ಕಂಜರಭಾಟ

ಜೆ ವ್ಹಿ ಬಾಗಡೆ



ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು

ಕರ್ನಾಟಕ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ ೧೯

ಕಂಜರಭಾಟ

ಜೆ ವ್ಹಿ ಬಾಗಡೆ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ ಸಿ ರಸ್ತೆ, ಬೆಂಗಳೂರು ೫೬೦ ೦೦೨

ದೂರವಾಣಿ ೦೮೦ ೨೨೪೮ ೪೫೧೬

Kanjarbhaat (Karnataka Nomadic Community Studies-18) by **J.V. Bagade**, Published by **Ashok N. Chalawadi,** Administrative Officer, Kannada Pustaka Pradhikara, Kannada Bhavana, J.C. Road, Bangalooru-560 002.

ಮೊದಲ ಮುದ್ರಣ: ೨೦೦೮
ಪುಟಗಳು : xxxiv + ೧೬೨
ಬೆಲೆ : **ರೂ. ೭೦/-**
ಪ್ರತಿಗಳು : ೧೦೦೦

First Print : 2008
Page : xxxiv + 162
Price : **Rs. 70/-**
Copies : 1000
ISBN : 81-7713-231-8

ಪ್ರಕಾಶಕರು
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು–೫೬೦ ೦೦೨

ಮುಖಪುಟ ವಿನ್ಯಾಸ : **ಪ್ರತಾಪ ರಾ ಬಹುರೂಪಿ,** ಬೆಳಗಾವಿ
ಕರಡು ತಿದ್ದಿದವರು : ಡಾ. ಆರ್.ಬಿ. ಕುಮಾರ್, ರಾಮಸಾಗರ

ಅಕ್ಷರ ಜೋಡಣೆ :
ಭಾವನಾ ಗ್ರಾಫಿಕ್ಸ್
ಕಮಲಾಪುರ–೫೮೩ ೨೨೧

ಮುದ್ರಕರು :
ರಾಜಾ ಪ್ರಿಂಟರ್ಸ್
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಬೆಂಗಳೂರು–೫೬೦ ೦೨೭, ದೂ: ೨೨೨೩೪೦೬೬

ಸಂಪಾದಕ ಮಂಡಳಿ

ಪ್ರಧಾನ ಸಂಪಾದಕರು

ಪ್ರೊ ಎಸ್ ಜಿ ಸಿದ್ಧರಾಮಯ್ಯ

ಸಂಪಾದಕರು

ಡಾ ಕೆ ಎಂ ಮೇತ್ರಿ

ಪ್ರಕಾಶಕರು

ಅಶೋಕ ಎನ್ ಚಲವಾದಿ

ಸಲಹಾ ಸಮಿತಿಯ ಸದಸ್ಯರು

ಕೆ ಭಾಸ್ಕರದಾಸ್ ಎಕ್ಕಾರು	ಹಂಸಲೇಖ
ಶೇಷಪ್ಪ ಅಂದೊಳ್ಳು	ಡಾ ಕಾಶಿನಾಥ ಅಂಬಲಗಿ
ಡಾ ಶರಣಮ್ಮ ಗೊರೆಬಾಳ	ಶೀಲಾ ತಿವಾರಿ
	ಹೊರೆಯಾಲ ದೊರೆಸ್ವಾಮಿ

ಲೇಖಕರು ಮತ್ತು ಸಂಪಾದಕ ಮಂಡಳಿಯ ಸದಸ್ಯರು

ಪುಸ್ತಕಗಳು	ಲೇಖಕರು
೦೧. ಬುಡ್ಗ ಜಂಗಮ	ಬಾಲಗುರುಮೂರ್ತಿ, ಪ್ರತಾಪ ರಾ ಬಹುರೂಪಿ
೦೨. ಚೆನ್ನ ದಾಸರ	ಡಾ ಯಲ್ಲಪ್ಪ ಬಿ ಹಿಮ್ಮಡಿ
೦೩. ದಕ್ಕಲಿಗ	ಜಾನಕಲ್ ರಾಜಣ್ಣಾ ಎಂ
೦೪. ಗೋಸಂಗಿ	ಅಪ್ಪಾಜಿ ಎಸ್ ಸಿಂಧೆ, ಕೆ ಚಾವಡೆ ಲೋಕೇಶ್
೦೫. ಹಂದಿ ಜೋಗಿ	ಚಂದ್ರಪ್ಪ, ಎಂ ದುಷಂತ್
೦೬. ಕೊರಮ	ಮಲ್ಲಿಕಾರ್ಜುನ ಬಿ ಮಾನ್ಪಡೆ
೦೭. ಶಿಳ್ಳೇಕ್ಯಾತ	ಡಾ ಸಣ್ಣವೀರಣ್ಣಾ ದೊಡ್ಡಮನಿ, ಪಿ ಮಹೇಂದ್ರರಾವ್ ಸಾಸ್ನಿಕ್
೦೮. ಸಿಂಧೊಳ್ಳು	ಡಾ ದೊಡ್ಡಮನಿ ಲೋಕರಾಜ,ಶ್ರೀನಿವಾಸ್ ಎಸ್ ರಾವುಲೋಳ್
೦೯. ಸುಡುಗಾಡು ಸಿದ್ಧ	ಎಂ ಎಸ್ ಗಂಟಿ
೧೦. ಡುಂಗ್ರಿ ಗರಾಸಿಯ	ಜಗದೀಶ ಕೆ ಕೆ
೧೧. ಹಕ್ಕಿಪಿಕ್ಕಿ	ಕುಮುದಾ ಬಿ ಸುಶೀಲಪ್ಪ
೧೨. ಪಾರ್ಧಿ.	ಡಾ ಲಕ್ಕಿ ಪೃಥ್ವಿರಾಜ್, ಎಚ್ ಪಿ ಶಿಕಾರಿ ರಾಮು
೧೩. ರಾಜಗೊಂಡ	ಡಾ ಕೆ ಎಂ ಮೇತ್ರಿ, ಸುದರ್ಶನ್ ಸೆಡ್ಮಾಕಿ
೧೪. ಬೈಲಪತ್ತಾರ	ವಿಶ್ವನಾಥ ಎಲ್ ಬೈಲಪತ್ತಾರ, ಜಗನ್ನಾಥ ಎಂ ಬೈಲಪತ್ತಾರ
೧೫. ದೊಂಬಿದಾಸ	ಕುಪ್ಪೆ ನಾಗರಾಜ
೧೬. ಘಿಸಾಡಿ	ಡಾ ಬಸವರಾಜ ಎಸ್ ಹಿರೇಮಠ, ಅಂಜಲಿ ಸಾಳುಂಕಿ
೧೭. ಗೋಂಧಳಿ	ಶಿವಾನಂದ ಲ ಪಾಚಂಗಿ
೧೮. ಕಂಜರಭಾಟ	ಜೆ ವ್ಹಿ ಬಾಗಡೆ
೧೯. ಸಿಕ್ಲಿಗರ	ಡಾ ಚಲವಾದಿ ಬಸವರಾಜ, ಶೇಖರಸಿಂಗ್ ಎಸ್
೨೦. ಅಲೆಮಾರಿ ಕುರುಬ	ಡಾ ಯರ್ರಪ್ಪ ಡಿ
೨೧. ಕಾಡುಗೊಲ್ಲ	ಡಾ ಎಂ ಗುರುಲಿಂಗಯ್ಯ, ವಿ ನಾಗಪ್ಪ

ಅಧ್ಯಕ್ಷರ ಮಾತು

ನಮ್ಮದು ಬಹು ಸಂಸ್ಕೃತಿಗಳ ಸಮಾಜ. ಗಣತಿಯಲ್ಲಿ ಲೆಕ್ಕಕ್ಕೆ ಸಿಕ್ಕವು ಕೆಲವಾದರೆ, ಸಿಗದವು ಹಲವು, ಲೆಕ್ಕಕ್ಕೆ ಸಿಕ್ಕಿಯೂ ಸರಿಯಾಗಿ ಪರಿಗಣನೆಗೆ ಬಾರದೆ ತಪ್ಪು ನಮೂದಾಗಿರುವ ಸಮುದಾಯಗಳು ಇನ್ನೂ ಹಲವಾರಿವೆ. ಅದರಲ್ಲೂ ಅಲೆಮಾರಿ ಸಮುದಾಯಗಳಿಗೆ ಗಣತಿಯ ವಿಚಾರದಲ್ಲಿ ಆಗಿರುವ ಅಧ್ವಾನ ಅನ್ಯಾಯ ಅಪಾರವಾದುದು. ಎಷ್ಟೋ ಅಲೆಮಾರಿ ಸಮುದಾಯಗಳಿಗೆ ಇಂದಿಗೂ ಹೇಳಿಕೊಳ್ಳಲು ಒಂದು ನಿರ್ದಿಷ್ಟ ನೆಲೆ ಇಲ್ಲ. ಇಂದು ಇಲ್ಲಿ, ನಾಳೆ ಅಲ್ಲಿ, ನಾಡಿದ್ದು ಇನ್ನೆಲ್ಲೋ ಎನ್ನುವ ಸ್ಥಿತಿಯಲ್ಲಿ ಹಲವಾರು ಅಲೆಮಾರಿ ಕುಟುಂಬಗಳು ಜೀವನೋಪಾಯಕ್ಕಾಗಿ ಇಂದಿಗೂ ಅಲೆದಾಡುತ್ತಲೇ ಇವೆ. ಇದರಿಂದಾಗಿ ಅವರಿಗೆ ಅವರದೇ ಆದ ಭೂಮಿ ಕಾಣಿ ಊರು ಕೇರಿ ಎಂಬುದು ಇಲ್ಲ. ಎಷ್ಟೋ ಅಲೆಮಾರಿ ಸಮುದಾಯಗಳಿಗೆ ನಿರ್ದಿಷ್ಟವಾದ ಹೆಸರೂ ಇಲ್ಲ. ಕರ್ನಾಟಕದಲ್ಲೇ ಒಂದು ನಿರ್ದಿಷ್ಟ ಅಲೆಮಾರಿ ಸಮುದಾಯವನ್ನು ಹಲವಾರು ಹೆಸರುಗಳಲ್ಲಿ ಕರೆಯುವುದು ಕಂಡುಬರುತ್ತದೆ. ಒಂದು ಸಮುದಾಯವನ್ನು ಮೈಸೂರು ಕಡೆ ಒಂದು ಹೆಸರಿನಲ್ಲಿ ಗುರುತಿಸಿದರೆ, ಅದೇ ಸಮುದಾಯವನ್ನು ಉತ್ತರ ಕರ್ನಾಟಕದ ಭಾಗಗಳಲ್ಲಿ ಬೇರೆ ಬೇರೆ ಹೆಸರುಗಳಲ್ಲಿ ಗುರುತಿಸಲಾಗುತ್ತಿದೆ. ಹಾಗೆಯೇ ಕರ್ನಾಟಕವನ್ನು ಬಿಟ್ಟು ಗಡಿ ಭಾಗಗಳಲ್ಲಿ ಸಂಚರಿಸುವಾಗ ಅಲ್ಲೆಲ್ಲ ಬೇರೆ ಬೇರೆ ಹೆಸರುಗಳಲ್ಲಿ ಇವುಗಳನ್ನು ಕರೆಯಲಾಗುತ್ತಿದೆ. ಹೀಗೆ ನಿರ್ದಿಷ್ಟ ಗುರುತಿಗೆ (ಐಡೆಂಟಿಟಿ) ಸಿಗದೆ ಬಹುನಾಮಗಳಿಗೆ ಒಳಗಾಗುವುದರಿಂದ ಆಗುವ ಅಪಾಯಗಳ ಅರಿವಿಲ್ಲದೆ ಆ ಸಮುದಾಯಗಳು ಬದುಕಿವೆ. ಇದರ ಜೊತೆಗೆ ಶಿಕ್ಷಣ ವಂಚಿತ ಮಕ್ಕಳು ಬದುಕಿನ ಮುಖ್ಯ ಪ್ರವಾಹದಲ್ಲಿ ಪಾಲ್ಗೊಳ್ಳದೆ ಹೋಗುವ ದುರ್ಗತಿ ಅವರ ನಿತ್ಯದ ನರಕವಾಗಿದೆ. ಯಾವುದೇ ಅಲೆಮಾರಿ ಸಮುದಾಯವನ್ನು ತೆಗೆದುಕೊಂಡರೂ ಆ ಸಮುದಾಯ ನಿರ್ದಿಷ್ಟವಾಗಿ ಯಾವುದೇ ಒಂದು ಭಾಷೆಗೆ ತನ್ನನ್ನು ಕಟ್ಟಿ ಹಾಕಿಕೊಂಡಿರುವುದಿಲ್ಲ. ಒಂದು ಅಲೆಮಾರಿ ಸಮುದಾಯ ಕನಿಷ್ಠ ೪ ಭಾಷೆಗಳನ್ನು ತನ್ನ ನಿತ್ಯ ಬಳಕೆಗೆ ವಾಹಕವಾಗಿಸಿಕೊಂಡಿದೆ. ಇವುಗಳಲ್ಲಿ ಅವರ ಮಾತೃಭಾಷೆ ಯಾವುದು ಎಂಬುದು ಗೊತ್ತಾಗಲಾರದ ಮಟ್ಟಿಗೆ ಅವರಾಡುವ ಭಾಷೆಗಳ ಪ್ರಯೋಗ ಪರಿಣತಿ ಅವರಲ್ಲಿ ಪ್ರಬುದ್ಧವಾಗಿದೆ. ಇಂಥ ಸಮುದಾಯಮೂಲಗಳ ಪ್ರತಿಭೆಗಳಿಗೆ ಶಿಕ್ಷಣ,

ದುಡಿಮೆ, ಅಧಿಕಾರ, ಸ್ಪರ್ಧೆ, ರಾಜಕೀಯ ಇತ್ಯಾದಿ ಕ್ಷೇತ್ರಗಳು ತೆರೆದುಕೊಂಡರೆ ಹೊಸ ವಿಸ್ತರಣೆಗಳ ಸಾಧ್ಯತೆಗಳು ಅಪಾರವಾಗಿರುತ್ತವೆ.

ಬುಡ್ಗಜಂಗಮ್‌ಸಮುದಾಯದವರ ರಾಜ್ಯಮಟ್ಟದ ಸಮಾವೇಶವೊಂದು ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ೨೦೦೫ರ ಆಗಸ್ಟ್ ೧೧ ಮತ್ತು ೧೨ ರಂದು ನಡೆಯಿತು. ಅಲ್ಲಿ ಅತಿಥಿಯಾಗಿ ಭಾಗವಹಿಸಿದ್ದೆ. ಆ ದಿನ ಅಂಬೇಡ್ಕರ್ ಭವನದ ತುಂಬಾ ವಿವಿಧ ವೇಷಧಾರಿಗಳು ಕುಂತಕಡೆ ಕೂರದೆ, ಅತ್ತಿಂದಿತ್ತ ಓಡಾಡುತ್ತಿದ್ದರು. ಬಹಳಷ್ಟು ಜನರ ಹೆಗಲಮೇಲೆ ಒಂದು ಮಾರುದ್ದದ ಕೋಲು ಅದಕ್ಕೆ ನೇತು ಬಿದ್ದ ಒಂದು ಹಸಿಬೆ ಚೀಲ, ಕೆಲವರು ಕಸೆಪಂಚೆ ಉಟ್ಟಿದ್ದರೆ, ಇನ್ನು ಕೆಲವರು ಬಣ್ಣಬಣ್ಣದ ಲುಂಗಿ, ಮೇಲೆ ತೊಟ್ಟ ಶರಟು ರಂಗು ರಂಗಿನ ವಿಚಿತ್ರ ಬಣ್ಣದ್ದು. ಇವರ ಮಧ್ಯೆ ಪುರಾಣ ಕಾಲದ ರಾಮ, ರಾವಣ, ಲಕ್ಷ್ಮಣ, ಸೀತೆ, ಹನುಮಂತ, ಶೂರ್ಪನಖಿ ವೇಷಧಾರಿಗಳು. ಕೆಲವರು ಹೆಗಲಿಗೆ ನೇತು ಹಾಕಿಕೊಂಡ ತಮಟೆ, ಮೃದಂಗ, ಡೋಲುಗಳನ್ನು ಹೊತ್ತೇ ಓಡಾಡುತ್ತಿದ್ದರೆ, ಇವರೆಲ್ಲರ ಮಧ್ಯೆ ಕೆಲವರು ಪ್ಯಾಂಟು, ಶರಟು ಸೂಟುಧಾರಿಗಳು ತುಂಬಾ ಶ್ರಮದಲ್ಲಿ ಅವರನ್ನು ಕೂರಿಸಲು ಪ್ರಯತ್ನಿಸುತ್ತಿದ್ದರು. ಅವರ ಮನವಿಗಳು ಯಾರ ಕಿವಿಗೂ ಕೇಳಿಸಿದಂತೆ ಕಾಣುತ್ತಿರಲಿಲ್ಲ. ಸ್ಟೇಜಿನ ಮೇಲಿಂದ ವ್ಯವಸ್ಥಾಪಕರ ಪೈಕಿಯ ಯುವ ಮುಂದಾಳು ಬಾಲಗುರುಮೂರ್ತಿ, ಮೈಕಿನಿಂದ ಪದೇ ಪದೇ ಎಲ್ಲರನ್ನೂ ಕುಳಿತು ಕೊಳ್ಳುವಂತೆ ಬಂದ ಅತಿಥಿಗಳ ಮಾತನ್ನು ಕೇಳಿಸಿಕೊಳ್ಳುವಂತೆ ಮನವಿ ಮಾಡುತ್ತಿದ್ದರು. ಯಾರಿಗೂ ಕೂರುವುದು ಬೇಕಿರಲಿಲ್ಲ. ಆ ವಿಚಿತ್ರ ಸನ್ನಿವೇಶ ಅವರ ಬದುಕನ್ನು ಪ್ರತಿಬಿಂಬಿಸುವ ಒಂದು ಘಟನೆಯಾಗಿ ನನಗೆ ಭಾಸವಾಯಿತು. ಜೀವನದುದ್ದಕ್ಕೂ ಎಲ್ಲಿಯೂ ನೆಲೆ ನಿಂತವರಲ್ಲ ಅವರು. ಅಲೆಮಾರಿತನವೇ ಜೀವನಗತಿಯಾದ ಅವರಿಗೆ ಒಂದು ಕಡೆ ಗಂಟೆಗಟ್ಟಲೆ ಕೂರುವುದು ಅಭ್ಯಾಸವಿಲ್ಲದ ಹಾಗೂ ಒಗ್ಗದ ಕೆಲಸ. ಅವರಲ್ಲಿ ವೇಷಧಾರಿಗಳಾಗಿದ್ದವರಿಗೆ ಸ್ಟೇಜಿನ ಮೇಲೆ ತಮ್ಮ ಪ್ರದರ್ಶನ ನೀಡುವ ಆತುರ. ಆದರೆ, ವ್ಯವಸ್ಥಾಪಕರಿಗೆ ಅದಕ್ಕಿಂತ ಮುಖ್ಯವಾಗಿ ಸಂಘಟನೆ ಶಿಕ್ಷಣ ಹೋರಾಟದ ಹಾದಿಯನ್ನು ಅವರಿಗೆ ತಿಳಿಸಿ, ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ತಿಳಿವಳಿಕೆ ನೀಡುವ ತುರ್ತು. ಸಂಘಟನೆಗಾಗಿ ಶ್ರಮಿಸುತ್ತಿರುವ ಯುವಕರ ಹರಸಾಹಸ ಅದಕ್ಕೆ ಕಿವಿಗೊಡದೆ ತಮ್ಮ ಸಾಂಪ್ರದಾಯಿಕ ಜೀವನ ಶೈಲಿಯಲ್ಲಿ ಭ್ರಮಾತ್ಮಕ ಸಂಭ್ರಮದಲ್ಲಿರುವ ಜನಸ್ತೋಮ. ಎಚ್ಚೆತ್ತ ಯುವಕರು ಕ್ರಮಿಸಬೇಕಾದ ದಾರಿ ಇನ್ನೂ ತುಂಬಾ ದೂರವಿದೆ ಹಾಗೂ ಪ್ರಯಾಸದಾಯಕವಿದೆ ಎಂಬುದನ್ನು ಸಾರಿ-ಸಾರಿ ಹೇಳುತ್ತಿತ್ತು ಆ ಸನ್ನಿವೇಶ.

ಈ ದೇಶದ ಸಾಮಾಜಿಕ ವಿಸಂಗತಿ ಎಂದರೆ ಬಲಿಷ್ಠ ಜಾತಿಗಳು ದಿನದಿಂದ ದಿನಕ್ಕೆ ಸಾಂಸ್ಕೃತಿಕ ಮುಖವಾಡದಲ್ಲಿ ಹೆಚ್ಚು ಧೃವೀಕರಣಗೊಳ್ಳುತ್ತಿವೆ. ರಾಜಕೀಯ ಅಧಿಕಾರವನ್ನು ಹಿಡಿಯುವ ಪೈಪೋಟಿಯಲ್ಲಿ ತೊಡಗಿ ತನ್ನು ಖೇನ ಹೆಚ್ಚಿನ ಅನುಕೂಲತೆಗಳನ್ನು

ತಮ್ಮದಾಗಿಸಿಕೊಳ್ಳುತ್ತಿವೆ. ಶಿಕ್ಷಣ ಉದ್ಯೋಗ ರಾಜಕೀಯ ಅಧಿಕಾರವೆಂಬುದು ಉಳ್ಳವರ್ಗಗಳ ಶಕ್ತಿಯಾಗಿ ಬಳಕೆಯಾಗುತ್ತಿದೆ. ಆದರೆ, ಇದೆಲ್ಲದರಿಂದ ಗಾವುದ ಗಾವುದ ದೂರವಿರುವ ಇಂಥ ಅಲೆಮಾರಿ ಸಮುದಾಯಗಳು ಸಂಘಟನೆಯ ಪ್ರಾಥಮಿಕ ತಿಳಿವಳಿಕೆಯೂ ಇಲ್ಲದೆ ತಮ್ಮ ಹಕ್ಕಿನ ಭಾಗಗಳನ್ನು ಉಳ್ಳವರೇ ಉಣ್ಣುವಂತೆ ಮಾಡಿಕೊಂಡಿವೆ. ಇಂಥ ವಿಸಂಗತಿಯ ನಡುವೆ ಎಲ್ಲ ಅಲೆಮಾರಿ ಸಮುದಾಯಗಳ ಪ್ರಜ್ಞಾವಂತ ಯುವಕರು ತಮ್ಮ ಬದುಕಿನ ಆತ್ಮಾವಲೋಕನ ಮಾಡಿಕೊಂಡಂತೆ ಸಂಘಟನೆಗೆ ತೊಡಗಿದ್ದಾರೆ. ಈ ದೇಶದಲ್ಲಿ ಜಾತಿ ಹಾಗೂ ಸಮುದಾಯಗಳ ಹೆಸರಿನಲ್ಲಿ ಸಂಘಟಿತವಾಗುವ ನೈತಿಕ ಹಕ್ಕು ಇರುವುದು ಇಂಥ ವಂಚಿತ ಗುಂಪುಗಳಿಗೆ ಮಾತ್ರ. ಎಲ್ಲ ಸುಖ ಸವಲತ್ತುಗಳನ್ನು ಪಡೆದಿರುವ ಮೇಲಿನ ಸಂಘಟಿತ ಸಮುದಾಯಗಳು ನೈತಿಕವಾಗಿ ವಿಸರ್ಜನೆಗೊಳ್ಳುವ ಅಗತ್ಯವಿದೆ. ಸೆಕ್ಯುಲರ್ ಎನ್ನುವುದರ ನಿಜವಾದ ಅನುಭವ ನಮ್ಮ ನಡುವೆ ಸಂಭವಿಸುವುದು ಹೀಗೆ ವಿಸರ್ಜನೆಗೊಳ್ಳುವುದರಿಂದ ಮತ್ತು ಕಲೆ ಸಂಸ್ಕೃತಿ ಅಭಿರುಚಿ ಕಾಯಕಗಳ ಮುಖೇನ ಬದುಕಿಗೆ ಹೊಸಚಲನೆ ನೀಡಲು ಸಂಘಟನೆಯಾಗುವುದರಿಂದ. ಆದರೆ ವಸ್ತುಸ್ಥಿತಿ ಹೇಗಿದೆ ಎಂದರೆ, ಇಂದು ಬಲಿಷ್ಠ ಜಾತಿಗಳ ಧ್ರುವೀಕರಣಕ್ಕೆ ಕಲೆ ಸಂಸ್ಕೃತಿ ಧರ್ಮ ಕಾಯಕ ಇತ್ಯಾದಿಗಳು ಮುಖವಾಡಗಳಾಗಿ ಬಳಕೆಯಾಗುತ್ತಿವೆ. ತಮ್ಮ ಜೀವನ ನಿರ್ವಹಣೆಗೆ ಅಗತ್ಯವಾದ ತಮ್ಮ ಪಾಲಿನ ಹಕ್ಕಿಗಾಗಿ ಹೋರಾಡಲು ಸಂಘಟಿತವಾಗಬೇಕಾದ ಸಮುದಾಯಗಳು ಶಕ್ತಿರಾಜಕಾರಣದಲ್ಲಿ ದಾಳಗಳಾಗಿ ಬಳಕೆಯಾಗುತ್ತಿವೆ. ದಿನದಿಂದ ದಿನಕ್ಕೆ ಒಳಪಂಗಡಗಳ ಹೆಸರಿನಲ್ಲಿ ಛಿದ್ರಗೊಳ್ಳುತ್ತಿವೆ. ಇದನ್ನು ತಪ್ಪಿಸುವುದು ಇಂದಿನ ಸಾಮಾಜಿಕ ಹೊಣೆಯಾಗಿದೆ. ಆದರೆ, ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರಾರು? ಇಂಥ ಪ್ರಶ್ನೆಯನ್ನೇ ಮತ್ತೆ ಪ್ರಶ್ನಿಸುವ ಹೊಸ ಎಚ್ಚರ ಇಂದು ನಮ್ಮ ನಡುವೆ ಸಂಭಾವ್ಯವಾಗಬೇಕಿದೆ. ಬೆಕ್ಕಿಗೆ ಬಲಿಯಾಗದಂತೆ ಉಳಿಯುವ ಬೆಳೆಯುವ ಅರಿವಿನ ಎಚ್ಚರಿಕೆಯ ಸಂಘಟನೆಯಾದರೆ ಒಗ್ಗಟ್ಟಿನ ಬಲದಲ್ಲಿ ಗಂಟೆ ಕಟ್ಟುವ ಅಗತ್ಯವೇ ಬೀಳುವುದಿಲ್ಲ. ದುರಂತವೆಂದರೆ, ಇಂಥ ಎಚ್ಚರದ ಮನಸ್ಸುಗಳು ಸ್ವಾರ್ಥಕ್ಕೆ ಸಮುದಾಯಗಳ ಹಿತವನ್ನು ಬಲಿಗೊಡುವ ದಂದೆಗಿಳಿದಿವುದು. ಕಳೆದ ಮೂವತ್ತು ವರ್ಷಗಳ ಈ ಎಲ್ಲ ವಿದ್ಯಮಾನಗಳನ್ನು ಮನಸ್ಸಿನಾಳಕ್ಕೆ ತಂದುಕೊಂಡಂತೆ ಅಲೆಮಾರಿ ಸಮುದಾಯಗಳ ಮೂಲದಿಂದ ಬಂದ ಯುವಕರು ಒಕ್ಕೂಟ ರಚನೆಯಲ್ಲಿ ಆಸಕ್ತಿವಹಿಸಿ, ಸಂಕಲ್ಪಬದ್ಧ ಭಾವದಲ್ಲಿ ಸಂಘಟಿತವಾಗುತ್ತಿದ್ದಾರೆ. ಆ ಸಂಘಟನೆಯ ಫಲ ಇಂಥ ಅಧ್ಯಯನದ ಕಾರ್ಯ ಯೋಜನೆ.

ಈ ಮಾಲಿಕೆಯಲ್ಲಿ ಇಪ್ಪತ್ತೆರಡು ಅಲೆಮಾರಿ ಸಮುದಾಯಗಳ ಅಧ್ಯಯನವಿದೆ. ಈ ಅಧ್ಯಯನದಲ್ಲಿ ಇರುವ ವಿಶೇಷತೆ ಎಂದರೆ, ಇದು ಹೊರಗಿನವರು ನಡೆಸಿದ ಅಧ್ಯಯನವಲ್ಲ. ಆಯಾ ಸಮುದಾಯ ಮೂಲಗಳಿಂದ ಬಂದು ಅಕ್ಷರ ಜಗತ್ತಿಗೆ ತೆರೆದುಕೊಂಡಿರುವ ಎಚ್ಚೆತ್ತ ಯುವಕರು ತಮ್ಮ ತಮ್ಮ ಸಮುದಾಯಗಳ ಬಗ್ಗೆ

ಕ್ಷೇತ್ರಾಧ್ಯಯನ ನಡೆಸಿ ಕಟ್ಟಿಕೊಟ್ಟಿರುವ ವಸ್ತುನಿಷ್ಠ ಅಧ್ಯಯನವಿದು. ನೊಂದ ನೋವ ನೊಂದವನೇ ನಿವೇದಿಸಿರುವ ವ್ಯಾಖ್ಯಾನಕವಿದು. ಇಲ್ಲಿ ಕುಟುಂಬವೆಂಬ ಚಿಕ್ಕ ಘಟಕವನ್ನು ಕೇಂದ್ರವಾಗಿಟ್ಟುಕೊಂಡು ಮಾಹಿತಿ ಸಂಗ್ರಹಿಸಿದ್ದರಿಂದ ಮೊದಲ್ಗೊಂಡು ಇಡೀ ಸಮುದಾಯವನ್ನು ಪ್ರಾದೇಶಿಕ ನಿರ್ದಿಷ್ಟತೆಯಲ್ಲಿ ಪರಿಮಿತಿಗೊಳಿಸಿ ನಡೆಸಿದ ಅಧ್ಯಯನವೂ ಇದೆ. ಇದರ ಜೊತೆಗೆ ಕರ್ನಾಟಕದ ವ್ಯಾಪ್ತಿಯನ್ನು ಪೂರ್ಣ ಘಟಕವಾಗಿ ಪರಿಗಣಿಸಿ, ಅಧ್ಯಯನ ನಡೆಸಲಾಗಿದೆ. ಇನ್ನೂ ಮುಂದುವರಿದು ಈ ಎಲ್ಲ ವಿವರಗಳಿಗೆ ಪೂರಕವಾಗುವಂತೆ ಅನ್ಯ ಪ್ರಾಂತಗಳ ಅಂಕಿ ಅಂಶಗಳನ್ನು ಅಧ್ಯಯನ ಸಾಮಗ್ರಿಯಾಗಿ ಬಳಸಿಕೊಳ್ಳಲಾಗಿದೆ. ಇಲ್ಲಿ ಶ್ರದ್ಧೆ ತತ್ಪರತೆ ಸಂಕಲ್ಪಬದ್ಧ ವಸ್ತುನಿಷ್ಠಭಾವ ಇವು ಮೂಲ ಪ್ರಮಾಣುಗಳಾಗಿ ಕಾರ್ಯ ನಿರ್ವಹಿಸಿವೆ. ಇಲ್ಲಿನ ಲೇಖಕರಲ್ಲಿ ಬಹಳಷ್ಟು ಜನ ಬರವಣಿಗೆಯ ರೂಢಿಗೆ ಬೀಳದವರು. ಬರವಣಿಗೆ ಎಂಬುದನ್ನು ಕಲಾತ್ಮಕತೆಯ ಹಂಗಿನಲ್ಲಿ ನೋಡಿ ಕೀಳರಿಮೆಯ ಭಾವದಲ್ಲಿ ನರಳಲಾರದ ಆತ್ಮವಿಶ್ವಾಸಿಗಳು. ಏಕೆಂದರೆ, ಇವರಿಗೆ ನಿವೇದಿಸಿಕೊಳ್ಳಲು ನೋವುಗಳಿವೆ. ಬಂದ ಮೂಲದ ಬಗೆಗೆ ನಿಷ್ಠೆತುಂಬಿದ ನೈತಿಕ ಹೊಣೆಗಾರಿಕೆ ಇದೆ. ಹೀಗಾಗಿ ಒಲಿದಂತೆ ಹಾಡಿದ ಸಮುದಾಯದ ಒಟ್ಟುದನಿಗೆ ಕೊರಳಾಗಿದ್ದಾರೆ. ಈ ಎಲ್ಲ ಕೊರಳುಗಳ ಹಾಡನ್ನು ದೇಸಿ ಸಹಜ ಶ್ರುತಿಲಯಗಳಲ್ಲಿ ಸಂಯೋಜಿಸುವ ಹೊಣೆಯನ್ನು ಪ್ರೊ ಕೆ ಎಂ ಮೇತ್ರಿಯವರು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಈ ಅಧ್ಯಯನ ಮಾಲಿಕೆ ಪ್ರಾಧಿಕಾರದ ಪ್ರಮುಖ ಕಾರ್ಯಕ್ರಮವಾಗಲು ಸಹಕರಿಸಿದ ಎಲ್ಲ ಸದಸ್ಯ ಸಂಗಾತಿಗಳಿಗೆ ಹಾಗೂ ಕರ್ನಾಟಕ ಸರಕಾರಕ್ಕೆ ಮತ್ತು ಸರ್ಕಾರದಿಂದ ಈ ಯೋಜನೆಯನ್ನು ಮಂಜೂರು ಮಾಡಿಸಲು ಕಾರಣಕರ್ತರಾದ ಕೆ ಭಾಸ್ಕರದಾಸ್ ಎಕ್ಕಾರು, ಶೇಷಪ್ಪ ಅಂದೊಳ್ಳು ಅವರಿಗೆ ಹಾಗೂ ಕನ್ನಡ ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿ ಮಿತ್ರರಿಗೆ ಅಲೆಮಾರಿ ಸಮುದಾಯಗಳ ಸಂವೇದನೆಯ ಪರವಾಗಿ ಕೃತಜ್ಞತೆಗಳು.

ಈ ಹಿಂದೆ ಪ್ರೊ ಬರಗೂರು ರಾಮಚಂದ್ರಪ್ಪ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಉಪಸಂಸ್ಕೃತಿ ಅಧ್ಯಯನ ಮಾಲೆ ಪ್ರಕಟವಾಯಿತು. ಅಕಾಡೆಮಿಗಳ ಕಾರ್ಯಸ್ವರೂಪಕ್ಕೆ ಒಂದು ದೊಡ್ಡ ವಿಸ್ತರಣೆಯನ್ನ ಒದಗಿಸಿದ ಪ್ರಕಟಣೆ ಅದು. ಇದರ ಜೊತೆಗೆ ಪ್ರೊ ಎಚ್ ಜೆ ಲಕ್ಕಪ್ಪಗೌಡ ಅವರು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಹೊರತಂದ ಕರ್ನಾಟಕ ಬುಡಕಟ್ಟುಗಳ ಸಂಪುಟಗಳು ಇದರ ಮುಂದುವರಿದ ಅಧ್ಯಯನ ರೂಪಗಳು. ಇವುಗಳನ್ನು ಇಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಪ್ರೊ ಎಸ್ ಜಿ ಸಿದ್ಧರಾಮಯ್ಯ

ಪ್ರಸ್ತಾವನೆ

ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮುದಾಯಗಳು

ವಿಶ್ವದ ಮೂಲಿಗರೇ ಅಲೆಮಾರಿ ಆದಿವಾಸಿಗಳು. ಇವರಲ್ಲಿ ಹಲವು ವಿಧ. ಪ್ರಕೃತಿ ಮಡಿಲಿನ ಪಾರಂಪರಿಕ ಪಶುಪಾಲಕ ಅಲೆಮಾರಿ ಆದಿವಾಸಿಗಳು, ಪಾರಂಪರಿಕ ಧಾರ್ಮಿಕ ಭಿಕ್ಷಾವೃತ್ತಿಯ ಅಲೆಮಾರಿ ಆದಿವಾಸಿಗಳು. ಮತ್ತು ಆಧುನಿಕ ವೈಪರಿತ್ಯಗಳ ಹಿನ್ನೆಲೆಯಲ್ಲಿ ಉಗಮಗೊಂಡ ಅಲೆಮಾರಿ ಜನಸಮೂಹಗಳು. ವಿಶ್ವಸಂಸ್ಥೆಯ ಇತ್ತೀಚಿನ ಒಂದು ಅಂದಾಜಿನ ಪ್ರಕಾರ ವಿಶ್ವದಲ್ಲಿ ಶೇಕಡ ೨೦ ರಷ್ಟು ಜನ ಅಲೆಮಾರಿಗಳಿರುವರು. ದೇಶದ ಜನಸಂಖ್ಯೆಯನ್ನು ಗುರುತಿಸಲು ಜನಗಣತಿಯನ್ನು ೧೮೮೧ರಲ್ಲಿ ಆರಂಭಿಸಲಾಯಿತು. ೧೮೮೧ರ ಜನಗಣತಿಯಲ್ಲಿ ಭಾರತದ ೨೬೩೮ ಜಾತಿಗಳನ್ನು ೧೪೦೦೦ ರೀತಿಯಲ್ಲಿ ಇಂಗ್ಲೀಷ್ ಭಾಷೆಯ ಕಾಗುಣಿತ(Spelling)ಗಳಲ್ಲಿ ಬರೆಯಲಾಗಿದೆ (Singh, K S: 1996:3). ಭಾರತದ ೧೮೮೧ ರ ಜನಗಣತಿಯಲ್ಲಿ ಒಟ್ಟು ೧೯೨೯ ಜಾತಿ ಮತ್ತು ಬುಡಕಟ್ಟು ಸಮುದಾಯಗಳು ದಾಖಲಾಗಿವೆ. ಇದರಲ್ಲಿ ೮೫೫ ಮಹತ್ವದ ಜಾತಿ ಮತ್ತು ಬುಡಕಟ್ಟು ಸಮುದಾಯಗಳು ಹಾಗೂ ಸಾವಿರ ಜನರೊಳಗಿರುವ ೧೦೭೪ ಅಲ್ಪಸಂಖ್ಯಾತ ಜಾತಿ ಮತ್ತು ಬುಡಕಟ್ಟುಗಳು ದಾಖಲಾಗಿರುವುದನ್ನು ಕಾಣಬಹುದು (Eustace, J Kitts: 1982). ೧೯೪೫ ರಲ್ಲಿ ಸ್ಥಾಪನೆಯಾದ ಭಾರತೀಯ ಮಾನವ ಸರ್ವೇಕ್ಷಣಾ ಸಂಸ್ಥೆಯು ೨ ನೇ ಅಕ್ಟೋಬರ್ ೧೯೮೫ ರಿಂದ ೩೧ ನೇ ಮಾರ್ಚ್ ೧೯೯೨ರವರೆಗೆ ಭಾರತೀಯ ಜನ (People of India) ಯೋಜನೆಯನ್ನು ಹಮ್ಮಿಕೊಂಡು ಪೂರ್ಣಗೊಳಿಸಿತು. ಭಾರತೀಯ ಆಡಳಿತ ಸೇವೆಯಲ್ಲಿದ್ದ ಕೆ ಎಸ್ ಸಿಂಗ್ ಅವರು ಭಾರತೀಯ ಮಾನವ ಸರ್ವೇಕ್ಷಣಾ ಸಂಸ್ಥೆಯ ಡಿರೆಕ್ಟರ್ ಜನರಲ್ ಆಗಿ ಸೇವೆಸಲ್ಲಿಸಿ ಭಾರತೀಯ ಜನ ಹಾಗೂ ಬುಡಕಟ್ಟುಗಳ ಕುರಿತು ಅಪಾರ ಅನುಭವ ಹೊಂದಿದ್ದರು. ಅವರು ಭಾರತೀಯ ಜನ ಯೋಜನೆಯನ್ನು ಪೂರ್ಣಗೊಳಿಸಿದರು. ಈ ಯೋಜನೆಯ ಆರಂಭದಲ್ಲಿ ಭಾರತದಲ್ಲಿ ೬೭೪೮ ಸಮುದಾಯಗಳನ್ನು ಗುರುತಿಸಲಾಗಿತ್ತು. ಅಂತಿಮದಲ್ಲಿ ೪೬೩೫ ಸಮುದಾಯಗಳ ಅಧ್ಯಯನ ಸಾಧ್ಯವಾಯಿತು (Singh, K S: 1996:Vol.VIII:ix-x). ಇದರಿಂದ ಭಾರತೀಯ ಸಮುದಾಯಗಳ ಗುರುತಿಸುವಿಕೆಯು ಸರಳವಾಯಿತೆನ್ನಬಹುದು. ನವದೆಹಲಿಯ ರಾಷ್ಟ್ರೀಯ ವಿಮುಕ್ತ, ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಆಯೋಗದ ಅಂದಾಜು

ಪಟ್ಟಿಯ ಪ್ರಕಾರ ಭಾರತದ ೨೩ ರಾಜ್ಯಗಳಲ್ಲಿ ಮತ್ತು ೫ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು ೭೪೯ ವಿಮುಕ್ತ ಮತ್ತು ಅಲೆಮಾರಿ ಸಮುದಾಯಗಳು ಅಸ್ತಿತ್ವದಲ್ಲಿರುವುದನ್ನು ಅರಿಯಬಹುದು (ಭಾರತೀಯ ವಿಮುಕ್ತ ಮತ್ತು ಅಲೆಮಾರಿ ಬುಡಕಟ್ಟುಗಳ ರಾಜ್ಯವಾರು ಇಳಿಮುಖ ಸಂಖ್ಯೆಯ ಕೋಷ್ಟಕ ಗಮನಿಸಿ). ಪ್ರಸ್ತುತ ಭಾರತದಲ್ಲಿ ಇವುಗಳ ಒಟ್ಟು ಜನಸಂಖ್ಯೆ ಸುಮಾರು ೧೦ ಕೋಟಿಯನ್ನು ಮೀರಿದೆ. ಅಂದರೆ ಭಾರತದ ಒಟ್ಟು ಜನಸಂಖ್ಯೆಯ ಸುಮಾರು ಶೇಕಡ ೧೦ರಷ್ಟು ಜನ ಈ ಹಿನ್ನೆಲೆಯವರಿರುವರು. ಈ ಪಟ್ಟಿಯಲ್ಲಿಯ ಹಲವು ಸಮುದಾಯಗಳು ಬೇರೆ ಬೇರೆ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಕಾಣಸಿಗುವವು. ಮಹಾರಾಷ್ಟ್ರ ರಾಜ್ಯದಲ್ಲಿ ಅತ್ಯಧಿಕ ಅಂದರೆ ೭೩ ಅಲೆಮಾರಿ ಸಮುದಾಯಗಳು ಅಸ್ತಿತ್ವದಲ್ಲಿದ್ದರೆ ಎರಡನೆಯ ಸ್ಥಾನ ೫೬ ಅಲೆಮಾರಿ ಸಮುದಾಯಗಳನ್ನು ಹೊಂದಿದ್ದ ಕರ್ನಾಟಕ ರಾಜ್ಯಕ್ಕೆ ಸಲ್ಲುತ್ತದೆ. ಆದರೆ, ಭಾರತ ಸಂವಿಧಾನದ ಮೀಸಲಾತಿಯಲ್ಲಿ ಈ ಸಮುದಾಯಗಳು ಪರಿಶಿಷ್ಟರ ಮತ್ತು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಹಲವೆಡೆ ಹಂಚಿಹೋಗಿವೆ.

ಅಲೆಮಾರಿ ಎಂಬ ಪದಕ್ಕೆ ತಮಿಳಿನಲ್ಲಿ ಪೊಕ್ಕನ್, ತುಳುವಿನಲ್ಲಿ ತೆಂಡುಳಿ, ತೆಲುಗಿನಲ್ಲಿ ತಿರುಗುಬೋತು, ಮಲೆಯಾಳಂನಲ್ಲಿ ತೆಂಟಿ, ಮರಾಟಿಯಲ್ಲಿ ಭಟಕ್ಯಾ, ಹಿಂದಿಯಲ್ಲಿ ಸಂಚಾರಿ, ಘುಮಂತು, ಗ್ರೀಕಿನಲ್ಲಿ ನೆಮಿನ್ (nemein), ಲ್ಯಾಟಿನಿನಲ್ಲಿ ನೋಮಾಸ್ (nomas), ಇಂಗ್ಲಿಷಿನಲ್ಲಿ ನೊಮ್ಯಾಡ್ (nomad), ಜೊತೆಗೆ ಪರದೇಶಿ, ನೆಲೆಯಿಲ್ಲದವರು, ದೇಶ ಸಂಚಾರಿಗಳು, ಪರಸ್ಥಳದವರು, ಹೊರಗಡೆಯವರು, ಉಚಲ್ಯಾ, ಜಿಪ್ಸಿ, ಬೀಡು ಬಿಡುವವರು, ಗುಳೆ ಹೋಗುವವರು, ವಲಸಿಗರು, ಗಿರಿಜನರು ಸನ್ಯಾಸಿಗಳು ಎಂಬ ಇತ್ಯಾದಿ ಹೆಸರುಗಳಿಂದಲೂ ಕರೆಯಲಾಗುತ್ತದೆ. ಭಿಕ್ಷಾ ವೃತ್ತಿಯ ಹಿನ್ನೆಲೆಯಲ್ಲಿ ಇವರನ್ನು ತಮಿಳಿನಲ್ಲಿ ಪಿಚ್ಚೈಕರಾ, ಹಿಂದಿಯಲ್ಲಿ ಭಿಕಾರಿ, ಕನ್ನಡದಲ್ಲಿ ಭಿಕ್ಷುಕರೆಂತಲೂ ಗುರುತಿಸಲಾಗುವುದು. ಜನಪದರು ಇವರನ್ನು ಗೋಸಾಯಿ, ಜಂಗಾಲಿ, ಜಂಗಮ, ಜೋಗಿ, ದಾಸಯ್ಯ ಎಂತಲೂ ಕರೆಯುವರು. ಮಾನವಶಾಸ್ತ್ರಜ್ಞರು ಆರಂಭದಲ್ಲಿ ಪಶುಪಾಲನೆಯ ಹಿನ್ನೆಲೆಯವರನ್ನು ಮಾತ್ರ ಅಲೆಮಾರಿ ಸಮುದಾಯದವರೆಂದು ಗುರುತಿಸಿದ್ದಾರೆ. ಎನ್ಸೈಕ್ಲೋಪೆಡಿಯ ಬ್ರಿಟಾನಿಕಾದ ಪ್ರಕಾರ ಅಲೆಮಾರಿತನವು ಒಂದು ಜೀವನ ವಿಧಾನ. ಬೇಟೆ ಮತ್ತು ಆಹಾರ ಸಂಗ್ರಹಣೆ, ಪಶುಪಾಲನೆ ಅಥವಾ ವ್ಯಾಪಾರಕ್ಕಾಗಿ ಮಾನವ ಒಂದೆಡೆ ನೆಲೆಯೂರದೇ, ದಿಕ್ಕುದೆಸೆಯಿಲ್ಲದ ಅಥವಾ ಕಾಲಕ್ರಮಾನುಸಾರದ ಅಲೆಯುವಿಕೆಯನ್ನು ಅಲೆಮಾರಿತನ ಎನ್ನಲಾಗುತ್ತದೆ ಎಂದು ಅರ್ಥೈಸಿದೆ. ಇದು ವಲಸೆ ಪ್ರಕ್ರಿಯೆಗೂ ಭಿನ್ನ.

ನಿರಂತರ ಅಥವಾ ನಿಯಮಿತ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಅಥವಾ ಗುಂಪುಗಳ ಲಕ್ಷಣಗಳನ್ನು ಹೀಗೆ ಪಟ್ಟಿ ಮಾಡಬಹುದು.

೧. ಪಾರಂಪರಿಕ ವನ್ಯಜೀವಿಗಳ ಬೇಟೆ, ಪಳಗಿಸುವಿಕೆ ಮತ್ತು ಪ್ರದರ್ಶನ: ಪಶುಪಾಲನೆ: ನಾಟಿವೈದ್ಯ: ಕಲಾ ಪ್ರದರ್ಶನ: ದೈವಾರಾಧನೆ, ಪ್ರದರ್ಶನ ಮತ್ತು ಭಿಕ್ಷಾಟನೆ ಇತ್ಯಾದಿಗಳಿಗಾಗಿ

ಅಲೆತ. ಉದಾಹರಣೆ ಕರಡಿ, ಕೋತಿ, ಹಾವು, ನಂದಿಗಳ ಪ್ರದರ್ಶನ. ಕುರಿ, ಮೇಕೆ, ಕತ್ತೆ, ಹಂದಿ, ಒಂಟೆಗಳ ಪಾಲನೆ. ಹಗಲುವೇಷ, ಬುರ‍್ರಕಥೆ, ಗೋಂಧಳ, ದಾಸರ ಪದ, ಯಕ್ಷಗಾನ, ಬಯಲಾಟ, ತೊಗಲು ಗೊಂಬೆಯಾಟ,ದೊಂಬರಾಟ, ಮಾರಮ್ಮ ದೈವ ಇತ್ಯಾದಿಗಳ ಪ್ರದರ್ಶನ. ನಾಟಿವೈದ್ಯ, ಸಣ್ಣ ಪುಟ್ಟ ವಸ್ತುಗಳ ಮಾರಾಟ ಮತ್ತು ರಿಪೇರಿ, ಹಾಳಾದ ಪ್ಲಾಸ್ಟಿಕ್ ವಸ್ತುಗಳನ್ನು ಆರಿಸಿ ಮಾರಲು ನಡೆಸುವ ಅಲೆಮಾರಿ ಜೀವನ.

೨. ನಿರಾಡಂಬರ, ನಿಷ್ಕಪಟ, ಸಹಜ ಸರಳ ನಿರಕ್ಷರಿಗಳು. ಬಂಡವಾಳ ಶೂನ್ಯ ಅಥವಾ ಅಲ್ಪ ಬಂಡವಾಳದ ಕಾಯಕ ಜೀವಿಗಳು.

೩. ಸರ್ವಚೇತನವಾದಿಗಳು, ಪ್ರಕೃತಿಯ ಅಗೋಚರ ಶಕ್ತಿಗಳ ಸಿದ್ಧಹಸ್ತರು.

೪. ಮರಗು ಭಾಷೆ ಅವಲಂಬಿತ ಮಾತೃಭಾಷಿಗಳು.

೫. ಹಾಳು ಗುಡಿ ಗುಂಡಾರಗಳಲ್ಲಿ, ಬಯಲಿನ ಮರಗಿಡಗಳ ಕೆಳಗೆ ಅಥವಾ ನಗರಗಳ ಕೊಳಚೆ ಪ್ರದೇಶಗಳಲ್ಲಿ ಪ್ರತ್ಯೇಕ ಮತ್ತು ತಾತ್ಕಾಲಿಕ ವಾಸ.

ಈ ಲಕ್ಷಣಗಳೆಲ್ಲವೂ ಪಶುಪಾಲಕ, ಪ್ರದರ್ಶನ ಹಿನ್ನೆಲೆಯ ಪಾರಂಪರಿಕ ಭಿಕ್ಷುಕ ಮತ್ತು ಬಂಡವಾಳ ಶೂನ್ಯ ಅಥವಾ ಅಲ್ಪ ಬಂಡವಾಳದ ವೃತ್ತಿ ಅವಲಂಬಿತ ಅಲೆಮಾರಿಗಳಿಗೆ ಸಮಾನವಾಗಿ ಪೂರ್ಣಪ್ರಮಾಣದಲ್ಲಿ ಅನ್ವಯಿಸುವುದು ಕಷ್ಟಸಾಧ್ಯ.

ಇತ್ತೀಚಿಗೆ ಹಲವೆಡೆ ಕೆಲವು ಅಲೆಮಾರಿ ಸಮುದಾಯಗಳು ಸರಕಾರದ ಯೋಜನೆಗಳಿಂದ ಮತ್ತು ಸಮುದಾಯಗಳ ಸಹಕಾರದಿಂದ ನೆಲೆಕಂಡಿವೆ. ಆದರೂ, ಬದುಕಿಗಾಗಿ ತಿಂಗಳುಗಟ್ಟಲೇ ಸಹಸ್ರಾರು ಕಿಲೋಮೀಟರ ಅಂತರದ ಅಲೆಮಾರಿತನ ಮುಂದುವರೆಸಿವೆ. ಇವುಗಳನ್ನು ಅರೆ ಅಲೆಮಾರಿಗಳೆಂದು ಕರೆಯಬಹುದಾಗಿದೆ. ಸಮುದಾಯಗಳ ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಸಾಮಾಜಿಕ ಭದ್ರತೆಯ ಹಿನ್ನೆಲೆಯಲ್ಲಿ ಅಲೆಮಾರಿ ಮತ್ತು ಅರೆ ಅಲೆಮಾರಿತನದ ಸ್ಥಿತಿಯನ್ನು ನಿರ್ಧರಿಸಬಹುದಾಗಿದೆ.

ಬ್ರಿಟಿಶ್ ಸರಕಾರ ಉತ್ತರ ಭಾರತದಲ್ಲಿ ೧೮೭೧ರಲ್ಲಿ ಪ್ರಕೃತಿ ಅವಲಂಬಿತ ಮತ್ತು ತನ್ನ ಆಡಳಿತದ ಪರಿಧಿಗೆ ಬರದೇ ಇರುವ ಸಮುದಾಯಗಳನ್ನು ಗುರುತಿಸಿ ಅವುಗಳನ್ನು ಅಪರಾಧಿ ಬುಡಕಟ್ಟುಗಳೆಂದು ಅಧಿಸೂಚಿಸಿತು. ಈ ಅಧಿನಿಯಮವನ್ನು ೧೯೧೧ರಲ್ಲಿ ಬ್ರಿಟಿಷರು ಆಳುವ ಭಾರತದಲ್ಲಿ ಪರಿಷ್ಕರಿಸಿ ವಿಸ್ತರಿಸಲಾಯಿತು. ಮುಂದುವರಿದು ೧೯೪೭, ೧೯೧೧, ೧೯೨೩, ೧೯೨೪ ಮತ್ತು ೧೯೪೭ ಈ ವರ್ಷಗಳಲ್ಲಿ ಈ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ಪರಿಷ್ಕರಿಸಲಾಯಿತು. ಇದರಿಂದ ಪೋಲೀಸರಿಗೆ ಈ ಗುಂಪುಗಳನ್ನು ಹಿಡಿತದಲ್ಲಿರಿಸಲು ಮತ್ತು ದಂಡಿಸಲು ಹೆಚ್ಚಿನ ಅಧಿಕಾರ ಪ್ರಾಪ್ತವಾಯಿತು. ಈ ಗುಂಪುಗಳನ್ನು ವಸಾಹತುಗಳಲ್ಲಿ ಬೇಲಿಹಾಕಿ ಇಡಲಾಗುತ್ತಿತ್ತು. ಇವರು ದಿನಾಲು ಅಲ್ಲಿಯ ಅಧಿಕಾರಿಗಳಿಗೆ ಹಾಜರಿಯನ್ನು ನೀಡುವುದು ಕಡ್ಡಾಯವಾಗಿತ್ತು. ಇವರ ವಸಾಹತುಗಳು ಇವರಿಗೆ ಜೇಲುಗಳಾಗಿದ್ದವು. ಇವರ

ಮಕ್ಕಳಿಗಾಗಿ ಶಾಲೆಗಳನ್ನು ಹಾಗೂ ಇವರಿಗೆ ತರಬೇತಿ ನೀಡಲು ತರಬೇತಿ ಕೇಂದ್ರಗಳನ್ನು ಆರಂಭಿಸಲಾದವು. ಇವರನ್ನು ನೋಡಿಕೊಳ್ಳಲು ಒಬ್ಬ ಸಮಾಜ ಕಲ್ಯಾಣ ಅಧಿಕಾರಿಯೂ ಇರುತ್ತಿದ್ದರು. ಈ ತರಹದ ಅಪರಾಧಿ ಬುಡಕಟ್ಟುಗಳ ವಸಾಹತುಗಳು ಕರ್ನಾಟಕದ ಗದಗ, ಹುಬ್ಬಳ್ಳಿ, ಧಾರವಾಡ, ಬಾಗಲಕೋಟ, ಬಿಜಾಪುರ, ಇಂಡಿ ಇತ್ಯಾದಿಗಳಲ್ಲಿ ಸ್ಥಾಪನೆಗೊಂಡವು. ಆದರೆ, ವ್ಯಕ್ತಿಗತ ಮಾಡುವ ತಪ್ಪುಗಳನ್ನು ಅಥವಾ ಅಪರಾಧಗಳನ್ನು ಸಮುದಾಯಕ್ಕೆ ಸಮೀಕರಿಸುವುದು ತಪ್ಪೆಂದು ೧೯೪೭ ರಲ್ಲಿ ಮದ್ರಾಸ್ ಮತ್ತು ೧೯೪೯ ರಲ್ಲಿ ಮುಂಬೈ ಅಧಿಪತ್ಯಗಳಲ್ಲಿಯ ಅಪರಾಧಿ ಬುಡಕಟ್ಟು ಅಧಿನಿಯಮವನ್ನು ಹಿಂದಕ್ಕೆ ತೆಗೆದು ಕೊಳ್ಳಲಾಯಿತು. ಮುಂದೆ ಭಾರತೀಯ ಅಪರಾಧಿ ಬುಡಕಟ್ಟುಗಳ ತನಿಖಾ ಸಮಿತಿಯ ಮೌಲ್ಯಮಾಪನದ ವರದಿಯ ಮೇರೆಗೆ ೧೯೫೨ ರಲ್ಲಿ ಅಪರಾಧಿ ಬುಡಕಟ್ಟುಗಳನ್ನು ವಿಮುಕ್ತಗೊಳಿಸಲು ಈ ಸಂಬಂಧದ ಅಧಿನಿಯಮವನ್ನು ರದ್ದುಪಡಿಸಲಾಯಿತು. ಅಂದಿನಿಂದ ಈ ಗುಂಪುಗಳನ್ನು ವಿಮುಕ್ತ ಬುಡಕಟ್ಟುಗಳು ಇಲ್ಲವೆ ಡಿ ನೋಟಿಫೈಡ್ ಟ್ರೈಬ್ಸ್ (DNT) ಎಂದು ಕರೆಯಲಾಗುವುದು. ಹೀಗಾಗಿ ಸ್ವತಂತ್ರ ಪೂರ್ವದ ಬ್ರಿಟಿಷ್ ಸರಕಾರದಲ್ಲಿಯೇ ಈ ಗುಂಪುಗಳ ಗುರುತಿಸುವಿಕೆಯ ಕಾರ್ಯ ನಡೆದಿರುವುದಲ್ಲದೇ ಇವರಿಗೆ ಪ್ರತ್ಯೇಕ ಮೀಸಲಾತಿ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು ಎಂಬುವುದು ಸ್ಪಷ್ಟವಾಗುತ್ತದೆ. ೧೯೬೧ರ ಜನಗಣತಿಯ ಪ್ರಕಾರ ಭಾರತದಲ್ಲಿ ೨,೭೧,೦೨,೧೮೦ ಜನರು ಈ ಹಿನ್ನೆಲೆಯನ್ನು ಹೊಂದಿದ್ದರೆಂದು ದಾಖಲಿಸಲಾಗಿದೆ.

ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಅಗಾಧವಾದ ಪ್ರಾಕೃತಿಕ ಜ್ಞಾನ, ಕಲೆ ಮತ್ತು ಶ್ರಮವನ್ನು ಸರಕಾರ ಮತ್ತು ಸಮಾಜಗಳು ಕಾಲಾಂತರದಲ್ಲಿ ಗೌರವಪೂರ್ಣವಾಗಿ ಗೌರವಿಸಲಿಲ್ಲ. ಜಾಗತೀಕರಣ ಮತ್ತು ಆಧುನಿಕರಣದ ಗುಂಗಿನಲ್ಲಿ ಜನರು ಪರ್ಯಾಯ ವ್ಯವಸ್ಥೆಗಳತ್ತ ಮುಖ ಮಾಡಿದರು. ಅಲೆಮಾರಿಗಳ ಮೌಖಿಕ ಕಾವ್ಯ ಕಲೆ, ನೃತ್ಯಗಳು ನೆಲಕಚ್ಚಿದವು. ಕಲೆಗಳು ಕಳೆಗುಂದಿ ಭಿಕ್ಷಾಟನೆಗೆ ಎಡೆಯಾದವು. ಸಾಮಾಜಿಕ, ಆರ್ಥಿಕ ಶೈಕ್ಷಣಿಕ ಮತ್ತು ರಾಜಕೀಯ ಸ್ಥಾನಮಾನಗಳು ಇಲ್ಲವಾಗಿ ಶೋಷಣೆಗೆ ಒಳಗಾಗಿ ಬದುಕಿನ ಅತಂತ್ರತೆಗೆ ಗುರಿಯಾದವು. ಇವುಗಳ ವಿಮೋಚನೆಯು ಸಮುದಾಯಗಳ ಮತ್ತು ಸರಕಾರದ ಇಚ್ಛಾಶಕ್ತಿಯ ಕೊರತೆಯಿಂದ ವಿಳಂಬವಾಗುತ್ತಿದೆ. ಸಮಾಜ ಪಾರಂಪರಿಕ ಜ್ಞಾನ ಶಾಖೆಯನ್ನೇ ಕಳೆದುಕೊಳ್ಳುತ್ತಿದೆ.

ಸ್ವತಂತ್ರ ಭಾರತದಲ್ಲಿ ಡಾ ಬಿ ಆರ್ ಅಂಬೇಡ್ಕರ್ ಅವರ ಸಾಮಾಜಿಕ ಕಳಕಳಿಯ ಚಿಂತನೆಯ ಹಿನ್ನೆಲೆಯಲ್ಲಿ ವಿಮುಕ್ತ, ಅಲೆಮಾರಿ, ಅರೆ ಅಲೆಮಾರಿ ಬುಡಕಟ್ಟುಗಳನ್ನು ಮತ್ತು ದಲಿತ ಸಮುದಾಯಗಳನ್ನು ಸಂವಿಧಾನಬದ್ಧವಾಗಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಪಟ್ಟಿಗಳಲ್ಲಿ ಇರಿಸಲಾಗಿದೆ. ಇವುಗಳ ರಾಜ್ಯವಾರು ವಿಮುಕ್ತ ಮತ್ತು ಅಲೆಮಾರಿ ಬುಡಕಟ್ಟುಗಳ ಪಟ್ಟಿ ಹೀಗಿದೆ.

ಭಾರತೀಯ ವಿಮುಕ್ತ ಮತ್ತು ಅಲೆಮಾರಿ ಬುಡಕಟ್ಟುಗಳ ಸಂಖ್ಯೆ

ಕ್ರಮ ಸಂಖ್ಯೆ	ರಾಷ್ಟ್ರ/ರಾಜ್ಯ/ ಕೇಂದ್ರಾಡಳಿತ ಪ್ರದೇಶ ಬುಡಕಟ್ಟು ಸಮುದಾಯಗಳು	ಸಮುದಾಯಗಳ ಸಂಖ್ಯೆ ಪಜಾ	ಪಪಂ	ಹಿಂವ	ಒಟ್ಟು	ಅ + ಆ ಒಟ್ಟು
	ಭಾರತ					
	ಅ. ವಿಮುಕ್ತ	೨೩೫	೪೭	೨೦೭	೪೮೯	
	ಆ. ಅಲೆಮಾರಿ	೬೫	೩೦	೧೬೫	೨೬೦	೭೪೯
೦೧	ಮಹಾರಾಷ್ಟ್ರ					
	ಅ. ವಿಮುಕ್ತ	೧೨	೫	೧೯	೩೬	
	ಆ. ಅಲೆಮಾರಿ	೧	೦	೩೬	೩೭	೭೩
೦೨	ಕರ್ನಾಟಕ					
	ಅ. ವಿಮುಕ್ತ	೯	೨	೧೩	೨೪	
	ಆ. ಅಲೆಮಾರಿ	೫	೩	೨೪	೩೨	೫೬
೦೩	ಉತ್ತರ ಪ್ರದೇಶ					
	ಅ. ವಿಮುಕ್ತ	೧೯	೦	೧೩	೩೨	
	ಆ. ಅಲೆಮಾರಿ	೬	೦	೯	೧೫	೪೭
೦೪	ಗುಜರಾತ					
	ಅ. ವಿಮುಕ್ತ	೪	೩	೧೦	೧೭	
	ಆ. ಅಲೆಮಾರಿ	೪	೩	೧೫	೨೨	೩೯
೦೫	ರಾಜಸ್ಥಾನ					
	ಅ. ವಿಮುಕ್ತ	೧೬	೫	೬	೨೭	
	ಆ. ಅಲೆಮಾರಿ	೫	೦	೭	೧೨	೩೯
೦೬	ಮಧ್ಯ ಪ್ರದೇಶ					
	ಅ. ವಿಮುಕ್ತ	೧೪	೫	೭	೨೬	
	ಆ. ಅಲೆಮಾರಿ	೧	೦	೧೧	೧೨	೩೮
೦೭	ಒರಿಸ್ಸಾ					
	ಅ. ವಿಮುಕ್ತ	೧೪	೫	೮	೨೭	
	ಆ. ಅಲೆಮಾರಿ	೭	೩	೦	೧೦	೩೭
೦೮	ಚಂಡಿಗಢ*					
	ಅ. ವಿಮುಕ್ತ	೧೧	೦	೧೪	೨೫	
	ಆ. ಅಲೆಮಾರಿ	೪	೦	೭	೧೧	೩೬

೦೯	**ಹರಿಯಾಣ**					
	ಅ. ವಿಮುಕ್ತ	೧೧	೦	೧೩	೨೪	
	ಆ. ಅಲೆಮಾರಿ	೩	೦	೮	೧೧	೩೫
೧೦	**ಪಂಜಾಬ**					
	ಅ. ವಿಮುಕ್ತ	೯	೦	೧೦	೧೯	
	ಆ. ಅಲೆಮಾರಿ	೬	೦	೯	೧೫	೩೪
೧೧	**ಹಿಮಾಚಲ ಪ್ರದೇಶ**					
	ಅ. ವಿಮುಕ್ತ	೧೩	೦	೫	೧೮	
	ಆ. ಅಲೆಮಾರಿ	೩	೩	೯	೧೫	೩೩
೧೨	**ತಮಿಳುನಾಡು**					
	ಅ. ವಿಮುಕ್ತ	೬	೨	೧೮	೨೬	
	ಆ. ಅಲೆಮಾರಿ	೩	೧	೩	೭	೩೩
೧೩	**ಆಂಧ್ರ ಪ್ರದೇಶ**					
	ಅ. ವಿಮುಕ್ತ	೯	೫	೧೫	೨೯	
	ಆ. ಅಲೆಮಾರಿ	೦	೦	೩	೩	೩೨
೧೪	**ದೆಹಲಿ***					
	ಅ. ವಿಮುಕ್ತ	೧೪	೦	೧೦	೨೪	
	ಆ. ಅಲೆಮಾರಿ	೪	೦	೧	೫	೨೯
೧೫	**ಉತ್ತರಾಂಚಲ**					
	ಅ. ವಿಮುಕ್ತ	೧೮	೦	೦	೧೮	
	ಆ. ಅಲೆಮಾರಿ	೬	೧	೦	೭	೨೫
೧೬	**ಪಶ್ಚಿಮ ಬಂಗಾಳ**					
	ಅ. ವಿಮುಕ್ತ	೧೧	೩	೩	೧೭	
	ಆ. ಅಲೆಮಾರಿ	೦	೨	೨	೪	೨೧
೧೭	**ತ್ರಿಪುರ**					
	ಅ. ವಿಮುಕ್ತ	೫	೧	೬	೧೨	
	ಆ. ಅಲೆಮಾರಿ	೪	೧	೩	೮	೨೦
೧೮	**ಪಾಂಡಿಚೇರಿ***					
	ಅ. ವಿಮುಕ್ತ	೩	೦	೧೬	೧೯	
	ಆ. ಅಲೆಮಾರಿ	೧	೦	೦	೧	೨೦
೧೯	**ಛತ್ತೀಸಗಢ**					
	ಅ. ವಿಮುಕ್ತ	೧೩	೪	೦	೧೭	
	ಆ. ಅಲೆಮಾರಿ	೧	೧	೦	೨	೧೯

೨೦	ಬಿಹಾರ					
	ಅ. ವಿಮುಕ್ತ	೯	೨	೪	೧೫	
	ಆ. ಅಲೆಮಾರಿ	೦	೧	೧	೨	೧೭
೨೧	ಅಸ್ಸಾಂ					
	ಅ. ವಿಮುಕ್ತ	೦	೦	೯	೯	
	ಆ. ಅಲೆಮಾರಿ	೦	೦	೬	೬	೧೫
೨೨	ಜಾರ್ಖಂಡ					
	ಅ. ವಿಮುಕ್ತ	೯	೩	೦	೧೨	
	ಆ. ಅಲೆಮಾರಿ	೦	೧	೦	೧	೧೩
೨೩	ಜಮ್ಮು ಮತ್ತು ಕಾಶ್ಮೀರ					
	ಅ. ವಿಮುಕ್ತ	೨	೧	೧	೪	
	ಆ. ಅಲೆಮಾರಿ	೦	೪	೩	೭	೧೧
೨೪	ಕೇರಳ					
	ಅ. ವಿಮುಕ್ತ	೨	೧	೩	೬	
	ಆ. ಅಲೆಮಾರಿ	೧	೪	೦	೫	೧೧
೨೫	ದಮನ್ ಮತ್ತು ದಿವ್*					
	ಅ. ವಿಮುಕ್ತ	೧	೦	೨	೩	
	ಆ. ಅಲೆಮಾರಿ	೦	೦	೩	೩	೬
೨೬	ಸಿಕ್ಕಿಮ್					
	ಅ. ವಿಮುಕ್ತ	೦	೦	೨	೨	
	ಆ. ಅಲೆಮಾರಿ	೦	೨	೦	೨	೪
೨೭	ಗೋವ					
	ಅ. ವಿಮುಕ್ತ	೦	೦	೦	೦	
	ಆ. ಅಲೆಮಾರಿ	೦	೦	೩	೩	೩
೨೮	ದಾದ್ರ ಮತ್ತು ನಗರ ಹವೇಲಿ*					
	ಅ. ವಿಮುಕ್ತ	೧	೦	೦	೧	
	ಆ. ಅಲೆಮಾರಿ	೦	೦	೨	೨	೩

*ಕೇಂದ್ರಾಡಳಿತ ಪ್ರದೇಶಗಳು

ಸಂಕ್ಷಿಪ್ತ ಪದ ವಿವರ: ಪಜಾ: ಪರಿಶಿಷ್ಟ ಜಾತಿ, ಪಪಂ:ಪರಿಶಿಷ್ಟ ಪಂಗಡ, ಹಿಂವ: ಹಿಂದುಳಿದ ವರ್ಗ, ಅ. ವಿಮುಕ್ತ: ವಿಮುಕ್ತ ಬುಡಕಟ್ಟುಗಳು, ಆ. ಅಲೆಮಾರಿ: ಅಲೆಮಾರಿ ಬುಡಕಟ್ಟುಗಳು,

ಆಧಾರ: ನವದೆಹಲಿಯ ರಾಷ್ಟ್ರೀಯ ವಿಮುಕ್ತ, ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಆಯೋಗದ ಮಾಹಿತಿ ೨೦೦೭

ವಿಮುಕ್ತಗೊಳಿಸಿದ ೪೮೯ ಸಮುದಾಯಗಳಲ್ಲಿ ೨೯೫ ಪರಿಶಿಷ್ಟ ಜಾತಿ, ೪೭ ಪರಿಶಿಷ್ಟ ಪಂಗಡ ಮತ್ತು ೨೦೭ ಸಮುದಾಯಗಳಿಗೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸ್ಥಾನ ಕಲ್ಪಿಸಲಾಗಿದೆ. ೨೬೦ ಅಲೆಮಾರಿ ಸಮುದಾಯಗಳಲ್ಲಿ ೬೫ ಪರಿಶಿಷ್ಟ ಜಾತಿ, ೩೦ ಪರಿಶಿಷ್ಟ ಪಂಗಡ ಮತ್ತು ೧೬೫ ಸಮುದಾಯಗಳಿಗೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಮೀಸಲಾತಿ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕದ ವಿಮುಕ್ತ ಮತ್ತು ಅಲೆಮಾರಿ ಸಮುದಾಯಗಳು

ಕರ್ನಾಟಕಕ್ಕೆ ಸಂಬಂಧಿಸಿದಂತೆಯೂ ೫೬ ವಿಮುಕ್ತ, ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳಿರುವವು. ಇವುಗಳನ್ನು ಅನಂತರದ ಅವಧಿಗಳಲ್ಲಿ ಸಂವಿಧಾನಬದ್ಧವಾಗಿ ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದ ವರ್ಗಗಳ ಪಟ್ಟಿಗಳಲ್ಲಿ ಇರಿಸಲಾಗಿದೆ. ವಿಮುಕ್ತಗೊಳಿಸಿದ ೨೪ ಸಮುದಾಯಗಳಲ್ಲಿ ೯ ಪರಿಶಿಷ್ಟ ಜಾತಿ, ೨ ಪರಿಶಿಷ್ಟ ಪಂಗಡ ಮತ್ತು ೧೩ ಸಮುದಾಯಗಳಿಗೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಇದುವರೆಗೆ ಸ್ಥಾನ ಕಲ್ಪಿಸಲಾಗಿದೆ. ೩೨ ಅಲೆಮಾರಿ ಸಮುದಾಯಗಳಲ್ಲಿ ೫ ಪರಿಶಿಷ್ಟ ಜಾತಿ, ೩ ಪರಿಶಿಷ್ಟ ಪಂಗಡ ಮತ್ತು ೨೪ ಸಮುದಾಯಗಳನ್ನು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸ್ಥಾನ ಕಲ್ಪಿಸಲಾಗಿದೆ. ಈ ಸಮುದಾಯಗಳ ವಿವರ ಹೀಗಿದೆ.

ವಿಮುಕ್ತ ಬುಡಕಟ್ಟುಗಳು (ಅಯ್ಯಂಗಾರ ಸಮಿತಿಯ ವರದಿ ಪ್ರಕಾರ): ಪರಿಶಿಷ್ಟ ಜಾತಿಯ ೧. ಆದಿ ದ್ರಾವಿಡ, ೨. ಬಂಜಾರ, ಲಂಬಾಣಿ, ಲಂಬಾಡಾ, ಲಮಾನಿ, ಸುಗಾಲಿ, ಸುಕಾಲಿ, ೩. ದೋಮ್, ದೊಂಬರ, ಪೈದಿ, ಪಾನೊ, ೪. ಗಂಟಿ ಚೋರ್ಸ್, ೫. ಹಂಡಿ ಜೋಗೀಸ್, ೬. ಕೇಪ್‌ಮಾರಿಸ್, ೭. ಕೊರಚ, ಕೊರಚರ, ೮. ಮಾಲ, ೯. ಮಾಂಗ ಗಾರೂಡಿ; **ಪರಿಶಿಷ್ಟ ಪಂಗಡದ** ೧. ಭಿಲ್, ೨. ಪಾರ್ಧಿ,ಅಡ್ವಿಚಿಂಚೇರ್, ಫಾನ್ಸೆ ಪಾರ್ಧಿ,ಹರಣಶಿಕಾರಿ ಹಾಗೂ **ಹಿಂದುಳಿದ ವರ್ಗದ** ೧. ಬೈರಾಗಿ, ಬವಾನಿ, ಬಾವಾ, ೨. ಬೇಡರು, ೩. ಬೆರಿಯ, ೪. ಭಾಮ್ಟಾ, ೫. ಚಾರಾ, ಛಾರ, ಛಾರಾ, ೬. ಫಿಸಾಡಿ, ೭. ಜ್ಯೋಗಿ, ಜ್ಯೋಗರ, ಸನಜ್ಯೋಗಿ, ೮. ಕಂಜರ ಭಾಟ, ೯. ಕಂಜರಿ, ಕಂಜರ್, ೧೦. ಮಸಣಜ್ಯೋಗಿ, ೧೧. ನಟ್, ೧೨. ಗುಜರ್, ೧೩. ಮರವರ್.

ಅಲೆಮಾರಿ ಬುಡಕಟ್ಟುಗಳು (ಬ್ರಿಟಿಷ್ ಕುಲಶಾಸ್ತ್ರೀಯ ಅಧ್ಯಯನಕಾರರ ಪ್ರಕಾರ): ಪರಿಶಿಷ್ಟ ಜಾತಿಯ ೧. ಬೇಡ ಜಂಗಮ್, ಬುಡ್ಗ ಜಂಗಮ್, ೨. ಭೋವಿ, ಓಡ್, ಓಡ್ಡೆ, ವಡ್ಡರ್, ಒಡ್ಡರ್, ೩. ಕೊರಮ, ಕೊರವ, ಕೊರವರ್, ೪. ಮದಾರಿ, ೫. ಶಿಳ್ಳೇಕ್ಯಾತಾಸ್; **ಪರಿಶಿಷ್ಟ ಪಂಗಡದ** ೧. ಹಕ್ಕಿಪಿಕ್ಕಿ, ೨. ಮೇದ, ಮೇದಾರಿ, ಗೌರಿಗ, ಬುರುಡ, ೩. ತೋಡ. ಮತ್ತು **ಹಿಂದುಳಿದ ವರ್ಗದ** ೧. ಬಾಳಸಂತೋಷಿ, ೨. ಬಾಝಿಗರ, ೩. ಬೆಸ್ತರ್, ೪. ಬುಡಬುಡಕಿ, ದೇವಾರಿ, ಜ್ಯೋಶಿ, ೫. ಛಪ್ಪರಬಂದ್, ೬. ಚಿತ್ರಕಥಿ ಜ್ಯೋಶಿ, ೭. ದರವೇಸು, ೮. ದೊಂಬಿದಾಸ, ೯. ದುರ್ಗಮುರ್ಗಾ, ೧೦. ಗೋಂಧಳಿ, ೧೧. ಹೆಳವ, ೧೨. ಕಾಶಿಕಾಪ್ಡಿ, ತಿರುಮಾಲಿ, ೧೩. ಕೋಲ್ಹಾಟಿ, ೧೪. ಕೊರವರ್,

ಯರಕಲ, ಯರುಕಲ, ೧೫. ನಂದಿವಾಲಾ, ೧೬. ನಾಥಪಂಥಿ, ೧೭. ಪಿಚಿಗುಂಟಲಾ, ೧೮. ಸರಾನಿಯ, ೧೯. ಸಿಕ್ಕಲಿಗಾರ, ೨೦. ವಡಿ, ೨೧. ವೈದು, ೨೨. ವಾಸುದೇವ, ೨೩. ಮದಾರಿ, ೨೪. ಗೋಸಾವಿ, ಗೋಸಾಯಿ ಮತ್ತು ಅತೀತ್.

೧೯೫೨ ರಲ್ಲಿ ವಿಮುಕ್ತಗೊಂಡ ಅಲೆಮಾರಿ ಬುಡಕಟ್ಟುಗಳು ೧೯೫೦ ರಲ್ಲಿಯೇ ಪ್ರಕಟಗೊಂಡ ಪರಿಶಿಷ್ಟರ ಮೀಸಲಾತಿ ಪಟ್ಟಿಯಿಂದ ಹೊರಗುಳಿದು ೧.೨.೧೯೬೬ ರವರೆಗೆ ಸಂವಿಧಾನಬದ್ಧವಾಗಿ ಅನಾಥವಾಗಿದ್ದವು. ಈ ಸಮುದಾಯಗಳು ೧೯೬೬ ರಿಂದ ೪.೩.೧೯೭೭ರವರೆಗೆ ಕರ್ನಾಟಕ ರಾಜ್ಯದ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಪ್ರತ್ಯೇಕ ಪಟ್ಟಿಯಲ್ಲಿ ನೆಲೆ ಕಂಡವು. ಆ ದಿನದ ನಂತರ ಈ ಸಮುದಾಯಗಳನ್ನು ಹಿಂದುಳಿದ ಬುಡಕಟ್ಟು ಎಂಬೀ ಪಟ್ಟಿಯಲ್ಲಿ ಕರ್ನಾಟಕ ರಾಜ್ಯದಾದ್ಯಂತ ೪೯ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳನ್ನು ಹಾಗೂ ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗೆ ಸೀಮಿತಗೊಂಡ ೬, ಬಿಜಾಪುರ, ಬೆಳಗಾವಿ, ಧಾರವಾಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಸೀಮಿತಗೊಂಡ ೪೨ ಮತ್ತು ಬಳ್ಳಾರಿ ಜಿಲ್ಲೆಗೆ ಸೀಮಿತಗೊಂಡ ೧ ವಿಮುಕ್ತ ಬುಡಕಟ್ಟುಗಳನ್ನು ಹಾಗೂ ಕೊಡಗು, ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಿಗೆ ಹಾಗೂ ಕೊಳ್ಳೇಗಾಲ ತಾಲೂಕಿಗೆ ಸೀಮಿತಗೊಂಡ ೯ ಇತರೆ ಬುಡಕಟ್ಟುಗಳನ್ನು ಆ ಪಟ್ಟಿಗೆ ಸೇರಿ ಸಂವಿಧಾನಬದ್ಧವಾಗಿ ಶಿಕ್ಷಣ ಮತ್ತು ಸೇವಾ ಸೌಲಭ್ಯ ಪಡೆಯಲು ಅರ್ಹವಾದವು. ಇವುಗಳಿಗೆ ೩ ಪ್ರತಿಶತ ಮೀಸಲಾತಿಯನ್ನು ಕಲ್ಪಿಸಲಾಗಿತ್ತು. ಆ ಸಮುದಾಯಗಳ ಪಟ್ಟಿ ಹೀಗಿತ್ತು.

ಕರ್ನಾಟಕ ರಾಜ್ಯದ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಪಟ್ಟಿ

೧. ಬೈರಾಗಿ, ಬಾವಾ, ೨. ಬಾಳಸಂತೋಷಿ ಜೋಶಿ, ೩. ಬಾಜಿಗರ್, ೪. ಭರಾಡಿ, ೫. ಬುಡಬುಡಕಿ, ಜೋಶಿ, ಗೊಂಧಳಿ, ೬. ಛಾರಾ, ೭. ಚಿತ್ರಕಥಿ ಜೋಶಿ, ಢೋಲಿ, ೯. ಡವೇರಿ, ೧೦. ದೊಂಬಾರಿ, ೧೧. ಘಿಸಾಡಿ, ೧೨. ಗಾರೂಡಿ, ೧೩. ಗೋಪಾಲ, ೧೪. ಗೊಂಧಳಿ, ೧೫. ಹೆಳವ, ೧೬. ಜೋಗಿ, ೧೭. ಖೇಲಕಾರಿ, ೧೮. ಕೋಲ್ಹಾಟಿ, ೧೯. ನಂದಿವಾಲಾ, ಜೋಶಿ, ಫೂಲಂದಳಿ, ಫೂಲಮಾಲಿ, ೨೦. ನಾಥಪಂಥಿ, ದೌರಿ, ಗೋಸಾವಿ, ೨೧. ನೀರಶಿಕಾರಿ, ೨೨. ಪಾಂಗುವಲ್, ೨೩. ಜೋಶಿ, ಸಾದಾ ಜೋಶಿ, ೨೪. ಸಾಂಸಿಯ, ೨೫. ಸರಾನಿಯ, ೨೬. ಸುಡುಗಾಡುಸಿದ್ದ, ೨೭. ತಿರುಮಾಲಿ, ೨೮. ವೈದು, ೨೯. ವಾಸುದೇವ, ೩೦. ವಡಿ, ೩೧. ವಾಘ್ರಿ, ೩೨. ವೀರ, ೩೩. ಬಜಾನಿಯ, ೩೪. ಗೊಲ್ಲ, ೩೫. ಶಿಕ್ಕಲಿಗಾರ, ೩೬. ಕಿಳ್ಳೇ ಕ್ಯಾತಾಸ್, ೩೭. ಸರೋಡಿ, ೩೮. ದುರ್ಗಾಮುರ್ಗಾ, ಬುರಬುರಚಾ, ೩೯. ಹಾವಗಾರ, ಹಾವಾಡಿಗ, ೪೦. ಪಿಚಗುಂಟ್ಲ, ೪೧. ಮಸಣೆಯ ಜೋಗಿ, ೪೨. ಬೆಸ್ತರ್, ಬುಂಡೆ ಬೆಸ್ತ, ೪೩. ಕಟಬು, ೪೪. ದರವೇಶ, ೪೫. ಕಾಶಿಕಾಪ್ಡಿ, ೪೬. ಮದಾರಿ, ೪೭. ಹಂಡಿ ಜೋಗಿ, ೪೮. ದೊಂಬಿದಾಸ, ೪೯. ಬೈಲಪತ್ತಾರ

ವಿಮುಕ್ತ ಬುಡಕಟ್ಟುಗಳ ಪಟ್ಟಿ

I. ೧. ಲಂಬಾಣಿ ಅಥವಾ ಲಂಬಾಡಾ, ೨. ವಡ್ಡರ, ೩. ಪಾರಧಿಸ್, ೪. ಯರಕುಲ, ೫. ಕೈಕಾಡಿ, ೬. ಕೊರವರ್ (ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಮಾತ್ರ).

II. ೧. ಬೇರಡ, ೨. ಬೇಡರ, ೩. ತಳವಾರ, ೪. ವಾಲ್ಮೀಕಿ, ೫. ನೈಕಮಕ್ಕಳು, ೬. ನೈಕವಾಡಿ, ೭. ಭಾಂಮ್ಟಾ ರಾಜಪುತ, ೮. ಪರದೇಶಿ ಭಾಂಮ್ಟಾ, ೯. ಭಾಂಮ್ಟಾ, ೧೦. ಟಕಾರಿ, ೧೧. ಘಂಟಿಚೋರ, ೧೨. ಉಚ್ಲಿಯ, ೧೩. ತುಡುಗ್ ಒಡ್ಡರ್, ೧೪. ಗಿರಣಿ ಒಡ್ಡರ್, ೧೫. ಬೆಸ್ತರ್, ೧೬. ದಂಗ ದಾಸರ್, ೧೭. ಕಮಾತಿ, ೧೮. ಕೈಕಾಡಿ, ೧೯. ಕೊರ್ಚ್ಯಾ, ೨೦. ಕೊರವರ್, ೨೧. ಪಾಮಲೋರ್, ೨೨. ಜಾವೇರಿ, ೨೩. ಜೋಹಾರಿ, ೨೪. ಲಮಾಣಿ, ೨೫. ಲಂಬಾಡಾ, ೨೬. ಟಾಕಣಕರ್, ೨೭. ಹರಣಶಿಕಾರಿ, ೨೮. ಚಿಗರಿ ಬೇಟೆಗಾರ, ೨೯. ನೀರಶಿಕಾರಿ, ೩೦. ಫಾಸೇಚಾರಿ, ೩೧. ಸಾಂಸಿಯ, ೩೨. ಛಾರಾ, ೩೩. ನಟ್, ೩೪. ಕಂಜರ್ ಭಾಟ್, ೩೫. ಕಂಜರಿ, ೩೬. ಕಂಜರ್, ೩೭. ಬೇರಿಯ, ೩೮. ವಡ್ಡರ್, ೩೯. ಛಪ್ಪರಬಂಧ, ೪೦. ಬಂಡಿ ಒಡ್ಡರ್, ೪೧. ಮಣ್ಣು ಒಡ್ಡರ್, ೪೨. ಕಲ್ಲು ಒಡ್ಡರ್ (ಬಿಜಾಪುರ, ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಾತ್ರ).

III. ಬಳ್ಳಾರಿ ಜಿಲ್ಲೆಯಲ್ಲಿ ವಾಲ್ಮೀಕಿ.

IV. ಇತರೆ ಬುಡಕಟ್ಟುಗಳ ಪಟ್ಟಿ

೧. ಗೌಡಲು, ೨. ಹಕ್ಕಿಪಿಕ್ಕಿ, ೩. ಹಸಲರು, ೪. ಇರುಳಿಗ, ೫. ಜೇನು ಕುರುಬ, ೬. ಕಾಡು ಕುರುಬ, ೭. ಮಲೈಕುಡಿ, ೮. ಮಲೇರು, ೯. ಸೋಲಿಗರು (ಕೊಡಗು, ಬೆಳಗಾವಿ, ಬಿಜಾಪುರ, ಧಾರವಾಡ, ಉತ್ತರ ಕನ್ನಡ, ದಕ್ಷಿಣ ಕನ್ನಡ, ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಹಾಗೂ ಕೊಳ್ಳೇಗಾಲ ತಾಲೂಕಿನಲ್ಲಿ ಮಾತ್ರ).

ಕರ್ನಾಟಕ ರಾಜ್ಯದ ಅಲೆಮಾರಿ ಮತ್ತು ಅರೆ ಅಲೆಮಾರಿ ಪಟ್ಟಿಯಲ್ಲಿಯ ಕ್ರಮ ಸಂಖ್ಯೆ ೨೬. ಸುಡುಗಾಡುಸಿದ್ದ, ೪೬. ಮದಾರಿ ಮತ್ತು ೪೭. ಹಂಡಿಜ್ಯೋಗಿ ಸಮುದಾಯಗಳು ೨೭.೭.೧೯೭೭ರಿಂದ ಪರಿಶಿಷ್ಟ ಜಾತಿಯ ಪಟ್ಟಿಗೆ ಅಧಿಕೃತವಾಗಿ ಸೇರಿದವು. ಉಳಿದವುಗಳು ಕರ್ನಾಟಕ ರಾಜ್ಯದ ಹಿಂದುಳಿದ ಬುಡಕಟ್ಟುಗಳ ಪಟ್ಟಿಯಲ್ಲಿಯೇ ಮುಂದುವರಿದವು. ಈ ಪಟ್ಟಿಯು ೧೩.೧೦.೧೯೮೬, ೧೭.೯.೧೯೯೪, ೩೦.೧೦.೨೦೦೨ ರಂದು ಅನುಕ್ರಮವಾಗಿ ಗುಂಪು ಎ, ಕ್ಯಾಟೆಗರಿ ೧, ಪ್ರವರ್ಗ ೧ ಎಂಬೀ ಹೆಸರುಗಳಿಂದ ಇತರೆ ಸಮುದಾಯಗಳು ಇದರಲ್ಲಿ ಒಳಗೊಳ್ಳುತ್ತಲೇ ಪರಿಸ್ಕರಣೆಗೆ ಒಳಪಟ್ಟಿತು. ೧೯೮೬ರಿಂದ ಅಧಿಕೃತವಾಗಿ ಕರ್ನಾಟಕ ರಾಜ್ಯದಲ್ಲಿಯ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಪಟ್ಟಿ ಕಣ್ಮರೆಯಾಯಿತು. ಹೀಗಾಗಿ ಅಲೆಮಾರಿಗಳಿಗಿರುವ

ಮೀಸಲಾತಿಯೂ ಮರೀಚಿಕೆಯಾಯಿತು. ೧೯೮೬ರಲ್ಲಿ ಸಲ್ಲಿಸಿದ ಕರ್ನಾಟಕ ರಾಜ್ಯದ ಎರಡನೇ ಹಿಂದುಳಿದ ವರ್ಗಗಳ ಆಯೋಗದ ವರದಿಯಲ್ಲಿ ಕರ್ನಾಟಕದ ಅಲೆಮಾರಿಗಳಲ್ಲಿಯ ಹಲವು ಅರ್ಹ ಸಮುದಾಯಗಳಿಗೆ ಪರಿಶಿಷ್ಟರ ಪಟ್ಟಿಯಲ್ಲಿ ಇಲ್ಲವೇ ಪ್ರತ್ಯೇಕ ಪಟ್ಟಿಯಲ್ಲಿ ಇರಿಸಲು ಪ್ರಯಾಸ ಪಟ್ಟವರಲ್ಲಿ ಅಲೆಮಾರಿ ಹಿನ್ನೆಲೆಯ ಸದಸ್ಯರಾದ ಎಂ ಎಸ್ ಹೆಳವರ್ ಅವರು ಒಬ್ಬರೇ ಎಂಬುದು ವರದಿಯ ಟಿಪ್ಪಣಿಯಿಂದ ವೇದ್ಯವಾಗುತ್ತದೆ. ಆದರೆ, ಇವರ ವಾದ ಆಯೋಗದ ಒಮ್ಮತಾಭಿಪ್ರಾಯವಾಗಲಿಲ್ಲ, ಅಲೆಮಾರಿಗಳೂ ಎಚ್ಚರಾಗಲಿಲ್ಲ. ಅಂದಿನಿಂದ ಅಲೆಮಾರಿಗಳ ಹೆಸರಿನಲ್ಲಿಯ ಅಭಿವೃದ್ಧಿಯ ಯೋಜನೆಗಳೂ ಸ್ಥಗಿತಗೊಂಡವು. ಆನಂತರದ ಅವಧಿಯಲ್ಲಿ ಅಲೆಮಾರಿ ಸಮುದಾಯಗಳು ಸಂವಿಧಾನಬದ್ಧವಾಗಿ ಈ ಹಿಂದೆ ಅನುಭವಿಸುತ್ತಿದ್ದ ತಮ್ಮ ಹಕ್ಕನ್ನು ಕೇಳಲು ಹೋದರೆ ಕರ್ನಾಟಕದಲ್ಲಿ ಅಲೆಮಾರಿಗಳೇ ಇರುವುದಿಲ್ಲ ಹೀಗಾಗಿ ಅವರ ಪರವಾದ ಯಾವುದೇ ಯೋಜನೆಗಳು ಯೋಜಿಸಲು ಮತ್ತು ಕಾರ್ಯಗತಗೊಳಿಸಲು ಸಾಧ್ಯವಿಲ್ಲ ಎಂಬ ಉತ್ತರಗಳು ಅಧಿಕಾರಿಗಳಿಂದ ಬರಲಾರಂಭಿಸಿದವು.

ಕೇಂದ್ರ ಸರಕಾರದ ೫.೬.೨೦೦೬ರ ಮಾರ್ಗಸೂಚಿಯನ್ವಯ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಶಿಫಾರಸ್ಸಿನ ಅನ್ವಯ ರಾಜ್ಯದ ಅಲೆಮಾರಿಗಳಿಗೆ ಮೀಸಲಾತಿ ಸೌಲಭ್ಯ ಹಾಗೂ ಕೇಂದ್ರ ಸರಕಾರದ ಆರ್ಥಿಕ ನೆರವಿನೊಂದಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ೨೧.೯.೨೦೦೭ರಂದು ರಾಜ್ಯ ಸರಕಾರ ಆದೇಶ ಹೊರಡಿಸಿದೆ. ೨೦೦೭-೦೮ ನೇ ಸಾಲಿನಲ್ಲಿ ರಾಜ್ಯ ವಲಯದ ಯೋಜನೆಯಲ್ಲಿ ಇದಕ್ಕಾಗಿ ೪ ಕೋಟಿ ರೂಪಾಯಿಗಳ ಅನುದಾನ ಕಾಯ್ದಿರಿಸಿದೆ. ಈ ಯೋಜನೆ ಅಡಿಯಲ್ಲಿ ವಸತಿ, ಶಿಕ್ಷಣ, ಸಾಲ ಸೌಲಭ್ಯ ಇತ್ಯಾದಿಗಳನ್ನು ನೀಡಲು ೧.೨.೧೯೬೬ರ ಆದೇಶದಲ್ಲಿ ಜಾರಿಯಲ್ಲಿದ್ದ ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಪಟ್ಟಿಯನ್ನು ಅನುಸರಿಸಲಾಗುತ್ತಿದೆ. ಈ ಪಟ್ಟಿಯಲ್ಲಿಯ ಹಲವಾರು ಅಲೆಮಾರಿ ಸಮುದಾಯಗಳು ಪರಿಶಿಷ್ಟ ಜಾತಿ ಅಥವಾ ಪಂಗಡ ಪಟ್ಟಿಯಲ್ಲಿಯ ಸಮುದಾಯಗಳ ಪರ್ಯಾಯ ಪದಗಳಾಗಿರುವುದರಿಂದ ಈ ಯೋಜನೆಯಲ್ಲಿಯ ಲಾಭವನ್ನು ಪರಿಶಿಷ್ಟರಲ್ಲಿಯ ಅಲೆಮಾರಿಗಳಿಗೆ ಸಮರ್ಪಕವಾಗಿ ಪಡೆಯಲು ಸಾಧ್ಯವಾಗುತಿಲ್ಲ. ೧೯೬೬ರ ಅಲೆಮಾರಿ ಸಮುದಾಯಗಳ ಪಟ್ಟಿಯಲ್ಲಿಯ ಬಲಿತ ಸಮುದಾಯಗಳು ಇಲ್ಲವೇ ಸ್ಥಾಯಿಯಾಗಿ ನೆಲೆನಿಂತ ಕುಟುಂಬಗಳು ಈ ಲಾಭವನ್ನು ಅಲ್ಲಲ್ಲಿ ಕಬಳಿಸಲು ಆರಂಭಿಸಿವೆ. ಅಂತಹ ಸಮುದಾಯಗಳಿಗೆ ಅಲೆಮಾರಿಗಳಿಗಾಗಿ ಜಾರಿಗೊಳಿಸಿದ ಪಟ್ಟಿಯಿಂದ ಹೊರಗಿಡುವುದು ಸೂಕ್ತ. ಇದಕ್ಕಾಗಿ ಅಲೆಮಾರಿಗಳ ಪಟ್ಟಿಯ ವೈಜ್ಞಾನಿಕ ಪರಿಷ್ಕರಣೆಯ ಅಗತ್ಯವಿರುವುದು.

ಇನ್ನೂ ಸಂಪೂರ್ಣ ನೆಲೆ ನಿಲ್ಲದ ಮತ್ತು ಅತಂತ್ರ ಸ್ಥಿತಿಯಲ್ಲಿರುವ ಕರ್ನಾಟಕ ರಾಜ್ಯದಲ್ಲಿಯ ಸಮುದಾಯಗಳೆಂದರೆ; ಪರಿಶಿಷ್ಟ ಜಾತಿಯ ಬುಡ್ಗ ಜಂಗಮ್, ಚೆನ್ನ ದಾಸರ್, ದಕ್ಕಲಿಗ, ದೊಂಬರ, ಗೋಸಂಗಿ, ಹಂಡಿ ಜೋಗೀಸ್, ಕೊರಮ, ಮದಾರಿ,

ಮಾಂಗ ಗಾರೂಡಿ, ಸಿಂಧೊಳ್ಳು , ಸುಡುಗಾಡು ಸಿದ್ದ ಅಥವಾ ಮಸಣಜ್ಯೋಗಿ, ಶಿಳ್ಳೇಕ್ಯಾತಾಸ್ ಮತ್ತು ಇವುಗಳ ಪರ್ಯಾಯ ಪದಗಳು; **ಪರಿಶಿಷ್ಟ ಪಂಗಡದ** ಅಡ್ವಿಚಿಂಚೇರ್,ಪಾರ್ಧಿ, ಡುಂಗ್ರಿ ಗರಾಸಿಯ, ಹಕ್ಕಿಪಿಕ್ಕಿ, ನಾಯಕ (ಮಂಡ್ರು) ಮತ್ತು ರಾಜಗೊಂಡ ಹಾಗೂ **ಹಿಂದುಳಿದ** ವರ್ಗದ ಅಲೆಮಾರಿ ಕುರುಬ, ಬೈಲಪತ್ತಾರ, ಕಂಜಿರಭಾಟ್, ಕಾಡುಗೊಲ್ಲ, ಗೋಂಧಳಿ, ಘಿಸಾಡಿ, ಹೆಳವ, ಸಿಕ್ಕಿಗರ ಇತ್ಯಾದಿ.

ಕಾಡುಗೊಲ್ಲ ಮತ್ತು ಅಲೆಮಾರಿ ಕುರುಬ ಸಮುದಾಯಗಳು ಪಾರಂಪರಿಕ ಪಶು ಪಾಲನೆಯ ಹಿನ್ನೆಲೆಯನ್ನು ಹೊಂದಿರುವ ಆದಿಮ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳು. ಆದರೆ, ಈ ಸಮುದಾಯಗಳು ಸಂವಿಧಾನಬದ್ದವಾಗಿ ಪರಿಶಿಷ್ಟ ಪಂಗಡದಲ್ಲಿರದೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿವೆ. ಈ ಸಮುದಾಯಗಳಲ್ಲಿ ಸಾಕ್ಷರತೆ ತುಂಬ ಕಡಿಮೆ ಇರುವುದು. ಆದರೆ, ದೈಹಿಕ, ಸಾಮಾಜಿಕ ಮತ್ತು ಆರ್ಥಿಕವಾಗಿ ಬೇರೆ ಅಲೆಮಾರಿಗಳಿಗಿಂತ ಉತ್ತಮವಾಗಿದ್ದಾರೆ.

ಕೊರಮ, ಮಾಂಗ ಗಾರೂಡಿ, ಮಸಣಜ್ಯೋಗಿ, ಅಡ್ವಿಚಿಂಚೇರ್, ಪಾರ್ಧಿ,ಪಕ್ಕಿಪಿಕ್ಕಿ, ಕಂಜಿರಭಾಟ್, ದೊಂಬರ, ಗಂಟಿಚೋರ ಸಮುದಾಯಗಳಿಗೆ ಅಪರಾಧಿಗಳೆಂಬ ಕಳಂಕವಿರುವುದರಿಂದ ಪೊಲೀಸ್ ಇಲಾಖೆ ಮತ್ತು ಅನ್ಯ ಸಮುದಾಯಗಳು ಇವರ ಅಭಿವೃದ್ಧಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ. ಇವುಗಳು ಪ್ರಕೃತಿಯನ್ನು ವಿಶೇಷವಾಗಿ ಬಹು ಕಾಲದವರೆಗೆ ನಂಬಿ ಬದುಕು ಸಾಗಿಸಿದಂತಹ ಸಮುದಾಯಗಳು.

ಬುಡ್ಗ ಜಂಗಮ್, ಚೆನ್ನ ದಾಸರ್, ದಕ್ಕಲಿಗ, ದೊಂಬರ, ಗೋಸಂಗಿ, ಹಂಡಿ ಜೋಗೀಸ್, ಸಿಂಧೊಳ್ಳು, ಶಿಳ್ಳೇಕ್ಯಾತಾಸ್,ರಾಜಗೊಂಡ, ಬೈಲಪತ್ತಾರ, ಗೊಂಧಳಿ, ಘಿಸಾಡಿ, ಹೆಳವ, ಮೋಡಿಕಾರ, ಶಿಕ್ಕಲಿಗಾರ, ಸಿಕ್ಕಿಗರ ಸಮುದಾಯಗಳು ಅನ್ಯ ಸಮುದಾಯಗಳನ್ನೇ ನಂಬಿ ಬದುಕು ಸಾಗಿಸಿದಂತಹವು. ಈ ಸಮುದಾಯಗಳಲ್ಲಿರುವ ಕಲೆ ಮತ್ತು ಸಾಹಿತ್ಯ ಗ್ರಾಮೀಣ ಜನತೆಗೆ ಬಹು ಉಪಯೋಗಿಯಾಗಿರುವುದರಿಂದ ಇವುಗಳು ಗ್ರಾಮೀಣ ಪ್ರದೇಶಗಳಲ್ಲಿ ಅಲೆಯುವವು. ಕಲೆಗಳಿಂದ ಜೀವನ ನಡೆಸಲು ಸಾಧ್ಯವಾಗದೇ ಇದ್ದ ಸಂದರ್ಭಗಳಲ್ಲಿ ಭಿಕ್ಷಾಟನೆಗೆ ಮೊರೆಹೋಗುವವು. ಈ ಎಲ್ಲ ಸಮುದಾಯಗಳು ಸಾಮಾನ್ಯವಾಗಿ ಗುಡಿ ಗುಂಡಾರಗಳಲ್ಲಿ, ಶಾಲಾ ಆವರಣದಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಕೊಳಚೆ ಪ್ರದೇಶಗಳಲ್ಲಿ ತಾತ್ಕಾಲಿಕವಾಗಿ ವಾಸವಾಗಿ ಮುಂದಿನ ಗ್ರಾಮಗಳಿಗೆ ಸಾಗುವವು. ಈ ಸಮುದಾಯಗಳು ಪರಿಶಿಷ್ಟರ ಅಥವಾ ಹಿಂದುಳಿದವರ ಪಟ್ಟಿಯಲ್ಲಿದ್ದರೂ ಈ ಸಮುದಾಯಗಳನ್ನು ಗುರುತಿಸುವಲ್ಲಿ ಸರಕಾರ ಮತ್ತು ಸಮುದಾಯಗಳು ಎಡವಿವೆ. ಉದಾಹರಣೆಗೆ ಪರಿಶಿಷ್ಟ ಜಾತಿಯ ಬುಡ್ಗ ಜಂಗಮ್ ಸಮುದಾಯವನ್ನು ಬಹುರೂಪಿ, ಬೈರಾಗಿ, ಬಾಳಸಂತು, ಬಾವಚ, ಕುರುಕುರುಮಾಮ, ಕೊಂಡಮಾಮ, ಬುರ್ರಕಥೆಯವರು, ಪಗಲುವೇಷದವರು, ವೇಷಗಾರರು ಇತ್ಯಾದಿ ಹೆಸರುಗಳಿಂಲೂ; ಶಿಳ್ಳೇಕ್ಯಾತಾಸ್ ಸಮುದಾಯವನ್ನು ಶಿಳ್ಳೇಕ್ಯಾತ, ಕಿಳ್ಳೇಕ್ಯಾತ, ಕಟಬು, ಗೊಂಬೆರಾಮ, ತೊಗಲುಗೊಂಬೆ

ಆಟದವರು, ಬುಡಬುಡಕಿಯವರು, ಬುಂಡೆ ಬೆಸ್ತ ಇತ್ಯಾದಿ ಹೆಸರುಗಳಿಂದಲೂ; ಚೆನ್ನ ದಾಸರ್ ಸಮುದಾಯವನ್ನು ಹೊಲಯ ದಾಸರ್, ಹೊಲೆಯ ದಾಸರಿ, ಮಾಲ ದಾಸರಿ, ದಂಡಿಗ ದಾಸರ್, ಚಕ್ರವಾದ್ಯ ದಾಸ್, ದೊಂಬಿ ದಾಸರು ಇತ್ಯಾದಿ ಹೆಸರುಗಳಿಂದಲೂ; ಕೊರಮರನ್ನು ಕೊರವ, ಕೈಕಾಡಿ, ಬಜಂತ್ರಿ, ಮೋಡಿಕಾರ, ಕುಂಚಿ ಕೊರವ, ಕೇಪ್‌ಮಾರಿಸ್, ಕುರುವನ್, ಯರಕುಲ ಇತ್ಯಾದಿ ಹೆಸರುಗಳಿಂದಲೂ; ಸಿಂಧೊಳ್ಳು ಸಮುದಾಯವನ್ನು ಚಿಂಧೊಳ್ಳು, ಪೋತರಾಜ, ಸುಂಕಲಮ್ಮನವರು, ಪೂಜಾರಿಗಳು, ಮಾರಮ್ಮನವರು, ದುರ್ಗಮುರ್ಗಿಯವರು ಇತ್ಯಾದಿ ಹೆಸರುಗಳಿಂದಲೂ: ಪರಿಶಿಷ್ಟ ಪಂಗಡದ ಭಿಲ್ ಗುಂಪಿನ ಡುಂಗ್ರಿ ಗರಾಸಿಯ ಬುಡಕಟ್ಟನ್ನು ಜೋಗಿ, ಗೋಸಾವಿ, ಗೊಸಂಗಿ, ಹಕ್ಕಿಪಿಕ್ಕಿ, ಶಿಳ್ಳೇಕ್ಯಾತ, ಮರಾಟಿ ಇತ್ಯಾದಿ ಹೆಸರುಗಳಿಂದಲೂ; ಪಾರ್ಧಿ ಬುಡಕಟ್ಟನ್ನು ಹಕ್ಕಿಪಿಕ್ಕಿ, ಹರಣಶಿಕಾರಿ, ಅಡ್ವಿಚಿಂಚೇರ್, ಚೆಂಚು, ನೀರಶಿಕಾರಿ, ಮೇಲಶಿಕಾರಿ, ಫಾನ್ಸಿ ಪಾರ್ಧಿ ಇತ್ಯಾದಿ ಹೆಸರುಗಳಿಂದಲೂ ಸ್ಥಳೀಯರು ಕರೆದಿರುವರು. ಸ್ಥಳೀಯರು ಕರೆದಿರುವ ಹೆಸರುಗಳೇ ಕಾಲಾಂತರದಲ್ಲಿ ಜಾತಿಗಳಂತೆ ಕಂಡು ದಾಖಲಾಗಲಾರಂಭಿಸಿದವು. ಸ್ಥಳೀಯರು ಇವರ ಕಾಯಕಗಳ ಹಿನ್ನೆಲೆಯಲ್ಲಿ ಸ್ಥಳೀಯ ಭಾಷಿಕ ಹೆಸರುಗಳಿಂದ ಕರೆದರೇ ವಿನಃ ಇವರ ನಡುವೆ ಏರ್ಪಡುವ ರಕ್ತ ಸಂಬಂಧ ಮತ್ತು ಆಚಾರ ವಿಚಾರವನ್ನು ಗಮನಿಸಲಿಲ್ಲ ಎಂಬುವುದು ಸ್ಪಷ್ಟವಾಗುತ್ತದೆ. ಒಂದೇ ಸಮುದಾಯಕ್ಕೆ ಹತ್ತಾರು ಹೆಸರುಗಳು ಚಾಲ್ತಿಯಲ್ಲಿರುವುದರಿಂದ ಸರಕಾರಿ ಅಧಿಕಾರಿಗಳಿಗೆ ಮೀಸಲಾತಿ ಕಲ್ಪಿಸುವಲ್ಲಿ ಗೊಂದಲ ಉಂಟಾಗಿರುವುದು ಸಹಜ. ಮೀಸಲಾತಿಯ ಗಂಧಗಾಳಿ ಅರಿಯದ ಸಾಮಾಜಿಕ ಕಳಂಕವುಳ್ಳ ಅಲೆಮಾರಿ ಸಮುದಾಯಗಳು ತನ್ನ ಮೂಲ ಐಡೆಂಟಿಟಿ ಮರೆಸುವುದರಿಂದ ತಮಗೆ ಸಾಮಾಜಿಕ ಮನ್ನಣೆ ದೊರೆಯುವುದೆಂದು ಹೊಲೆಯ ದಾಸರು ಚೆನ್ನದಾಸರೆಂಬ, ಬುಡುಗ ಜಂಗಾಲರು ಬುಡ್ಗ ಜಂಗಮರೆಂಬ, ಹಂಡಿ ಅಥವಾ ಹಂದಿ ಜೋಗಿಯರು ಅಥವಾ ಜೋಗಿ ಎಂಬ ಇತ್ಯಾದಿ ಪದಗಳ ಹಿಂದೆ ಜೋತುಬಿದ್ದವು. ಕಾರಣ ಅಂದು ದಾಸ, ಜಂಗಮ, ಜೋಗಿ ಪದಗಳಿಗೆ ಸಮಾಜದಲ್ಲಿ ವಿಶೇಷ ಮನ್ನಣೆ ಇತ್ತು. ತಮ್ಮ ಕಳಂಕ ಮುಕ್ತಿಗಾಗಿ ಈ ಪದಗಳ ಆಶ್ರಯ ಪಡೆಯುವುದು ಅಲೆಮಾರಿಗಳಲ್ಲಿಯ ಹಲವು ಸಮುದಾಯಗಳಿಗೆ ಅನಿವಾರ್ಯವೆನಿಸಿತು. ಪೂರ್ಣ ಪ್ರಮಾಣದ ಧರ್ಮಾಶ್ರಯ ಇವರಿಗೆ ಲಭ್ಯವಾಗಲಿಲ್ಲ. ಬೇಟೆ, ಭಿಕ್ಷಾಟನೆಯಿಂದಲೂ ಮುಕ್ತಿ ಹೊಂದಲಾಗಲಿಲ್ಲ. ಹೀಗಾಗಿ ತ್ರಿಶಂಕು ಸ್ಥಿತಿ ಈ ಸಮುದಾಯಗಳದಾಯಿತು.

ಹಿಂದುಳಿದ ವರ್ಗಗಳ ಅಲೆಮಾರಿ ಸಮುದಾಯಗಳಲ್ಲಿಯೂ ಗೋಂಧಳಿ ಸಮುದಾಯವನ್ನು ಬುಡಬುಡಿಕೆ, ಜೋಷಿ, ಭೂತೇರು ಇತ್ಯಾದಿ ಹೆಸರುಗಳಿಂದಲೂ; ಹೆಳವರನ್ನು ಗಂಟಿ ಹೆಳವ, ಹಂದಿ ಹೆಳವ, ಪುಂಗಿ ಹೆಳವ, ಚಾಪೆ ಹೆಳವ ಇತ್ಯಾದಿ ಹೆಸರುಗಳಿಂದಲೂ ಸ್ಥಳೀಯರು ಕರೆಯುವುದು ಸಾಮಾನ್ಯ. ಇಂತಹ ಅಲೆಮಾರಿ ಸಮುದಾಯಗಳಿಗೆ ಸಂವಿಧಾನಬದ್ಧವಾಗಿ ಪರಿಶಿಷ್ಟರ ಪಟ್ಟಿಗೆ ಸೇರುವ ಎಲ್ಲ

ಅರ್ಹತೆಗಳಿದ್ದರೂ ಈ ಕುರಿತು ಸಮುದಾಯಗಳು ಮತ್ತು ಸರಕಾರ ದಿವ್ಯ ನಿರ್ಲಕ್ಷತೆಯನ್ನು ವಹಿಸಿವೆ. ಕಾಯಕದ ಹಿನ್ನೆಲೆಯಲ್ಲಿ ಅಲೆಮಾರಿ ಘಿಸಾಡಿ ಮತ್ತು ಬೈಲಪತ್ತಾರ ಸಮುದಾಯಗಳು ಹಲವೆಡೆ ಸ್ಥಳೀಯರ ಕಣ್ಣಿಗೆ ವಿಶ್ವಕರ್ಮರಂತೆ ಕಂಡಿರುವುದರಿಂದ ಇವರನ್ನು ತಪ್ಪಾಗಿ ಹಿಂದುಳಿದ ವರ್ಗದ ವಿಶ್ವಕರ್ಮರ ಪಟ್ಟಿಯಲ್ಲಿ ಗಣಿಸಲಾಗುತ್ತಿದೆ. ಸಿಖ್ ಧರ್ಮದ ಅನುಸರಣೆಗೆ ಮೊರೆಹೋಗಿರುವ ಅಲೆಮಾರಿ ಸಿಕ್ಲಿಗರ ಸಮುದಾಯ ಕರ್ನಾಟಕ ರಾಜ್ಯದ ಮೀಸಲಾತಿಯ ಯಾವುದೇ ಪಟ್ಟಿಗೆ ಸೇರದೇ ಇರುವುದು ದುರ್ದೈವದ ಸಂಗತಿಯೇ ಸರಿ. ಅಲೆಮಾರಿಗಳ ಐಡೆಂಟಿಟಿಯ ಕಗ್ಗಂಟನ್ನು ಬಿಡಿಸಿ ಈ ಸಮುದಾಯಗಳಿಗೆ ಸಂವಿಧಾನಬದ್ಧ ನ್ಯಾಯ ಒದಗಿಸುವ ಕಾರ್ಯ ಸರಕಾರದಿಂದ ಇದುವರೆಗೂ ನಡೆಯದೇ ಇರುವುದು ವಿಪರ್ಯಾಸವೇ ಸರಿ. ಈ ಕುರಿತು ನ್ಯಾಯ ಒದಗಿಸಬೇಕಾದ ಸರಕಾರಗಳು, ಆಯೋಗಗಳು, ಸಮುದಾಯಗಳ ಸಂಘಟನೆಗಳು, ಸಂಶೋಧನಾ ಸಂಸ್ಥೆಗಳು ಮೂಕಾಗದೆ, ಕುರುಡಾಗದೆ, ಕಿವುಡಾಗದೆ, ಜಾತಿ ಆಧಾರಿತ ಮೀಸಲಾತಿ ಅನುಸರಿಸುವ ಭಾರತ ಸರಕಾರ ಮತ್ತು ರಾಜ್ಯ ಸರಕಾರಗಳು ನಿರ್ಲಕ್ಷಿತ ಅಲೆಮಾರಿ ಸಮುದಾಯಗಳಿಗೆ ಮೊದಲು ಮೀಸಲಾತಿ ಪಟ್ಟಿಯಲ್ಲಿ ಸೂಕ್ತ ಸ್ಥಾನ ಕಲ್ಪಿಸಬೇಕು. ಇದು ಸಾಧ್ಯವಾಗದೇ ಇದ್ದಲ್ಲಿ ಇಂದಿನ ಜಾತಿ ಆಧಾರಿತ ಮೀಸಲಾತಿಯನ್ನು ತಕ್ಷಣವೆ ಕೈಬಿಟ್ಟು, ಭಾರತದ ಅಲೆಮಾರಿಗಳ ಅಭಿವೃದ್ಧಿಗಾಗಿ ಬೇರೆ ಕಾರ್ಯಯೋಜನೆಗಳನ್ನು ಮತ್ತು ಮಾರ್ಗಗಳನ್ನು ಅನುಸರಿಸುವುದು ಸೂಕ್ತ. ಇಂದಿನ ಪರಿಶಿಷ್ಟರ ಮತ್ತು ಹಿಂದುಳಿದವರ ಮೀಸಲಾತಿಯ ಪಟ್ಟಿಯು ಅಸಮಾನತೆಯಿಂದ ಕೂಡಿರುವುದು. ಹೀಗಾಗಿ ಮೀಸಲಾತಿಯು ಆಯಾ ಪಟ್ಟಿಯಲ್ಲಿಯ ಬಲಿಷ್ಟರ ಪಾಲಾಗಿ ಬಲಹೀನರು ಅಂಚಿಗೆ ತಳ್ಳಲ್ಪಟ್ಟಿರುವರು. ಅಂಚಿಗೆ ತಳ್ಳಲ್ಪಟ್ಟವರಲ್ಲಿ ಪ್ರತಿನಿತ್ಯ ಸುನಾಮಿಗೂ ಮಿಗಿಲಾದ ಸಮಸ್ಯೆಗಳನ್ನು ಎದುರಿಸುತ್ತಿರುವ ಪಾರಂಪರಿಕ ಅಲೆಮಾರಿಗಳು ಮತ್ತು ವಿಮುಕ್ತ ಬುಡಕಟ್ಟಿನವರು ಪ್ರಮುಖರಾಗಿದ್ದಾರೆ.

ಈ ಹಿನ್ನೆಲೆಯ ಅಲೆಮಾರಿಗಳಲ್ಲಿ ಆರ್ಥಿಕ ಭದ್ರತೆ ನೀಡುವ ಅಕ್ಷರ ಜ್ಞಾನದ ಕೊರತೆ ಇರುವುದು. ಇವರಲ್ಲಿ ಹಲವು ಸಮುದಾಯಗಳು ನಗರಗಳ ಕೊಳಗೇರಿಗಳಲ್ಲಿದ್ದರೂ ನಾಗರಿಕರಿಂದ ಬಹುದೂರವಿದ್ದು ತಮ್ಮದೆಯಾದ ಭಾಷೆ, ರೂಢಿ, ಸಂಪ್ರದಾಯ,ನ್ಯಾಯ ಪದ್ಧತಿ ಇತ್ಯಾದಿಗಳನ್ನು ಪ್ರಯಾಸಪಟ್ಟು ಮುಂದುವರಿಸಿಕೊಂಡು ಬರುತ್ತಲಿವೆ.

ಅಲೆಮಾರಿಗಳು ಕಡುಬಡವರು, ಸರಳರು, ಮೋಸದ ವ್ಯವಹಾರ ಅರಿಯರು,ಮೋಸಕ್ಕೆ ಒಳಗಾದವರು ಮತ್ತು ಆಗುತ್ತಲಿದ್ದವರು. ಮಾನವ ಜನಾಂಗದ ಮೂಲಿಗರು. ಬೇಟೆ, ಬೆಟ್ಟ ಕಳೆದುಕೊಂಡು ತನ್ನ ಮೂಲವನ್ನು ಮರೆತು ಅತಂತ್ರದಲ್ಲಿದ್ದವರು. ನಾಳೆಯ ಚಿಂತೆಯಿಲ್ಲದವರು,ಯಾರದೋ ಜಾಗದಲ್ಲಿ ಗುಡಾರ ಗುಡುಸಿ ಹಾಕಿಕೊಂಡು ಬದುಕುತ್ತಿರುವಾಗ ಜಾಗದ ಮಾಲಿಕ ಹೆದರಿಸಿದೊಡನೆ ಮತ್ಯಾರದ್ದೋ ಜಾಗದಲ್ಲಿ ಗುಡಾರ ಹಾಕಿ ಬದುಕಲು ಗುಳೆ ಹೋಗುವರು. ಈ ಸಮುದಾಯಗಳಿಗೆ ಯಾವುದೇ ಆರ್ಥಿಕ

ಭದ್ರತೆಗಳಿಲ್ಲ. ಇವರಲ್ಲಿ ಬಹುತೇಕ ಜನರು ಗುಜರಿ ಆರಿಸಲು, ಬಕೇಟ ರಿಪೇರಿ ಮಾಡಲು, ಕಾಟಾ, ಪಿನ್ನು, ಸೂಜಿ, ಜಡಿಬೂಟಿ ಮಾರಲು, ಮೀನು ಹಿಡಿಯಲು, ಕೃಷಿಕೂಲಿ ಮಾಡಲು ಪ್ರಯತ್ನಿಸುವರು. ಇವ್ಯಾವುದರಿಂದಲೂ ಹೊಟ್ಟೆ ತುಂಬಿಸಿಕೊಳ್ಳಲು ಸಾಧ್ಯಆಗದಿದ್ದಾಗ ಭಿಕ್ಷೆ ಬೇಡುವರು. ಸ್ವಾಭಿಮಾನದ ಬದುಕು ಇವರಿಗೆ ಕನಸಾಗಿರುವುದು. ಸಾಮಾಜಿಕ ನ್ಯಾಯ ಕಗ್ಗಂಟಾಗಿರುವುದು.

ಗುಡಾರ ನಿವಾಸಿ ಅಲೆಮಾರಿ ಸಮುದಾಯಗಳ ಸಮಸ್ಯೆಗಳನ್ನು ಕುರಿತು ಗಂಭೀರವಾಗಿ ಚರ್ಚಿಸಲು ಬಳ್ಳಾರಿ ಜಿಲ್ಲೆಯಲ್ಲಿ ಬುಡ್ಗ ಜಂಗಮ್, ಚೆನ್ನ ದಾಸರ್, ಗೋಸಂಗಿ, ಹಂಡಿ ಜೋಗಿಸ್, ಶಿಳ್ಳೇಕ್ಯಾತಾಸ್, ಸಿಂಧೊಳ್ಳು, ಸುಡುಗಾಡು ಸಿದ್ದ, ಹಕ್ಕಿಪಿಕ್ಕಿ, ಪಾರ್ಧಿ, ಗೋಂಧಳಿ, ಹೆಳವ, ಮೊಂಡ ಇತ್ಯಾದಿ ಸಮುದಾಯಗಳ ಸಮಾನ ಮನಸ್ಕ ಮುಖಂಡರು ಮುಂದಾದರು. ಸಮಸ್ಯೆಗಳನ್ನು ಸರಕಾರದ ಗಮನಕ್ಕೆ ತರಲು ಗುಡಾರ ಗುಡಿಸಲು ನಿವಾಸಿಗಳ ಕಲ್ಯಾಣ ಸಂಘವನ್ನು ೧೩.೨.೨೦೦೨ ರಂದು ನೋಂದಾಯಿಸಿಕೊಂಡು ವ್ಯವಸ್ಥಿತ ಚಳುವಳಿಗೆ ಅಣಿಗೊಂಡರು. ನಿಸ್ವಾರ್ಥ ಮತ್ತು ಉತ್ಕಟ ಸೇವಾಭಾವದ ಈ ಸಂಘಟಿತ ಚಳುವಳಿಯ ಫಲ ಸ್ವರೂಪವೇ ಬಳ್ಳಾರಿ ಹೊರವಲಯದ ೮ ಅಲೆಮಾರಿ ಗುಡಾರ ನಿವಾಸಿ ಸಮುದಾಯಗಳ ೨೪೮ ಕುಟುಂಬಗಳ ಸುಭದ್ರ ಅಲೆಮಾರಿಗಳ ನವನಗರ. ಅವರ ಅನನ್ಯತೆಯ ಭಾಗವಾಗಿ ಇದನ್ನು ಗುಡಾರ ನಗರ ಎಂತಲೇ ಹೆಸರಿಸಲಾಯಿತು. ಇದನ್ನು ಸಾಕಾರಗೊಳಿಸಲು ಬಳ್ಳಾರಿ ಜಿಲ್ಲಾ ಆಡಳಿತ ಮತ್ತು ಗುಡಾರ ಗುಡಿಸಲು ನಿವಾಸಿಗಳ ಕಲ್ಯಾಣ ಸಂಘ ಅಮೋಘ ಪಾತ್ರವಹಿಸಿದವು. ಈ ಗುಡಾರನಗರ ರಾಜ್ಯದ ಇತರೆಡೆ ಇರುವ ಅಲೆಮಾರಿ ಗುಡಾರ ನಿವಾಸಿಗಳ ಸಂಘಟನೆಗೆ ಪ್ರೇರಣೆಯೂ ನೀಡಿತು.

ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟು ಸಮಸ್ಯೆಗಳ ಕುರಿತು ಇತ್ತೀಚಿನ ದಿನಗಳಲ್ಲಿ ಭಾರತೀಯ ಮಟ್ಟದಲ್ಲಿ ಸಮಾನ ಮನಸ್ಕರ ಗಮನ ಸೆಳೆದವರಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತೆ ಮಹಾಶ್ವೇತಾದೇವಿಯವರು ಪ್ರಥಮರು. ಇವರ ಆಶಯಕ್ಕೆ ದನಿಗೂಡಿಸಿದವರಲ್ಲಿ ಡಾ ಗಣೇಶ ದೇವಿ, ಲಕ್ಷ್ಮಣ ಗಾಯಕ್ವಾಡ, ಲಕ್ಷ್ಮಣ ಮಾನೆ, ರಂಜೀತ್ ನಾಯಕ್, ಬಾಲಕೃಷ್ಣ ಎಸ್ ರೇಣಕೆ, ಡಾ ಅಜಯ್ ದಾಂಡೇಕರ್, ದಕ್ಷಿಣ ಬಜರಂಗೆ, ಡಾ ಮೀನಾ ರಾಧಾಕೃಷ್ಣನ್, ನ್ಯಾಯಮೂರ್ತಿ ಎಂ ಎನ್ ವೆಂಕಟಾಚಲಯ್ಯ, ಲಕ್ಷ್ಮಣಭಾಯಿ ಪತಿನಿ ಅವರುಗಳು ಪ್ರಮುಖರು. ಈ ಚಿಂತಕರ ಧ್ವನಿ ಭಾರತ ಸರಕಾರಕ್ಕೆ ಎಚ್ಚರಗೊಳಿಸುವಲ್ಲಿ ಸಹಕಾರಿ ಯಾಯಿತು. ಭಾರತ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಈ ಸಮುದಾಯಗಳ ಕುರಿತು ಅಧ್ಯಯನ ಕೈಗೊಂಡು ಇವರ ಸಬಲೀಕರಣಕ್ಕಾಗಿ ಒಂದು ವರ್ಷದ ಒಳಗಾಗಿ ಮಾರ್ಗೋಪಾಯಗಳನ್ನು ವರದಿ ರೂಪದಲ್ಲಿ ಸಲ್ಲಿಸಲು ೨೩.೧೦.೨೦೦೩ ರಂದು ಆಯೋಗ ಒಂದನ್ನು ಸಂಘಟಿಸಲು ಠರಾವು ಪಾಸು ಮಾಡಿತು. ಅಲೆಮಾರಿಗಳ ತಿಳುವಳಿಕೆಯ ಚಳುವಳಿ ದೇಶದಾದ್ಯಂತ ಚಿಗುರೊಡೆಯಲು ಆರಂಭಿಸಿತು. ಆಯೋಗಕ್ಕೆ ಪೂರಕ ಮಾಹಿತಿ ಒದಗಿಸಲು ಕರ್ನಾಟಕ

ರಾಜ್ಯದ ಅಲೆಮಾರಿಗಳು ಚಿಂತನೆಯನ್ನು ಆರಂಭಿಸಿದರು. ರಾಜ್ಯದ ಅಲೆಮಾರಿ ಸಮುದಾಯಗಳ ಸಮಾನ ಮನಸ್ಕರಿಗಾಗಿ ವೇದಿಕೆಯೊಂದನ್ನು ಕಟ್ಟಲು ಕೆ ಭಾಸ್ಕರದಾಸ್ ಎಕ್ಕಾರು ಅವರು ಕರ್ನಾಟಕ ರಾಜ್ಯ ಚೆನ್ನದಾಸರ್ ಕ್ಷೇಮಾಭಿವೃದ್ಧಿ ಸಂಘದ ಅಡಿಯಲ್ಲಿ ಮಂಗಳೂರಿನ ಕಟಿಲಿನಲ್ಲಿ ೨೫.೧೨.೨೦೦೪ ರಂದು ಮತ್ತು ಕದರಿಯಲ್ಲಿ ೨೬.೧೨.೨೦೦೪ ರಂದು ಸಭೆ ಆಯೋಜಿಸಿದರು. ರಾಜ್ಯದ ಅಲೆಮಾರಿ ಚಿಂತಕರು ಸಮುದಾಯಗಳ ಸಾಮಾನ್ಯ ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟಿತರಾಗಲು ಅಣಿಗೊಂಡರು. ೧೦.೩.೨೦೦೫ ರಂದು ಕರ್ನಾಟಕ ರಾಜ್ಯ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಒಕ್ಕೂಟ ಅಧಿಕೃತವಾಗಿ ನೋಂದಾಯಿಸ ಲಾಯಿತು. ಆನಂತರ ಒಕ್ಕೂಟದಡಿಯಲ್ಲಿ ನೂರಾರು ಸಭೆ ಸಮಾರಂಭಗಳನ್ನು ಸಂಘಟಿಸಲಾದವು. ಅಲೆಮಾರಿಗಳ ಮಾಹಿತಿ ಸಂಗ್ರಹಣೆಯ ಕಾರ್ಯವೂ ಆರಂಭವಾಯಿತು. ಆದರೆ, ಭಾರತ ಸರಕಾರ ನೇಮಿಸಿದ ಅಲೆಮಾರಿಗಳ ಆಯೋಗ ಸರಕಾರದ ಬದಲಾವಣೆ ಯಿಂದಾಗಿ ಸ್ಥಗಿತಗೊಂಡಿತು.

ಅಲೆಮಾರಿ ಸಮಸ್ಯೆಗಳ ಕುರಿತು ಭಾರತ ಸರಕಾರದ ಮತ್ತು ಸಮುದಾಯಗಳ ಗಮನ ಸೆಳೆಯಲು ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ದೆಹಲಿಯಲ್ಲಿ ಬರೋಡದ ಭಾಷಾ ಸಂಸ್ಥೆ, ಆದಿವಾಸಿ ಏಕತಾ ಪರಿಷತ್ತು ಮತ್ತು ಲೋಕಧಾರಾ ಸಂಘಟನೆಗಳು ರಾಷ್ಟ್ರೀಯ ಮಟ್ಟದ ಅಲೆಮಾರಿಗಳ ೪ ದಿನಗಳ ವಿಚಾರ ಸಂಕಿರಣವನ್ನು ೨೦೦೫ರ ಏಪ್ರಿಲ್ ೨೧ ರಿಂದ ೨೪ ರವರೆಗೆ ಹಮ್ಮಿಕೊಂಡಿದ್ದವು. ಈ ಸಮಾವೇಶದಲ್ಲಿ ಭಾರತದ ಸುಮಾರು ೧೭೦೦ ಅಲೆಮಾರಿ ಮತ್ತು ಆದಿವಾಸಿ ಕಲಾವಿದರು, ಚಿಂತಕರು ಭಾಗವಹಿಸಿದರು. ಕರ್ನಾಟಕ ರಾಜ್ಯದಿಂದಲೂ ಇದರಲ್ಲಿ ೬೦ ಜನ ವಿವಿಧ ಅಲೆಮಾರಿ ಸಮುದಾಯಗಳ ಚಿಂತಕರು ಮತ್ತು ಕಲಾವಿದರು ಭಾಗವಹಿಸಿದರು. ಅನ್ಯಾಯಕ್ಕೆ ಒಳಗಾದ ಭಾರತದ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳಿಗಾಗಿ ಭಾರತ ಸರಕಾರ ಪ್ರತ್ಯೇಕ ಮೀಸಲಾತಿ ಪಟ್ಟಿಯನ್ನು ಪ್ರಕಟಿಸುವುದು ಸೂಕ್ತವೆಂದು ಚಿಂತಕರ ಸಭೆಯು ಒಮ್ಮತಾಭಿಪ್ರಾಯ ಪಟ್ಟಿತು. ೧೪.೧.೨೦೦೬ರ ಮಹಾಶ್ವೇತಾದೇವಿ ಅವರ ಜನ್ಮದಿನದಂದು ಸಾಂಕೇತಿಕವಾಗಿ ಅಲೆಮಾರಿ ಚಿಂತಕರೆಲ್ಲರೂ ದೆಹಲಿಯ ಇಂಡಿಯಾ ಇಂಟರನ್ಯಾಷನಲ್ ಸೆಂಟರ್‌ನಲ್ಲಿ ಸೇರಿ ಭಾರತದ ಪ್ರಧಾನಿ ಡಾ ಮನಮೋಹನ್ ಸಿಂಗ್ ಅವರಿಗೆ ಅಲೆಮಾರಿಗಳ ಆಯೋಗವನ್ನು ಪುನರ್ ರಚಿಸುವಂತೆ ಮನವಿ ಮಾಡಲು ನಿರ್ಧರಿಸಲಾಯಿತು. ಈ ಹಿನ್ನೆಲೆಯಲ್ಲಿ ಭಾರತ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ಈ ಸಮುದಾಯಗಳ ಕುರಿತು ಅಧ್ಯಯನ ಕೈಗೊಂಡು ಒಂದು ವರ್ಷದ ಒಳಗಾಗಿ ವರದಿ ಸಲ್ಲಿಸಲು ೧೪.೩.೨೦೦೫ ರಂದು ಆಯೋಗ ಒಂದನ್ನು ಪುನರ್ ಸಂಘಟಿಸಲು ಠರಾವು ಪಾಸು ಮಾಡಿ ನಂತರದಲ್ಲಿ ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಕ ಮಾಡಿತು. ರಾಷ್ಟ್ರೀಯ ವಿಮುಕ್ತ, ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟುಗಳ ಆಯೋಗದ ಅಧ್ಯಕ್ಷರಾಗಿ ಬಾಲಕೃಷ್ಣ ಎಸ್ ರೇಣಕೆ ಮತ್ತು ಸದಸ್ಯರಾಗಿ ಲಕ್ಷ್ಮಣಭಾಯಿ ಪತಿನಿ ಅವರು ೬.೨.೨೦೦೬

ರಂದು ಕಾರ್ಯಾರಂಭ ಮಾಡಿದರು. ಆಯೋಗಕ್ಕೆ ಪೂರಕವಾಗಿ ಮಾಹಿತಿ ಒದಗಿಸಲು ಡಾ ಗಣೇಶ ದೇವಿ ಅವರ ಅಧ್ಯಕ್ಷತೆಯಲ್ಲಿ ೭ ಜನ ಸದಸ್ಯರ ತಾಂತ್ರಿಕ ಸಲಹಾ ಸಮಿತಿಯೊಂದನ್ನು ಮೂರು ತಿಂಗಳ ಅವಧಿಯಲ್ಲಿ ವರದಿ ಸಲ್ಲಿಸಲು ೮.೯.೨೦೦೬ ರಂದು ಭಾರತ ಸರಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ನೇಮಿಸಿತು. ಸಮಿತಿಯು ತನ್ನ ವರದಿಯನ್ನು ಸಕಾಲದಲ್ಲಿ ಆಯೋಗಕ್ಕೆ ಸಲ್ಲಿಸಿತು. ಆದರೆ, ಆಯೋಗ ತನ್ನ ಕಾಲಮಿತಿಯಲ್ಲಿ ವರದಿ ಸಲ್ಲಿಸಲು ಸಾಧ್ಯವಾಗದಿದ್ದಾಗ ಸಕಾರಣಗಳೊಂದಿಗೆ ಮತ್ತೊಂದು ವರ್ಷದ ಕಾಲಾವಧಿ ಬಯಸಿತು. ಭಾರತ ಸರಕಾರವು ಇದಕ್ಕೆ ತನ್ನ ಒಪ್ಪಿಗೆಯೂ ನೀಡಿತು. ಹೀಗಾಗಿ ಆಯೋಗವು ಈ ವರ್ಷ ತನ್ನ ವರದಿಯನ್ನು ಭಾರತ ಸರಕಾರಕ್ಕೆ ಸಲ್ಲಿಸಲಿದೆ. ವರದಿ ಸಿದ್ಧತೆಗಾಗಿ ಆಯೋಗವು ರಾಷ್ಟ್ರದಾದ್ಯಂತ ಪ್ರಯಾಣ ಬೆಳೆಸಿತು. ಕರ್ನಾಟಕದಲ್ಲಿ ಆಯೋಗಕ್ಕೆ ಮತ್ತು ಸರಕಾರಕ್ಕೆ ಸೂಕ್ತ ಮಾಹಿತಿಗಳನ್ನು ಒದಗಿಸಲು ಒಕ್ಕೂಟವು ಸಹಕರಿಸಿತು. ಹೀಗಾಗಿ ಅಲೆಮಾರಿಗಳಿಗಾಗಿ ಟೆಂಟ್ ಶಾಲೆಗಳನ್ನು ಮತ್ತು ಗ್ರಂಥಾಲಯಗಳನ್ನು ಆರಂಭಿಸಲು ಸರಕಾರ ಯೋಜಿಸಿತು. ಕರ್ನಾಟಕ ಅಲೆಮಾರಿಗಳ ವೈಜ್ಞಾನಿಕ ಅಧ್ಯಯನ ಮತ್ತು ಪುಸ್ತಕ ಪ್ರಕಟಣೆಗಾಗಿ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ಮನ ಒಲಿಸಿತು. ಪ್ರಾಧಿಕಾರವು ಇದಕ್ಕಾಗಿ ತನ್ನ ಪೂರ್ಣ ಪ್ರಮಾಣದ ಸಹಕಾರ ನೀಡಿತು. ಇದಕ್ಕೆ ಈ ಕೃತಿಗಳೇ ಸಾಕ್ಷಿ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು, ಜನಗಣತಿ ನಿರ್ದೇಶನಾಲಯ, ಭಾರತೀಯ ಮಾನವಶಾಸ್ತ್ರೀಯ ಸರ್ವೇಕ್ಷಣಾ ಸಂಸ್ಥೆ, ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ, ಕರ್ನಾಟಕದ ಹಲವಾರು ವಿಶ್ವವಿದ್ಯಾಲಯಗಳು ಮತ್ತು ಸಂಘ ಸಂಸ್ಥೆಗಳು ಹಲವಾರು ತರಹದ ಶೋಧಕಾರ್ಯ ನಡೆಸಿ ಸಮುದಾಯಗಳ ಕುರಿತ ಮಾಹಿತಿಗಳನ್ನು ವರದಿ ಮತ್ತು ಪುಸ್ತಕ ರೂಪದಲ್ಲಿ ಹೊರತಂದಿವೆ. ಹಲವಾರು ಸಂಶೋಧಕರು ಸಮುದಾಯಗಳನ್ನು ಕುರಿತು ಎಂ ಫಿಲ್ ಪ್ರಬಂಧ ಹಾಗೂ ಪಿಎಚ್ ಡಿ ಮತ್ತು ಡಿ ಲಿಟ್ ಮಹಾಪ್ರಬಂಧಗಳನ್ನು ರಚಿಸಿದ್ದಾರೆ. ಕೆಲವು ಮಾಧ್ಯಮದವರು ಮತ್ತು ಚಿಂತಕರು ಸಮುದಾಯಗಳ ಕುಲಶಾಸ್ತ್ರೀಯ ಅಧ್ಯಯನ ಕೈಗೊಂಡು ಪುಸ್ತಕ ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸಿ ಬಿತ್ತರಿಸಿದ್ದಾರೆ. ಆದರೂ, ಕರ್ನಾಟಕದ ಎಲ್ಲ ಸಮುದಾಯಗಳ ಅನನ್ಯತೆಯ ಸ್ಪಷ್ಟಚಿತ್ರ ಇದುವರೆಗೂ ಸಾಧ್ಯವಾಗಲಿಲ್ಲ. ಹಾಗಂತ ಎಲ್ಲ ಸಮುದಾಯಗಳ ಅನನ್ಯತೆಯ ಸ್ಪಷ್ಟಚಿತ್ರದ ಅಧ್ಯಯನ ಇದಾಗಿದೆ ಎಂದೂ ಹೇಳಲಾಗುತ್ತಿಲ್ಲ. ಅಲೆಮಾರಿ ಸಮುದಾಯಗಳ ಅಧ್ಯಯನದ ಈ ಮಾಲಿಕೆಯಲ್ಲಿ ಆಯ್ದ ೨೨ ಅಲೆಮಾರಿ ಸಮುದಾಯಗಳು ಮಾತ್ರ ಒಳಗೊಂಡಿವೆ.

ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲಿಕೆಯ ಮುಖ್ಯ ಉದ್ದೇಶಗಳೇನೆಂದರೆ, ಅಲೆಮಾರಿ ಸಮುದಾಯದವರಿಂದಲೇ ಅವರ ಸಮುದಾಯದ ಮುಖವಾಣಿಯಾಗಿ ಅವರಲ್ಲಿಯೇ ಒಬ್ಬರು ಸಾಹಿತ್ಯ ಸಂಪಾದಿಸುವುದು. ಆಯಾ ಸಮುದಾಯಗಳ ಅನನ್ಯತೆ,

ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಇತ್ಯಾದಿ ರಂಗಗಳಲ್ಲಿಯ ನೈಜ ಸ್ಥಿತಿಗತಿಗಳನ್ನು ಗುರುತಿಸಿ ವೈಜ್ಞಾನಿಕವಾಗಿ ದಾಖಲಿಸುವುದಾಗಿದೆ. ಸಮುದಾಯಗಳಿಗಿರುವ ಕೀಳರಿಮೆಯನ್ನು ಹೋಗಲಾಡಿಸಲು ಅವರಲ್ಲಿಯ ಮಾನವೀಯ ಮೌಲ್ಯಗಳ ಮೇಲೆ ಬೆಳಕು ಚೆಲ್ಲುವುದು ಮತ್ತು ಇಂದಿನ ಜ್ವಲಂತ ಸಮಸ್ಯೆಗಳನ್ನು ಗುರುತಿಸಿ ಪರಿಹಾರೋಪಾಯಗಳನ್ನು ಹುಡುಕುವುದು ಇತ್ಯಾದಿಗಳು ಈ ಅಧ್ಯಯನದ ಉದ್ದೇಶಗಳಾಗಿವೆ.

ಅಲೆಮಾರಿ ಸಮುದಾಯದ ಒಬ್ಬರು ಅಥವಾ ಅನಿವಾರ್ಯವಿದ್ದಲ್ಲಿ ಇಬ್ಬರು ಲೇಖಕರು ಕೂಡಿ ತಮ್ಮ ಸಮುದಾಯದ ಸಾಹಿತ್ಯ ಸಂಪಾದಿಸಿ ಪುಸ್ತಕಗಳನ್ನು ರಚಿಸಿದ್ದಾರೆ. ಸಮುದಾಯದ ಲೇಖಕರ ಅಲಭ್ಯತೆಯಿದ್ದಲ್ಲಿ ಒಳಹೊರಗಿನ ಪಿಎಚ್ ಡಿ ಸಂಶೋಧಕರ ಜೊತೆಗೆ ಸಮುದಾಯದ ಲೇಖಕರನ್ನು ಸೇರಿಸಿಕೊಳ್ಳಲಾಗಿದೆ. ಪಿಎಚ್ ಡಿ ಸಂಶೋಧಕರು ತಮ್ಮ ಶೋಧನೆಯ ಅಂಶಗಳನ್ನು ಸಮುದಾಯದ ಲೇಖಕರ ಸಹಕಾರದೊಂದಿಗೆ ಮಾತ್ರೊಮ್ಮೆ ಆಯಾ ಸಮುದಾಯದವರೊಂದಿಗೆ ಪರಾಮರ್ಶಿಸಿ ಅಲೆಮಾರಿ ಸಮುದಾಯಗಳ ಮಾದರಿ ಪರಿವಿಡಿಗೆ ಹೊಂದಿಸಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಒಕ್ಕೂಟದ ಸಹಕಾರದೊಂದಿಗೆ ಕನ್ನಡ ಪುಸ್ತಕ ಪ್ರಾಧಿಕಾರವು ಕರ್ನಾಟಕ ರಾಜ್ಯದ ೨೨ ಅಲೆಮಾರಿ ಸಮುದಾಯಗಳ ಅಧ್ಯಯನವನ್ನು ಕೈಗೊಂಡಿತು. ೨೦೦೫-೦೬ ನೇ ಸಾಲಿನಲ್ಲಿ ಆರಂಭವಾದ ಅಲೆಮಾರಿ ಪುಸ್ತಕ ರಚನೆಯ ಚಿಂತನೆಯು ೨೦೦೬-೦೭ ನೇ ಸಾಲಿನಲ್ಲಿ ಸಾಕಾರ ರೂಪ ಪಡೆಯಲು ಆರಂಭವಾಯಿತು. ೨೦೦೭-೦೮ ನೇ ಸಾಲಿನಲ್ಲಿ ಈ ಯೋಜನೆಯು ಫಲಕಾರಿಯಾಯಿತು.

ಪರಿಶಿಷ್ಟ ಜಾತಿಯ ಬುಡ್ಗ ಜಂಗಮ್, ಚೆನ್ನ ದಾಸರ್, ದಕ್ಕಲಿಗ, ಗೋಸಂಗಿ, ಹಂದಿ ಜೋಗೀಸ್, ಕೊರಮ, ಶಿಳ್ಳೇಕ್ಯಾತಾಸ್, ಸಿಂಧೊಳ್ಳು, ಸುಡುಗಾಡು ಸಿದ್ಧ; ಪರಿಶಿಷ್ಟ ಪಂಗಡದ ಡುಂಗ್ರಿ ಗರಾಸಿಯ, ಹಕ್ಕಿಪಿಕ್ಕಿ, ಪಾರ್ಧಿ, ರಾಜಗೊಂಡ; ಹಿಂದುಳಿದ ವರ್ಗಗಳ ಬೈಲಪತ್ತಾರ್, ದೊಂಬಿದಾಸ, ಘಿಸಾಡಿ, ಗೋಂಧಳಿ, ಹೆಳವ, ಕಂಜರಭಾಟ, ಸಿಕ್ಲಿಗರ್ ಮತ್ತು ಪಶುಪಾಲನೆ ಹಿನ್ನೆಲೆಯ ಅಲೆಮಾರಿ ಕುರುಬ ಹಾಗೂ ಕಾಡುಗೊಲ್ಲ ಸಮುದಾಯಗಳು ಪ್ರಸ್ತುತ ಅಧ್ಯಯನಕ್ಕೆ ಒಳಪಟ್ಟಿರುವವು. ಇಲ್ಲಿಯ ಬುಡ್ಗ ಜಂಗಮ್, ಸುಡುಗಾಡುಸಿದ್ಧ ಮತ್ತು ಚೆನ್ನ ದಾಸರ್ ಸಮುದಾಯಗಳು ಒಂದೇ ಮೂಲದವಾಗಿದ್ದರೂ ಕಾಲಾತಂರದಲ್ಲಿ ಜಂಗಮರ ಪ್ರಭಾವಕ್ಕೆ ಬುಡ್ಗ ಜಂಗಮರು, ದಾಸರ ಪ್ರಭಾವಕ್ಕೆ ಚೆನ್ನದಾಸರು ಮತ್ತು ಸಿದ್ಧಿಸಾಧನೆಗೆ ಸುಡುಗಾಡುಸಿದ್ಧರು ಮೊರೆಹೋಗಿ ಸಮನಾಂತರದಲ್ಲಿ ಪ್ರತ್ಯೇಕ ಸಮುದಾಯಗಳಾಗಿ ಗುರುತಿಸಲ್ಪಟ್ಟವು. ದೊಂಬಿದಾಸರು ಮತ್ತು ಚೆನ್ನದಾಸರು ಸೋದರ ಸಂಬಂಧಿಗಳಾಗಿದ್ದರೂ, ಪರಿಶಿಷ್ಟ ಪಂಗಡದ ಹಕ್ಕಿಪಿಕ್ಕಿ ಹಾಗೂ ಪಾರ್ಧಿ ಬುಡಕಟ್ಟುಗಳು ಒಂದೇ ನೆಲಮೂಲದವಾ ಗಿದ್ದರೂ ಕಾರಣಾಂತರಗಳಿಂದಾಗಿ ಕಾಲಾಂತರದಲ್ಲಿ ಇವು ಪ್ರತ್ಯೇಕವಾಗಿ ಗುರುತಿಸಿಕೊಳ್ಳುತ್ತಿವೆ. ಶಿಳ್ಳೇಕ್ಯಾತ ಮತ್ತು ಗೋಂಧಳಿ

ಸಮುದಾಯಗಳಲ್ಲಿಯೂ ಕಳ್ಳುಬಳ್ಳಿಯ ಸಂಬಂಧ ಹಲವೆಡೆ ಕಂಡು ಬರುವುದು. ಈ ಕೃತಿಗಳಲ್ಲಿ ಇವುಗಳ ನಡುವಿನ ಸಾಮ್ಯತೆ ಮತ್ತು ಅಂತರಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ.

ಬೆಂಗಳೂರಿನ ಕನ್ನಡ ಪುಸ್ತಕ ಪ್ರಾಧಿಕಾರದಲ್ಲಿ ೧೯.೪.೨೦೦೭ ರಂದು ಈ ಕುರಿತು ಲೇಖಕರ ಕ್ಷೇತ್ರಕಾರ್ಯದ ಪೂರ್ವಭಾವಿ ಸಿದ್ಧತೆಯ ಮತ್ತು ೩.೫.೨೦೦೭ ರಂದು ಸಮುದಾಯಗಳ ಸಮೀಕ್ಷೆಯ ಪ್ರಶ್ನಾವಳಿ ಮತ್ತು ವಿಷಯ ಅಧ್ಯಯನದ ಹಂದರ ಕುರಿತು ಕಮ್ಮಟಗಳನ್ನು ಜರುಗಿಸಲಾದವು. ೧.೬.೨೦೦೭ರಂದು ಲೇಖಕರು ಸಂಗ್ರಹಿಸಿದ ಮಾಹಿತಿಗಳ ಪರಿಶೀಲನೆಯನ್ನು ಹಾಗೂ ೧.೮.೨೦೦೭ ರಂದು ಮತ್ತು ೩.೯.೨೦೦೭ ರಂದು ಲೇಖಕರು ಸಲ್ಲಿಸಿದ ಕರಡು ವರದಿಗಳನ್ನು ಪರಿಶೀಲಿಸಲಾದವು. ೬.೧೦.೨೦೦೭ ರಂದು ಲೇಖಕರು ಸಲ್ಲಿಸಿದ ಅಂತಿಮ ವರದಿ ಮತ್ತು ಸಮೀಕ್ಷೆಯ ಅಂಕಿಅಂಶಗಳನ್ನು ವೈಜ್ಞಾನಿಕವಾಗಿ ಪರಿಶೀಲಿಸಿ ಪ್ರಕಟಿಸಲು ಅಣಿಗೊಳಿಸಲಾಯಿತು.

ಲೇಖಕರು ತಮ್ಮ ಸಮುದಾಯಗಳನ್ನು ಕುರಿತು ಪ್ರತ್ಯೇಕ ಕಮ್ಮಟ, ಸಮಾವೇಶ ವಿಚಾರ ಸಂಕಿರಣಗಳನ್ನು ನಡೆಸಿ ಸಮುದಾಯದ ಕೌಟುಂಬಿಕ ಸಮೀಕ್ಷೆ ಮಾಡಿ ಅಥವಾ ಮಾಡಿಸಿ ವ್ಯಕ್ತಿ ಮತ್ತು ವಿಷಯ ಅಧ್ಯಯನ ವಿಧಾನದಿಂದ ಮಾಹಿತಿಗಳನ್ನು ವೈಜ್ಞಾನಿಕವಾಗಿ ಹಾಗೂ ಪ್ರಾಮಾಣೀಕವಾಗಿ ಸಂಗ್ರಹಿಸಿ ಈ ಪುಸ್ತಕಗಳನ್ನು ರಚಿಸಿದ್ದಾರೆ. ಅವರುಗಳ ಮತ್ತು ಈ ಕುರಿತ ಎಲ್ಲ ಸಮುದಾಯಗಳ ಸಂಘಟನೆಗಳ ಸಹಕಾರಕ್ಕೆ ಋಣಿಯಾಗಿದ್ದೇನೆ. ಈ ಯೋಜನೆಯಲ್ಲಿ ನನ್ನನ್ನು ಸಂಪಾದಕನನ್ನಾಗಿ ತೊಡಗಿಸಿಕೊಂಡು ಯೋಜನೆ ಫಲಿಸುವಲ್ಲಿ ಹೆಜ್ಜೆ ಹೆಜ್ಜೆಗೂ ಸಹಕರಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ ಎಸ್ ಜಿ ಸಿದ್ಧರಾಮಯ್ಯ ಅವರಿಗೆ ಆಡಳಿತಾಧಿಕಾರಿಗಳಾದ ಅಶೋಕ ಎನ್ ಚಲವಾದಿ ಅವರಿಗೆ ಮತ್ತು ಪ್ರಾಧಿಕಾರದ ಎಲ್ಲ ಉದ್ಯೋಗಿಗಳಿಗೆ ಪ್ರೀತಿಪೂರ್ವಕವಾಗಿ ನೆನೆಯುವೆ. ಕನ್ನಡ ವಿಶ್ವ ವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದ ಸಹೋದ್ಯೋಗಿ ಸ್ನೇಹಿತರಿಗೆ ಮತ್ತು ವಿಶ್ವವಿದ್ಯಾಲಯದ ಬುಡಕಟ್ಟು, ಅಕ್ಷರ ಹಾಗೂ ಸಿರಿಗನ್ನಡ ಗ್ರಂಥಾಲಯಗಳ ಮಿತ್ರರ ಸಹಕಾರಕ್ಕೆ ಕೃತಜ್ಞನಾಗಿದ್ದೇನೆ.

ಈ ಯೋಜನೆಗೆ ತಗಲುವ ಹಣಕಾಸನ್ನು ನೀಡಲು ಕಟಿಬದ್ಧವಾದ ಕರ್ನಾಟಕ ಸರಕಾರಕ್ಕೆ ಮತ್ತು ಈ ಕುರಿತು ಸತತವಾಗಿ ಅಧಿಕಾರಿಗಳ ಗಮನ ಸೆಳೆದ ಕರ್ನಾಟಕ ರಾಜ್ಯ ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳ ಒಕ್ಕೂಟಕ್ಕೆ ವಿನಯಪೂರ್ವಕವಾಗಿ ನೆನೆಯುವೆ. ಸಂಪಾದಕ ಮಂಡಳಿಯ ಸದಸ್ಯರಿಗೆ, ಛಾಯಾಚಿತ್ರಗಳನ್ನು ಸಂಗ್ರಹಿಸಿ ಸುಂದರವಾಗಿ ವಿನ್ಯಾಸಗೊಳಿಸಿದ ದೇವಲಾಪುರದ ರೋಹಿತ್ ಗ್ರಾಫಿಕ್ಸ್, ಕ್ಷೇತ್ರಕಾರ್ಯದ ಮಾಹಿತಿಗಳನ್ನು ಗಣಕ ಯಂತ್ರಕ್ಕೆ ಅಳವಡಿಸಿದ ಹೊಸಪೇಟೆಯ ಎಸ್ ಎಲ್ ವಿ ಗ್ರಾಫಿಕ್ಸ್, ಗಣಕ ಯಂತ್ರದ ಅಂಕಿಅಂಶಗಳನ್ನು ಪರಿಷ್ಕರಿಸುವಲ್ಲಿ ಸಹಕರಿಸಿದ ಮಲ್ಲಿಕಾರ್ಜುನ ಬಿ ಮಾನ್ಪಡೆ ಅವರುಗಳಿಗೆ, ಅಕ್ಷರ ಸಂಯೋಜಿಸಿದ ಕಮಲಾಪುರದ ಭಾವನಾ ಗ್ರಾಫಿಕ್ಸ್, ಮುಖಪುಟ

ವಿನ್ಯಾಸ ಮತ್ತು ರೇಖಾ ಚಿತ್ರಗಳನ್ನು ಬರೆದುಕೊಟ್ಟ ಪ್ರತಾಪ ರಾ ಬಹುರೂಪಿ, ಕರಡು ತಿದ್ದಿದ ಡಾ ಆರ್ ಬಿ ಕುಮಾರ್, ಮುದ್ರಣ ಕಾರ್ಯ ಪೂರೈಸಿದ ರಾಜಾ ಪ್ರಿಂಟರ್ಸ್ ಅವರುಗಳಿಗೆ ಮತ್ತು ಈ ಯೋಜನೆಯ ಸಾಕ್ಷಾತ್ಕಾರಕ್ಕೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನೆನೆಯುವೆ.

ಇದು ನೆಲಮೂಲ ಸಂಸ್ಕೃತಿಗಳ ಅಧ್ಯಯನ ಮಾಲೆ. ಲೇಖಕರು ತಮ್ಮ ಸಮುದಾಯಗಳ ನೈಜಚಿತ್ರ ಬಿಡಿಸಲು ಇಲ್ಲಿ ಸರ್ವಪ್ರಯತ್ನ ಮಾಡಿದ್ದಾರೆ. ಈ ಮಾಲಿಕೆಯೂ ಅಲೆಮಾರಿಗಳ ಅಭಿವೃದ್ಧಿಗೆ, ಅಧ್ಯಯನಕಾರರ ಮುಂದಿನ ಅಧ್ಯಯನಗಳಿಗೆ, ಯೋಜಕರ ಭವಿಷತ್ತಿನ ಯೋಜನೆಗಳಿಗೆ ಅಮೂಲ್ಯ ಆಕರವಾಗಬಹುದೆಂದು ನಂಬಿದ್ದೇನೆ. ಹಾಗಾದರೆ ಈ ಶ್ರಮ ಸಾರ್ಥಕವೆಂದು ಭಾವಿಸುವೆ.

೨೬.೦೧.೨೦೦೮ — ಡಾ ಕೆ ಎಂ ಮೇತ್ರಿ

ವಿದ್ಯಾರಣ್ಯ — ಸಂಪಾದಕ

ಅರಿಕೆ

ಕರ್ನಾಟಕ ರಾಜ್ಯದಲ್ಲಿ ಹಲವಾರು ಅಲೆಮಾರಿ ಸಮುದಾಯಗಳಿದ್ದು ಅವುಗಳಲ್ಲಿ ಕಂಜರಭಾಟ ಸಮುದಾಯವು ಒಂದಾಗಿದೆ. ಇವರು ಅತೀ ಹಿಂದುಳಿದವರು, ತಮ್ಮದೇ ಆದ ಆಚಾರ ವಿಚಾರ, ಸಂಸ್ಕೃತಿ, ಪರಂಪರೆಗಳೊಂದಿಗೆ ಜೀವನ ಸಾಗಿಸುತ್ತಲಿದ್ದಾರೆ. ಈ ಜಾತಿಯ ಮೂಲದ ಬಗೆಗೆ ಇದುವರೆಗೂ ಸರಿಯಾದ ಮಾಹಿತಿ ದಾಖಲಾಗಿರು ವುದಿಲ್ಲ. ಇವರ ಬಗೆಗೆ ಇತ್ತೀಚಿಗೆ ಅಧ್ಯಯನಗಳು ಪ್ರಾರಂಭವಾಗಿವೆ. ಕಂಜರಭಾಟರ ಕುರಿತು ಕೃತಿ ರಚಿಸುವ ಜವಾಬ್ದಾರಿಯನ್ನು ನನಗೆ ವಹಿಸಿಕೊಟ್ಟಿರುವ ಹಿನ್ನೆಲೆಯಲ್ಲಿ ಸಾಧ್ಯವಾದ ಮಟ್ಟಿಗೆ ಅಧ್ಯಯನಯುಕ್ತವಾದ ಮಾಹಿತಿಗಳನ್ನು ಈ ಕೃತಿಯಲ್ಲಿ ನೀಡಲು ಪ್ರಯತ್ನಿಸಿರುತ್ತೇನೆ. ಕರ್ನಾಟಕ ರಾಜ್ಯದಾದ್ಯಂತ ನೆಲೆಸಿರುವ ಕಂಜರಭಾಟರ ಕೌಟುಂಬಿಕ ಸಮೀಕ್ಷೆಯನ್ನು ಈ ಅಧ್ಯಯನಕ್ಕಾಗಿ ಕೈಗೊಳ್ಳಲಾಗಿದೆ. ಸಮೀಕ್ಷೆಯ ಫಲಿತಗಳನ್ನು ಅನುಬಂಧಗಳಲ್ಲಿ ನೀಡಲಾಗಿದೆ.

ಈ ಕೃತಿಯನ್ನು ರಚಿಸಲು ಅವಕಾಶ ಮಾಡಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ ಎಸ್ ಜಿ ಸಿದ್ಧರಾಮಯ್ಯನವರಿಗೆ ಮತ್ತು ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್ ಚಲವಾದಿ ಅವರುಗಳಿಗೆ ಹಾಗೂ ಈ ಅಧ್ಯಯನ ಮಾಲೆಯ ಸಂಪಾದಕರಾದ ಡಾ ಕೆ ಎಂ ಮೇತ್ರಿ ಅವರಿಗೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕರ್ನಾಟಕ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಸಮುದಾಯಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಕೆ ಭಾಸ್ಕರದಾಸ ಎಕ್ಕಾರು ಅವರು ಈ ಕೃತಿ ರಚನೆಗೆ ಹಲವಾರು ಸಲಹೆಗಳನ್ನು ನೀಡಿದ್ದಾರೆ. ಜೊತೆಗೆ ಕಂಜರಭಾಟ ಸಮುದಾಯದ ಹಿರಿಯರಾದ ಶ್ರೀ ರೂಪಸಿಂಗ ಬಾಗಡೆ, ಸಾಗರ ನವಲೆ, ಅನಾರ ಭಾಟ್, ಅಕ್ಕು ಬಾಗಡೆ, ಬನಾರಸಿಂಗ್ ಭಾಟ್, ಸುಭಾಸ ಮೀಣೆಕರ, ಬಾದಲ್ ನವಲೇಕರ, ರಮೇಶ ಗಾಗಡೆ ಇವರುಗಳು ಕರ್ನಾಟಕದಲ್ಲಿ ಸಂಚರಿಸಿ ಮಾಹಿತಿ ಸಂಗ್ರಹ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಿ ನೆರವಾಗಿದ್ದಾರೆ. ಡಾ ಎಸ್ ಜಿ ಸೈದಾಪೂರ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ ಹಾಗೂ ಶಿಕ್ಷಕರಾದ ಶ್ರೀ ರಾಮಚಂದ್ರ ಹಂಸನೂರ ಮತ್ತು ನ್ಯಾಯವಾದಿಗಳಾದ ಶ್ರೀ ರವಿ ಕಟ್ನಳ್ಳಿ ಅವರುಗಳು ಆತ್ಮೀಯವಾಗಿ ಸ್ಪಂದಿಸಿದ್ದಾರೆ. ಕಂಜರಭಾಟ ಸಮಾಜದ ಹಿರಿಯರು, ಮಹಿಳೆಯರು, ಯುವಕರು ಜಾತಿಯ ವಿವರಣೆಯನ್ನು ನೀಡಿ ಪುಸ್ತಕ

ಬರೆಯುವುದರಲ್ಲಿ ಸಹಕಾರ ನೀಡಿದ್ದಾರೆ. ಇವರೆಲ್ಲರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮಹಾರಾಷ್ಟ್ರದ ಶ್ರೀ ಮೋರಚಂದ ಭಾಟ್, ಕವಿಚಂದ ಭಾಟ್, ಸಾಗರ ಭಾಟ್, ವಿಜಯ ಸಿಂಗ್ ಗಾಗಡೆ, ಜಪಾನ ಬಾಗಡೆ, ಸಂಗು ಮಲಕೆ, ಜಗದೀಶ ಭಾಟ್ ಅವರುಗಳು ರಾಜಸ್ಥಾನ ರಾಜ್ಯದ ಅಜ್ಮೀರದ ಶ್ರೀ ಅಭಯ ಸಿಂಗ್ ಬಿಜಾವತ್ ಮತ್ತು ಜೋಧಪುರದ ಶ್ರೀ ಚತುರ ರಾಮ ದೇಶಬಂಧು, ದೆಹಲಿಯ ಶ್ರೀ ರಮೇಶ ರಾಹಿ ಹಾಗೂ ಸತ್ಪಾಲ್ ಅವರುಗಳು ಮತ್ತು ಗುಜರಾತ ರಾಜ್ಯದ ಅಹಮದಾಬಾದಿನ ವಕೀಲರಾದ ರತನ್ ಖೋಡೆಕರ್, ಖ್ಯಾತ ಬುಧನ ನಾಟಕಕಾರರಾದ ಶ್ರೀ ದಕ್ಷಿಣ ಬಜರಂಗೆ ಅವರುಗಳ ಸಹಕಾರವನ್ನು ನೆನೆಯುವೆ. ಫೋಟೊಗ್ರಾಫರ್ ಗದಗಿನ ಶ್ರೀರಾಮ ವಗ್ಗಿ ಅವರಿಗೂ ಋಣಿಯಾಗಿದ್ದೇನೆ. ಹಾಗೂ ಕೃತಿಯನ್ನು ಸುಂದರವಾಗಿ ಅಕ್ಷರ ಸಂಯೋಜನೆಗೊಳಿಸಿದ ಕಮಲಾಪುರದ ಭಾವನಾ ಗ್ರಾಫಿಕ್ಸ್‌ನ ಶ್ರೀನಿವಾಸ ಕೆ ಕಲಾಲ್ ಅವರಿಗೂ ಋಣಿಯಾಗಿದ್ದೇನೆ.

ಜೆ ವ್ಹಿ ಬಾಗಡೆ

ಪರಿವಿಡಿ

ಅನುಬಂಧ

ಕೋಷ್ಟಕಗಳು

ವೃತ್ತಚಿತ್ರ

ಚಿತ್ರ

ಭೂಪಟ

ದಾಖಲಾತಿಗಳು

೧

ಪ್ರವೇಶ

ಭಾರತ ವಿಶಾಲವಾದ ದೇಶ. ಇದು ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಹಬ್ಬಿದೆ. ಇಲ್ಲಿ ಅನೇಕ ಭಾಷೆಗನ್ನಾಡುವ ಜನಸಮುದಾಯಗಳು ಹಲವು ರೀತಿಯ ಆಚಾರ-ವಿಚಾರ, ನಂಬಿಕೆ, ನಡವಳಿಕೆಯ ಬದುಕನ್ನು ಸಾಗಿಸುತ್ತಿವೆ. ಇವರಲ್ಲಿ ಕೆಲವರು ಗುಡ್ಡಗಾಡುಗಳಲ್ಲಿ ಮತ್ತು ಗ್ರಾಮೀಣ ಪ್ರದೇಶದಲ್ಲಿ, ಕೆಲವರು ಪಟ್ಟಣಗಳಲ್ಲಿ ಹಾಗೂ ಹಲವರು ಅಲೆಮಾರಿಗಳಾಗಿ ತಮ್ಮ ನಡೆನುಡಿ ವೃತ್ತಿ, ಪ್ರವೃತ್ತಿಗಳಿಂದ ತಮ್ಮ ಸಂಸ್ಕೃತಿಯ ಅನೇಕ ಅಂಶಗಳನ್ನು ಉಳಿಸಿಕೊಂಡು ಜೀವಿಸುತ್ತಲಿದ್ದಾರೆ. ಭಾರತೀಯ ಬುಡಕಟ್ಟುಗಳದ್ದು ಒಂದು ವಿಶಿಷ್ಟ ಸಂಸ್ಕೃತಿ ಅಥವಾ ಅರಣ್ಯ ಸಂಸ್ಕೃತಿ. ಇವರು ಯಾರ ಪ್ರಭಾವಕ್ಕೂ ಮಣಿಯದೇ ತಮ್ಮ ಸಂಪ್ರದಾಯವನ್ನು ಬಿಟ್ಟು ಕೊಡದೆ ತಮ್ಮತನವನ್ನು ಉಳಿಸಿಕೊಂಡು ಬಂದಿದ್ದಾರೆ.

ಕರ್ನಾಟಕದಲ್ಲಿ ದೊಂಬಿದಾಸ, ಕೊರಮ, ಸಿಂಧೊಳ್ಳು, ಹಕ್ಕಿಪಿಕ್ಕಿ, ಸುಡುಗಾಡು ಸಿದ್ಧ, ಶಿಳ್ಳೇಕ್ಯಾತ, ಗೋಸಂಗಿ, ರಾಜಗೊಂಡ, ಕಾಡುಗೊಲ್ಲ, ಗೊಂಧಳಿ, ಚೆನ್ನ ದಾಸರ್ ಮುಂತಾದ ಅಲೆಮಾರಿ ಬುಡಕಟ್ಟು ಸಮುದಾಯಗಳು ಇರುವವು. ಇಂತಹ ಅಲೆಮಾರಿ ಸಮುದಾಯಗಳಲ್ಲಿ 'ಕಂಜರಭಾಟ' ಸಮುದಾಯವೂ ಒಂದು.

ಸಮುದಾಯದ ಹೆಸರು, ಔಚಿತ್ಯ

ಭಾರತದ ವಿವಿಧ ಕಡೆಗೆ ನೆಲೆಸಿರುವ ಕಂಜರಭಾಟ ಸಮುದಾಯವು ತನ್ನದೇ ಆದ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಕೊಂಡು ಬಂದಿದೆ. ಈ ಜನ ಉಳಿದ ಸಮುದಾಯಗಳೊಂದಿಗೆ ಸಂಪರ್ಕ ಬೆಳೆಸಿಕೊಳ್ಳದೆ ಪ್ರತ್ಯೇಕವಾಗಿ ಉಳಿದುಕೊಂಡಿದೆ. ಕರ್ನಾಟಕದಲ್ಲಿ 'ಕಂಜರಭಾಟ' ಸಮುದಾಯವನ್ನು 'ಭಾಟ', 'ಲೋಲ್ಯಾರ' ಮುಂತಾದ ಹೆಸರುಗಳಿಂದಲೂ ಕರೆಯುತ್ತಾರೆ. ಭಾರತದ ತುಂಬೆಲ್ಲ ಹರಡಿಕೊಂಡಿರುವ ಇವರಿಗೆ ಭಿನ್ನ ಭಿನ್ನ ಪ್ರದೇಶಗಳಲ್ಲಿ ಬೇರೆ ಬೇರೆ ನಾಮಗಳಿಂದ ಕರೆಯುತ್ತಾರೆ (ಕೋಷ್ಟಕ ೧.೧). ಪ್ರದೇಶವಾರು ಕರೆಯುವ ಹೆಸರುಗಳು ಹೀಗಿವೆ.

ಕೋಷ್ಟಕ: ೧.೧ ಭಾರತೀಯ ಕಂಜರಭಾಟರ ಪರ್ಯಾಯ ಪದಗಳು

ಕ್ರಮ ಸಂಖ್ಯೆ	ರಾಜ್ಯ, ಕೇಂದ್ರ ಆಡಳಿತ ಪ್ರದೇಶ	ಪರ್ಯಾಯ ಪದಗಳು
೧	ಅಂಡಮಾನ-ನಿಕೋಬಾರ್	ಭಾಂತು, ಸಾಂಸಿ
೨	ಆಂಧ್ರ ಪ್ರದೇಶ	ನಟ್, ಸಾಂಸಿ
೩	ಬಿಹಾರ	ಬೇಡಿಯ, ಕಂಜರ, ನಟ್
೪	ಛತ್ತೀಸಗಡ್	ಕಂಜರ, ನಟ್, ಸಾಂಸಿ
೫	ದೆಹಲಿ	ಬೇಡಕುಟ, ಕಂಜರ, ಸಾಂಸಿ
೬	ಗುಜರಾತ	ಅಡೋಡಿಯ, ಛಾರಾ, ಸಾಂಸಿ
೭	ಹರಿಯಾಣ	ಬೇಡಕುಟ, ನಟ್, ಸಾಂಸಿ
೮	ಹಿಮಾಚಲ ಪ್ರದೇಶ	ಬೇಡಕುಟ, ನಟ್, ಸಾಂಸಿ
೯	ಜಮ್ಮು-ಕಾಶ್ಮಿರ	ಭಾಂತು, ಧವಳೆ, ಸಾಂಸಿ
೧೦	ಕರ್ನಾಟಕ	ಭಾಟ, ಕಂಜರಭಾಟ, ಲೋಲ್ಯಾರ
೧೧	ಮಧ್ಯ ಪ್ರದೇಶ	ಭಾಂತು, ಬೇಡಿಯ, ಕಂಜರ, ನಟ್, ಸಾಂಸಿ
೧೨	ಮಹಾರಾಷ್ಟ್ರ	ಕಂಜರ, ಕಂಜರಭಾಟ, ಕಾರವಾನ, ನಟ್, ಸಾಂಸಿ,
೧೩	ಒರಿಸ್ಸಾ	ಭಾಟ, ಬೇಡಿಯ, ಸಾಂಸಿ
೧೪	ಪಂಜಾಬ	ಬೇಡಕುಟ, ನಟ್, ಸಾಂಸಿ
೧೫	ಪಶ್ಚಿಮ ಬಂಗಾಲ	ಭಾಂತು, ಬೇಡಿಯ, ಕಂಜರ, ನಟ್
೧೬	ರಾಜಸ್ಥಾನ	ಭಾಂತು, ಬೇಡಿಯ, ಕಂಜರ, ಕಪಾಡಿಯಾ, ನಟ್, ಸಾಂಸಿ
೧೭	ತ್ರಿಪುರ	ಸಾಂಸಿ
೧೮	ಚಂಡೀಗಢ್	ಸಾಂಸಿ, ಭೇಡಕೂಟ್, ಮನೇಶ
೧೯	ಜಾರಖಂಡ್	ಕಂಜರ
೨೦	ಉತ್ತರಾಂಚಲ	ಕಂಜರ
೨೧	ಉತ್ತರ ಪ್ರದೇಶ	ಭಾಂತು, ಬೇಡಿಯ, ಧವಳೆ ಭಾಂತು, ಕಂಜರ, ಕಪಾಡಿಯ, ನಟ್, ಸಾಂಸಿ, ಸಾಂಸಿಯ

ಭಾರತದಲ್ಲಿ ಪಸರಿಸಿರುವ ಕಂಜರಭಾಟರ ಪರ್ಯಾಯ ಪದಗಳೆಲ್ಲವೂ ಒಂದೇ ಮೂಲದವಾಗಿದ್ದರೂ ಇವರು ಮಾಡುವ ಕಸುಬುಗಳಲ್ಲಿ ಭಿನ್ನತೆ ಕಂಡುಬರುತ್ತದೆ. ಈ ಕಸುಬುಗಳ ಹಿನ್ನೆಲೆಯಲ್ಲಿ ಇವರಿಗೆ ಬೇರೆ ಬೇರೆ ಹೆಸರುಗಳು ಬಳಕೆಯಲ್ಲಿವೆ. ಆದರೆ ಇವರ ಭಾಷೆ, ವೇಷ-ಭೂಷಣ, ಆಚಾರ-ವಿಚಾರ, ಆಹಾರ-ವಿಹಾರ, ಬಳಿಗಳ ಬಳಕೆಯ ಪದ್ಧತಿಗಳಿಂದ ಇವರೆಲ್ಲರೂ ಕಂಜರಭಾಟರೆಂದು ಗುರುತಿಸಲು ಸಾಧ್ಯ.

ದೇಹ ರಚನೆ : ಮೈ ಬಣ್ಣ ಸಾಮಾನ್ಯವಾಗಿ ಕೆಂಪು, ನಸುಕೆಂಪು ಹಾಗೂ ಕಪ್ಪಾಗಿದ್ದು, ಉದ್ದ ಶರೀರ, ತಲೆಯ ಮೇಲೆ ಕಪ್ಪು ಕೂದಲು, ಹೆಣ್ಣು ಮಕ್ಕಳ ಕೂದಲು ಉದ್ದ ವಾಗಿರುತ್ತವೆ. ಕೆಲ ಹೆಣ್ಣುಮಕ್ಕಳಿಗೆ ಕೆಂಪು ಕೂದಲುಗಳುಂಟು. ಕಪ್ಪು ಕಣ್ಣುಗುಡ್ಡಿ ಗಳಿರುತ್ತವೆ. ದೃಷ್ಟಿದೋಷ ಇರುವುದು ಬಹಳ ಕಡಿಮೆ. ಒಳ್ಳೆಯ ಮೈಕಟ್ಟಿನ ಮತ್ತು ಶಾರೀರಿಕ ಲಕ್ಷಣವುಳ್ಳ ಜನರಾಗಿದ್ದಾರೆ.

ಕಂಜರಭಾಟರು ಕಡುಬಡವರು.ಇವರ ಜೀವನದ ಪದ್ಧತಿ ಇತರ ಸಮುದಾಯಗಳಿಗಿಂತ ಭಿನ್ನವಾಗಿದ್ದು ತಮ್ಮದೇ ಆದ ರೀತಿಯಲ್ಲಿ ಜೀವನ ಸಾಗಿಸುತ್ತಾರೆ. ಹಳ್ಳಿಗಳಿಗೆ ಸಂಚರಿಸಿ ಕಾಳುಕಡಿ ಸಂಗ್ರಹಿಸುತ್ತಾರೆ. ಮದ್ಯವನ್ನು ಮನೆಯಲ್ಲಿ ತಯಾರಿಸಿ ಸ್ವತಃ ತಾವೇ ಹೆಚ್ಚು ಸೇವನೆಯನ್ನು ಮಾಡುತ್ತಾರೆ. ಎಲೆ ಅಡಿಕೆ, ತಂಬಾಕು ಹಾಕಿಕೊಳ್ಳುವ ಚಟ ಮುಖ್ಯವಾಗಿದೆ. ಯಾವಾಗಲೂ ಕೈಯಲ್ಲಿ ಎಲೆ-ಅಡಿಕೆ, ತಂಬಾಕಿನ ಚೀಲ ಇರುತ್ತದೆ. ಅದರಲ್ಲಿ ಅಡಕೊತ್ತು ಇರುತ್ತದೆ. ಅಡಕೊತ್ತಿಗೆ ಗೆಜ್ಜೆ ಕಟ್ಟಿರುತ್ತಾರೆ. ಅದು ಅಡಿಕೆ ಕತ್ತರಿಸುವಾಗ ಝಣ ಝಣ ಸಪ್ಪಳವಾಗುವುದು. ಇವರು ವೇಷ-ಭೂಷಣವನ್ನು ಮಾರವಾಡಿ ಜನರಂತೆ ಧರಿಸುತಿದ್ದರು. ಇವರು ಮಾತನಾಡುವ ಭಾಷೆ ವಿಶಿಷ್ಟವಾಗಿದೆ. ಈ ಎಲ್ಲ ಹಿನ್ನೆಲೆಗಳಿಂದ ಈ ಜನರು ಕಂಜರಭಾಟ ಸಮುದಾಯದವರೆಂದು ಗುರುತಿಸಲು ಸಾಧ್ಯ. ಕಂಜರಭಾಟ ಸಮುದಾಯದ ಅಪರಿಚಿತ ಇಬ್ಬರು ವ್ಯಕ್ತಿಗಳು ಎದುರುಬದರು ಆದಾಗ ಅವರಿಗೆ ಅವರ ಪರಿಚಯದ ಬಗೆಗೆ ಅನುಮಾನ ಬಂದಾಗ ನೀನು 'ಸ್ಯೆಂಸಮಲ್ ಭಾಂತು' ಏನು ಎಂದು ಕೇಳುತ್ತಾನೆ. ಅವನು ಅದೇ ಸಮುದಾಯದವನ್ನಾಗಿದ್ದರೆ ಹೌದು ನಾನು 'ಸ್ಯೆಂಸಮಲ್ ಭಾಂತು' ಎಂದು ಹೇಳುತ್ತಾನೆ. "ಸ್ಯೆಂಸಮಲ್ ಭಾಂತು" ಈ ಪದವು ಇಡೀ ದೇಶದಲ್ಲಿಯ ಈ ಜನರ ಗುರುತಿಸುವಿಕೆಯ ಸಂಕೇತವಾಗಿದೆ.

ಕರ್ನಾಟಕದಲ್ಲಿ ಅಭುವಾ, ಬಾಗಡ, ಭಾಟುಂಗೆ, ಇಂದರಾ, ಗಾರಿಯೆ, ಘಮಂಡಿ, ಘಾಸಿ, ಕರಾಳೆ, ಮಲಕೆ, ಮಾಥರೆ, ಮೀಣಾ, ನವಲ್ಲಾ, ನೆಥಲೆ, ರವಳೆ, ತಮಾಯಚಿ, ಮುಂತಾದ ಮನೆತನದ ಅಡ್ಡ ಹೆಸರುಗಳಿಂದಲೂ ಈ ಸಮುದಾಯವನ್ನು ಗುರುತಿಸಲಾಗುತ್ತದೆ.

ಪದ ನಿಷ್ಪತ್ತಿ : ಕಂಜರಭಾಟ ಎನ್ನುವುದು ರಾಜಸ್ಥಾನಿ ಸ್ಥಳೀಯ ಭಾಷೆಯಲ್ಲಿಯ ಎರಡು ಪದಗಳ ಜೋಡುನುಡಿ. ಕಂಜರ ಎಂದರೆ ಕಬ್ಬಿಣದ ಕತ್ತಿ, ಚಾಕು ಎಂದರ್ಥ. ಭಾಟ್ ಎಂದರೆ ಕೀಳು ಕುಲವೆಂದರ್ಥ. ಕಂಜರಭಾಟ ಎಂದರೆ ಕಬ್ಬಿಣದ ಕತ್ತಿ ಚಾಕುಗಳನ್ನು ತಯಾರಿಸುವ ಕೀಳು ಕುಲದವರೆಂದು ಅರ್ಥೈಸಲಾಗಿದೆ. ಕಿಟ್ಟೆಲರ ಅರ್ಥಕೋಶದಲ್ಲಿ ಕಂಜರ್ ಎಂಬ ಪದಕ್ಕೆ ಮೌನ (ಕಿಟ್ಟೆಲ್,ಎಫ್:೧೯೯೩:೩೩೫) ಮತ್ತು ಭಾಟ ಎಂಬ ಪದಕ್ಕೆ ಬಣ್ಣ, ಕೂಲಿ, ಬಾಡಿಗೆ (ಅದೇ:೧೧೬೮) ಹಾಗೂ ಇವರ ಸಾಸಿ ಎಂಬ ಪದಕ್ಕೆ ಸಾಹಸಿ (ಅದೇ:೧೫೫೦)ಎಂಬ ಅರ್ಥಗಳನ್ನು ನೀಡಿದ್ದಾರೆ. ಪ್ರಾಯಶಃ ಈ ಸಮುದಾಯ ದವರು ಹಿಂದೆ ರಾಜ್ಯಗಳ ರಕ್ಷಣೆಗೆ ಅವಶ್ಯಕವಾದ ಕಬ್ಬಿಣದ ಕತ್ತಿ, ಗುರಾಣಿ ಮುಂತಾದ

ಯುದ್ಧೋಪಕರಣಗಳನ್ನು ತಯಾರಿಸುವ ಸಮುದಾಯವಾಗಿರಬೇಕು. ಹೀಗಾಗಿ ಈ ಸಮುದಾಯಕ್ಕೆ ಕಂಜರಭಾಟ್ ಎಂದು ಕರೆಯಲ್ಪಟ್ಟಿರಬೇಕು. ಯುದ್ಧೋಪಕರಣಗಳನ್ನು ತಯಾರಿಸುತ್ತಿದ್ದ ಈ ಸಮುದಾಯದ ಪುರುಷರು ರಾಜಸ್ಥಾನಿ ಅರಸರ ಸೈನಿಕರಾಗಿಯೂ ಕಾರ್ಯನಿರ್ವಹಿಸುತ್ತಿರುವ ವಿಷಯ ಚರಿತ್ರಕಾರರಿಂದ ಸಾಬಿತಾಗುತ್ತದೆ. ಹೀಗಾಗಿ ರಾಜಸ್ಥಾನದಲ್ಲಿಯ ಕಂಜರಭಾಟರನ್ನು ಸಾಂಸಿಗಳು ಎಂದು ಸಹ ಕರೆಯಲಾಗುತ್ತದೆ. ಪಂಜಾಬಿನ ಅಮೃತಸರದ ಪರಿಸರದಲ್ಲಿ ಇವರು ಇಂದಿಗೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇವರ ಮಾತೃಭಾಷೆ **Farsi** ಎಂದು ಭಾಷಾತಜ್ಞ ಗುಸ್ಯೆಂ ಅವರು ದಾಖಲಿಸಿದ್ದಾರೆ. ಹೀಗೆಂದರೆ ಮರಗು ಭಾಷೆಯೆಂದರ್ಥ.

ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ಹಿನ್ನೆಲೆ

ಪ್ರತಿಯೊಂದು ಸಮುದಾಯ ತನ್ನ ಮೂಲದ ಬಗೆಗೆ ನಿರ್ದಿಷ್ಟವಾದ ಹಿನ್ನೆಲೆಯನ್ನು ಹೊಂದಿರುವುದಿಲ್ಲ. ಕಂಜರಭಾಟ ಸಮುದಾಯದ ಮೂಲದ ಬಗೆಗೆ ಇಲ್ಲಿಯವರೆಗೆ ನಿರ್ಧಿಷ್ಟ ಮಾಹಿತಿ ದೊರೆತಿರುವುದಿಲ್ಲ. ಇರುವ ಮಾಹಿತಿಯನ್ನು ಇಲ್ಲಿ ಕೊಡುವ ಪ್ರಯತ್ನ ಮಾಡಲಾಗಿದೆ.

ಸಮುದಾಯದ ಪೂರ್ವಜರ ಆಚಾರ-ವಿಚಾರಗಳು, ಸಮುದಾಯದ ರೀತಿ, ಪದ್ಧತಿ, ಆಹಾರ, ಉಡುಗೆರೆ, ಭಾಷೆ ಇವುಗಳ ಆಧಾರದ ಮೇಲೆ ಈ ಕಂಜರಭಾಟರ ಉತ್ಪತ್ತಿಯು ರಾಜಸ್ಥಾನದಲ್ಲಿ ಆಗಿದೆ ಎಂಬುವುದು ಖಚಿತವಾಗುತ್ತದೆ. ರಾಜಸ್ಥಾನದಲ್ಲಿ ಸಾಂಸಿ ಸಮುದಾಯವು ಸಾಹಸಿಗಳಾಗಿದ್ದವರು. ಅವರು ರಾಜಸ್ಥಾನದ ರಜಪೂತ ರಾಜರಲ್ಲಿ ಸೈನಿಕರಾಗಿ ಕಾರ್ಯ ಮಾಡುತ್ತಿದ್ದವರು, ಮೊದಲಿನಿಂದಲೂ ಸಾಹಸಿಗಳು, ವೀರಯೋಧರು, ಬಹದ್ದೂರರಾಗಿದ್ದವರು. ಇವರ ಆಚಾರ-ವಿಚಾರ, ಚಲನ-ವಲನ, ಆಹಾರ, ಕಳ್ಳತನ, ದರೋಡೆ ಇತ್ಯಾದಿಗಳಿಂದ ಹೆಸರಾಗಿದ್ದವರು, ಸಾಹಸಿಯಿಂದ 'ಸಾಂಸಿ' ಎಂಬ ನಾಮಕರಣ ಉತ್ಪತ್ತಿಯಾಗಿದೆ ಎಂದು ಹಿರಿಯರು ಹೇಳುತ್ತಾರೆ.

ಇದುವರೆಗಿನ ಅಧ್ಯಯನಗಳು

ಪುಣೆಯ ಸಮಾಜ ಕಲ್ಯಾಣ ಇಲಾಖೆಯು ೧೯೩೬ರಲ್ಲಿ ಪ್ರಕಟಿಸಿದ ದ ಆನುಯಲ್ ಅಡ್ಮಿನಿಸ್ಟ್ರೇಷನ್ ರಿಪೋರ್ಟ್ ಆಫ್‌ದ ಕ್ರಿಮಿನಲ್ ಟ್ರೈಬ್ಸ್ ದಲ್ಲಿ ಕಂಜರಭಾಟರ ಸೆಟ್ಲಮೆಂಟ್ ಕಾಲನಿಯ ಜನಸಂಖ್ಯೆ ವಿವರ, ಅಭಿವೃದ್ಧಿಯ ಕಾರ್ಯ ಮುಂತಾದ ವಿವರಗಳನ್ನು ನೀಡಲಾಗಿದೆ. ಕೆ ಎಸ್ ಸಿಂಗ್‌ರವರ ಪೀಪಲ್ಸ್ ಆಫ್ ಇಂಡಿಯಾದ ಸಂಪುಟ II ದ ಸೆಡ್ಯೂಲ್ಡ್ ಕಾಸ್ಟ್ (೧೯೯೩)ದಲ್ಲಿ ಕಂಜರ್ ಎನ್ನುವ ಸಮುದಾಯದ ಕುರಿತು ವಿವರಣೆ ನೀಡುತ್ತ ರಾಜಸ್ಥಾನ, ಮಧ್ಯ ಪ್ರದೇಶಗಳಲ್ಲಿ ಅವರ ಜೀವನ ವಿಧಾನ, ಸ್ಥಿತಿಗತಿಗಳ ಕುರಿತು ವಿವರಣೆ ನೀಡಲಾಗಿದೆ. ಹಾಗೆ ದೆಹಲಿ, ಹರ್ಯಾಣಗಳಲ್ಲಿರುವ ಕಪಡಿಯಾ ಸಾಂಸಿಗಳ ಕುರಿತು ವಿವರಿಸಲಾಗಿದೆ. ಕಪಡಿಯಾ ಸಾಂಸಿಗಳು, ಹಾಗೂ ರಾಜಸ್ಥಾನದ ಕಂಜರ್‌ಗಳಿಗೂ ಇರುವ ಸಂಬಂಧಗಳ ಕುರಿತು ತಿಳಿಸಲಾಗಿದೆ.

ಲಖನ್ ಗುಸ್ಸೆನಿಯವರ ಲಾಂಗ್ವೇಜ್ ಇನ್ ಇಂಡಿಯನ್ ಸಾಂಸಿಬೋಲಿ (೨೦೦೨) ಕೃತಿಯಲ್ಲಿ ಸಾಂಸಿ ಭೋಲಿ ಭಾಷೆಯ ರಚನಾ ಕ್ರಮಗಳ ಕುರಿತ ವಿವರಣೆ ದೊರೆಯುತ್ತದೆ.

ಲಾರನ್ಸ್‌ಡಿ ಸೋಜಾರವರು ಕಂಜರಭಾಟ್‌ರ ಕುರಿತು ಇಂಗ್ಲಿಷ್ ಕೃತಿ ಪ್ರಕಟಣೆಗೊಂಡಿದೆ. ಅದರಲ್ಲಿ ಕರ್ನಾಟಕದ ಕಂಜರಭಾಟರ ಜೀವನ ಶೈಲಿ ಕುರಿತು ಮಾಹಿತಿ ದೊರೆಯುತ್ತದೆ.

ಆರ್ ಸಿ ಸಿಸೋರಿಯವರು ಹಿಂದಿಯಲ್ಲಿ 'ಭಾರತ ವರ್ಷ ಮೆ ಜಾರಿ ಪ್ರಧಾಕಾ ಪ್ರಾದುಭಾವ ಎಂಬೀ ಕೃತಿಯಲ್ಲಿ ಸಾಂಸಿ ಸಮುದಾಯದ ಉತ್ಪತ್ತಿ, ಸಮುದಾಯದ ಆಚಾರ, ವಿಚಾರ, ವಿಧಿನಿಷೇಧಗಳ ಕುರಿತು ವಿವರಣೆ ಇದೆ.

ಖೂಬ್‌ಚಂದ ಜಾಟ (ದಹಿಯಾ)ರವರು ಕಂಜರ ಭಾಷಾ ಎಂಬ ಹಿಂದಿ ಕೃತಿಯಲ್ಲಿ ಭಾಷಾ ವಿಜ್ಞಾದ ಹಿನ್ನೆಲೆಯಲ್ಲಿ ಕಂಜರಭಾಟ ಭಾಷೆಯ ಕುರಿತು ಅವಲೋಕನ ನಡೆಸಲಾಗಿದೆ.

ಪ್ರಭಾತ ಚಂದ ಜಾಟರವರ ಸಂಪಾದಕತ್ವದಲ್ಲಿ ಜಾಟ ಕಂಜರ ಸಮಾಜ ಪಂಚಾಯತ್ ಸಮಿತಿ ಎಂಬೀ ಕೃತಿಯಲ್ಲಿ ಕಂಜರ ಭಾಟ ಸಮುದಾಯದಲ್ಲಿ ಪ್ರಚಲಿತವಿರುವ ಪಂಚಾಯತ ಕಾಯ್ದೆ ಹೇಗಿದೆ, ಮದುವೆ ಹಾಗೂ ಮರಣದಂತಹ ಪ್ರಮುಖ ಕ್ರಿಯೆಗಳನ್ನು ಯಾವ ರೀತಿ ಮಾಡಲಾಗುತ್ತಿದೆ ಎಂಬ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ.

೨೦೦೭ರಲ್ಲಿ ಪ್ರಕಟವಾದ ಮೋತಿರಾಜ ರಾಠೋಡರವರ ಪಾಲನಿವಾಸಿ ಎಂಬ ಮರಾಠಿ ಕೃತಿಯಲ್ಲಿ ಅಲೆಮಾರಿ ಗುನ್ಹೆಗಾರ (Nomadic Criminal tribes) ಸಮುದಾಯಗಳ ಸ್ವರೂಪ, ಅವರ ವೇಷ ಭೂಷಣಗಳ ಕುಲಶಾಸ್ತ್ರೀಯ ವಿವರಗಳು ದಾಖಲಾಗಿವೆ.

ಮೋತಿಚಂದ ಭಾಟರವರ ಸೈಸಮತ್ ಜಾತ ಪಂಚಾಯತ ಕಾಯ್ದೆ ಕಾನೂನು ಘಟನಾ ಸಮಿತಿ (೨೦೦೦ ಪೂನಾ) ಕೃತಿಯಲ್ಲಿ ಜಾತಿ ಪಂಚಾಯ್ತಿ ಕಾಯ್ದೆ ಕಾನೂನುಗಳು, ಹಾಗೂ ಶಿಕ್ಷೆಯ ವಿಧಾನಗಳ ಕುರಿತ ವಿತರಣೆಗಳು ದೊರೆಯುತ್ತವೆ.

ಅನಿಲಕುಮಾರ ಪಾಂಡೆಯವರು 'ಬುಧನ' (೨೦೦೧ ಗುಜರಾತ) ಕೃತಿಯಲ್ಲಿ 'ಛಾರ' ಸಮುದಾಯದ ವಿವರಣೆ ದೊರೆಯುತ್ತದೆ. ಗುಜರಾತಿನ ಛಾರ ಸಮುದಾಯವು ಕಂಜರ ಭಾಟ ಸಮುದಾಯವೇ ಆಗಿದೆ.

ಹೇಮಲತಾ ದೇಸಾಯಿಯವರು 'ಬದುಕು ಬಿಸಲು' (ಸೆಪ್ಟೆಂಬರ್ ೯೭) ಮಾಸ ಪತ್ರಿಕೆಯಲ್ಲಿ ಗದುಗಿನ ಕಂಜರಭಾಟ ಜನಾಂಗ ಎನ್ನುವ ಲೇಖನ ಪ್ರಕಟಗೊಂಡಿದೆ.

೨೧.೧೨.೧೯೯೫ರ ನವೋದಯ ಪತ್ರಿಕೆಯಲ್ಲಿ ಅಭಿವೃದ್ಧಿಯ ನಿರೀಕ್ಷೆಯಲ್ಲಿ ಕಂಜರಭಾಟ ಸಮಾಜ (ಹಿತ್ತೈಸಿ) ಎನ್ನುವ ಲೇಖನವೊಂದು ಪ್ರಕಟಣೆಗೊಂಡಿದ್ದು ಅದರಲ್ಲಿ ಅವರ ಕುರಿತ ಸಂಕ್ಷಿಪ್ತ ಮಾಹಿತಿ ದೊರೆಯುತ್ತದೆ.

ಅಖಿಲ ಕರ್ನಾಟಕ ಕಂಜರಭಾಟ ಸಮಾಜದ ಸಂಘವು ಕರ್ನಾಟಕದಲ್ಲಿ ಸಮುದಾಯದ ಹಲವಾರು ಕಾರ್ಯಕಲಾಪಗಳನ್ನು ಮಾಡುತ್ತಾ ಬಂದಿದೆ. ಕಂಜರಭಾಟ ಸಮುದಾಯವನ್ನು

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದೆ. ಈ ನಿಮಿತ್ಯ ಅಲ್ಲಲ್ಲಿ ಹಲವು ಮಾಹಿತಿಗಳನ್ನು ಸಂಘ ಕಲೆ ಹಾಕಲು ಪ್ರಯತ್ನಿಸಿದೆ. ಆದರೆ, ಕರ್ನಾಟಕ ರಾಜ್ಯದ ಕಂಜರಭಾಟರ ಕುರಿತು ವಿಸ್ತೃತ ಅಧ್ಯಯನ ಮಾಡಿದ ಕೃತಿಗಳ ಕೊರತೆಯು ಎದ್ದು ಕಾಣುತ್ತದೆ. ಈ ಕೊರತೆಯನ್ನು ಪ್ರಾಥಮಿಕ ಹಂತದಲ್ಲಿ ಈ ಕೃತಿಯು ಪರಿಹರಿಸುವುದೆಂದು ನಂಬಲಾಗಿದೆ.



೨

ಮೂಲ ಮತ್ತು ಪ್ರಸಾರ

ಪಂಜಾಬ ರಾಜ್ಯದ ಅಮೃತಸರದ ಸುತ್ತಮುತ್ತ ಸಾಂಸಿ ಸಮುದಾಯ ಬಹು ಸಂಖ್ಯೆಯಲ್ಲಿ ವಾಸವಾಗಿತ್ತು. ರಾಜಾ ಸೈಂಸಮಲ್ ಸಾಂಸಿ ಸಮುದಾಯದವರಾಗಿದ್ದರು. ಸಾಂಸಿ ಸಮುದಾಯದ ಇಬ್ಬರು ಸಹೋದರರಾದ ಸೈಂಸಮಲ್ ಮತ್ತು ಕಿರತು ಅವರು ಸಾಂಸಿ ಸಂಸ್ಥಾನವನ್ನು ಸ್ಥಾಪನೆ ಮಾಡಿ ಅದರಲ್ಲಿ ರಾಜಾ ಸೈಂಸಮಲ್ ಅವರು ಪ್ರಜೆಗಳ ಪ್ರೀತಿಗೆ ಪಾತ್ರನಾಗಿದ್ದರಂತೆ. ಅಂತೆಯೇ ಇಲ್ಲಿಯ ವಿಮಾನ ನಿಲ್ದಾಣಕ್ಕೆ "ಸಾಂಸಿ ವಿಮಾನ ನಿಲ್ದಾಣ" ಎಂದು ನಾಮಕರಣ ಮಾಡಲಾಗಿದೆ.

ಸಾಂಸಿ ಜನತೆಯ ಉಡುಗೆತೊಡಗೆ, ಆಚಾರ-ವಿಚಾರ, ಸಂಸ್ಕೃತಿ, ಆಹಾರ, ಭಾಷೆ ಮುಂತಾದವುಗಳನ್ನು ಗಮನಿಸಿದರೆ ಕಂಜರಭಾಟರು ರಾಜಸ್ಥಾನದಿಂದ ಗುಳೆ ಬಂದ ಜನ ಎಂದು ಹೇಳುವುದರಲ್ಲಿ ಯಾವ ಸಂಶಯವು ಇಲ್ಲ. ಮೇವಾಡದ ಉದಯಪುರದಲ್ಲಿ ರಜಪೂತ ಅರಸ ಮಹಾರಾಣಾ ಪ್ರತಾಪಸಿಂಹ ಆಡಳಿತ ನಡೆಸುತ್ತಿದ್ದರು. ರಾಜಸ್ಥಾನ ಮತ್ತು ದೆಹಲಿಯ ಕೆಲ ಪ್ರದೇಶಗಳು ಇವರ ವಶದಲ್ಲಿದ್ದವು. ಅಲ್ಲಿಯ ಅರಸರು ತಮ್ಮ ಸಾಮ್ರಾಜ್ಯದ ಪ್ರಜೆಗಳನ್ನು ಸುಖವಾಗಿ ನೋಡಿಕೊಳ್ಳುತ್ತಿದ್ದರು. ಇವರ ಸೈನ್ಯದಲ್ಲಿ ಸಾಂಸಿ ಸಮುದಾಯದವರು ಸೈನಿಕರಾಗಿದ್ದರು. ವೀರ ರಜಪೂತರು ಸಿಪಾಯಿಗಳಾಗಿದರು. ಅದೇ ಸಮಯದಲ್ಲಿ ಮೊಗಲರ ಆಡಳಿತ ಪ್ರಾರಂಭವಾಗಿತ್ತು. ಮೊಗಲರ ಅರಸ ಅಕ್ಬರ ಬಾದಶಾಹ ೧೫೩೬ರಲ್ಲಿ ಉದಯಪುರದ ಮೇಲೆ ದಾಳಿ ಮಾಡಿದನು. ಮೊಗಲರ ಬಲಾಢ್ಯ ಸೈನ್ಯದ ಎದುರಿಗೆ ಮಹಾರಾಣಾ ಪ್ರತಾಪಸಿಂಹರ ಸೈನ್ಯ ಸೋತಿತು, ಮಹಾರಾಣಾ ಪ್ರತಾಪ ಸಿಂಹರು ಸೈನಿಕರೊಂದಿಗೆ ಹರದಿಘಾಟ ಪರ್ವತಗಳಲ್ಲಿ ತಲೆಮರಿಸಿಕೊಂಡು ಅಡವಿಗಳಲ್ಲಿ ಅಲೆದಾಡತೊಡಗಿದರು. ಆಗ ಅಕ್ಬರ ಬಾದಶಾಹ ಮಹಾರಾಣಾ ಪ್ರತಾಪಸಿಂಹನಿಗೆ ನೀನು ಶರಣಾದರೆ ನಿನ್ನ ರಾಜ್ಯವನ್ನು ನಿನಗೆ ಮರಳಿ ಬಿಟ್ಟು ಕೊಡುತ್ತೇನೆ ಎಂದು ಹೇಳಿ ಕಳಿಸಿದನು. ವೀರ, ಸ್ವಾಭಿಮಾನಿ, ದೇಶಪ್ರೇಮಿ ರಾಣಾಪ್ರತಾಪಸಿಂಹ ಅದಕ್ಕೆ ಒಪ್ಪದೆ ನನ್ನ ಜೀವ ಇರುವವರೆಗೆ ಯುದ್ಧ ಮಾಡಿ ಜಯ ಸಾಧಿಸಿ ನನ್ನ ಸಾಮ್ರಾಜ್ಯವನ್ನು ಪಡೆದುಕೊಳ್ಳುತ್ತೇನೆ ಎಂದು ಪ್ರತಿಜ್ಞೆ ಮಾಡಿದನು. ರಾಜನ ಜೊತೆಗೆ ಸಾಹಸಿಗಳಾದ ಸಾಂಸಿ ಸಮುದಾಯದ ಸೈನಿಕರೂ ಇದ್ದರು. ಎಷ್ಟೋ ದಿನ ಆಹಾರ, ನೀರು ಸರಿಯಾಗಿ

ದೊರೆಯದೆ ಉಪವಾಸ ಇರುತ್ತಿದ್ದರು. ಅಡವಿಯಲ್ಲಿ ದೊರೆತ ಗಡ್ಡೆ-ಗೆಣಸುಗಳನ್ನು ತಿಂದು ಇರತೊಡಗಿದರು. ಬರಬರುತ್ತ ಅಡವಿಯೊಳಗಿನ ಕಾಡು ಪ್ರಾಣಿಗಳನ್ನು ಕೊಂದು ಸುಟ್ಟು ತಿನ್ನತೊಡಗಿದರು. ರಾಜನ ಜೊತೆಗೆ ಸೈನಿಕರೂ ಸಹ ಕಷ್ಟ-ನಷ್ಟಗಳನ್ನು ಅನುಭವಿಸಿದರು. ರಾತ್ರಿ ವೇಳೆಯಲ್ಲಿ ೪-೫ ಜನರ ಗುಂಪು ಕಟ್ಟಿಕೊಂಡು ಸಮೀಪದ ಹಳ್ಳಿಗಳಿಗೆ ನುಗ್ಗಿ ಕಳ್ಳತನ, ದರೊಡೆ ಮಾಡತೊಡಗಿದರು. ಮೊಗಲ ಅರಸರು ಅನೇಕ ಪ್ರಕಾರದ ತೊಂದರೆಗಳನ್ನು ಮಹಾರಾಣಾರ ಅನುಯಾಯಿಗಳಿಗೆ ಕೊಡತೊಡಗಿದರು. ಕೊನೆಗೂ ರಾಣಾಪ್ರತಾಪಸಿಂಹ ತನ್ನ ಸಾಮ್ರಾಜ್ಯವನ್ನು ವಶಪಡಿಸಿಕೊಳ್ಳಲು ಸಾಧ್ಯವಾಗಲಿಲ್ಲ. ರಜಪೂತ ಸೈನಿಕರು ತೊಂದರೆಗಳನ್ನು ಸಹಿಸಿಕೊಳ್ಳದೆ ಅಡವಿಯನ್ನು ಬಿಟ್ಟು ದೇಶದ ಬೇರೆ ಬೇರೆ ಕಡೆಗೆ ಕತ್ತೆ ಕುದುರೆಗಳ ಮೇಲೆ ತಮ್ಮ ಜೀವನೋಪಾಯದ ಸಾಮಗ್ರಿಗಳನ್ನು ಹೇರಿಕೊಂಡು ಸಂಚರಿಸುತ್ತಾ ದರೋಡೆ, ಭೀಕ್ಷಾಟನೆ ಮಾಡತೊಡಗಿದರು. ಅಲ್ಲಿಯ ಪರಿಸರಕ್ಕೆ ಹೊಂದಿಕೊಂಡು ಜೀವನ ಸಾಗಿಸತೊಡಗಿದರು. ಬದುಕಿಗಾಗಿ ತಾವೇ ಸ್ವತಃ ಸೆರೆಯನ್ನು ತಯಾರಿಸಿ ಕುಡಿಯುವ ಮತ್ತು ಮಾರುವ ಕಾಯಕ ಆರಂಭಿಸಿದರು.

ಭೌಗೋಳಿಕತೆ

ಕಂಜರಭಾಟರು ರಾಜಸ್ಥಾನದ ಮೂಲದವರಾಗಿದ್ದು ಅಲ್ಲಿಂದಲೇ ಬೇರೆ ಬೇರೆ ಕಡೆ ವಲಸೆ ಅಥವಾ ಗುಳೆ ಹೋಗಿರಬಹುದಾದ ಸಾಧ್ಯತೆಗಳು ಹೆಚ್ಚಿವೆ ಎಂದು ಹೇಳಿಯಾಗಿದೆ. ಅಂಡಮಾನ ನಿಕೋಬಾರ್ ದ್ವೀಪಗಳಿಂದ ಹಿಡಿದು ಭಾರತದಾದ್ಯಂತ ಕಂಡುಬರುವ ಕಂಜರಭಾಟರು ಆಯಾ ಪ್ರದೇಶಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಇವರನ್ನು ಯಾವುದೇ ಹೆಸರಿನಿಂದ ಗುರುತಿಸಿದರೂ ಭಾರತದಲ್ಲಿ ನೆಲೆಸಿರುವ ಎಲ್ಲಾ ಕಂಜರಭಾಟರ ನಡೆ, ನುಡಿ, ಬೆಡಗು, ಆಚರಣಾ ವಿಧಾನಗಳು, ನಿಷೇಧಗಳು ಒಂದೇ ತೆರನಾಗಿ ಇರುವುದನ್ನು ಗಮನಿಸಬಹುದಾಗಿದೆ.

ಭಾರತದಲ್ಲಿ ಮುಖ್ಯವಾಗಿ ಮಹಾರಾಷ್ಟ್ರ, ದೆಹಲಿ, ರಾಜಸ್ಥಾನ, ಉತ್ತರ ಪ್ರದೇಶ, ಪಂಜಾಬ್, ಬಿಹಾರ, ಹರಿಯಾಣ, ಗುಜರಾತ, ಪಶ್ಚಿಮ ಬಂಗಾಲ, ಮಧ್ಯಪ್ರದೇಶ, ತ್ರಿಪುರ, ಹಿಮಾಚಲ ಪ್ರದೇಶ, ಒರಿಸ್ಸಾ, ಜಮ್ಮು-ಕಾಶ್ಮೀರ, ಆಂಧ್ರಪ್ರದೇಶ, ಅಂಡಮಾನ್ ನಿಕೋಬಾರ್, ಕರ್ನಾಟಕ ರಾಜ್ಯಗಳಲ್ಲಿ ಈ ಸಮುದಾಯ ನೆಲೆಸಿರುವುದು ಕಂಡುಬರುತ್ತದೆ.

ಕರ್ನಾಟಕದಲ್ಲಿ ಕಂಜರಭಾಟರು ಕೇವಲ ೧೧ ಜಿಲ್ಲೆಗಳಲ್ಲಿ ಮಾತ್ರ ಕಾಣಸಿಗುವರು. ಇವರು ಗ್ರಾಮೀಣ ಪ್ರದೇಶಗಳಿಗಿಂತ ನಗರ ಪ್ರದೇಶಗಳಲ್ಲಿಯೇ ಹೆಚ್ಚಾಗಿ ನೆಲೆ ನಿಂತಿರುವುದು ಕಂಡುಬರುತ್ತದೆ. ಕರ್ನಾಟಕದ ಬಾಗಲಕೋಟೆ, ಬೆಂಗಳೂರು, ಬೆಳಗಾವಿ, ಬಿಜಾಪುರ, ದಾವಣಗೆರೆ, ಧಾರವಾಡ, ಗದಗ, ಹಾವೇರಿ, ಕಾರವಾರ, ಕೋಲಾರ, ಮೈಸೂರುಗಳಲ್ಲಿ ಇವರು ನೆಲೆನಿಂತಿದ್ದಾರೆ. ಹಿಂದೆ ಅಲೆಮಾರಿಗಳಾಗಿದ್ದ ಇವರು ಇಂದು ಅರೆ ಅಲೆಮಾರಿಗಳಾಗಿ ಮಾರ್ಪಾಡುಗೊಂಡಿದ್ದಾರೆ.

ಕಂಜರಭಾಟರು ಸಾಮಾನ್ಯವಾಗಿ ಊರಿನಿಂದ ದೂರವಾದ ಬಯಲು ಪ್ರದೇಶಗಳಲ್ಲಿ ಗುಡಿಸಲು, ಡೇರಾಗಳನ್ನು ರಚಿಸಿಕೊಂಡು ನೆಲೆಸುತ್ತಾರೆ. ಇತ್ತೀಚೆಗೆ ಇವರು ಟಿನ್, ಡೇರಾ, ಗುಡಿಸಲು, ಮಣ್ಣಿನ ಚಿಕ್ಕಮನೆ, ಆಶ್ರಯಮನೆ ಅಥವಾ ಬಾಡಿಗೆ ಮನೆಗಳಲ್ಲಿ ವಾಸವಾಗಿರುವುದು ಕಂಡುಬರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವ ಇವರು ಊರಿನ ಹೊರಭಾಗದ ಬಯಲು ಪ್ರದೇಶದಲ್ಲಿ ಗುಡಿಸಲುಗಳನ್ನು ರಚಿಸಿಕೊಂಡು ಗುಂಪು ಗುಂಪಾಗಿ ನೆಲೆಸಿದರೆ, ನಗರ ಪ್ರದೇಶಗಳಲ್ಲಿ ರೈಲ್ವೇ ಇಲಾಖೆಯ ಮನೆಗಳಲ್ಲಿ ಹಾಗೂ ಕೊಳಚೆ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಅತೀ ಹೆಚ್ಚು ಪ್ರಮಾಣದ ಕುಟುಂಬಗಳು ಹುಬ್ಬಳಿಯ ಕೊಳಚೆ ಪ್ರದೇಶದಲ್ಲಿ ಕಂಡುಬರುತ್ತವೆ. ಸಾಮಾನ್ಯವಾಗಿ ಸರ್ಕಾರಿ ಜಾಗಗಳಲ್ಲಿ ಇವರು ಗುಡಿಸಲುಗಳನ್ನು ರಚಿಸಿಕೊಂಡು ನೆಲೆಸಿರುವುದನ್ನು ಕಾಣಬಹುದಾಗಿದೆ.

ಪ್ರಸಾರ ನೆಲೆಗಳು

ಕಂಜರಭಾಟರು ಸಂಚಾರಿಗಳು. ಗುಡ್ಡಗಾಡು ಪ್ರದೇಶ, ಹಳ್ಳಿ ಹಳ್ಳಿಗಳನ್ನು ಅಲೆಯುತ್ತಾ ತಮ್ಮ ಜೀವನ ಸಾಗಿಸುವವರು. ದೇಶ ಸ್ವತಂತ್ರವಾಗಿ ೬೦ ವರ್ಷ ಕಳೆದರೂ ಬಹು ಸಂಖ್ಯಾತರಿಗೆ ಸ್ವಂತ ಮನೆ ಪ್ರಾಪ್ತವಾಗಲಿಲ್ಲ. ಕರ್ನಾಟಕದ ಹಲವಾರು ಹಳ್ಳಿಗಳಲ್ಲಿ ವಾಸವಾಗಿರುವ ಇವರ ಪರಿಸ್ಥಿತಿ ಮತ್ತು ಜೀವನ ಸಾಗಿಸುವ ರೀತಿಯನ್ನು ನೋಡಿದರೆ ದೇವರೇ ಅವರನ್ನು ಕಾಪಾಡಬೇಕು ಎಂದು ಅನಿಸುತ್ತದೆ. ಇವರು ಸಂಚಾರಿಗಳಾಗಿರುವು ದರಿಂದ ಈ ಸಮುದಾಯದ ಜನಸಂಖ್ಯೆ ಕಂಡುಹಿಡಿಯುವುದು ತೊಂದರೆದಾಯಕವಾಗಿದೆ. ಕರ್ನಾಟಕದ ಕಂಜರಭಾಟರು ನೆರೆಯ ರಾಜ್ಯಗಳಾದ ಮಹಾರಾಷ್ಟ್ರ, ಆಂಧ್ರ ಪ್ರದೇಶಗಳಿಗೆ ವಲಸೆ ಹೋಗಿ ಅಲ್ಲಿ ಸ್ವಲ್ಪ ದಿನಗಳವರೆಗೆ ಇದ್ದು ಮತ್ತೇ ತಿರುಗಿ ಕರ್ನಾಟಕಕ್ಕೆ ಬರುತ್ತಾರೆ. ಈ ರೀತಿ ಹಲವಾರು ಕುಟುಂಬಗಳು ರಾಜ್ಯದಿಂದ ರಾಜ್ಯಕ್ಕೆ ಅಲೆದಾಡುವ ಸಂಚಾರಿ ಗಳಾಗಿದ್ದಾರೆ.

ಹಿಂದೆ ಅರಣ್ಯಗಳಲ್ಲಿ ವಾಸಿಸುತ್ತಿದ್ದ ಇವರು ಇಂದು ಹಳ್ಳಿಯ ಯಾವುದಾದರೊಂದು ಮೂಲೆಯ ಬಯಲು ಜಾಗಗಳಲ್ಲಿ ವಾಸ್ತವ್ಯವನ್ನು ಹೂಡಿ ಜೀವನ ಸಾಗಿಸುತ್ತಾರೆ. ಹಾಗೆ ಶಹರಗಳಲ್ಲಿ ಇದ್ದರೂ ಸಹ ಉಳಿದ ಸಮುದಾಯಗಳಿಂದ ದೂರವಾದ ಹೊರಗಿನ ಬಯಲು ಸ್ಥಳವನ್ನು ಆಯ್ದುಕೊಂಡು ಗುಂಪಾಗಿ ವಾಸಿಸುತ್ತಾರೆ. ಇವರ ವಸತಿಗೆ "ಪೇಡಾ" ಎಂದು ಕರೆಯುತ್ತಾರೆ. ಈ ಜನ ಹೊಸ ಜಗತ್ತಿಗೆ ಸ್ಪಂದಿಸದೆ ಇಂದಿಗೂ ಸಂಪೂರ್ಣವಾಗಿ ಆದಿವಾಸಿಗಳಂತೆ ಬದುಕು ಸಾಗಿಸುತ್ತಿದ್ದಾರೆ. ಈ ಅಲೆಮಾರಿಗಳು ನಗರಗಳಲ್ಲಾಗಲಿ, ಹಳ್ಳಿಗಳಲ್ಲಾಗಲಿ ಎಲ್ಲಿಯೂ ಜನರ ಮಧ್ಯ ನೆಲೆಸುತ್ತಿರಲಿಲ್ಲ. ಬೇರೆ ಸಮುದಾಯಗಳು ಇವರಿಗೆ ಒಳ್ಳೆಯ ಭಾವನೆಗಳಿಂದ ಕಾಣದೇ ಇರುವುದು ಇದಕ್ಕೆ ಕಾರಣವೆನಿಸುತ್ತದೆ. ಇತ್ತೀಚಿಗೆ ಕಂಜರಭಾಟ ಸಮುದಾಯ ಹೊರಗಿನ ಪರಿಸರಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸುತ್ತಿದೆ. ಹಲವು ಕುಟುಂಬಗಳು ತಾವು ಯಾವ ಉದ್ಯೋಗ ಮಾಡಬೇಕು ಹೇಗೆ ಸುಧಾರಣೆ ಕಾಣಬೇಕು ಎಂಬುದನ್ನೇ ಚಿಂತನೆ ನಡೆಸುವ ಪ್ರಜ್ಞಾವಂತಿಕೆಗೆ ಒಳಗಾಗುತ್ತಿವೆ.

ಕರ್ನಾಟಕದಲ್ಲಿ ಕಂಜರಭಾಟರು ಎಲ್ಲ ಕಡೆಗೆ ಸಂಚರಿಸುತ್ತಾರೆ. ಈ ಜನ ಕತ್ತೆ ಕುದುರೆಗಳ ಮೇಲೆ ಜೀವನೋಪಾಯದ ಸಾಮಾನುಗಳನ್ನು ಹೇರಿಕೊಂಡು ಕಲ್ಲು, ಮುಳ್ಳು ತಗ್ಗು, ದಿನ್ನಿ, ಮಳೆ, ಗಾಳಿ, ಬಿಸಿಲು ಯಾವುದನ್ನು ಲೆಕ್ಕಿಸದೇ ಬರಿಗಾಲಿನಿಂದ ಹೆಂಡತಿ ಮಕ್ಕಳೊಂದಿಗೆ ಸಾಕು ಪ್ರಾಣಿಗಳಾದ ಕುರಿ, ನಾಯಿಗಳೊಂದಿಗೆ ಸಂಸಾರ ಸಮೇತ ಸಂಚರಿಸುತ್ತಾರೆ. ಈ ಸಮುದಾಯದ ಬಗೆಗೆ ಸರ್ಕಾರವಾಗಲಿ, ಅಧ್ಯಯನಕಾರರಾಗಲಿ ಯಾರೂ ಲಕ್ಷ್ಯವನ್ನು ಕೊಡುವ ಪ್ರಯತ್ನ ಮಾಡಲಿಲ್ಲ. ಆದ ಕಾರಣ ಇವರ ಆಚಾರ-ವಿಚಾರ, ಪದ್ಧತಿ, ಸಂಸ್ಕೃತಿಗಳ ಬಗೆಗೆ ಬೇರೆ ಸಮುದಾಯಗಳಿಗಾಗಲಿ, ಸರ್ಕಾರಕ್ಕಾಗಲಿ ಯಾವ ಮಾಹಿತಿಯೂ ಇಲ್ಲ.

ಜನಸಂಖ್ಯೆ

ಕಂಜರಭಾಟರು ಉತ್ತರ ಪ್ರದೇಶ, ಹರಿಯಾಣ, ಪಂಜಾಬ, ಜಮ್ಮು ಮತ್ತು ಕಾಶ್ಮೀರ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ, ಆಸ್ಸಾಮ, ಪಶ್ಚಿಮ ಬಂಗಾಳ, ಒರಿಸ್ಸಾ, ಹಿಮಾಚಲ ಪ್ರದೇಶ, ಅಂಡಮಾನ ಮತ್ತು ನಿಕೋಬಾರ, ಕರ್ನಾಟಕ ಹಾಗೂ ಆಂಧ್ರ ಪ್ರದೇಶಗಳಲ್ಲಿ ವಾಸವಾಗಿದ್ದಾರೆ ಎಂದು ತಿಳಿದುಬರುತ್ತದೆ. ೧೮೮೧ರ ಜನಗಣತಿಯ ಪ್ರಕಾರ ಭಾರತದಲ್ಲಿ ವಾಸವಾದ ಭಾಟ್, ನಟ್ ಕಂಜರ್ ಮತ್ತು ಕಂಚನರ ಜನಸಂಖ್ಯೆ ೫,೨೬,೩೫೮ ಎಂದು ಇ ಜೆ ಕೀಟ್ಸ್‌ರ ಕಾಂಪೆಂಡಿಯಮ್‌ದಲ್ಲಿ ದಾಖಲಾಗಿದೆ (ಕೋಷ್ಟಕ:೨.೧).

ಕೋಷ್ಟಕ: ೨.೧ ಭಾರತ ಕಂಜರಭಾಟರ ಜನಸಂಖ್ಯೆ (೧೮೮೧)

ಪ್ರದೇಶ	ಭಾಟ್	ನಟ್	ಕಂಜರ್	ಕಂಚನ	ಒಟ್ಟು
ಅಜಮೀರ್	೪೨೨	೬೯೭	೩೭೫	೦	೧೪೯೪
ಅಸ್ಸಾಮ್	೦	೧೧೨೦೪	೦	೦	೧೧೨೦೪
ಬಂಗಾಳ	೬೧೮೯೩	೨೬೫೬೦	೪೯೯೩	೦	೯೩೪೪೬
ಬೆರಾರ್	೨೫೨೦	೦	೭೮	೦	೨೫೯೮
ಬಾಂಬೆ	೧೫೨೬೦	೨೧೦	೨೦೮	೦	೧೫೬೭೮
ಕೇಂದ್ರಪ್ರಾಂತ	೭೭೯೦೩	೨೪೯೭	೭೫೧	೧	೮೧೧೫೨
ಮದ್ರಾಸ್	೦	೨೪೨೭	೦	೦	೨೪೨೭
ವಾಯುವ್ಯಪ್ರಾಂತ	೧೩೦೧೬೨	೩೭೫೨೨	೧೯೫೨೪	೧೬೪೨೩	೨೦೩೬೩೧
ಪಂಜಾಬ	೩೦೦೨೨	೨೪೫೮೧	೨೪೪೮೭	೧೦೯೧೦	೯೦೦೦೦
ಬರೋಡ	೨೧೩೯೦	೧೧೦	೦	೦	೨೧೫೦೦
ಹೈದ್ರಾಬಾದ್	೦	೦	೨೧೩೦	೧೦೯೮	೩೨೨೮
ಒಟ್ಟು	೩೩೯೫೭೨	೧೦೫೮೦೮	೫೨೫೪೬	೨೮೪೩೨	೫೨೬೩೫೮

ಭಾರತದಲ್ಲಿ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ದಾಖಲಾದ ಕಂಜರ, ಸಾಂಸಿ, ಸಾಂಸಿಯ, ಭೇಡಕೂಟ್, ಮನೇಶ ಸಮುದಾಯಗಳ ಜನಸಂಖ್ಯೆಯು ೨,೯೦,೧೦೭ ಇರುವುದಾಗಿ ೨೦೧೧ರ ಜನಗಣತಿಯಲ್ಲಿ ದಾಖಲಿಸಲಾಗಿದೆ (ಅಂಕಿಅಂಶ: ೧).


ಕನ್ನಡ ಪುಸ್ತಕ ಪ್ರಾಧಿಕಾರದ ೨೦೦೭ರ ಸಮೀಕ್ಷೆಯ ಪ್ರಕಾರ ಕಂಜರಭಾಟರು ಕರ್ನಾಟಕದ ೧೧ ಜಿಲ್ಲೆಗಳಲ್ಲಿ ವಾಸವಾಗಿರುವುದು ವೇದ್ಯವಾಗುತ್ತದೆ. ಇವರು ಗ್ರಾಮೀಣ ಭಾಗಗಳಿಗಿಂತ ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ವಾಸವಾಗಿರುವುದು ಕಂಡು ಬರುವುದು. ಸಮೀಕ್ಷೆಯ ತಥ್ಯಗಳನ್ನು ಇಲ್ಲಿ ವಿವರಿಸಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಬೆಳಗಾವಿ ಹಾಗೂ ಹಾವೇರಿ ಜಿಲ್ಲೆಗಳ ಗ್ರಾಮಗಳಲ್ಲಿ ಮಾತ್ರ ಇವರು ನೆಲೆಸಿರುವುದು ಕಂಡುಬರುತ್ತದೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಅಜ್ಜನಕಟ್ಟಿ, ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿ, ರಾಯಭಾಗ ತಾಲೂಕಿನ ನಿಪ್ಪಾಳ ಗ್ರಾಮಗಳಲ್ಲಿ ಮತ್ತು ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಬಂಕಾಪುರ, ಮಣಕಟ್ಟಿ ಗ್ರಾಮ ಪಂಚಾಯಿತಿಯ ಕೃಷ್ಣಾನಗರ ಮತ್ತು ರಾಮನಕೊಪ್ಪ ಗ್ರಾಮಗಳಲ್ಲಿ ವಾಸಿಸುತ್ತಿದ್ದಾರೆ. ರಾಜ್ಯದ ಈ ಎರಡೂ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು ೪೪ ಕುಟುಂಬಗಳು ಕಾಣಸಿಗುತ್ತವೆ. ಗ್ರಾಮೀಣ ಪ್ರದೇಶದಲ್ಲಿ ೮೨ ಪುರುಷರಿದ್ದರೆ ೮೧ ಜನ ಮಹಿಳೆಯರಿದ್ದಾರೆ, ಇಲ್ಲಿಯ ಇವರ ಒಟ್ಟು ಜನಸಂಖ್ಯೆ ೧೬೩ ಎಂದು ದಾಖಲಾಗಿರುವುದು (ಕೋಷ್ಟಕ:೨.೨). ಭಾರತದ ೭೨.೨ರಷ್ಟು ಮತ್ತು ಕರ್ನಾಟಕದ ೬೬.೦೨ರಷ್ಟು ಗ್ರಾಮೀಣ ಜನಸಂಖ್ಯೆಗೆ ಹೋಲಿಸಿದಾಗ ಕಂಜರಭಾಟರ ಗ್ರಾಮೀಣ ಜನಸಂಖ್ಯೆ ವ್ಯತಿರಿಕ್ತವೆನಿಸುತ್ತದೆ. ಇವರ ಗ್ರಾಮೀಣ ಜನಸಂಖ್ಯೆ ಕೇವಲ ೮ ರಷ್ಟಿರುವುದು(ವೃತ್ತಚಿತ್ರ:೨.೧).

ಕೋಷ್ಟಕ: ೨.೨ ಕಂಜರಭಾಟರ ಗ್ರಾಮೀಣ ಜನಸಂಖ್ಯೆ (೨೦೦೭)

ಜಿಲ್ಲೆ	ತಾಲ್ಲೂಕು	ಗ್ರಾಮ ಪಂಚಾಯತಿ	ನೆಲೆಗಳು	ಕುಟುಂಬಗಳು	ಪುರುಷ	ಮಹಿಳೆ	ಒಟ್ಟು
ಬೆಳಗಾವಿ	ಗೋಕಾಕ	ಅಜ್ಜನಕಟ್ಟೆ	ಅಜ್ಜನಕಟ್ಟೆ	೫	೧೦	೧೧	೨೧
	ಹುಕ್ಕೇರಿ	ಬೆಲ್ಲದ ಬಾಗೆವಾಡಿ	ಚಿಕ್ಕೋಡಿ ರಸ್ತೆ	೧೩	೨೧	೨೨	೪೩
	ರಾಯಬಾಗ	ನಿಪ್ಪನಾಳ	ನಿಪ್ಪನಾಳ	೪	೧೪	೬	೨೦
ಹಾವೇರಿ	ಶಿಗ್ಗಾಂವ	ಮಣಕಟ್ಟಿ	ಕೃಷ್ಣನಗರ	೧	೧	೧	೨
		ಬಂಕಾಪುರ	ಬಂಕಾಪುರ	೫	೧೦	೧೧	೨೧
		ತಡಸ	ಮುತ್ತಹಳ್ಳಿ	೧೨	೨೩	೨೫	೪೮
		ರಾಮನಹಳ್ಳಿ	ರಾಮನಹಳ್ಳಿ	೪	೩	೫	೮
			ಒಟ್ಟು	೪೪	೮೨	೮೧	೧೬೩

ವೃತ್ತಚಿತ್ರ: ೨.೧ ನಗರ ಹಾಗೂ ಗ್ರಾಮೀಣ ಪ್ರದೇಶದ ಕಂಜರಭಾಟರ ಜನಸಂಖ್ಯಾ ಪ್ರಮಾಣ (೨೦೦೭)



ಗ್ರಾಮೀಣಕ್ಕಿಂತ ನಗರ ಪ್ರದೇಶಗಳಲ್ಲಿ ವಾಸಿಸುವ ಕಂಜರಭಾಟರ ಜನಸಂಖ್ಯೆ ಅಧಿಕವಾಗಿರುವುದು. ಬಾಗಲಕೋಟ ಜಿಲ್ಲೆಯ ಮುಧೋಳ ಪಟ್ಟಣದಲ್ಲಿ, ಬೆಂಗಳೂರಿನ ವಿನಾಯಕನಗರದಲ್ಲಿ, ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ಮತ್ತು ರಾಯಬಾಗ ಪಟ್ಟಣಗಳಲ್ಲಿ, ಬಿಜಾಪುರ ನಗರದ ಜೇಲದರ್ಗಾ ಮತ್ತು ರಂಗಮಸೀದಿಗಳಲ್ಲಿ ಹಾಗೂ ಮುದ್ದೇಬಿಹಾಳ್ ಪಟ್ಟಣದಲ್ಲಿ, ದಾವಣಗೆರೆ ಜಿಲ್ಲೆಯ ಹರಿಹರದ ರೈಲ್ವೆಗೃಹಗಳಲ್ಲಿ, ಧಾರವಾಡ ಜಿಲ್ಲೆಯ ಧಾರವಾಡ ಮತ್ತು ಹುಬ್ಬಳ್ಳಿಯ ಸೆಟ್ಲಮೆಂಟಗಳಲ್ಲಿ, ಗದಗಡ ಗಾಂಧಿನಗರ ಸೆಟ್ಲ ಮೆಂಟಿನಲ್ಲಿ, ನರಗುಂದ ಪಟ್ಟಣದಲ್ಲಿ ಮತ್ತು ರೋಣ ತಾಲೂಕಿನ ಗಜೇಂದ್ರ ಗಡದಲ್ಲಿ, ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲೂಕಿನ ದಾಂಡೇಲಿಯ ಗಾಂಧಿನಗರದಲ್ಲಿ, ಕೋಲಾರ ಜಿಲ್ಲೆಯ ಬಂಗಾರಪೇಟೆಯ ಬಿಇಎಂಎಲ್ ನಗರದಲ್ಲಿ ಮತ್ತು ಮೈಸೂರಿಲ್ಲಿ ಒಟ್ಟು ೪೪೧ ಕುಟುಂಬಗಳು ಕಾಣಸಿಗುವವು. ನಗರ ಪ್ರದೇಶದಲ್ಲಿ ಸ್ತ್ರೀ ಪುರುಷರು ಸಮಾನವಾಗಿ ತಲಾ ೯೧೯ ಇದ್ದು ಒಟ್ಟು ೧೮೩೮ ಜನರು ವಾಸವಾಗಿರುವುದನ್ನು ದಾಖಲಿಸಲಾಗಿದೆ (ಕೋಷ್ಟಕ:೨.೩). ಕರ್ನಾಟಕದ ಧಾರವಾಡ, ಹುಬಳ್ಳಿ, ಬಿಜಾಪುರ, ದಾಂಡೇಲಿ ಮತ್ತು ಗದಗ ನೆಲೆಗಳಲ್ಲಿ ಇವರು ಗಣನೀಯ ಪ್ರಮಾಣದಲ್ಲಿದ್ದಾರೆ.


ಕರ್ನಾಟಕದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ನೆಲೆಸಿರುವ ಕಂಜರಭಾಟರ ಒಟ್ಟು ಕುಟುಂಬಗಳು ೪೮೫ ರಷ್ಟಿದ್ದು ಇದರಲ್ಲಿ ಪುರುಷರು ೧೦೦೧ ಹಾಗೂ ಮಹಿಳೆಯರು ೧೦೦೦ ಒಟ್ಟು ೨೦೦೧ ಜನ ವಾಸಿಸುತ್ತಿರವುದು ಪ್ರಸ್ತುತ ಸಮೀಕ್ಷೆಯ ಅಂಕಿಅಂಶಗಳಿಂದ ಸ್ಪಷ್ಟವಾಗುವುದು.

ಕೋಷ್ಟಕ: ೨.೩ ಕಂಜರಭಾಟರ ನಗರ ಜನಸಂಖ್ಯೆ (೨೦೦೭)

ಜಿಲ್ಲೆ	ತಾಲ್ಲೂಕು	ನೆಲೆಗಳು	ಕುಟುಂಬ	ಪುರುಷ	ಮಹಿಳೆ	ಒಟ್ಟು
ಬಾಗಲಕೋಟೆ	ಮುಧೋಳ	ಮುಧೋಳ	೧೫	೪೪	೨೯	೭೩
ಬೆಂಗಳೂರು	ಬೆಂಗಳೂರು	ವಿನಾಯಕ ನಗರ	೧	೨	೨	೪
ಬೆಳಗಾವಿ	ಚಿಕ್ಕೋಡಿ	ಚಿಕ್ಕೋಡಿ	೬	೧೭	೧೩	೩೦
	ರಾಯಬಾಗ	ರಾಯಬಾಗ	೨೬	೬೨	೫೩	೧೧೫
ಬಿಜಾಪುರ	ಬಿಜಾಪುರ	ಜೀಲದರ್ಗಾ	೬೩	೧೩೭	೧೩೩	೨೭೦
		ರಂಗಮಸೀದಿ	೩೯	೮೨	೯೧	೧೭೩
	ಮುದ್ದೆಬಿಹಾಳ್	ಮುದ್ದೆಬಿಹಾಳ್	೫	೫	೯	೧೪
ದಾವಣಗೆರೆ	ಹರಿಹರ	ರೇಲ್ವೆಕ್ವಾಟರ್ಸ್	೧	೧	೨	೩
ಧಾರವಾಡ	ಧಾರವಾಡ	ಮ.ಗ್ರಾ.ಬ್ಯಾಂಕ್	೫	೧೦	೭	೧೭
	ಹುಬ್ಬಳ್ಳಿ	ಸೆಟ್ಲಮೆಂಟ್ ಹಾಗೂ ಆರ್.ಜಿ.ಎಸ್	೧೭೭	೩೨೩	೩೪೫	೬೬೮
ಗದಗ	ಗದಗ	ಗದಗ ಸೆಟ್ಲಮೆಂಟ್	೪೭	೧೦೩	೧೦೦	೨೦೩
	ನರಗುಂದ	ನರಗುಂದ	೧	೦	೧	೧
	ರೋಣ	ಗಜೇಂದ್ರಗಡ	೧	೨	೨	೪
ಉತ್ತರ ಕನ್ನಡ	ಹಳಿಯಾಳ	ಗಾಂಧಿನಗರ, ದಾಂಡೇಲಿ	೪೯	೧೨೦	೧೨೨	೨೪೨
ಕೋಲಾರ	ಬಂಗಾರಪೇಟೆ	ಬಿ.ಇ.ಎಂ.ಎಲ್.ನಗರ	೧	೨	೨	೪
ಮೈಸೂರು	ಮೈಸೂರು	ಮೈಸೂರು	೪	೯	೮	೧೭
		ಒಟ್ಟು	೪೪೧	೯೧೯	೯೧೯	೧೮೩೮

ಕಂಜರಭಾಟರು ಇನ್ನೂ ಅಲೆಮಾರಿತನವನ್ನು ಸಂಪೂರ್ಣವಾಗಿ ತ್ಯಜಿಸದೇ ಇರುವುದರಿಂದ ಈ ಸಮುದಾಯದ ಜನಸಂಖ್ಯೆಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಅಲಭ್ಯವೆಂದೇ ಹೇಳಬಹುದು. ಏಕೆಂದರೆ ಕಂಜರಭಾಟರ ಸಮೀಕ್ಷೆಗೆ ಹೋದಾಗ ಹಲವು ಕುಟುಂಬಗಳು ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗಿರುವುದು ತಿಳಿದುಬಂದಿತು. ಆದರೆ ಇವರು ಯಾವ ಪ್ರದೇಶಕ್ಕೆ ವಲಸೆ ಹೋಗಿದ್ದಾರೆ ಎನ್ನುವ ಮಾಹಿತಿ ಸರಿಯಾಗಿ ದೊರೆಯಲಿಲ್ಲ. ಇವರು ಭಿಕ್ಷಾಟನೆ ಹಾಗೂ ಚಿಕ್ಕಪುಟ್ಟ ಕೆಲಸಗಳನ್ನು ಹುಡುಕಿಕೊಂಡು ಗೋವಾ ಮುಂತಾದ ನೆರೆ ರಾಜ್ಯಗಳಿಗೆ ವಲಸೆ ಹೋಗುವುದುಂಟು. ಹೀಗಾಗಿ ಇವರ ಪೂರ್ಣ ಮಾಹಿತಿ ಪಡೆಯುವುದು ಕಷ್ಟವಾಯಿತು. ಒಟ್ಟಾರೆ ಸಮೀಕ್ಷೆಯಲ್ಲಿಯ ಮಾಹಿತಿಗಳಲ್ಲಿ ಶೇ. ೯೯ರಷ್ಟು ಸರಿಯಾಗಿವೆ ಎಂದು ಹೇಳಲು ಅನುಮಾನವಿಲ್ಲ.

ಕರ್ನಾಟಕ
ಕಂಜರಭಾಟ ಸಮುದಾಯದ ನೆಲೆಗಳು



ಲಿಂಗ ಅನುಪಾತ

ಪ್ರತಿ ೧೦೦೦ ಪುರುಷರಿಗೆ ಮಹಿಳೆಯರ ಸಂಖ್ಯೆ ಎಷ್ಟೆಂಬುವುದನ್ನು ಗುರುತಿಸುವುದೇ ಲಿಂಗ ಅನುಪಾತವಾಗಿರುತ್ತದೆ. ೨೦೦೧ರ ಜನಗಣತಿಯ ಪ್ರಕಾರ ಕ್ರಮವಾಗಿ ಲಿಂಗ ಅನುಪಾತವು ಭಾರತದಲ್ಲಿ ೯೩೩, ಕರ್ನಾಟಕದಲ್ಲಿ ೯೬೫ ಇದ್ದರೆ ಕರ್ನಾಟಕದ ಕಂಜರಭಾಟ ಸಮುದಾಯದ ಸರಾಸರಿ ಲಿಂಗ ಅನುಪಾತ ೯೯೯ ಇರುವುದು ಸಂತಸದ ಸಂಗತಿಯೇ ಆಗಿರುವುದು (ಕೋಷ್ಟಕ:೨.೪).

ಕೋಷ್ಟಕ: ೨.೪ ಕಂಜರಭಾಟರ ಜಿಲ್ಲಾವಾರು ಲಿಂಗ ಅನುಪಾತ

ಕ್ರ.ಸಂ.	ಜಿಲ್ಲೆಗಳು	ಕುಟುಂಬ	ಪುರುಷ	ಸ್ತ್ರೀ	ಒಟ್ಟು	ಲಿಂಗಪ್ರಮಾಣ
೧	ಬಾಗಲಕೋಟೆ	೧೫	೪೪	೨೯	೭೩	೬೫೯
೨	ಬೆಂಗಳೂರು	೧	೨	೨	೪	೧೦೦೦
೩	ಬೆಳಗಾವಿ	೫೪	೧೨೪	೧೦೫	೨೨೯	೮೪೬
೪	ಬಿಜಾಪುರ	೧೦೭	೨೨೪	೨೩೩	೪೫೭	೧೦೪೦
೫	ದಾವಣಗೆರೆ	೧	೧	೨	೩	೨೦೦೦
೬	ಧಾರವಾಡ	೧೮೨	೩೩೩	೩೫೨	೬೮೫	೧೦೫೭
೭	ಗದಗ	೪೯	೧೦೫	೧೦೩	೨೦೮	೯೮೦
೮	ಹಾವೇರಿ	೨೨	೩೭	೪೨	೭೯	೧೧೩೫
೯	ಉತ್ತರ ಕನ್ನಡ	೪೯	೧೨೦	೧೨೨	೨೪೨	೧೦೧೬
೧೦	ಕೋಲಾರ	೧	೨	೨	೪	೧೦೦೦
೧೧	ಮೈಸೂರು	೪	೯	೮	೧೭	೮೮೮
		೪೮೫	೧೦೦೧	೧೦೦೦	೨೦೦೧	೯೯೯

ಕಂಜರಭಾಟರ ವಯೋ ಗುಂಪುವಾರು ಜನಸಂಖ್ಯೆ

ಯಾವುದೇ ಸಮುದಾಯದ ಶೈಕ್ಷಣಿಕ ಮತ್ತು ಆರ್ಥಿಕ ಅಂಶಗಳನ್ನು ಅರಿಯಲು ಆ ಸಮುದಾಯದ ಜನರ ವಯೋ ಗುಂಪುಗಳನ್ನು ತಿಳಿಯುವುದು ಅಗತ್ಯವಾಗಿರುತ್ತದೆ. ಕಂಜರಭಾಟರ ಈ ಅಂಶಗಳನ್ನು ಅರಿಯಲು ೪ ವರ್ಷ ಒಳಗಿನವರ ಅಂಕಿಅಂಶಗಳನ್ನು ಕಲೆಹಾಕಲಾಗಿದೆ. ಈ ವಯೋ ಗುಂಪಿನವರನ್ನು ಹೊರಗಿಟ್ಟು ಸಾಕ್ಷರತೆಯ ಪ್ರಮಾಣವನ್ನು ಪಡೆಯಲಾಗಿದೆ. ಇವರ ಒಟ್ಟು ಜನಸಂಖ್ಯೆಯಲ್ಲಿ ಈ ವಯೋ ಗುಂಪಿನವರ ಪ್ರಮಾಣ ೧೦.೯೯ ರಷ್ಟಿದೆ. ೫ ರಿಂದ ೧೭ ವಯೋ ಗುಂಪನ್ನು ಸಾಕ್ಷರತೆಗೆ ಒಳಪಡುವ ಅಧ್ಯಯನಶೀಲ ಆದರೆ ಉದ್ಯೋಗಕ್ಕೆ ಅರ್ಹವಲ್ಲದ ಗುಂಪು ಎಂದು ಪರಿಗಣಿಸಲಾಗಿದೆ.

ಈ ಗುಂಪಿನಲ್ಲಿಯ ಇವರ ಪ್ರಮಾಣ ೩೧.೫೩ ರಷ್ಟಿರುವುದು. ೧೮ ರಿಂದ ೪೦ ವಯೋ ಗುಂಪನ್ನು ಕಾಯಕರ್ಹ, ಸಂತಾನರ್ಹ ಹಾಗೂ ಚಲನಶೀಲ ಗುಂಪೆಂದು ಗ್ರಹಿಸಲಾಗುವುದು. ಈ ಗುಂಪಿನಲ್ಲಿಯ ಇವರ ಪ್ರಮಾಣ ೪೩.೩೨ ರಷ್ಟಿರುವುದು. ೪೧ ರಿಂದ ೬೦ ವಯೋ ಗುಂಪನ್ನು ಮಾರ್ಗದರ್ಶಿ ಮತ್ತು ಅನುಭವಿ ಗುಂಪೆಂದು ಭಾವಿಸಲಾಗುವುದು. ಈ ಗುಂಪಿನಲ್ಲಿಯ ಇವರ ಪ್ರಮಾಣ ೧೦.೮೯ ರಷ್ಟಿರುವುದು. ೬೦ರ ಮೇಲ್ಪಟ್ಟ ವಯೋ ಗುಂಪು ಅವಲಂಬಿತ, ಅನುಭವಿ, ಅಸಹಾಯಕ, ಕಾಯಕರ್ಹವಲ್ಲದ ಗುಂಪೆಂದು ಪರಿಗಣಿಸ ಲಾಗುವುದು. ಈ ಗುಂಪಿನಲ್ಲಿಯ ಇವರ ಪ್ರಮಾಣ ೩.೨೭ ರಷ್ಟಿರುವುದು(ಕೋಷ್ಟಕ:೨.೫). ಕಂಜರಭಾಟರಲ್ಲಿ ಕಾಯಕರ್ಹ ವಯೋ ಗುಂಪಿನವರು ಗಣನೀಯ ಪ್ರಮಾಣದಲ್ಲಿದ್ದರೂ ಆಧುನಿಕ ಸಾಕ್ಷರತೆಯ ಕೊರತೆಯಿಂದಾಗಿ ಇವರ ಆರ್ಥಿಕ ಸ್ಥಿತಿ ಅದೇ ಪ್ರಮಾಣದಲ್ಲಿ ಸುಧಾರಿಸುವುದು ಕಷ್ಟಸಾಧ್ಯ.

ಕೋಷ್ಟಕ: ೨.೫ ಕಂಜರಭಾಟರ ವಯೋಗುಂಪುವಾರು ಲಿಂಗವಾರು ಜನಸಂಖ್ಯೆ

ವಯೋಗುಂಪು	ಪುರುಷ	ಶೇಕಡ	ಸ್ತ್ರೀ	ಶೇಕಡ	ಒಟ್ಟು	ಶೇಕಡ
೦-೪	೧೦೪	೧೦.೩೮	೧೧೬	೧೧.೬೦	೨೨೦	೧೦.೯೯
೫-೧೭	೩೩೦	೩೨.೯೬	೩೦೧	೩೦.೧೦	೬೩೧	೩೧.೫೩
೧೮-೪೦	೪೨೧	೪೨.೦೯	೪೪೬	೪೪.೬೦	೮೬೭	೪೩.೩೨
೪೧-೬೦	೧೧೧	೧೧.೦೮	೧೦೭	೧೦.೭೦	೨೧೮	೧೦.೮೯
೬೦+	೩೫	೩.೪೯	೩೦	೩.೦೦	೬೫	೩.೨೭

ಕಂಜರಭಾಟರ ಕುಟುಂಬಗಳ ಗಾತ್ರ

ಕಂಜರಭಾಟರ ಕುಟುಂಬಗಳು ಗುಂಪು ಗುಂಪಾಗಿ ನೆಲೆಸುತ್ತವೆ. ಇವರಲ್ಲಿ ಅವಿಭಕ್ತ ಕುಟುಂಬಗಳು ಹಿಂದೆ ಹೆಚ್ಚಾಗಿ ಕಂಡುಬರುತ್ತಿದ್ದರೂ ಇಂದು ಅವುಗಳ ಸ್ಥಾನವನ್ನು ವಿಭಕ್ತ ಕುಟುಂಬಗಳು ಆಕ್ರಮಿಸಿಕೊಂಡಿವೆ. ಇಲ್ಲಿ ೧ ರಿಂದ ೪ ರಷ್ಟು ಸಂಖ್ಯೆಯಲ್ಲಿ ಇರುವ ಸದಸ್ಯರ ಕುಟುಂಬಗಳನ್ನು ಚಿಕ್ಕ ಗಾತ್ರದ ಕುಟುಂಬಗಳೆಂದು ೪ ರಿಂದ ೬ರ ಸಂಖ್ಯೆಯಲ್ಲಿರುವ ಸದಸ್ಯರ ಕುಟುಂಬಗಳನ್ನು ಮಧ್ಯಮ ಗಾತ್ರದ ಕುಟುಂಬಗಳೆಂದು ೭ ಕ್ಕಿಂತ ಮೇಲ್ಪಟ್ಟು ಜನರಿರುವ ಕುಟುಂಬಗಳನ್ನು ದೊಡ್ಡ ಗಾತ್ರದ ಕುಟುಂಬಗಳೆಂದು ಪರಿಗಣಿಸಲಾಗಿದೆ.

ಕರ್ನಾಟಕದ ಕಂಜರಭಾಟರ ಕುಟುಂಬಗಳಲ್ಲಿ ಚಿಕ್ಕ ಗಾತ್ರದ ಕುಟುಂಬಗಳು ಹಾಗೂ ಮಧ್ಯಮ ಗಾತ್ರದ ಕುಟುಂಬಗಳು ಕಂಡುಬರುತ್ತವೆ. ದೊಡ್ಡ ಗಾತ್ರದ ಕುಟುಂಬಗಳು ಇವರಲ್ಲಿ ಇಲ್ಲವೆಂದೇ ಹೇಳಬಹುದು. ಬೆಂಗಳೂರು, ದಾವಣಗೆರೆ, ಧಾರವಾಡ, ಹಾವೇರಿ, ಕೋಲಾರ ಜಿಲ್ಲೆಗಳಲ್ಲಿ ಚಿಕ್ಕಗಾತ್ರದ ಕುಟುಂಬಗಳು ಕಂಡುಬರುತ್ತದೆ. ಬಾಗಲಕೋಟೆ,

ಬೆಳಗಾವಿ, ಬಿಜಾಪುರ, ಗದಗ, ಉತ್ತರ ಕನ್ನಡ ಹಾಗೂ ಮೈಸೂರುಗಳಲ್ಲಿ ಮಧ್ಯಮ ಗಾತ್ರದ ಕುಟುಂಬಗಳು ಕಂಡಬರುತ್ತದೆ. ಇವರ ಸರಾಸರಿ ಕುಟುಂಬದ ಗಾತ್ರ ೪.೧೨ (ಕೋಷ್ಟಕ:೨.೬). ಅವಿಭಕ್ತ ಕುಟುಂಬಗಳು ಇತ್ತೀಚೆಗೆ ಕರಗುತ್ತಿವೆ.

ಕೋಷ್ಟಕ: ೨.೬ ಕಂಜರಭಾಟರ ಜಿಲ್ಲಾವಾರು ಕುಟುಂಬಗಳ ಗಾತ್ರ

ಕ್ರ.ಸಂ.	ಜಿಲ್ಲೆಗಳು	ಕುಟುಂಬ	ಪುರುಷ	ಸ್ತ್ರೀ	ಒಟ್ಟು	ಕುಟುಂಬ ಗಾತ್ರ
೧	ಬಾಗಲಕೋಟೆ	೧೫	೪೪	೨೯	೭೩	೪.೮೬
೨	ಬೆಂಗಳೂರು	೧	೨	೨	೪	೪
೩	ಬೆಳಗಾವಿ	೫೪	೧೨೪	೧೦೫	೨೨೯	೪.೨೪
೪	ಬಿಜಾಪುರ	೧೦೭	೨೨೪	೨೩೩	೪೫೭	೪.೨೮
೫	ದಾವಣಗೆರೆ	೧	೧	೨	೩	೩
೬	ಧಾರವಾಡ	೧೮೨	೩೩೩	೩೫೨	೬೮೫	೩.೭೬
೭	ಗದಗ	೪೯	೧೦೫	೧೦೩	೨೦೮	೪.೨೪
೮	ಹಾವೇರಿ	೨೨	೩೭	೪೨	೭೯	೩.೫೯
೯	ಉತ್ತರ ಕನ್ನಡ	೪೯	೧೨೦	೧೨೨	೨೪೨	೪.೮೭
೧೦	ಕೋಲಾರ	೧	೨	೨	೪	೪
೧೧	ಮೈಸೂರು	೪	೯	೮	೧೭	೪.೨೫
		೪೮೫	೧೦೦೧	೧೦೦೦	೨೦೦೧	೪.೧೨

ವೈವಾಹಿಕ ಸ್ಥಾನಮಾನ

ಕಂಜರಭಾಟರಲ್ಲಿ ವಿವಾಹಿತ ಪುರುಷರು ೪೦೨ ಮತ್ತು ಸ್ತ್ರೀಯರು ೪೩೮, ಅವಿವಾಹಿತ ಪುರುಷರು ೫೭೩ ಮತ್ತು ಸ್ತ್ರೀಯರು ೫೨೧ ಇರುವರು. ಇವರಲ್ಲಿ ವಿಧುರರಿಗಿಂತ ವಿಧವೆಯರ ಪ್ರಮಾಣವು ಅಧಿಕವಾಗಿರುವುದು. ವೈವಾಹಿಕ ಬಂಧನದಿಂದ ಬೇರ್ಪಟ್ಟ ಪುರುಷರೊಬ್ಬರು ದಾಖಲಾಗಿರುವರು(ಕೋಷ್ಟಕ:೨.೭).

ಕೋಷ್ಟಕ:೨.೭ ಕಂಜರಭಾಟರ ವೈವಾಹಿಕ ಸ್ಥಾನಮಾನ

ಸಂ.	ವೈವಾಹಿಕ ಸ್ಥಾನಮಾನ	ಪುರುಷ	ಮಹಿಳೆ	ಒಟ್ಟು
೧	ವಿವಾಹಿತ	೪೦೨	೪೩೮	೮೪೦
೨	ಅವಿವಾಹಿತ	೫೭೩	೫೨೧	೧೦೮೪
೩	ವಿಧುರ, ವಿಧವೆ	೨	೬೬	೬೮
೪	ಬೇರ್ಪಡೆ	೧	--	೧

ಹೆಸರುಗಳು : ಕಂಜರಭಾಟರ ಪುರುಷ ಮತ್ತು ಮಹಿಳೆಯರ ಹೆಸರುಗಳು ಬೇರೆ ಸಮುದಾಯಗಳಿಗಿಂತ ಭಿನ್ನವಾಗಿವೆ.

ಪುರುಷರು : ಮಾನಸಿಂಗ್, ತಾನಸಿಂಗ್, ಬಬಿಸಿಂಗ್, ರೂಪಸಿಂಗ್, ಸಾಗರಸಿಂಗ್, ಪ್ರತಾಪಸಿಂಗ್, ವೀರಸಿಂಗ್, ಅಭಯಸಿಂಗ್, ದೌಲತ್‌ಸಿಂಗ್, ರಾಮಸಿಂಗ್, ಜಿಲೇಸಿಂಗ್, ವಿಜಯಸಿಂಗ್, ದಿಲಾರಖಾ, ಬನಿಯಾ, ಧೀರಿಯಾ, ಭೋಮಾ, ಮೇಧಿಯಾ, ಅಮರಸಿಂಗ್, ದರ್ಶನಸಿಂಗ್, ಗ್ಯಾನಸಿಂಗ್, ಬಲಬೀರ್‌ಸಿಂಗ್, ರಾಜೇಂದ್ರಸಿಂಗ್, ದೇವಸಿಂಗ್, ಜಯಸಿಂಗ್, ಬಬನಸಿಂಗ್, ಗಡಿಯಾಸಿಂಗ್, ನರಸಿಂಗ್, ಶ್ಯಾಮಸಿಂಗ್, ಇಂದ್ರಿಜೀತ್, ಧ್ಯಾನಸಿಂಗ್, ಮೋರಚಂದ, ಕವಿಚಂದ, ತಾರಾಚಂದ, ಹರಿಚಂದ, ರಾಜೇಶ, ರಮೇಶ, ಸುಭಾಷ, ದೀಪಕ, ಸುರೇಶ, ಅಕ್ಕು, ಅನಾರ, ಮೋಹನ, ಸಾವನ, ಕದಮ್, ಲೇಖಿ, ಜಾಸಿಯಾ, ವಜೀರ, ಖಾಜಿಸಿಂಗ್, ಕಪ್ಪಾ, ಸಮಸಿಯಾ, ಗುಲಸಿಂಗ್, ಚನ್ಯಾ, ಮಿಸರಿಯಾ, ತಾತ್ಯಾ, ಮಲಿಯಾ, ಭಾದರ, ಬಾಬು, ಬನಾರಸಿಂಗ್, ಸಿಲ್ಯಾ, ಬಕೀಲ, ಮನ್ನು, ಹಿಂಗು, ಅಪ್ಸರ್, ದೀರಾವ್, ಸಿನ್ಯಾ, ಗೋಪಿ, ಬಾದಲ, ರಾಮದಾಸ್, ಮುಕೇಶ್, ರವೀಂದ್ರ, ಕೈಲಾಸ್, ಸೋಹನ, ಚಂದನ ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಮಹಿಳೆಯರು : ಧಾರಿ, ಗಟಾರಿ, ಜಮ್ಮೋ, ಗಂಗಿ, ಬಾಳೋ, ಗೋಪಿ, ಮೀರಿಯಾಣ, ನೌಸ್ಸಾ, ಮೇಮಿ, ಹುದ್ದಿ, ಜೈಫಾ, ರುಂಗಣಿ, ಭಿಲೋರಿ, ಯಸ್ತ್ರ, ಚೋಲಿ, ಚಿನ್ನಿ, ಕಮಲಾ, ದ್ರೌಪದಿ, ಲಭೋ, ಇಂದೋರಿ, ಹೀರಿ, ಬಿಜಲಿ, ಭೈರವಿ, ಚಮೇಲಿ, ಅಂತ್ರಿ, ಕಸ್ತೋ, ರೋಶನಿ, ಲೈಲಾ, ವಿಮಲಾ, ಕಿಶೋರಿ, ರೇಶ್ಮಿ, ಪನ್ನಾ, ನಿಂಗಾ, ಆಶು, ಜಮುನಾ, ದಯಾ, ಮೀನಾ, ಚಾಂದನಿ, ಗುಲಶನ್, ಅನಸೂಯಾ, ಮದಾಲಸಾ, ಸರಿಯಾ, ಕೇಸರ, ಗೋಪಿ, ಛಮ್ಮಾ, ಜುಲ್ಪಾ, ಲಕ್ಷ್ಮೀ ಮುಂತಾಗಿ ಈ ಸಮುದಾಯದ ಮಹಿಳೆಯರಿಗೆ ನಾಮಕರಣ ಮಾಡಲಾಗುವುದು. ಇವು ಉತ್ತರ ಭಾರತದ ಅದರಲ್ಲೂ ವಿಶೇಷವಾಗಿ ರಾಜಸ್ಥಾನ, ಗುಜರಾತದ ಪಾರಂಪರಿಕ ಹೆಸರುಗಳನ್ನೇ ಹೋಲುತ್ತವೆ. ಸ್ಥಳೀಯರ ಪ್ರಭಾವದಿಂದಾಗಿ ಇತ್ತೀಚಿಗೆ ಆಧುನಿಕ ಹೆಸರುಗಳು ಇಡಲಾಗುತ್ತಿವೆ.

೩

ಸ್ಥಳಾವರಣ ಮತ್ತು ಬ್ರಹ್ಮಾಂಡದ ಪರಿಕಲ್ಪನೆ

ವಸತಿ ವ್ಯವಸ್ಥೆ (ರಹಣಕಾ ಠಿಕಾಣಾ)

ಕಂಜರಭಾಟರು ರಾಜಸ್ಥಾನದಿಂದ ಗುಳೆ ಬಂದ ಸಮುದಾಯ ಇವರಿಗೆ ಇರಲು ಮನೆ ಮಠಗಳು ಹಾಗೂ ಉಳುಮೆ ಮಾಡಲು ಭೂಮಿ ಯಾವುದೂ ಇರಲಿಲ್ಲ. ಅಲೆಮಾರಿಗಳಾದ ಇವರು ಗುಡ್ಡಾಗಾಡು ಪ್ರದೇಶಗಳಲ್ಲಿ ನೀರಿನ ವ್ಯವಸ್ಥೆಯನ್ನು ನೋಡಿ ವಾಸ ಮಾಡುತ್ತಿದ್ದರು. ಇವರು ಸಂಚರಿಸುವಾಗ ೪-೫ ಕುಟುಂಬಗಳ ಗುಂಪಿನೊಂದಿಗೆ ಕೂಡಿ ಕೊಂಡು ಸಂಚರಿಸುತ್ತಿದ್ದರು. ವಾಸವಾಗಿರುವಾಗ ಎಲ್ಲ ಕುಟುಂಬಗಳು ಒಂದೇ ಕಡೆಗೆ ವಾಸ ಇದ್ದು ತಾವು ತಂದಂತಹ ಡೇರಾ (ತಂಬು) ಮೂರು ಕಟ್ಟಿಗೆ ಕೋಲುಗಳನ್ನು ತೆಗೆದು ಕೊಂಡು ಎರಡು ಕೋಲುಗಳನ್ನು ಎದುರು ಬದುರಾಗಿ ಹುಗಿಯುತ್ತಿದ್ದರು. ಉಳಿದಿರುವ ಒಂದು ಕೋಲನ್ನು ಹುಗಿದ ಕೋಲುಗಳಿಗೆ ಮೇಲೆ ಅಡ್ಡ ಕಟ್ಟಿ ಮೇಲೆ ಗುಡಾರ ಅಥವಾ ಡೇರೆ(ತಾಡಪತ್ರಿ, ಪ್ಲಾಸ್ಟಿಕ್ ಪೇಪರ್, ಕೌದಿ, ದಪ್ಪಬಟ್ಟೆ)ಯನ್ನು ಹಾಕಿ ಎಡಬಲಕ್ಕೆ ಗೂಟಗಳನ್ನು ಬಡಿದು ತ್ರಿಕೋನಾಕಾರದ ಗುಡಿಸಲು ಕಟ್ಟಿಕೊಳ್ಳುತ್ತಾರೆ. ಇಂಥ ಗುಡಿಸಲಿಗೆ 'ತಂಬು' ಅಥವಾ 'ಝೂಂಪಡಾ' ಎಂದು ಕರೆಯುತ್ತಾರೆ. ೩-೪ ದಿನಗಳವರೆಗೆ ವಾಸವಾಗಿದ್ದು ನಂತರ ಮುಂದಿನ ಊರಿಗೆ ಅವುಗಳನ್ನು ಕಿತ್ತುಕೊಂಡು ಪ್ರವಾಸ ಕೈಕೊಳ್ಳುವರು. ಈ ರೀತಿ ಈ ಜನ ವಾಸಕ್ಕಾಗಿ ತಾತ್ಕಾಲಿಕವಾದ ಸೂರುಗಳನ್ನು ನಿರ್ಮಿಸಿಕೊಂಡು ತಮ್ಮ ಉಪಜೀವನದ ವಸ್ತುಗಳನ್ನು ಅದರಲ್ಲಿ ಇಟ್ಟು ಅಡಿಗೆ ಮಾಡಿಕೊಳ್ಳಲು ತಂಬು ಹೊರಗಡೆ ಮೂರು ಕಲ್ಲುಗಳನ್ನು ಇರಿಸಿ ಒಲೆಗಳನ್ನು ನಿರ್ಮಿಸಿ ಅಡಿಗೆಯನ್ನು ಮಾಡಿಕೊಳ್ಳುತ್ತಾರೆ. ತಾವು ಸಂಚಾರಿಸುವಾಗ ತಮ್ಮ ಜೊತೆಗೂಡಿ ಬಂದಂತಹ ಸಾಕುಪ್ರಾಣಿಗಳಾದ ಕತ್ತೆ, ಕುದುರೆ, ನಾಯಿ, ಕುರಿ-ಮೇಕೆ, ಕೋಳಿಗಳನ್ನು ತಮ್ಮ ಡೇರಾದ ಎದುರಿನ ಬಯಲಿನ ಸ್ಥಳದಲ್ಲಿ ಕಟ್ಟಿಕೊಳ್ಳುತ್ತಾರೆ. ಇವರು ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಕೂಲಿಯ ನಿಮಿತ್ತ ಅಥವಾ ಭಿಕ್ಷಾಟನೆಗೆ ಹೋಗುವ ಸಮಯದಲ್ಲಿ ಈ ಡೇರಾಗಳಲ್ಲಿ ಉಳಿಸುವ ಚಿಕ್ಕ ಮಕ್ಕಳನ್ನು, ಬಾಣಂತಿಯಾದ ಹೆಣ್ಣುಮಕ್ಕಳು ಹಾಗೂ ವಯಸ್ಸಾದ ವೃದ್ಧರು ನೋಡಿ ಕೊಳ್ಳುತ್ತಾರೆ.

ಸುಗ್ಗಿ ಕಾಲಕ್ಕೆ ಭಿಕ್ಷಾಟನೆಗೆ ಹಳ್ಳಿ ಹಳ್ಳಿಗೆ ಅಲೆಯುತ್ತಾರೆ. ಕಾಳುಕಡಿಗಳನ್ನು ಸಂಗ್ರಹಿಸಿ ವರ್ಷಕ್ಕೆ ಬೇಕಾಗುವಷ್ಟು ಪದಾರ್ಥಗಳನ್ನು ತೆಗೆದಿಟ್ಟು ಉಳಿದ ಹೆಚ್ಚುವರಿ ದವಸಗಳ ಮಾರಾಟವನ್ನು ಮಾಡಿ ಅದರಿಂದ ಇನ್ನಿತರ ಜೀವನಾವಶ್ಯಕ ವಸ್ತುಗಳನ್ನು ಖರೀದಿಸುತ್ತಾರೆ. ಹಲವರು ಹುಲ್ಲಿನಿಂದ ತಯಾರಿಸಿದ ಝೋಪಡಿ ಗುಡಿಸಲುಗಳಲ್ಲಿ ವಾಸವಾಗಿರುತ್ತಾರೆ. ಕೆಲ ಕಡೆಗೆ ಸಣ್ಣ ಸಣ್ಣ ಗೋಡೆಗಳನ್ನು ಕಟ್ಟಿಕೊಂಡು ಮೇಲೆ ಹುಲ್ಲಿನ ಚಪ್ಪರ ಹಾಕಿ ಆಶ್ರಯ ತಾಣವಾಗಿ ಮಾಡಿಕೊಳ್ಳುವರು. ಕಲ್ಲು ಮಣ್ಣಿನಿಂದ ಕಟ್ಟಿದ ಕಚ್ಚಾ ಮನೆಗಳೇ ಇವರ ವಾಸದ ಮನೆ. ಇವುಗಳಿಗೆ ಕಿಟಕಿಗಳಿರುವುದಿಲ್ಲ. ಸಣ್ಣ ಬಾಗಿಲು ಇದ್ದು ಒಳಗೆ ಹೋಗಬೇಕಾದರೆ ಬಾಗಿ ಹೋಗಬೇಕಾಗುತ್ತದೆ. ಕಂಜರಭಾಟರು ವಾಸವಾಗಿರುವ ಸ್ಥಳಗಳಲ್ಲಿ ಸಾಮಾನ್ಯವಾಗಿ ಬೇರೆ ಸಮುದಾಯದವರು ವಾಸವಾಗುವುದಿಲ್ಲ. ಈ ಜನ ಪ್ರತ್ಯೇಕವಾದ ವಸತಿಯ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಇದಕ್ಕೆ 'ಪೇಡಾ' ಎಂದು ಕರೆಯುತ್ತಾರೆ. ಇವರ ಮನೆಗಳು ಹಳೇ ಪದ್ಧತಿಯವು. ಇವಕ್ಕೆ ಗಾಳಿ, ಬೆಳಕು ದೊರೆಯವುದು ದುರ್ಲಭ. ನವೀನವಾದ ಮನೆಗಳನ್ನು ಕಟ್ಟಿಕೊಳ್ಳುವ ಸಾಮರ್ಥ್ಯ ಇವರಲ್ಲಿ ಇಲ್ಲ. ಸ್ವಂತ ಜಾಗಗಳೂ ಇವರಲ್ಲಿ ಅಷ್ಟಾಗಿ ಇಲ್ಲದಿರುವುದು ಕಂಡುಬರುತ್ತದೆ. ಆರ್ಥಿಕ ಪರಿಸ್ಥಿತಿ ಗಂಭೀರ ವಾಗಿರುವುದರಿಂದ ಒಳ್ಳೆಯ ಸುಸಜ್ಜಿತವಾದ ಮನೆಗಳನ್ನು ಹೊಂದಿರುವುದಿಲ್ಲ. ಇವರಲ್ಲಿ ಕೆಲವರು ಇನ್ನೂ ಕಾಡು ಜನರಂತೆ ಜೀವನವನ್ನು ಸಾಗಿಸುವುದನ್ನು ನೋಡಬಹುದು. ಇವರು ನೆರೆ ಹೊರೆಯ ಸಮುದಾಯಗಳೊಂದಿಗೆ ಹೊಂದಿಕೊಂಡು ಇರುವುದಿಲ್ಲ. ಬೇರೆ ಸಮುದಾಯದವರು ಇವರನ್ನು ಒಳ್ಳೆಯ ಭಾವನೆಯಿಂದ ನೋಡುವುದಿಲ್ಲ. ಸಂಶಯಾಸ್ಪದ ರೀತಿಯಲ್ಲಿ ಕಾಣುತ್ತಾರೆ.ಇವರ ಆಚಾರ-ವಿಚಾರಗಳನ್ನು ನೋಡಿದ ಜನರು ಇವರೊಂದಿಗೆ ಹೊಂದಿಕೊಳ್ಳಲು ಇಚ್ಛೆ ಪಡುವುದಿಲ್ಲ. ಹೀಗಾಗಿ ಹೊರಗಿನ ಪರಿಸರಕ್ಕೆ ಹೊಂದಿಕೊಳ್ಳಲು ವಿಳಂಬವಾಗುತ್ತಿದೆ.


ಕಂಜರಭಾಟರು ಇತ್ತೀಚೆಗೆ ಅಲ್ಲಲ್ಲಿ ನೆಲೆನಿಲ್ಲಲ್ಲು ಆರಂಭಿಸಿದ್ದಾರೆ. ಇವರ ಆರ್ಥಿಕ ಪರಿಸ್ಥಿತಿ ಗಂಭೀರವಾಗಿರುವುದರಿಂದ ಗುಡಿಸಲುಗಳಲ್ಲಿ, ಮಣ್ಣಿನಿಂದ ಕಟ್ಟಿದ ಸಣ್ಣಪುಟ್ಟ ತಗಡಿನ ಮನೆ, ಹಂಚಿನ ಮನೆಗಳಲ್ಲಿ ವಾಸವಾಗಿದ್ದಾರೆ. ಮನೆಗಳಿಗೆ ಸರಿಯಾದ ರೀತಿಯಲ್ಲಿ ಕಿಟಕಿ, ಬಾಗಿಲುಗಳು ಇಲ್ಲದೆ ಹಾಗೂ ಸ್ವಂತ ಸ್ಥಳವನ್ನು ಹೊಂದಿರದೆ ಸರ್ಕಾರಿ ಸ್ಥಳಗಳಲ್ಲಿ ಗುಡಿಸಲು, ಚಪ್ಪರವನ್ನು ಹಾಕಿ ಜೀವನ ಸಾಗಿಸುತ್ತಿದ್ದಾರೆ. ಸರ್ಕಾರದವರು ಈ ಸಮುದಾಯದವರಿಗೆ ಮನೆ ಕಟ್ಟಿಕೊಡುವ ಯೋಜನೆಗಳನ್ನು ಅಷ್ಟಾಗಿ ನೀಡದಿರುವುದು ಹಾಗೂ ಇವರ ಬಗ್ಗೆ ಯಾವುದೇ ರೀತಿಯ ಕಾಳಜಿ ಸರ್ಕಾರಕ್ಕೆ ಇಲ್ಲದಿರುವುದು ನಿಜಕ್ಕೂ ಆಶ್ಚರ್ಯವಾಗುವ ಸಂಗತಿಯೇ ಸರಿ. ಬಡತನದಲ್ಲಿ ಹುಟ್ಟಿ ಬಡತನದಲ್ಲಿ ಸಾಯುವ ಈ ಸಮುದಾಯಕ್ಕೆ ಒಂದು ಉತ್ತಮ ನೆಲ ಹಾಗೂ ನೆಲೆ ಇಲ್ಲದೆ ಇರುವುದು ಕಂಡುಬರುತ್ತದೆ. ಕಂಜರಭಾಟರು ನೆಲೆಸುತ್ತಿರುವ ಮನೆಗಳ ಸ್ವರೂಪ ಯಾವ ರೀತಿಯಲ್ಲಿದೆ ಎಂಬುದನ್ನು ಈ ಕೆಳಗೆ ತಿಳಿಸಲಾಗಿದೆ.

ಕೋಷ್ಟಕ: ೩.೧ ಕಂಜರಭಾಟರ ಮನೆಗಳ ಸ್ವರೂಪ

ಕ್ರ.ಸಂ.	ಮನೆಗಳ ಮಾದರಿ	ಒಟ್ಟು
೧	ನಿವೇಶನ, ಮನೆ ಇರದ ನಿರಾಶ್ರಿತರು	೩೯೯
೨	ಗುಡಾರ	೧೧೭
೩	ಗುಡಿಸಲು	೯೫
೪	ತಗಡಿನ ಮನೆಗಳು	೩೪
೫	ಡಾಬಾ, ಡಬ್ಬೆಮನೆ	೧
೬	ಹಂಚಿನ ಮನೆ	೯೯
೭	ಆಶ್ರಯ ಮನೆಗಳು	೮೭
೮	ಬಾಡಿಗೆ	೧೨೯
	ಒಟ್ಟು	೪೮೫

ಕಂಜರಭಾಟರಲ್ಲಿ ನಿವೇಶನಗಳಿರದ, ಮನೆಗಳಿರದ ಕುಟುಂಬಗಳು ೩೯೯ರಷ್ಟಿವೆ. ಹಾಗೇ ಇಂದಿಗೂ ಗುಡಾರಗಳನ್ನು ನಿರ್ಮಿಸಿಕೊಂಡು ಜೀವಿಸುತ್ತಿರುವ ೧೧೭ ಕುಟುಂಬಗಳು ಕಂಡುಬರುತ್ತದೆ. ೯೫ ಕುಟುಂಬಗಳು ಗುಡಿಸಲುಗಳಲ್ಲಿದ್ದರೆ, ಇನ್ನು ನಿರುಪಯುಕ್ತ ಡಬ್ಬಾಗಳನ್ನು ಬಳಸಿ ಒಂದು ಕುಟುಂಬ ಆಸರೆಯನ್ನು ನಿರ್ಮಿಸಿಕೊಂಡಿದೆ. ಹಾಗೂ ೯೯ ಕುಟುಂಬಗಳು ಹಂಚಿನ ಮನೆ ಮತ್ತು ಕೇವಲ ೮೭ ಕುಟುಂಬಗಳು ಸರ್ಕಾರ ರೂಪಿಸುವ ಆಶ್ರಯ ಮನೆಗಳ ಸೌಲಭ್ಯಗಳನ್ನು ಬಳಸಿಕೊಂಡು ಮನೆಗಳನ್ನು ಕಟ್ಟಿಕೊಂಡರೆ, ಇನ್ನೂಳಿದ ೧೨೯ ಕುಟುಂಬಗಳು ಬಾಡಿಗೆ ಮನೆಗಳನ್ನೇ ಆಶ್ರಯಿಸಿಕೊಂಡು ಜೀವಿಸುತ್ತಿರುವುದು ಸಮೀಕ್ಷೆಯಿಂದ ತಿಳಿದುಬರುತ್ತದೆ (ಚಿತ್ರ ಗಮನಿಸಿ).

ಚಿತ್ರ: ೩.೧ ಕಂಜರಭಾಟರ ಮನೆಗಳ ಮಾದರಿ



ಸ್ಥಳಾವರಣ ಮತ್ತು ಬ್ರಹ್ಮಾಂಡದ ಪರಿಕಲ್ಪನೆ

ಸ್ಥಳಾವರಣ : ಕಂಜರಭಾಟರದಲ್ಲಿ ಸ್ಥಳಾವರಣವನ್ನು ಎರಡು ಹಂತಗಳಲ್ಲಿ ಗುರುತಿಸಬಹುದು. ಒಂದು ದಿನನಿತ್ಯದ ಬದುಕಿಗೆ ಸಂಬಂದಿಸಿದ ಸ್ಥಳಾವರಣ, ಇದರಲ್ಲಿ ಮನೆಯ ಆವರಣ, ಹುಟ್ಟು, ಸಾವು ಹಾಗೂ ಅದರ ಮಧ್ಯ ಬರುವ ಎಲ್ಲಾ ಕ್ರಿಯೆಗಳನ್ನು ನಡೆಯುವ ಸ್ಥಳವಾಗಿದೆ. ಹಾಗೇ ದೈವಗಳ ಆಚರಣೆಗಳಿಗೆ ಸಂಬಂಧಿಸಿದ ಸ್ಥಳಾವರಣ ಮತ್ತೊಂದು.

ಕಂಜರಭಾಟರು ಅಲೆಮಾರಿಗಳು ಎಂಬುದನ್ನು ಈ ಮೊದಲೇ ಸೂಚಿಸಿದ್ದೇವೆ. ಹೀಗಾಗಿ ಇವರ ಸ್ಥಳಾವರಣಕ್ಕೆ ಒಂದು ನಿರ್ಧಿಷ್ಟ ನೆಲೆ ಇರದೆ ಅವರು ಎಲ್ಲೆಲ್ಲಿ ವಾಸಿಸುತ್ತಾರೆಯೋ ಅಲ್ಲಲ್ಲಿಯೆ ಸ್ಥಳಾವರಣಗಳು ನಿರ್ಮಾಣಗೊಳ್ಳುತ್ತವೆ. ಬದುಕಿಗೆ ಸಂಬಂಧಿಸಿದ ಸ್ಥಳಾವರಣವು ಅವರ ಗುಡಾರ ಅಥವಾ ಮನೆಗಳಲ್ಲಿ ನಡೆಯುತ್ತವೆ. ಉದಾಹರಣೆಗೆ ಯುವತಿ ಮೈನೆರೆದರೆ ಅವಳನ್ನು ಗುಡಾರದಲ್ಲಿಯೆ ಒಂದು ನಿರ್ಧಿಷ್ಟವಾದ ಪ್ರತ್ಯೇಕ ಸ್ಥಳದಲ್ಲಿ ಕೂರಿಸಲಾಗುತ್ತದೆ. ಅದೇ ರೀತಿ ಜನನಕ್ಕೆ ಸಂಬಂಧಿಸಿದಂತೆಯೂ ಗುಡಾರಗಳಲ್ಲಿಯೇ ಕ್ರಿಯಾ ವಿಧಿಗಳು ನಡೆಯುತ್ತವೆ. ಹಾಗೇ ಸಾವಿಗೆ ಸಂಬಂಧಿಸಿದಂತೆಯೂ ಆಯಾ ಗುಡಾರ, ಮನೆಗಳೇ ಸ್ಥಳಾವರಣಗಳಾಗಿ ನಿರ್ಮಾಣಗೊಳ್ಳುತ್ತವೆ. ಅಂತಹ ಮನೆಗಳನ್ನು ಸೂತಕದ ಮನೆಗಳೆಂದು ಭಾವಿಸಲಾಗುತ್ತದೆ. ಹಾಗೆ ಸೂತಕವನ್ನು ಕಳೆಯಲು ಗುಡಾರ, ಮನೆಗಳನ್ನು ಶುದ್ಧೀಕರಿಸುವ ಕಾರ್ಯ ನಡೆಯುತ್ತದೆ.

ದೈವಕ್ಕೆ ಸಂಬಂಧಿಸಿದ ಸ್ಥಳಾವರಣವು ಕೆಲವೊಮ್ಮೆ ಮನೆಗಳಾಗಿಯೂ, ಕೆಲವೊಮ್ಮೆ ಕಂಜರಭಾಟರು ವಾಸಿಸುವ ಸ್ಥಳದ ಕೇರಿಯು ಆಗಿರುತ್ತದೆ.

ಬ್ರಹ್ಮಾಂಡದ ಪರಿಕಲ್ಪನೆ : ಕಂಜರಭಾಟರಲ್ಲಿ ಇತರ ಅಲೆಮಾರಿ ಸಮುದಾಯಗಳಲ್ಲಿ ಇರುವಂತೆ ಬ್ರಹ್ಮಾಂಡದ ಪರಿಕಲ್ಪನೆ ಇದೆ. ಪೂರ್ವದಲ್ಲಿ ಶಿವನು ಸಂಚರಿಸುತ್ತಾ ಬರುವಾಗ ಭೂಲೋಕವನ್ನು ಆಳಲು ಒಬ್ಬ ಸಮರ್ಥ ವ್ಯಕ್ತಿಬೇಕು. ಅವನಿಂದ ಭೂಲೋಕಕ್ಕೆ ಒಳಿತಾಗ ಬೇಕೆಂದು ಭಾವಿಸಿ ತನ್ನ ಗಣಗಳಲ್ಲಿಯೇ ಒಬ್ಬನನ್ನು ನೀನು ಹೋಗಿ ಭೂಲೋಕವನ್ನು ಆಳು ಎಂದು ನಿರ್ದೇಶಿಸಿದನು. ಶಿವನ ಆಜ್ಞೆಯಂತೆ ಗಣನೊಬ್ಬ ಸಾಂಸಿ ಪ್ರದೇಶಕ್ಕೆ ಬಂದು ಭೂಮಿಯ ಒಡೆಯನಾದನು. ಆಗ ಭೂಮಿಯಲ್ಲಿ ಮಾನವ ಕುಲವೇ ಇರದೆ ಕೇವಲ ಕಾಡು ಪ್ರಾಣಿಗಳು ಮಾತ್ರ ಇದ್ದವು. ಆ ಕಾಡು ಪ್ರಾಣಿಗಳನ್ನು ನಿಯಂತ್ರಿಸುವುದು ಭೂ ಒಡೆಯನಾದ ಗಣನಿಗೆ ತುಂಬಾ ಕಷ್ಟವಾಯಿತಂತೆ, ಅವನು ಶಿವನಿಗೆ ಮೊರೆ ಹೋಗಲು ಗಂಡು ಹೆಣ್ಣು ಎರಡನ್ನು ಸೃಷ್ಟಿಸಿ ಗಣನಿಗೆ ದಯಪಾಲಿಸಿದನಂತೆ, ಅವರೇ ಕಂಜರಭಾಟರ ಕುಲಕ್ಕೆ ಮೂಲದವರು ಎಂದು ತಿಳಿಸುತ್ತಾರೆ.

ಆರ್ಯ ಕುಲ ಪ್ರವೇಶದಿಂದ ಸ್ಥಳೀಯ ಜನ ಅಲ್ಲೋಲ ಕಲ್ಲೋಲವಾಯಿತಂತೆ, ಆಗ ಅವರೆಲ್ಲಾ ತಮ್ಮನ್ನು ಆರ್ಯರಿಂದ ಕಾಪಾಡುವಂತೆ ಮಹಾಕಾಳಿಗೆ ಬೇಡಿಕೊಂಡರಂತೆ

ಮಹಾಳಿಯು ಒಬ್ಬ ಮನುಷ್ಯನನ್ನು ಸೃಷ್ಟಿಸಿ ಅವನ ಮೂಲಕ ಆರ್ಯರನ್ನು ಸೆದೆ ಬಡಿದಳಂತೆ ಆ ವ್ಯಕ್ತಿಯೇ ಕಂಜರಭಾಟರ ಮೂಲದವನು ಎಂಬ ಐತಿಹ್ಯ ಇವರಲ್ಲಿದೆ.

ಶಿವನು ಭೂಮಿಯನ್ನು ಸೃಷ್ಟಿಸಿ ಅವರಲ್ಲಿ ನೆಲ ನೀರುಗಳನ್ನು ಕಾಣಿಸಿದನಂತೆ, ಅವುಗಳಿಂದ ಜೀವಿಗಳು ಹುಟ್ಟುವಂತೆ ಮಾಡಿದನಂತೆ ತರುವಾಯ ಆ ಜೀವಿಗಳಿಗೆ ಅವಶ್ಯಕವಾದ ಗಾಳಿ, ಬೆಳಕು, ಮಳೆ ಬಿಸಿಲು ನೀಡಲು ಸೂರ್ಯ ಚಂದ್ರರನ್ನು ಸೃಷ್ಟಿಸಿದನಂತೆ ಹೀಗೆ ಇನ್ನು ಹಲವಾರು ಕಥೆ ಐತಿಹ್ಯಗಳು ಮುಂದುವರಿಯುತ್ತವೆ.





೪

ಬಂಧುತ್ವ ಮತ್ತು ವಿವಾಹ

ಕುಲ ಗೋತ್ರಗಳು

ಅಲೆಮಾರಿ ಸಮುದಾಯಗಳ ಸಾಮಾಜಿಕ ಸಂಘಟನೆ ವಿಶಿಷ್ಟ ರೀತಿಯಲ್ಲಿರುತ್ತದೆ. ಸಾಮಾನ್ಯವಾಗಿ ಬುಡಕಟ್ಟುಗಳು ತಮ್ಮ ವಂಶದ ಪರಿಶುದ್ಧತೆಗಾಗಿ ಕುಲಗೋತ್ರ, ಬೆಡಗುಗಳನ್ನು ರೂಪಿಸಿಕೊಂಡಿರುತ್ತಾರೆ. ಕಂಜರಭಾಟ ಸಮುದಾಯದಲ್ಲಿ ಸಹ ಬೆಡಗುಗಳನ್ನು ಕಾಣಬಹುದಾಗಿದೆ.

ಕಂಜರಭಾಟ ಸಮಾಜದಲ್ಲಿ ವೈವಾಹಿಕ ಸಂಬಂಧ ಬೆಳೆಸುವಾಗ ಬೆಡಗಳ ಬಗೆಗೆ ವಿಚಾರಿಸಲಾಗುವುದು. ಇವರಲ್ಲಿ 'ಮಾಲ್ಹಾ' ಮತ್ತು 'ಬಿಡ್ಡು' ಎಂಬ ಖಾನದಾನಗಳಿರುವವು. ಈ ಎರಡೂ ಪಂಗಡಗಳನ್ನು ಸೇರಿಸಿ ಸೈಂಸಮಲ್ ಎಂದು ಕರೆಯುತ್ತಾರೆ. ಮಾಲ್ಹಾದಲ್ಲಿ ಒಂಭತ್ತು ಜಾತಿ ಅಥವಾ ಬೆಡಗುಗಳಿದ್ದು ಇವರೆಲ್ಲರು ಅಣ್ಣ-ತಮ್ಮಂದಿರರು. ಇವರಲ್ಲಿ ವೈವಾಹಿಕ ಸಂಬಂಧಗಳನ್ನು ಬೆಳೆಸಲು ಬರುವುದಿಲ್ಲ. ಒಂದು ವೇಳೆ ಅವರು ತಮ್ಮ ತಮ್ಮೊಳಗೆ ಸಂಬಂಧ ಬೆಳೆಸಿಕೊಂಡರೆ ಅದಕ್ಕೆ ಸಮುದಾಯದಲ್ಲಿ ಮಾನ್ಯತೆ ದೊರೆಯುವುದಿಲ್ಲ. ಅಂಥ ಸಂಬಂಧಕ್ಕೆ ಪಾಪವೆಂದು ಪರಿಗಣಿಸಲಾಗುವುದು. ಅದೇ ರೀತಿ 'ಬಿಡ್ಡು' ಖಾನದಾನದಲ್ಲಿಯೂ ಒಂಭತ್ತು ಜಾತಿ ಅಥವಾ ಬೆಡಗುಗಳುಂಟು. ಇವರೆಲ್ಲರೂ ಸಹ ಸಹೋದರ ಸಂಬಂಧಿಗಳಾಗಿದ್ದಾರೆ. ಇವರಲ್ಲಿಯೂ ವೈವಾಹಿಕ ಸಂಬಂಧಗಳು ಮಾಡಲು ಬರುವುದಿಲ್ಲ. ಒಂದು ವೇಳೆ ಇವರಲ್ಲಿ ಅನೈತಿಕ ಸಂಬಂಧವಾಗಲಿ, ವೈವಾಹಿಕ ಸಂಬಂಧವಾದರೆ ಸಮುದಾಯದಲ್ಲಿ ಅದಕ್ಕೆ ಅನುಮತಿ ಇಲ್ಲ. ಇಂಥ ಸಂಬಂಧಗಳು ಪಾಪವೆಂದೇ ಪರಿಗಣಿಸಲಾಗುವುದು. ಮಾಲ್ಹಾ ಖಾನದಾನದವರು ಬಿಡ್ಡು ಖಾನದಾನದವರ ಬೆಡಗುಗಳ ಜೊತೆಗೆ ಪರಸ್ಪರ ವೈವಾಹಿಕ ಸಂಬಂಧವನ್ನು ಬೆಳೆಸಿ ವಂಶಾವಳಿ ಬೆಳವಣಿಗೆ ಮಾಡಿಕೊಳ್ಳುತ್ತಾರೆ. ಕಂಜರಭಾಟರ ಖಾನದಾನಗಳಲ್ಲಿಯ ಬೆಡಗುಗಳು ಹೀಗಿವೆ.

ಮಾಲ್ಹಾ ಖಾನದಾನ	ಬಿಡ್ಡು ಖಾನದಾನ
೧. ತಮಾಯಚಿ (ಬಾಗಡ)	೧. ಗಾಗಡ
೨. ಮೀಣಾ	೨. ಬಾಟ್ಟು
೩. ಅಭುವಾ	೩. ಕರಾಳಾ

೪. ಗುಮಾನೆ
೫. ಕಾಂಬಳೆ
೬. ಮಲಕಿಯಾ
೭. ಭಜರಂಗ
೮. ಗಾರಿಯೆ
೯. ಡುಂಗರ

೪. ರವಳೆ
೫. ಟಿಡ್ಡಾ
೬. ಇಂದರಾ
೭. ಮಾಥರ
೮. ನೆಥಲೆ
೯. ಘುಮಂಡಿ

ಇವು ಕಂಜರಭಾಟ ಸಮುದಾಯದ ಮುಖ್ಯ ಪಂಗಡಗಳು ಈ ಪಂಗಡಗಳು ಭಾರತದಾದ್ಯಂತ ಪಸರಿಸಿರುವ ಕಂಜರಭಾಟರಲ್ಲಿ ಕಂಡುಬರುತ್ತವೆ.

ವಿವಾಹ (ಬ್ಯಾಹ)

ಆಯ್ಕೆ ಪ್ರಕ್ರಿಯೆ : ಭಾರತ ಸರಕಾರ ಗಂಡು ಮಕ್ಕಳಿಗೆ ೨೧ ವರ್ಷ, ಹೆಣ್ಣು ಮಕ್ಕಳಿಗೆ ೧೮ ವರ್ಷ ತುಂಬಿದ ಮೇಲೆ ಲಗ್ನ ಮಾಡಿಕೊಳ್ಳಲು ಸಂವಿಧಾನಬದ್ಧವಾಗಿ ಅವಕಾಶ ಕಲ್ಪಿಸಿದೆ. ಆದರೆ ಅಲೆಮಾರಿ ಜನ ತಮ್ಮ ತಲೆಯ ಮೇಲಿನ ಭಾರವನ್ನು ಕಳೆದುಕೊಳ್ಳುವ ಸಲುವಾಗಿ ಹೆಣ್ಣು ಮಗಳು ಋತುಮತಿಯಾದರೆ ಸಾಕು ೧೪-೧೫ನೇ ವಯಸ್ಸಿನಲ್ಲಿಯೆ ಮದುವೆ ಮಾಡಿಬಿಡುತ್ತಾರೆ. ಈ ಪದ್ಧತಿ ಇಂದಿಗೂ ನಡೆಯುತ್ತಿದೆ. ಅಂಧಕಾರದಲ್ಲಿ ಬೆಳೆದ ಈ ಜನರು ಮಗುವಿನ ಮುಂದಿನ ಭವಿಷ್ಯದ ಬಗೆಗೆ ವಿಚಾರಿಸದೆ ಸಣ್ಣ ವಯಸ್ಸಿನಲ್ಲಿ ಮದುವೆ ಮಾಡುತ್ತಾರೆ. ಕಂಜರಭಾಟರಲ್ಲಿ ಅಕ್ಕನ ಮಗಳನ್ನು ಮದುವೆ ಮಾಡಿಕೊಳ್ಳುವುದಿಲ್ಲ. ಸಂಬಂಧ ಬೆಳೆಸಬೇಕಾದರೆ ಬೆಡಗು ನೋಡಿ ಸಂಬಂಧ ಬೆಳೆಸುತ್ತಾರೆ. ಮ್ಹಾಲಾ ಮತ್ತು ಬಿಡ್ಡು ಎರಡು ಖಾನದಾನಗಳಲ್ಲಿಯ ಬೇಸ ಬೆಡಗುಗಳೊಂದಿಗೆ ವಿವಾಹ ಮಾನ್ಯವಿರುವುದು. ಮ್ಹಾಲಾದವರು ಬಿಡ್ಡುದವರ ಹೆಣ್ಣು ಕೊಡುವ ತಕ್ಕೊಳ್ಳುವ ಸಂಬಂಧ ಮಾಡುತ್ತಾರೆ. ಒಂದು ವೇಳೆ ಒಂದೇ ಬೆಡಗಿನೊಂದಿಗೆ ವಿವಾಹ, ಅನೈತಿಕ ಸಂಪರ್ಕದಿಂದ ಮಕ್ಕಳಾದರೆ ಅವರಿಗೆ ಸಮುದಾಯದಿಂದ ಬಹಿಷ್ಕಾರ ಹಾಕಲಾಗುತ್ತದೆ. ಮುಂದೆ ಅವರು ದೈವದವರನ್ನು ಹಿಡಿದು ಸಂಪ್ರದಾಯದಂತೆ ವಿಧಿ-ವಿಧಾನಗಳನ್ನು ಮಾಡಿ ದೈವದ ದಂಡವನ್ನು ಕಟ್ಟಿ ಜಾತಿಯಲ್ಲಿ ಪ್ರವೇಶ ಪಡೆಯಬೇಕಾಗುತ್ತದೆ.

ನಿಶ್ಚಿತಾರ್ಥ (ಮಾಂಗ) : ಕಂಜರಭಾಟರಲ್ಲಿ ನಿಶ್ಚಯವಾಗದ ಮದುವೆಗೆ ಅನುಮತಿ ದೊರೆಯುವುದಿಲ್ಲ. ಗಂಡಾಗಲಿ, ಹೆಣ್ಣಾಗಲಿ ತನ್ನ ಸಂಗಾತಿಯನ್ನು ಆಯ್ಕೆ ಮಾಡಬೇಕಾದರೆ ಖಾನದಾನಗಳಲ್ಲಿಯ ಬೆಡಗುಗಳನ್ನು ನೋಡುತ್ತಾರೆ. ಕೆಲವರು ನಿಶ್ಚಯಕ್ಕಿಂತ ಪೂರ್ವದಲ್ಲಿಯೇ ಪ್ರೇಮಿಸಿ ತಮ್ಮ ಕುಟುಂಬದ ಹಿರಿಯರಿಗೆ ತಿಳಿಸುತ್ತಾರೆ. ಆಗ ಗಂಡಿನ ಕಡೆಯವರಿಗೆ ವಿಚಾರಿಸಿ ಸಮುದಾಯದ ದೈವದವರನ್ನು ಹೆಣ್ಣಿನವರ ಮನೆಗೆ ಕರೆದುಕೊಂಡು ಹೋಗುತ್ತಾರೆ. ಇನ್ನು ಕೆಲವರು ತಮ್ಮ ಮಗನಿಗೆ ಹೆಣ್ಣು ನೋಡಲು ಊರೂರು ಸಂಚಾರಿಸುತ್ತಾರೆ. ಹೆಣ್ಣು ನೋಡಲು ಯಾವುದೇ ತರಹ ಬಂಧಿಗಳು ಇರುವುದಿಲ್ಲ. ಅವರು ಹೆಣ್ಣು ನೋಡಿ ತಮಗೆ ಒಪ್ಪಿಗೆಯಾದರೆ ಹೆಣ್ಣಿನವರ ಜೊತೆಗೆ ಸಂಪರ್ಕ ಬೆಳೆಸಿ ನಿಮ್ಮ

ಮಗಳು ನಮ್ಮ ಮಗನಿಗೆ ಒಪ್ಪಿಗೆ ಆಗಿದೆ. ತಾವು ಒಪ್ಪಿದರೆ ನಾವು ದೈವದವರನ್ನು ಕರೆದುಕೊಂಡು ಮಾತುಕತೆಗೆ ಬರುತ್ತೇವೆ ಎಂದು ಕೇಳುತ್ತಾರೆ. ಹೆಣ್ಣಿನವರು ಒಪ್ಪಿದರೆ ಗಂಡಿನವರು ತಮ್ಮ ಬಂಧುಬಳಗದವರಿಗೆ ಹಾಗೂ ದೈವದವರಿಗೆ ಕರೆದುಕೊಂಡು ಹೆಣ್ಣಿನ ಮನೆಗೆ ಬರುತ್ತಾರೆ. ನಿಶ್ಚಯ ಕಾರಕಣಕ್ಕಾಗಿ ಪಂಚರನ್ನು ಕೂಡಿಸಲು ಎರಡೂ ಕಡೆಯವರು ದೈವಕ್ಕೆ ತಲಾ ಐವತ್ತು, ಐವತ್ತು ರೂಪಾಯಿಗಳನ್ನು ಕೊಡುತ್ತಾರೆ. ದೈವದವರೆಲ್ಲರು ಹೆಣ್ಣಿನ ಮನೆಗೆ ಬಂದು ಸೇರುವರು. ಗಂಡಿನವರು ತಮ್ಮ ಮನೆಯಿಂದ ಇಲ್ಲವೆ ತಮ್ಮ ಅಣ್ಣ ತಮ್ಮಂದಿರ ಮನೆಯಿಂದ ಡೋಲಕ ವಾದ್ಯದೊಂದಿಗೆ ಹಾಡುತ್ತ ಕುಣಿಯುತ್ತ ಹೆಣ್ಣಿನವರ ಮನೆಗೆ ಬರುತ್ತಾರೆ. ಅಲ್ಲಿ ಎಲ್ಲರೂ ಸೇರಿದಾಗ ನಮಗೆ ಇಲ್ಲಿ ಏತಕ್ಕೆ ಕರೆದು ಕೊಂಡು ಬಂದಿರಿ? ಎಂದು ದೈವದವರು ಗಂಡಿನವರಿಗೆ ಕೇಳುತ್ತಾರೆ. ಆಗ ಗಂಡಿನವರ ಮುಖ್ಯಸ್ಥ ನಮ್ಮ ಮಗನಿಗೆ ಇವರ ಮಗಳು ಒಪ್ಪಿಗೆಯಾಗಿದೆ. ನಮ್ಮ ಮಗನಿಗೆ ಮಗಳು ಕೊಡಲು ಒಪ್ಪಿದರೆ ಮುಂದಿನ ಮಾತುಗಳನ್ನು ಮುಂದುವರೆಸುತ್ತೇವೆ ಎಂದು ಹೇಳುತ್ತಾರೆ. ಇದನ್ನು ಕೇಳಿ ಹೆಣ್ಣಿನ ಕಡೆಯ ಹಿರಿಯರಿಗೆ "ನಿಮ್ಮ ಮಗಳು ಇವರಿಗೆ ಒಪ್ಪಿಗೆಯಾಗಿದೆ, ನೀವು ನಿಮ್ಮ ಮಗಳನ್ನು ಇವರ ಮಗನಿಗೆ ಕೊಡಲು ಒಪ್ಪಿಗೆ ಇದೆಯೇ" ಎಂದು ದೈವದವರು ಕೇಳುತ್ತಾರೆ. ಹೆಣ್ಣಿನವರಿಗೆ ಒಪ್ಪಿಗೆ ಇದ್ದರೆ ದೈವದವರ ಸಮಕ್ಷಮ ಒಪ್ಪಿಗೆ ಇದೆ ಎಂದು ಹೇಳುತ್ತಾರೆ. ಎರಡೂ ಕಡೆಯವರು ಒಪ್ಪಿದ ಮೇಲೆ ಅವರ ಖಾನದಾನ ಮತ್ತು ಬೆಡಗುಗಳ ಬಗೆಗೆ ವಿಚಾರಿಸಿ ನಿಶ್ಚಯ ಕಾರ್ಯದ ಮಾತುಕತೆ ಪ್ರಾರಂಭವಾಗುತ್ತವೆ. ಸಮಾಜದ ನಿಯಮಕ್ಕನುಸಾರವಾಗಿ ಇಂದು ಎರಡೂ ಮನೆತನಗಳ ಸಂಬಂಧ ನಿಶ್ಚಿತಾರ್ಥ ಕಾರ್ಯ ನಡೆಯುವುದು. ಮೊದಲು ದೈವದವರು ಎರಡು ರೂಪಾಯಿ ಪಂಚಾಯಿತಿಯ ಶುಲ್ಕ ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ಎರಡು ಕಡೆಯವರಿಂದ ೫೦೦ ರೂಪಾಯಿಗಳು ಪಂಚಾಯಿತಿ ಶುಲ್ಕ ಪಡೆದು ಮುಂದಿನ ಮಾತುಕತೆ ಪ್ರಾರಂಭ ಮಾಡುತ್ತಾರೆ. ಮೊದಲು ಹೆಣ್ಣಿನ ಬೆಲೆಯನ್ನು ಕಟ್ಟುತ್ತಾರೆ. ೨-೩ ನೂರು ವರ್ಷಗಳ ಹಿಂದೆ ಹೆಣ್ಣಿನ ಬೆಲೆ ೧೨೦೦ ರೂಪಾಯಿಗಳವರೆಗೆ ಕಟ್ಟಿದ್ದರಂತೆ. ಈ ಪರಂಪರೆ ಇಂದಿಗೂ ನಡೆದಿದೆ. ಅದರಲ್ಲಿ ಮದುವೆ ಸಮಯಕ್ಕೆ ೫೨೫ ರೂಪಾಯಿ ತೆರ ನೀಡಬೇಕು. ಗಂಡಿನವರು ಅತ್ತೆಗೆ ಏಳು ಸೀರೆಗಳನ್ನು ಕೊಡಬೇಕು. ಮದುಮಗಳ ಅಕ್ಕ-ತಂಗಿಯರಿಗೆ ಬಳೆಯನ್ನುಡಿಸಬೇಕು. ಮದುವೆಯ ಖರ್ಚು ತಲಾ ಎರಡು ಕುಟುಂಬಗಳು ಅರ್ಧ ಅರ್ಧವಾಗಿ ನೋಡಿಕೊಳ್ಳಬೇಕು. ಇಂದು ನಿಮ್ಮ ನಿಶ್ಚಯ ಕಾರ್ಯವಾಯಿತು. ಒಂದು ವೇಳೆ ಬೇರೆಯವರ ಮಾತು ಕೇಳಿ ನಿಶ್ಚಯಕಾರ್ಯ ಹೆಣ್ಣಿನವರು ಮುರಿದರೆ ನಿಮಗೆ ೫೦೦ ರೂ. ದಂಡ ಹಾಗೂ ದೈವದವರು ಯೋಗ್ಯ ಕ್ರಮಕ್ಕೈಗೊಳ್ಳುವರು. ಇದರಂತೆ ಗಂಡಿನವರು ನಿಶ್ಚಯ ಕಾರ್ಯ ಮುರಿದರೆ ಇವರಿಗೂ ಮೇಲಿನಂತೆ ಕ್ರಮಕ್ಕೈಗೊಳ್ಳಲಾಗುವುದು ಎಂದು ದೈವದವರು ತಾಕಿತು ಪಡಿಸಿ ನಿಶ್ಚಯದ ಕಾರ್ಯಕ್ರಮಗಳನ್ನು ಪ್ರಾರಂಭಿಸುವರು.

ಗಂಡಿನವರು ಹೆಣ್ಣುಮಗಳಿಗೆ ಹೊಸ ಸೀರೆಯನ್ನು ಉಡಿಸಿ ಹಸಿರು ಬಳೆಗಳನ್ನು ತೊಡಿಸಿ

ಹುಡುಗ ಹುಡುಗಿಗೆ ಮಣೆಯ ಮೇಲೆ ಕೂರಿಸಿ ಹುಡುಗನ ಕೈಯಿಂದ ಹುಡುಗಿಯ ಹಣೆಗೆ ಕುಂಕುಮ ಹಚ್ಚಿಸುವರು. ಮುತ್ತೈದೆಯರು ಆರತಿ ಮಾಡಿ ಎಲ್ಲರಿಗೂ ಸಕ್ಕರೆಯನ್ನು ಹಂಚುವರು. ಇದರ ಜೊತೆಗೆ ಗಾಯನ, ನೃತ್ಯಗಳೊಂದಿಗೆ ಈ ನಿಶ್ಚಿತಾರ್ಥ ಕಾರ್ಯವು ನಡೆಯುವುದು.

ವಧುದಕ್ಷಿಣೆ (ತೆರ) : ಕಂಜರಭಾಟ ಸಮುದಾಯದಲ್ಲಿ ವರದಕ್ಷಿಣೆಯ ಪದ್ಧತಿ ಇರುವುದಿಲ್ಲ. ಮದುಮಗ ಬೇಕಾದಷ್ಟು ಶ್ರೀಮಂತನಿರಲಿ, ವಿದ್ಯಾವಂತನಿರಲಿ, ಉಚ್ಚದರ್ಜೆಯ ಉದ್ಯೋಗದಲ್ಲಿರಲಿ, ರಾಜಕಾರಣಿ ಇರಲಿ ಅವರು ವರದಕ್ಷಿಣೆಯ ಅಪೇಕ್ಷೆ ಮಾಡುವುದಿಲ್ಲ. ವರದಕ್ಷಿಣೆಯ ಪದ್ಧತಿ ಈ ಸಮಾಜದಲ್ಲಿ ಇಲ್ಲ. ಗಂಡಿನವರು ಮದುಮಗಳಿಗೆ ೫೦೫ ರೂಪಾಯಿ ತೆರ ಕೊಡುತ್ತಾರೆ. ಈ ಪದ್ಧತಿ ಪೂರ್ವಜರಿಂದ ನಡೆದು ಬಂದ ಸಂಪ್ರದಾಯವಾಗಿದೆ.

ವಿವಾಹದ ಬಗೆಗಳು : ಈ ಸಮುದಾಯದಲ್ಲಿ ಪಂಚರ ಸಮಕ್ಷಮ ಮದುವೆ ಆದರೆ ಅದು ನಿಜವಾದ ಮದುವೆಯಾಗಿರುತ್ತದೆ. ಅದಕ್ಕೆ ಸಮುದಾಯದಲ್ಲಿ ಮಾನ್ಯತೆ ದೊರೆಯುವುದು. ಏಕೆಂದರೆ ದೈವದವರು ಸಮುದಾಯದ ಪದ್ಧತಿ, ವಿಧಿಗಳಿಗನುಸಾರವಾಗಿ ಮದುವೆಯನ್ನು ಮಾಡುತ್ತಾರೆ. ಕೆಲ ಯುವಕ-ಯುವತಿಯರು ಮನೆಯ ಹಿರಿಯರ ಮಾತು ಕೇಳದೆ ಗುಡಿಗುಂಡಾರಗಳಲ್ಲಿ ಮದುವೆ ಮಾಡಿಕೊಂಡರೆ ಅಥವಾ ಕೆಲವರು ತಮ್ಮ ಇಚ್ಛೆಯಿಂದ ಕೋರ್ಟ ಕಛೇರಿಗಳಲ್ಲಿ ನೋಂದಾವಣಿಮಾಡಿ ಮದುವೆ ಮಾಡಿಕೊಂಡರೆ ಅವರಿಗೆ ಸಮುದಾಯದಲ್ಲಿ ಮಾನ್ಯತೆ ದೊರೆಯುವುದಿಲ್ಲ. ಸಮುದಾಯದ ದೈವದ ಎದುರಿಗೆ ಆದ ವಿವಾಹವೇ ನಿಜವಾದ ವಿವಾಹವಾಗಿದೆ ಎಂದು ಪರಿಗಣಿಸುತ್ತಾರೆ.

ಮದರಂಗಿ (ಮೆಹಂದಿ) : ಮದುವೆಯ ಮೊದಲನೆಯ ದಿನ ಮದರಂಗಿ ಕಾರ್ಯಕ್ರಮ ನಡೆಯುವುದು. ಈ ಕಾರ್ಯಕ್ರಮ ಮೊದಲು ನಡೆಯುತ್ತಿರಲಿಲ್ಲ. ಇತ್ತೀಚಿಗೆ ಈ ಕಾರ್ಯ ಕ್ರಮಗಳನ್ನು ಪ್ರಾರಂಭಿಸಿದ್ದಾರೆ. ಮದರಿಂಗಿ ಕಾರ್ಯಕ್ರಮ ರಾತ್ರಿ ನಡೆಯುತ್ತದೆ. ಅಂದು ಹಾಡು, ನೃತ್ಯಗಳೊಂದಿಗೆ ಮದುಮಕ್ಕಳಿಗೆ ಮಣೆಯ ಮೇಲೆ ಕೂಡಿಸುವರು. ಮದುಮಗಳ ಅಕ್ಕ-ತಂಗಿಯರು ಮದುಮಗನಿಗೆ ಕಾಡಿಸಿ ಹಣವನ್ನು ವಸೂಲ ಮಾಡಿ ಅವನ ಕೈಗೆ ಮದರಂಗಿಯನ್ನು ಹಚ್ಚುವರು. ಈ ಕಾರ್ಯದಲ್ಲಿ ಎರಡೂ ಕಡೆಯ ಕುಟುಂಬಗಳು ಹಾಗೂ ಸಮುದಾಯದ ಹಿರಿಯರು ಉಪಸ್ಥಿತಿಯಲ್ಲಿರುವರು.

ವಿವಾಹ (ಬ್ಯಾಹ) : ಮಾನವನ ಬದುಕಿನಲ್ಲಿ ಮದುವೆ ಎನ್ನುವುದೊಂದು ಮಹತ್ವದ ಘಟ್ಟ. ಕಂಜರಭಾಟ ಸಮುದಾಯದಲ್ಲಿ ಮದುವೆ ಹೆಣ್ಣಿನ ಮನೆಯ ಮುಂದೆ ನಡೆಯುವುದು. ಮದುಮಗಳ ಮನೆಯ ಮುಂದೆ ದೊಡ್ಡ ಹಂದರ ಹಾಕುವರು. ಮದು ಮಗನ ಮನೆಯ ಮುಂದೆ ಸಣ್ಣ ಹಂದರ ಹಾಕುವರು. ಹಂದರ ಹಾಕುವಾಗ ಅವರ ಮನೆತನದ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಮಾಡಲು ಅವರ ಕುಲದ ಗುರುಗಳು (ಗೊಡ್ಡಿವಾನ) ಇರುತ್ತಾರೆ. ಅವರಿಗೆ ಒಂದು ರೂಪಾಯಿ ನಾಲ್ಕಾಣೆ ಕೊಟ್ಟು ಹಂದರದ

ತಗ್ಗು ಅವರ ಕೈಯಿಂದ ತೋಡಿಸಿ ಹಂದರ ಹಾಕುತ್ತಾರೆ. ಅಂದು ಮದುವೆಯ ಮನೆಯಲ್ಲಿ ಎಡಬಿಡದ ಸಂಭ್ರಮವೇ ಸಂಭ್ರಮ. ಎಲ್ಲರೂ ಒಂದೊಂದು ಕೆಲಸದಲ್ಲಿ ತೊಡಗುತ್ತಾರೆ. ಮೊದಲು ತಮ್ಮ ಕುಲದೇವತೆಯ ಪೂಜೆಯನ್ನು ಮಾಡುತ್ತಾರೆ. ಮೊದಲು ವರನ ಮನೆಯಲ್ಲಿ ವರನಿಗೆ ಮುತ್ತೈದೆಯರು, ಮನೆಯವರು ಹಾಗೂ ಕುಲಸ್ಥರ ಪ್ರಮುಖ ಮಹಿಳೆಯರು ಸೇರಿ ಅರಿಷಿಣ ಹಚ್ಚಿ, ಮದುಮಗನಿಗೆ ಸ್ನಾನ ಮಾಡಿಸುವರು. ನಂತರ ತಂದಿರುವ ಹೊಸ ಬಟ್ಟೆಗಳಾದ ಧೋತರ, ಅಂಗಿ, ಕೋಟ ಧರಿಸಿ ತಲೆಯ ಮೇಲೆ ಪಗಡಿ ಕಟ್ಟುವರು. ಹೆಣ್ಣು ಮಕ್ಕಳು ಮದುವೆಯ ಹಾಡುಗಳನ್ನು ಹಾಡುತ್ತಾ ಮದುಮಗನಿಗೆ ಶೃಂಗರಿಸುವರು. ಮದುಮಗನ ಅತ್ತಿಗೆ ಕೈಗೆ ಎಲೆ, ಅರಿಷಿಣ ಬೇರಿನ ಕಂಕಣವನ್ನು ಕಟ್ಟುವರು. ಅವಳಿಗೆ ಒಂದು ರೂಪಾಯಿ ನಾಲ್ಕಾಣೆಯನ್ನು ಕೊಡುವರು. ಕಣ್ಣಿಗೆ ಕಾಡಿಗೆ, ಹಣೆಗೆ ತಿಲಕ ಹಚ್ಚುವರು. ಈ ರೀತಿ ಮದುಮಕ್ಕಳನ್ನು ಸಿಂಗರಿಸಿ ನಂತರ ಮದುಮಗನ ದೊಡ್ಡಪ್ಪ ಇಲ್ಲವೇ ಚಿಕ್ಕಪ್ಪ ಹೆಗಲ ಮೇಲೆ ಹೊತ್ತು ಮದುವೆ ಮಂಟಪಕ್ಕೆ ತಂದು ಮಣೆಯ ಮೇಲೆ ಕೂರಿಸುವನು. ಅವನಿಗೂ ಸಹ ಒಂದು ರೂಪಾಯಿ ನಾಲ್ಕಾಣೆಯನ್ನು ನೀಡಲಾಗುತ್ತದೆ. ದೈವದವರು ಮದುಮಗನ ಮುಂದೆ ಬಂದು ಕುಳಿತುಕೊಳ್ಳುವರು. ಅವರ ಮುಂದೆ ಎಲೆ ಅಡಿಕೆ, ತಂಬಾಕು ತುಂಬಿದ ಹರಿವಾಣ ಇಡಲಾಗಿರುತ್ತಧೆ. ಇದಲ್ಲದೆ ಮದುಮಗಳ ತಾಯಿಗೆ ಕೊಡಬೇಕಾದ ಏಳು ಸೀರೆಗಳನ್ನು ಇಟ್ಟಿರುವ ತಟ್ಟೆ ಮತ್ತು ಆರತಿಯನ್ನು ಮದುಮಗನ ಮಗ್ಗಲಿಗೆ ತಂದು ಇಡುತ್ತಾರೆ.

ಇನ್ನೊಂದು ಕಡೆಗೆ ಮದುಮಗಳಿಗೆ ಹಸಿರು ಬಳೆಗಳನ್ನು ತೊಡಿಸಿ ಮುತ್ತೈದೆಯರು ಅರಿಷಿಣ ಹಚ್ಚಿ, ಸ್ನಾನ ಮಾಡಿಸಿ ಕನ್ಯೆಗೆ ತೊಡಿಸಬೇಕಾದ ವಸ್ತ್ರಾಭರಣಗಳನ್ನು ತೊಡಿಸುವರು. ಮದುಮಗಳಿಗೆ ಹೊಸಬಾಳಿನ ಉತ್ಸಾಹ ಇದ್ದರೂ ಆ ಹೊಸ ಬಾಳಿನ ಕಲ್ಪನೆ ಅವಳ ಹೃದಯವನ್ನು ಹಿಂಡಿ ಬಿಡುತ್ತದೆ. ಏಕೆಂದರೆ ನಾಳೆ ನಾನು ನನ್ನ ಮನೆಯನ್ನು ಬಿಟ್ಟು ಹೊಸ ಮನೆಗೆ ಹೋಗುತ್ತೇನೆ. ಕಾಲಿನಲ್ಲಿ ಕಾಲುಂಗರ, ಕೊರಳಲ್ಲಿ ಬೊರಮಾಳ, ಕಿವಿಯಲ್ಲಿ ಝುಮಕಿ, ಕಾಲಿನಲ್ಲಿ ಬೆಳ್ಳಿ ಚೈನ ಮುಂತಾದ ಆಭರಣಗಳನ್ನು ಹಾಕಿ ಸಿಂಗರಿಸುವರು. ಮದುಮಗಳ ಅತ್ತಿಗೆ ಹೆಣ್ಣಿನ ಕೈಗೆ ಎಲೆ ಅರಿಷಣ ಬೇರಿನ ಕಂಕಣವನ್ನು ಕಟ್ಟುವಳು. ಅವಳಿಗೂ ಒಂದು ರೂಪಾಯಿ ನಾಲ್ಕಣೆ ಕೊಡುವರು. ಹಣೆಗೆ ಬಾಸಿಂಗ ಕಟ್ಟುವರು. ಈ ರೀತಿ ಶೃಂಗಾರ ಮಾಡಿ ಅವಳ ದೊಡ್ಡಪ್ಪನಾಗಲಿ ಇಲ್ಲವೆ ಚಿಕ್ಕಪ್ಪನಾಗಲಿ ಹೆಗಲ ಮೇಲೆ ಹೊತ್ತು ಮನೆಯ ಒಳಗೆ ಒಯ್ಯುವರು. ಅವರಿಗೂ ಸಹ ೧.೨೫ ಪೈ. ರೂಪಾಯಿ ಬಾಜಾ ಕೊಡುವರು. ನಂತರ ಮದುವೆಯ ವಿಧಿಗಳು ಪ್ರಾರಂಭವಾಗುವುದು. ಮದುವೆಯಲ್ಲಿ ಪುರೋಹಿತಿಕೆಗೆ ಬ್ರಾಹ್ಮಣರಾಗಲಿ, ಪೂಜಾರಿಗಳನ್ನಾಗಲಿ ಕರೆಯಿಸುವುದಿಲ್ಲ. ಸಮುದಾಯದ ಹಿರಿಯರೆ ಮದುವೆಯನ್ನು ಮಾಡಿಸುತ್ತಾರೆ. ಮದುಮಗನನ್ನು ಅವನ ಮನೆಯಿಂದ ಗುರು-ಹಿರಿಯರು, ಗಂಡಸರು-ಹೆಂಗಸರು, ಯುವಕ-ಯುವತಿಯರು ಸೇರಿ ಮೆರವಣಿಗೆಯ ಮೂಲಕ ಹಾಡುತ್ತಾ, ಕುಣಿಯುತ್ತಾ ಮದುಮಗಳ ಮನೆಗೆ ಕರೆದುಕೊಂಡು

ಬರುತ್ತಾರೆ. ಮದುಮಗನ ಅಕ್ಕ ಇಲ್ಲವೇ ತಂಗಿ ಆರತಿಯನ್ನು ಹಿಡಿದುಕೊಂಡು ಮದುಮಗನ ಜೊತೆಗೆ ಬರುತ್ತಾಳೆ. ಮದುಮಗಳ ಹಂದರ ಮುಟ್ಟುವವರೆಗೆ ಆರು ಸಲ ಆರತಿ ಮಾಡುತ್ತಾರೆ. ಹಂದರದಲ್ಲಿ ಎರಡು ಮಣೆಗಳನ್ನು ಇಟ್ಟು ಮದುವೆ ವ್ಯವಸ್ಥೆ ಮಾಡಿರುತ್ತಾರೆ. ಒಂದು ಮಣೆಯ ಮೇಲೆ ಮದುಮಗ ಬಂದು ನಿಲ್ಲುತ್ತಾನೆ. ನಂತರ ಮದುಮಗಳಿಗೆ ಹಂದರದಲ್ಲಿ ಕರೆ ತರುತ್ತಾರೆ. ಅವಳಿಗೂ ಮಣೆಯ ಮೇಲೆ ನಿಲ್ಲಿಸಿ ಸಮುದಾಯದ ಹಿರಿಯರು ಮಂತ್ರಗಳೊಂದಿಗೆ ಅಕ್ಷತಾರೋಪನ ಕಾರ್ಯವನ್ನು ಮುಗಿಸಿ ತಾಳಿಯನ್ನು ಕಟ್ಟಿಸುತ್ತಾರೆ. ತದನಂತರ ಮದುಮಕ್ಕಳಿಗೆ ದೈವದವರ ಮಧ್ಯದಲ್ಲಿ ಕೂರಿಸಿ ವಧುವಿನ ತೆರ ೫೨೫ ರೂ.ಗಳನ್ನು ಕೊಡಿಸುವರು. ಈ ಹಣವನ್ನು ಮದುಮಗನ ತಂದೆ ನೀಡುತ್ತಾನೆ. ಮದುಮಕ್ಕಳ ತಂದೆಯವರು ತಮ್ಮ ಕುಲಗುರುಗಳೊಂದಿಗೆ ದೈವದಲ್ಲಿ ಕುಳಿತುಕೊಳ್ಳುವರು. ಈ ಸಮುದಾಯದಲ್ಲಿ ಸೆರೆಯ ನೈವೇದ್ಯ ಇಲ್ಲದೆ ಮದುವೆ ಯಾಗುವುದಿಲ್ಲ. ಮೊದಲು ದೇವರಿಗೆ ನೈವೇದ್ಯ ಕೊಡಲು ಸೆರೆಗೆ ಏಳು ರೂಪಾಯಿ, ಕುಲದ ಗುರುಗಳಿಗೆ ೨ ರೂ. ಮತ್ತು ಭೂತಾಯಿಯ ಹೆಸರಲ್ಲಿ ೨ ರೂ. ತೆಗೆದಿಡಲಾಗುತ್ತದೆ. ಹೀಗೆ ದೈವದ ಸಮಕ್ಷಮ ಈ ಸಂಪ್ರದಾಯ ನಡೆಯುವುದು. ಮದುಮಗನಿಗೆ ಮದುಮಗಳ ತಾಯಿ ಕೊಬ್ಬರಿ ಬಟ್ಟಲುಗಳ ಹಾರವನ್ನು ಹಾಕುವಳು ಮದುಮಗ ತಮ್ಮ ಅತ್ತೆಯ ಮೈಮೇಲೆ ೨ ಸೀರೆಗಳನ್ನು ಹಾಕುವನು. ದೈವಕ್ಕೆ ಎರಡೂ ಕಡೆಯಿಂದ ತಲಾ ೫೦೦ ರೂ. ನೀಡಲಾಗುತ್ತದೆ. ನಂತರ ದೈವದವರು ಎರಡೂ ಕಡೆಯವರಿಂದ ೨-೨ ರೂಪಾಯಿಗಳನ್ನು ಪಡೆದು ಸೆರೆಯನ್ನು ಬಾಟ್ಲಿಯಲ್ಲಿ ತರಿಸುವರು. ತರಿಸಿದ ಸೆರೆಯನ್ನು ನಾಲ್ಕು ಲೋಟಗಳಲ್ಲಿ ಹಾಕಿಸಿ ಮನೆ ಯಜಮಾನನ ಜೊತೆಗೆ ಅವರ ಮನೆತನದ ಗುರುಗಳನ್ನು ಕುಳ್ಳಿರಿಸಿ ದೇವತೆಗಳಿಗೆ ಸೆರೆಯ ನೈವೇದ್ಯ ಕೊಡುತ್ತಾರೆ. ದೇವತೆಗಳ ಹೆಸರುಗಳನ್ನು ಪಠಣ ಮಾಡುತ್ತಾ ಬಾಟ್ಲಿಯಿಂದ ಒಂದೊಂದು ಹನಿ ನೆಲದ ಮೇಲೆ ಸೆರೆ ಹಾಕುತ್ತಾರೆ. ಇದು ಈ ಸಮುದಾಯ ದಲ್ಲಿ ಮಹತ್ವದ ಕಾರ್ಯವಾಗಿದೆ. ಸೆರೆಯ ನೈವೇದ್ಯ ಕೊಟ್ಟರೆ ನಿಜವಾದ ಮದುವೆಯಾಗಿದೆ, ಇಂದಿನಿಂದ ನೀವಿಬ್ಬರು ದಂಪತಿಗಳೆಂದು ದೈವದವರು ಸಾರುತ್ತಾರೆ. ನಂತರ ಬಂದಿರುವ ಅತಿಥಿಗಳು ಹಾಗೂ ಬಂಧುಬಳಗದವರಿಗೆ, ಕುಲಸ್ಥರಿಗೆ ಊಟೋಪಚಾರ ನಡೆಯುವುದು.

ಮೊದಲರಾತ್ರಿ (ಗುಣ) : ಮದುವೆಯ ಮರುದಿನ ನವದಂಪತಿಗಳ ಮೊದಲನೆ ರಾತ್ರಿ ಕಾರ್ಯಕ್ರಮ ಮನೆಯ ಹೊರಗೆ ಒಂದು ತಾಡಪತ್ರಿಯಿಂದ ಸಣ್ಣ ಗುಡಿಸಲು (ಝೋಪಡಿ) ಕಟ್ಟಿರುವ ಮನೆಯಲ್ಲಿ ಜರುಗುತ್ತದೆ. ವಧುವಿನ ಅಕ್ಕ-ತಂಗಿಯರು ತಮ್ಮ ಮಾವ ಹಾಗೂ ಸಹೋದರಿಯೊಂದಿಗೆ ಮಿಠಾಯಿಯನ್ನು ತಿನ್ನುತ್ತಾರೆ. ನಂತರ ಗುಡಿಸಲಿನಲ್ಲಿ ಅವರಿಬ್ಬರಿಗೆ ಬಿಟ್ಟು ಹೋಗುವರು. ಹಾಸಿಗೆಯ ಮೇಲೆ ಹೊಸ ಬಿಳಿ ಬಟ್ಟೆಯನ್ನು ಹಾಕುವರು. ಮೊದಲನೆಯ ರಾತ್ರಿಯ ನವದಂಪತಿಗಳ ಸಮ್ಮಿಲನದ ಗುರುತಾಗಿ ರಕ್ತದ ಕಲೆಗಳು ಬಿಳಿ ಬಟ್ಟೆಯ ಮೇಲೆ ಬೀಳಬೇಕು. ರಕ್ತದ ಕಲೆಗಳು ಇದ್ದರೆ ವಧು ಶೀಲವಂತಳು ಎಂದು ಪರಿಗಣಿಸುವರು. ಅರಿವೆಯ ಮೇಲೆ ಇದ್ದ ರಕ್ತದ ಕಲೆಗಳ ಪರಿಶೀಲನೆಯನ್ನು ಸಮಾಜದ

ಹಿರಿಯ ಮಹಿಳೆಯರು ಮಾಡುವರು. ತರುವಾಯ ಮುಂಜಾನೆ ಸಮಾಜದ ದೈವದವರು ಸೇರಿ ಮದುಮಕ್ಕಳಿಗೆ ಕರೆಯಿಸಿ ರಾತ್ರಿಯ ವಿಷಯದ ಬಗೆಗೆ ಮದುಮಗನಿಗೆ ಕೇಳುತ್ತಾರೆ. ರಾತ್ರಿ ನೀನು ಹೆಂಡತಿಯ ಹತ್ತಿರ ಹೋಗಿದ್ದಿ ನಿನಗೆ ಹೇಗೆ ಸಿಕ್ಕಳು ಹೇಳು ಎಂದು ಕೇಳುತ್ತಾರೆ. ನಿಜ ಸಂತಿಯನ್ನೇ ಹೇಳಬೇಕು ಸುಳ್ಳು ಹೇಳಬಾರದು ಎಂದು ಹೇಳುತ್ತಾರೆ. ಅವನಿಗೆ ಅವನ ಹೆಂಡತಿ ಶೀಲವಂತಳಾಗಿದ್ದಳೆ ನನ್ನ ಹೆಂಡತಿ ಶೀಲವಂತಳು ಎಂದು ಮೂರು ಸಲ ಪಂಚರ ಮುಂದೆ ಹೇಳುತ್ತಾನೆ. ಆಗ ದೈವದವರು ವಧು ಶೀಲವಂತಳು ಎಂದು ಸಾರುತ್ತಾರೆ. ಮುಂದೆ ನೀನು ಅವಳಿಗೆ ಯಾವ ಅಪವಾದವನ್ನು ಈ ವಿಷಯದಲ್ಲಿ ಕೊಡಬಾರದು ಒಂದು ವೇಳೆ ಈ ಸಂಬಂಧವಾಗಿ ಅಲ್ಲ ಸಲ್ಲದ ಮಾತುಗಳನ್ನು ಆಡಿದರೆ ನೀನು ದೋಷಿ ಆಗುತ್ತಿ ಎಂದು ಎಚ್ಚರಿಸಿ, ನಿನ್ನ ಹೆಂಡತಿಗೆ ಊಟ, ಮನೆ, ಬಟ್ಟೆ, ಪ್ರೇಮ ಇವುಗಳ ಕೊರತೆ ಆಗದಂತೆ ನೋಡಿಕೊಳ್ಳಬೇಕು ಎಂದು ಹೇಳುತ್ತಾರೆ.

ಒಂದು ವೇಳೆ ಮೊದಲ ರಾತ್ರಿಯಲ್ಲಿ ನವದಂಪತಿಗಳ ಸಮ್ಮಿಲನವಾದಾಗ ಬಿಳಿ ಬಟ್ಟೆಯ ಮೇಲೆ ರಕ್ತದ ಕಲೆಗಳು ಬೀಳದಿದ್ದರೆ ಮರುದಿನ ವಧುವಿನ ಮನೆಯ ಹಿರಿಯ ಸ್ತ್ರೀಯರು ಮದುಮಗಳಿಗೆ ನಾನಾ ರೀತಿಯ ಪ್ರಶ್ನೆಗಳನ್ನು ಕೇಳುತ್ತಾರೆ. ಮದುವೆಯ ಪೂರ್ವದಲ್ಲಿ ಯಾರ ಜೊತೆಗೆ ಅನೈತಿಕ ಸಂಬಂಧ ಹೊಂದಿದೆ ಏನು ಎಂದು ಕೇಳುತ್ತಾರೆ. ಅವಳು ಹೇಳದಿದ್ದರೆ ಮೂರು ದಿನ ಮದುಮಕ್ಕಳಿಗೆ ಬಿಡುವರು. ಮೂರನೆಯ ದಿನವೂ ರಕ್ತದ ಕಲೆಗಳು ಬಿಳಿ ಬಟ್ಟೆಯ ಮೇಲೆ ಕಾಣದಿದ್ದರೆ ಗಂಡಿನವರು ದೈವದವರನ್ನು ಕೂಡಿಸುತ್ತಾರೆ. ದೈವದವರು ಮೊದಲು ಮದುಮಗನಿಗೆ ಕೇಳುತ್ತಾರೆ. ರಾತ್ರಿ ನೀನು ನಿನ್ನ ಹೆಂಡತಿಯ ಹತ್ತಿರ ಹೋಗಿದ್ದಿಯಾ, ನಿನಗೆ ಹೇಗೆ ಸಿಕ್ಕಳು ಎಂದು ವಿಚಾರಿಸುತ್ತಾರೆ. ನಿಜ ಹೇಳಬೇಕು ಸುಳ್ಳು ಹೇಳಬಾರದು ಎಂದು ಹೇಳುತ್ತಾರೆ. ಮದುಮಗ ನೀಜ ಸಂಗತಿ ನುಡಿಯುತ್ತಾನೆ. ಇವಳು ಮದುವೆಯ ಪೂರ್ವದಲ್ಲಿಯೇ ಲೈಂಗಿಕ ಸಂಪರ್ಕ ಹೊಂದಿದ್ದಾಳೆ ಇವಳು ಕೆಟ್ಟಿದ್ದಾಳೆ ಎಂದು ಮೂರು ಸಲ ದೈವದವರ ಎದುರಿಗೆ ಹೇಳುತ್ತಾನೆ. ಆಗ ದೈವದವರು ಮದುಮಗಳಿಗೆ ಬಗೆ ಬಗೆಯ ವಿಷಯಗಳನ್ನು ಹೇಳಿ ನಿಜ ಸಂಗತಿಯನ್ನು ಹೊರ ಹಾಕಿಸುತ್ತಾರೆ. ಅವಳು ಮದುವೆ ಪೂರ್ವದಲ್ಲಿ ಅನೈತಿಕ ಸಂಬಂಧ ಹೊಂದಿದ್ದು ಒಪ್ಪಿಕೊಂಡರೆ ಮದುಮಗನ ಹಿರಿಯರ ಜೊತೆಗೆ ಚರ್ಚಿಸುವರು. ಮೊದಲೇ ಅನೈತಿಕ ಸಂಬಂಧ ಹೊಂದಿದವರನ್ನು ಕೆಲವರು ಕರೆದುಕೊಂಡು ಹೋಗುತ್ತಾರೆ. ಕೆಲವರು ಅಲ್ಲಿಯೇ ಸೊಡಚೀಟಿ ಮಾಡಿ ಹೆಣ್ಣನ್ನು ಬಿಟ್ಟು ಮದುಮಗನಿಗೆ ಕರೆದುಕೊಂಡು ಹೋಗುತ್ತಾರೆ. ಇವಳು ಮಾಡಿದ ತಪ್ಪಿಗೆ ತಂದೆ-ತಾಯಿಗಳಿಗೆ ದೋಷಿಗಳೆಂದು ಘೋಷಿಸಿ ದಂಡ ಹಾಕುತ್ತಾರೆ. ಕರೆದುಕೊಂಡು ಹೋಗುವ ಗಂಡ ಈ ವಿಷಯವಾಗಿ ಹುಡುಗಿಗೆ ಯಾವ ತೊಂದರೆಯನ್ನು ಕೊಡಬಾರದು ಎಂದು ದೈವದವರು ಬಂದೋಬಸ್ತು ಮಾಡುತ್ತಾರೆ. ಅವಳು ಕೆಟ್ಟವಳು ಎಂದು ಸಾರಿ ಗಂಡನ ಜೊತೆಗೆ ಕಳಿಸಿ ಕೊಡುವರು. ಅವಳು ಮುಂದೆ ತನ್ನ ಗಂಡನ ಜೊತೆಗೆ ಜೀವನ ಸಾಗಿಸುವಳು.

ಏಕಪತ್ನಿತ್ವ (ಏಕಬಯರ) : ಕಂಜರಭಾಟ ಸಮುದಾಯದಲ್ಲಿ ಏಕಪತಿತ್ವ ಮತ್ತು ಏಕಪತ್ನಿತ್ವ ಪದ್ಧತಿ ಜಾರಿಯಲ್ಲಿದೆ. ಗಂಡ ಇನ್ನೊಂದು ಪತ್ನಿ ವರಿಸಲು ಇಚ್ಛಿಸಿದರೆ ಅದಕ್ಕೆ ಮೊದಲನೆಯ ಪತ್ನಿಯು ಅನುಮತಿ ಕೊಟ್ಟರೆ ಮಾತ್ರ ಎರಡನೆಯ ಹೆಂಡತಿ ಮಾಡಿಕೊಳ್ಳಲು ಸಾಧ್ಯ. ಒಂದು ವೇಳೆ ಪತ್ನಿ ಅನುಮತಿ ನೀಡದಿದ್ದರೆ ಎರಡನೆಯ ಪತ್ನಿ ಮಾಡಿಕೊಳ್ಳಲು ದೈವ ಒಪ್ಪುವುದಿಲ್ಲ. ಈ ಸಮುದಾಯದಲ್ಲಿ ಒಬ್ಬಳಿಗೆ ಇಬ್ಬರು ಪತಿಗಳು ಇದ್ದದ್ದು ಇಲ್ಲಿಯವರೆಗೆ ಕಂಡುಬಂದಿಲ್ಲ. ಇವರಲ್ಲಿ ಏಕಪತಿತ್ವ ಮತ್ತು ಏಕಪತ್ನಿತ್ವ ಪದ್ಧತಿ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ.

ಅಂತರ್ಜಾತಿ ವಿವಾಹ (ದುಸರೆ ಜಾತಕಿ ಬ್ಯಾಹ) : ಈ ಸಮುದಾಯದಲ್ಲಿ ಅಂತರ್ಜಾತಿ ವಿವಾಹಕ್ಕೆ ಅನುಮತಿ ಇದೆ. ಬೇರೆ ಸಮುದಾಯದ ಸ್ತ್ರೀಯರನ್ನು ಇವರು ವಿವಾಹವಾದರೆ ಅವಳಿಗೆ ದೈವದವರು ವಿಧಿ ವಿಧಾನಗಳನ್ನು ಮಾಡಿ ೧೨೫೦ ರೂ.ಗಳನ್ನು ದಂಡವಾಗಿ ಕಟ್ಟಿಸಿಕೊಂಡು ಅವಳಿಗೆ ಕಂಜರಭಾಟದ ಮದುಮಗನ ಬೆಡಗು ನೋಡಿ ಒಬ್ಬನ ತೊಡೆಯ ಮೇಲೆ ಹೆಣ್ಣನ್ನು ಕೂಡಿಸಿ ಅವರ ಮಗಳೆಂದು ಪರಿಚಯ ಸಾರಿ ಮದುವೆ ಮಾಡಿ ಸ್ಥಾನಮಾನಗಳನ್ನು ಕೊಡುತ್ತಾರೆ. ನಾಲ್ಕು ರೂಪಾಯಿಯ ಸೆರೆಯನ್ನು ತಂದು ಅದರಲ್ಲಿ ಬೆಳ್ಳಿಯ ರೂಪಾಯಿಯನ್ನು ಹಾಕಿ ದೇವರಿಗೆ ನೈವೇದ್ಯ ಕೊಟ್ಟು ಅವಳಿಗೆ ಜಾತಿಯಲ್ಲಿ ಸೇರಿಸಿಕೊಳ್ಳವರು. ಈ ಸಮುದಾಯದ ಮಹಿಳೆ ಪರಜಾತಿಯ ಪುರುಷನೊಂದಿಗೆ ಸಂಬಂಧ ಬೆಳೆಸಿಕೊಂಡರೆ ಅವಳಿಗೆ ಸಮುದಾಯದೊಳಗೆ ಸ್ಥಾನಮಾನ ದೊರೆಯುವುದಿಲ್ಲ. ಅವರ ಮನೆಯಲ್ಲಿ ಯಾವುದಾದರು ಕಾರ್ಯ ಬಂದರೆ ದೈವಕ್ಕೆ ದಂಡವನ್ನು ಕೊಟ್ಟು ತಮ್ಮ ಕಾರ್ಯವನ್ನು ಮಾಡಿಸಿಕೊಳ್ಳುತ್ತಾರೆ.

ವಿಧವಾ ವಿವಾಹ (ರಾಂಡಮುಂಡಾಕಾ ಬ್ಯಾಹ) : ಕಂಜರಭಾಟ ಸಮಾಜದಲ್ಲಿ ವಿಧವಾ ವಿವಾಹ ಪದ್ಧತಿ ಜಾರಿಯಲ್ಲಿದೆ. ಸಣ್ಣವಯಸ್ಸಿನಲ್ಲಿ ಗಂಡ ಮರಣ ಹೊಂದಿದರೆ ಅವಳ ವಿವಾಹವನ್ನು ತಂದೆ ತಾಯಿ ಮತ್ತು ಮಾವ ಅತ್ತಿ ಸಮ್ಮತಿಯಿಂದ ವಿವಾಹ ಮಾಡಿ ಕೊಡುತ್ತಾರೆ. ಒಂದು ವೇಳೆ ಅವಳಿಗೆ ಮೊದಲನೆಯ ಗಂಡನ ಮಕ್ಕಳು ಇದ್ದರೆ ಈಗ ಮಾಡಿಕೊಂಡ ಗಂಡ ಆ ಮಕ್ಕಳನ್ನು ಜೋಪಾನ ಮಾಡಬಹುದು. ಇಲ್ಲವೆ ಜೋಪಾನ ಮಾಡಲಿಕ್ಕಿಲ್ಲ. ಜೋಪಾನ ಮಾಡಲು ಒಪ್ಪದಿದ್ದರೆ ಮೊದಲನೆಯ ಗಂಡನ ಮನೆಯಲ್ಲಿ ಆ ಮಕ್ಕಳನ್ನು ಬಿಡುತ್ತಾರೆ. ಹೆಚ್ಚಾಗಿ ವಿಧವೆಯರನ್ನು ಅವರ ಮೈದುನರೆ ಮದುವೆ ಮಾಡಿಕೊಳ್ಳುತ್ತಾರೆ. ತಮ್ಮ ಅಣ್ಣನ ಸಂತಾನವನ್ನು ತಮ್ಮಲ್ಲಿಯೆ ಉಳಿಸಿಕೊಳ್ಳಲು ಪ್ರಯತ್ನ ಮಾಡುತ್ತಾರೆ.

ವಿವಾಹ ವಿಚ್ಛೇದನ (ಮುಸಳ ಕಾಟಣಾ) : ಪ್ರತಿಯೊಂದು ಸಮುದಾಯದಲ್ಲಿ ವಿವಾಹ ವಿಚ್ಛೇದನಗಳು ಇದ್ದೇ ಇರುತ್ತವೆ. ಕಂಜರಭಾಟ ಸಮುದಾಯದಲ್ಲಿಯೂ ಸಹ ಗಂಡ-ಹೆಂಡತಿ ಪ್ರೇಮದಿಂದ ಇರದಿದ್ದರೆ, ಮಕ್ಕಳು ಆಗದಿದ್ದರೆ ಗಂಡ ದುಡಿದು ಸಂಬಳ ತಂದು ಕೊಡದಿದ್ದರೆ, ಗಂಡನಾಗಲಿ, ಹೆಂಡತಿಯಾಗಲಿ ಬೇರೆಯವರ ಜೊತೆಯಲ್ಲಿ ಅನೈತಿಕ

ಸಂಬಂಧ ಹೊಂದಿದ್ದರೆ, ಹೆಂಡತಿಗೆ ಕುಡಿದು ಅಮಲಿನಲ್ಲಿ ಸುಮ್ಮ ಸುಮ್ಮನೆ ದಿನಾಲು ಬಡಿಯುವುದು, ಕಿರಿ ಕಿರಿ ನೀಡುವುದು, ಹೊರಗೆ ಹಾಕುವುದು ಮಾಡಿದರೆ, ಹೆಂಡತಿ ಯಾದವಳು ಗಂಡನಿಗೆ ಹೇಳದೇ ಕೇಳದೇ ಎಲ್ಲಿಯಾದರೂ ಹೋದರೆ ಹೀಗೆ ಹಲವಾರು ಕಾರಣಗಳಿಗಾಗಿ ವಿವಾಹ ವಿಚ್ಛೇದನೆ ಮಾಡುವರು.

ಈ ಸಮುದಾಯದಲ್ಲಿ ವಿವಾಹ ವಿಚ್ಛೇದನ ಮಾಡುವ ಹಕ್ಕು ಸಮುದಾಯದ ದೈವಕ್ಕೆ ಮಾತ್ರ ಇದೆ. ಕೋರ್ಟ ಕಛೇರಿಗಳಲ್ಲಿ ವಿವಾಹ ವಿಚ್ಛೇದನೆ ಮಾಡಿಕೊಂಡರೆ ಅದಕ್ಕೆ ಸಮುದಾಯ ಒಪ್ಪುವುದಿಲ್ಲ. ದೈವದವರು ಗಂಡ-ಹೆಂಡತಿಯರನ್ನು ಪಂಚಾಯಿತಿಯಲ್ಲಿ ಕರೆಯಿಸಿ ಅವರ ವಿವಾಹ ವಿಚ್ಛೇದನೆಯ ಕಾರಣಗಳನ್ನು ಕೇಳುತ್ತಾರೆ. ವಿಚ್ಛೇದನೆಗೆ ಸರಿಯಾದ ಕಾರಣ ಇದ್ದರೆ ೧೨೫೦ ರೂಪಾಯಿಗಳನ್ನು ತೆಗೆದುಕೊಂಡು ಅವರ ವಿಚ್ಛೇದನ ಮಾಡುತ್ತಾರೆ. ದೈವಕ್ಕೆ ಯೋಗ್ಯ ಕಾರಣ ದೊರೆಯದೆ ಇದ್ದಲ್ಲಿ ವಿಚ್ಛೇದನ ನೀಡುವುದಿಲ್ಲ. ಆಗ ಗಂಡನಾಗಲಿ, ಹೆಂಡತಿಯಾಗಲಿ ಯಾರಾದರೊಬ್ಬರು ವಿಚ್ಛೇದನ ಬೇಕೇ ಬೇಕು ಎಂದು ಹಠ ಮಾಡಿದರೆ ಅವರ ತಂದೆ-ತಾಯಿಗಳ ಅನುಮತಿ ತೆಗೆದುಕೊಂಡು ವಿಚ್ಛೇದನ ಮಾಡುತ್ತಾರೆ. ಸೋಡ ಚೀಟಿಯನ್ನು ಪಡೆದ ಸ್ವಲ್ಪ ದಿನಗಳ ನಂತರ ಅವರಿಬ್ಬರೂ ಮತ್ತೇ ಕೂಡಲು ಇಚ್ಛೆ ಪಟ್ಟರೆ ದೈವದ ೧೨೫೦ ರೂಪಾಯಿ ಕೊಟ್ಟು ಮತ್ತೇ ತಮ್ಮ ದಾಂಪತ್ಯ ಜೀವನವನ್ನು ಸಾಗಿಸುವರು. ಈ ರೀತಿ ಮಾಡುವಾಗ ನಾಲ್ಕು ರೂಪಾಯಿಯ ಸೆರೆ ತಂದು ದೇವರಿಗೆ ನೈವೇದ್ಯ ಕೊಟ್ಟು ಅವರಿಗೆ ಕೂಡಿಸುತ್ತಾರೆ.

ವಿವಾಹ ವಿಚ್ಛೇದನ ಮಾಡಲು ಪಂಚರು ನಿರ್ಣಯವನ್ನು ಕೈಕೊಂಡರೆ ಒಂದು ಕಟ್ಟಿಗೆ ತುಂಡು ತಂದು ಕೊಡ್ಲಿಯನ್ನು ತರಸಿ ದೈವದ ಮಧ್ಯದಲ್ಲಿ ಇರಿಸಿ ಗಂಡನಿಗೆ ಕರೆಯಿಸಿ ಅವನ ಕೈಯಿಂದ ಕಟ್ಟಿಗೆಯ ಎರಡು ತುಂಡು ಮಾಡುವರು. ಇದು ವಿವಾಹ ವಿಚ್ಛೇದನ ಮಾಡುವ ರೀತಿ. ವಿವಾಹ ವಿಚ್ಛೇದನವಾದ ನಂತರ ಗಂಡ-ಹೆಂಡತಿ ಕೂಡಲು ಅಪೇಕ್ಷೆ ಪಟ್ಟರೆ ಎರಡೂ ಕಡೆಯಿಂದ ತಲಾ ಎರಡು, ಎರಡು ರೂಪಾಯಿಯ ಬೆಲ್ಲ ತರಿಸಿ ದೈವದ ಮಧ್ಯದಲ್ಲಿ ಗಂಡನಿಗೆ ಕೂಡಿಸಿ ಎರಡು ಕಟ್ಟಿಗೆಯ ತುಂಡುಗಳನ್ನು ತರಸಿ ಬೆಲ್ಲದಿಂದ ಜೋಡಿಸಿ ನಾಲ್ಕು ರೂಪಾಯಿಯ ಸೆರೆ ತರಿಸಿ ದೇವರಿಗೆ ನೈವೇದ್ಯ ಕೊಟ್ಟು ಗಂಡ-ಹೆಂಡತಿಯನ್ನು ಒಂದುಗೂಡಿಸುವರು.



೫

ಆರಾಧನೆ, ಆಚರಣೆ, ನಂಬಿಕೆ

ಜನನ ಮರಣ ಇವೆರಡು ಮಾನವ ಜೀವನದಲ್ಲಿ ಮಹತ್ವದ ಘಟ್ಟಗಳು. ಜನನ ಆಕಸ್ಮಿಕ, ಜನನದ ನಂತರ ಸಾವು ನಿಶ್ಚಿತ. ಆದರೆ ಯಾವಾಗ ಸಾವು ಎಂಬುದು ಹೇಳಲು ಸಾಧ್ಯವಿಲ್ಲ. ಜನನ ಮರಣ ಮಾನವನ ಬಾಳಿನ ಎರಡು ದಡಗಳು ಇದ್ದ ಹಾಗೆ. ಈ ಎರಡೂ ಸಂದರ್ಭದಲ್ಲಿ ಹಾಗೂ ಮಧ್ಯದ ಮಹತ್ವದ ಘಟ್ಟಗಳಲ್ಲಿ ಸಮುದಾಯದ ನೀತಿ, ನಿಯಮ, ಸಂಸ್ಕಾರ ಮಾಡುವುದು ಎಲ್ಲ ಜಾತಿ, ಜನಾಂಗಗಳಲ್ಲಿ ಕಾಣುತ್ತೇವೆ. ಅಲೆಮಾರಿಗಳಾದ ಕಂಜರಭಾಟ ಸಮುದಾಯದವರು ಇದಕ್ಕೆ ಹೊರತಾಗಿಲ್ಲ. ಅವರು ತಮ್ಮ ಸಮುದಾಯದ ವಿಧಿ-ವಿಧಾನ ಆಚರಣೆಗಳನ್ನು ಕೈ ಬಿಡದೆ ತಮ್ಮ ಸಂಸ್ಕೃತಿ ಹಾಗೂ ಪರಂಪರೆಯಂತೆ ಮುಂದುವರೆಯುವುದನ್ನು ಪ್ರಸ್ತುತ ದಿನಗಳಲ್ಲಿಯೂ ಕಾಣಬಹುದು.

ಜನನ ಹಾಗೂ ಪೂರ್ವಾಚರಣೆಗಳು : ಕಂಜರಭಾಟ ಸಮುದಾಯದಲ್ಲಿ ಪುತ್ರ ಸಂತಾನಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತದೆ. ಸಂತಾನ ಪ್ರಾಪ್ತಿಯ ಪೂರ್ವದಿಂದಲೇ ಅಂದರೆ ಗರ್ಭಧಾರಣೆಯಿಂದಲೇ ಈ ಜನ ಸಂಸ್ಕಾರದಲ್ಲಿ ತೊಡಗುತ್ತಾರೆ. ಹೆಣ್ಣು ಮಕ್ಕಳು ಗರ್ಭಧರಿಸಿದಾಗ ಗೆಳತಿಯರು, ಮನೆತನದ ಸಂಬಂಧಿಕ ಹೆಣ್ಣು ಮಕ್ಕಳು ಅವಳ ಮನಸ್ಸಿಗೆ ತೃಪ್ತಿಯಾಗುವಂತಹ ಮಾತುಗಳನ್ನು ಆಡುತ್ತಾರೆ. ಹೆರಿಗೆ ಸಂದರ್ಭದಲ್ಲಿ ತಾಯಿಗೆ ಬೇನೆ ಪ್ರಾರಂಭವಾದಾಗ ಆ ಬೇನೆಯನ್ನು ಮರೆಸಲು ಮನೆತನದ ಹಿರಿಯ ಮಹಿಳೆಯರು ಸಮುದಾಯದ ಅನುಭವಿಕ ಸ್ತ್ರೀಯರು ಸೇರಿಕೊಂಡು ಅನೇಕ ಪ್ರಶ್ನೆಗಳಿಂದ ಅವಳಿಗೆ ಸಮಾಧಾನಪಡಿಸುತ್ತಾರೆ. ಹೆರಿಗೆ ಸಮೀಪಿಸಿದಂತೆ ಅನುಭವಿಕ ಮಹಿಳೆಯರು ಗರ್ಭವತಿ ಮಹಿಳೆಗೆ ಮನೆಯಲ್ಲಿ ಒಂದು ಪ್ರತ್ಯೇಕ ಸ್ಥಳದಲ್ಲಿ ಹೆರಿಗೆಗಾಗಿ ವ್ಯವಸ್ಥೆಯನ್ನು ಮಾಡುವರು. ಹೆರಿಗೆ ಬೇಗನೆ ಆಗದಿದ್ದರೆ ಗರ್ಭವತಿ ಮಹಿಳೆಗೆ ಅತ್ತಿತ್ತ ಅಡ್ಡಾಡಿಸುವರು. ಬೇನೆ ಪ್ರಾರಂಭವಾದಾಗ ಸಮುದಾಯದ ಅನುಭವಿ ಮಹಿಳೆಯರು ಮನೆಯಲ್ಲಿಯೇ ಬಾಣಂತನವನ್ನು ಮಾಡಿಸುವರು. ಗರ್ಭಿಣಿಗೆ ಹೆರಿಗೆಯಾಗುವಾಗ ಎಷ್ಟೇ ತೊಂದರೆಗಳು ಆದರೂ ಸಹ ದವಾಖಾನೆಗೆ ಕರೆದುಕೊಂಡು ಹೋಗುವುದು ತುಂಬಾ ಅಪರೂಪ. ಏಕೆಂದರೆ ಅಲೆಮಾರಿಗಳಿಗೆ ದವಾಖಾನೆಗಳ ಸವಲತ್ತು ದೊರೆಯುವುದು ದೂರದ ಮಾತಾಗಿದೆ.

ಸೂಲಗಿತ್ತಿಯು ಗರ್ಭವತಿಗೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತಾರೆ. ಬಾಣಂತನದ ನೋವು ಆಗದಂತೆ ಗರ್ಭವತಿಯ ಬೆನ್ನಿನ ಮೇಲೆ ಬಿಸಿ ನೀರನ್ನು ಹಾಕುತ್ತಾರೆ. ಚಹಾಪುಡಿ, ಸಕ್ಕರೆ ಬೆರೆಸಿ ಹಾಗೂ ಒಳ್ಳೆಣ್ಣೆಯನ್ನು ಹಾಕಿ ಡಿಕಾಕ್ಷನ್ ಮಾಡಿ ಕುಡಿಸುತ್ತಾರೆ. ಇದರಿಂದ ಹೆರಿಗೆ ಸುಲಭವಾಗಿ ಹಾಗೂ ಬೇಗನೆ ಆಗುತ್ತದೆಂದು ಸೂಲಗಿತ್ತಿಯರು ಹೇಳುತ್ತಾಳೆ. ಒಂದು ವೇಳೆ ಹೆರಿಗೆ ಬೇಗನೆ ಆಗದೆ ಗರ್ಭವತಿ ಮಹಿಳೆಯು ನೋವಿಂದ ಚಡಪಡಿಸುತ್ತಿದ್ದರೆ ಅವಳಿಗೆ ಅಂಗಾತ ಮಲಗಿಸಿ ಅವಳ ಹೊಕ್ಕಳಿನ ಮೇಲೆ ಒಳ್ಳೆಣ್ಣೆಯನ್ನು ಹಾಕುತ್ತಾರೆ. ಹೊಕ್ಕಳಿಗೆ ಹಾಕಿದ ಎಣ್ಣೆ ನೇರವಾಗಿ ಕೆಳಗೆ ಇಳಿದರೆ ಹೆರಿಗೆ ಸರಳ ಹಾಗೂ ಬೇಗನೆ ಆಗುವುದು ಎಂದು ಹೇಳುತ್ತಾರೆ. ಒಂದು ವೇಳೆ ಹಾಕಿದ ಎಣ್ಣೆ ಅಂಕು-ಡೊಂಕಾಗಿ ಹರಿದರೆ ಹೆರಿಗೆ ಬೇಗನೆ ಆಗುವುದಿಲ್ಲ. ಈ ರೀತಿ ಮನೆಯಲ್ಲಿ ಹೆರಿಗೆ ಮಾಡಿಸುವ ಪದ್ಧತಿಯಾಗಿದೆ. ಹೆರಿಗೆ ಬೇಗನೆ ಆಗದಿದ್ದರೆ ಗರ್ಭವತಿಯ ಗಂಡ ಭೂತಾಯಿಗೆ ಬೇಡಿ ಕೊಳ್ಳುವನು. ಭೂಮಾತೆ ನನ್ನ ಹೆಂಡತಿಯ ಹೆರಿಗೆ ಬೇಗನೆ ಆಗುವಂತೆ ಮಾಡಿ, ನನ್ನ ಮಗುವನ್ನು ನಿನ್ನ ಮಡಿಲಲ್ಲಿ ತೆಗೆದುಕೊಳ್ಳು, ತಾಯಿ ನಿನಗೆ ಎರಡು ಕಾಯಿಗಳನ್ನು ಒಡೆಯುತ್ತೇನೆ ಎಂದು ಕೈಮುಗಿದು ಬೇಡಿಕೊಳ್ಳುತ್ತಾನೆ. ಮಗು ಜನ್ಮವೆತ್ತಿ ಒಂದು ತಿಂಗಳ ನಂತರ ಭೂಮಿ ತಾಯಿಗೆ ಎರಡು ತೆಂಗಿನಕಾಯಿಗಳನ್ನು ಒಡೆದು ತಮ್ಮ ಹರಕೆಯನ್ನು ಪೂರ್ಣ ಮಾಡುವರು.

ಹುಟ್ಟಿದ ಮಗು ಗಂಡಾಗಲಿ, ಹೆಣ್ಣಾಗಲಿ ಸೂಲಗಿತ್ತಿಯರು ಮೊದಲು ಹೊಕ್ಕಳು ಹುರಿಯನ್ನು ಗಾಜಿನಿಂದ ಕತ್ತರಿಸಿ ಮಾಂಸವನ್ನು ಬೇರ್ಪಡಿಸುವರು. ಮಾಂಸದ ಗಂಟನ್ನು ಒಂದು ತಗ್ಗು ತೋಡಿ ಅದರಲ್ಲಿ ಹುಗಿಯುವರು. ನಂತರ ಬಿಸಿ ನೀರಿನಲ್ಲಿ ಮಗುವಿಗೆ ಮತ್ತು ಬಾಣಂತಿಗೆ ಸ್ನಾನ ಮಾಡಿಸಿ ಮನೆಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಮಲಗಲು ವ್ಯವಸ್ಥೆಯನ್ನು ಮಾಡುವರು. ಅವಳ ಊಟದ ಪಾತ್ರೆ, ಹಾಸಿಗೆ, ಬಟ್ಟೆ, ಪ್ರತ್ಯೇಕವಾಗಿ ಇಡುವರು. ಒಂದು ತಿಂಗಳವರೆಗೆ ಮೈಲಿಗೆ ಕಳೆಯುವವರೆಗೂ ಬಾಣಂತಿ ಮಗುವಿನೊಂದಿಗೆ ಬೇರೆ ಇರಬೇಕಾಗುತ್ತದೆ. ಅವಳ ಕೈಯಿಂದ ಮಾಡಿದ ಅಡಿಗೆ ಇತ್ಯಾದಿ ಯಾರೂ ಊಟ ಮಾಡುವುದಿಲ್ಲ.

ಬಾಣಂತಿಗೆ ಪ್ರಾರಂಭದಲ್ಲಿ ಸಿಹಿ ಅಡಿಗೆಯನ್ನು ಮಾಡಿ ತಿನ್ನಲು ಕೊಡುತ್ತಾರೆ. ತುಪ್ಪ, ಬೆಲ್ಲದಲ್ಲಿ ಶ್ಯಾವಿಗೆಯ ಪಾಯಸ ಮಾಡಿ ತಿನ್ನಲು ನೀಡುತ್ತಾರೆ. ಅದರಲ್ಲಿ ಜೀರಗಿ ಹಾಕುತ್ತಾರೆ. ರವಾ, ಬೆಲ್ಲ, ತುಪ್ಪ, ಜೀರಗಿಯಲ್ಲಿ ಮಾಡಿದ ಅಡಿಗೆಯನ್ನು ಊಟ ಮಾಡಲು ಕೊಡುವರು. ಈ ರೀತಿ ಮೂರು ದಿನ ಸತತವಾಗಿ ನೀಡಲಾಗುತ್ತದೆ. ಮೂರು ದಿನಗಳವರೆಗೆ ಮಗುವಿಗೆ ಕತ್ತೆಯ ಹಾಲು ಕೊಡುತ್ತಾರೆ. ಕತ್ತೆಯ ಹಾಲು ಕೊಡುವುದರಿಂದ ಕೆಮ್ಮು, ದಮ್ಮು ಬರುವುದಿಲ್ಲ, ಇದಲ್ಲದೆ ಮಗು ಶಕ್ತಿ ಶಾಲಿಯಾಗುವನು, ಜಾಣನಾಗುವನು ಎನ್ನುವ ನಂಬುಗೆ ಇವರಲ್ಲಿದೆ. ತಾಯಿಯ ಹಾಲು ಪೂರೈಕೆ ಯಾಗುವವರೆಗೆ ಜೇನುತುಪ್ಪ ಹಾಗೂ ಬೆಲ್ಲದ ನೀರನ್ನು ಮಗುವಿನ ನಾಲಿಗೆಗೆ ಹಚ್ಚುವರು. ಆರು ದಿನಗಳವರೆಗೆ ಮಗುವಿಗೆ ಬಟ್ಟೆ ತೊಡಿಸುವುದಿಲ್ಲ. ಬಟ್ಟೆಯಲ್ಲಿ ಸುತ್ತಿ ಮಲಗಿಸುವರು.

ನಾಮಕರಣ (ಛಟ್ಟಿ) : ಮಗು ಹುಟ್ಟಿದ ಆರನೆಯ ದಿನ ಮಗುವಿಗೆ ನಾಮಕರಣದ ಕಾರ್ಯಕ್ರಮ ಜರುಗುವುದು. ಇದಕ್ಕೆ ಛಟ್ಟಿ ಎಂದು ಕರೆಯುತ್ತಾರೆ. ಮಗುವಿಗೆ ಸ್ನಾನ ಮಾಡಿಸಿ ಹೊಸ ಬಟ್ಟೆಗಳನ್ನು ತೊಡಿಸುವರು. ಕೈ ಕಾಲುಗಳಲ್ಲಿ ಕರಿಮಣಿಗಳ ಸರಗಳನ್ನು ಹಾಗೂ ಉಡುದಾರವನ್ನು ಕಟ್ಟುವರು. ಇವುಗಳಿಂದ ಮಗುವಿಗೆ ದೃಷ್ಟಿಯಾಗುವುದಿಲ್ಲ ಎಂಬುದು ಇವರ ನಂಬಿಕೆ. ಅಂದು ಗೋಧಿ ಚಪಾತಿ, ಬೆಲ್ಲದ ಪಾಯಸ ಮಾಡಿ ಎರಡೂ ಬೆರೆಸಿ ನೆರೆಹೊರೆಯ ಚಿಕ್ಕ ಮಕ್ಕಳಿಗೆ ಕರೆಯಿಸಿ ಊಟ ಮಾಡಿಸುವರು. ಇದಕ್ಕೆ ಛಟ್ಟಿ ಎಂದು ಕರೆಯುತ್ತಾರೆ. ರಾತ್ರಿ ಕುಲಬಾಂಧವರು ಮತ್ತು ಮಹಿಳೆಯರು ಬರುವರು. ಮಗುವಿನ ಸೋದರಮಾವ ನಾಮಕರಣ ಮಾಡುವ ಮೊದಲು ಒಂದು ಕಪ್ಪುದಾರವನ್ನು ತೆಗೆದುಕೊಂಡು ಅದರ ತುದಿಯಿಂದ ಮಗುವಿನ ಪಕ್ಕಡಿಯ ಬಲಕ್ಕೆ, ಎಡಕ್ಕೆ ಮತ್ತು ಎದೆಗೆ ಸುಡುವನು. ಈ ರೀತಿ ಸುಡುವದರಿಂದ ಯಾವ ರೋಗರುಜಿನಗಳು ಬರುವುದಿಲ್ಲ ಎಂದು ಹಿರಿಯರು ಹೇಳುತ್ತಾರೆ. ಸೋದರಮಾವನಿಗೆ ಒಂದು ರೂಪಾಯಿ ನಾಲ್ಕಾಣೆ ಕೊಡುತ್ತಾರೆ. ನಂತರ ಬಂದಂತಹ ಕುಲಸ್ಥರ ಮಹಿಳೆಯರು ಮತ್ತು ಮನೆಯ ಮಹಿಳೆಯರು ಸೇರಿ ಮಗುವಿನ ನಾಮಕರಣ ಮಾಡುವರು. ಒಂದು ತಿಂಗಳ ನಂತರ ಬಾಣಂತಿಯು ಮನೆಯಲ್ಲಿ ಪ್ರವೇಶಿಸುವಳು. ಬಾಣಂತಿ ಉಪಯೋಗಿಸಿದ ಬಟ್ಟೆ ಹಾಸಿಗೆಗಳನ್ನು ಮನೆಯೊಳಗೆ ತರದೆ ಅವುಗಳನ್ನು ಹೊರಗೆ ಚಲ್ಲುವರು.

ಹುಟ್ಟಿದ ಮಗುವಿನ ಕಾರ್ಯಗಳನ್ನು ಈ ರೀತಿ ಆಚರಿಸುತ್ತಾರೆ. ಮನೆತನದ ಸಂಸ್ಕಾರಗಳೊಂದಿಗೆ ಮಗು ಬೆಳೆಯುತ್ತಾನೆ. ದೊಡ್ಡವನಾದ ಮೇಲೆ ವಿದ್ಯೆಯನ್ನು ಕಲಿತು ಜಾಣನಾಗಿ ಮನೆತನಕ್ಕೆ, ಸಮಾಜಕ್ಕೆ ಸಹಾಯಕನಾಗಿ ಬಾಳಿ ಬೆಳೆದು ಮನೆತನದ ಕೀರ್ತಿಯನ್ನು ತರುತ್ತಾನೆ. ತಂದೆ-ತಾಯಿಗಳು ಸಮಾಜದ ಪ್ರತಿಯೊಂದು ರೀತಿ-ನೀತಿ, ನಿಯಮಗಳನ್ನು ಪರಿಪಾಲನೆ ಮಾಡಿ ಸಮಾಜಕ್ಕೆ ಹೊಂದಿಕೊಂಡು ಹೋಗುವಂತೆ ಮಕ್ಕಳಿಗೆ ಹೇಳುತ್ತಾರೆ.

ಋತುಮತಿ (ನ್ಹಾಯಿಗಿ) : ಹೆಣ್ಣು ಮೊದಲಬಾರಿ ಮೈನೆರೆದಾಗ ಎಲ್ಲ ಸಮಾಜದವರು ವಿಶಿಷ್ಟವಾದ ಆಚರಣೆಗಳನ್ನು ಆಚರಿಸುತ್ತಾರೆ. ಆದರೆ ಕಂಜರಭಾಟ ಸಮುದಾಯವು ಸಂಚಾರಿಗಳಾಗಿದ್ದು ಒಂದೇ ಕಡೆ ನೆಲೆ ಇಲ್ಲದ ಕಾರಣ ಯಾವ ಕಾರ್ಯಕ್ರಮಗಳನ್ನು ಮಾಡುವುದಿಲ್ಲ. ಸಂಚಾರದ ಸಮಯಕ್ಕೆ ಇದೇ ಸಮಾಜದವರು ಒಂದು ಕಡೆಗೆ ಸೇರಿದಾಗ ಮೈನೆರೆತ ಹೆಣ್ಣು ಮಗಳ ವಿಷಯವನ್ನು ತಿಳಿಸುತ್ತಿದ್ದರು. ಆಗ ಸಮಾಜದವರಿಗೆ ಈ ಸುದ್ದಿ ಗೊತ್ತುಪಡಿಸಲಾಗುತ್ತಿತ್ತು. ಇತ್ತೀಚೆಗೆ ನೆಲೆ ನಿಂತ ಕಂಜರಭಾಟರು ತಮ್ಮ ಹೆಣ್ಣು ಮಕ್ಕಳು ಮೈನೆರೆದಾಗ ಬಂಧುಬಳಗದವರಿಗೆ ಸುದ್ದಿಯನ್ನು ಹೇಳಿ ಕಳಿಸುತ್ತಾರೆ. ಅವಳಿಗೆ ಮನೆಯಲ್ಲಿ ಪ್ರತ್ಯೇಕ ಸ್ಥಳದಲ್ಲಿ ಕೂರಿಸುತ್ತಾರೆ. ಅವಳು ಮಾಡಿದ ಅಡಿಗೆಯನ್ನು ಯಾರೂ ತಿನ್ನುವುದಿಲ್ಲ. ಅವಳಿಗೆ ಒಣಕೊಬ್ಬರಿ, ಬೆಲ್ಲ, ತುಪ್ಪ, ಉತ್ತತ್ತಿ ಮುಂತಾದ ಪೌಷ್ಠಿಕ ಆಹಾರವನ್ನು ನೀಡುವರು. ಏಳು ದಿನಗಳವರೆಗೆ ಸಮುದಾಯದ ಮುತ್ತೈದೆಯರು ಸೇರಿ

ಹಾಡುವರು ಹಾಗೂ ಕುಣಿಯುವರು ಇದೇ ರೀತಿ ಏಳು ದಿನ ಕಾರ್ಯಕ್ರಮಗಳನ್ನು ಮಾಡುತ್ತಾರೆ. ಏಳು ದಿನಗಳ ನಂತರ ಅವಳಿಗೆ ಕೈಯಲ್ಲಿ ಹಸಿರು ಬಳೆಗಳನ್ನು ಹಾಕಿಸುವರು. ಹೊಸದಾದ ಹಸಿರು ಬಣ್ಣದ ಸೀರೆಯನ್ನು ತಂದು ಉಡಿಸುವರು. ಆಭರಣಗಳನ್ನು ಹಾಕಿ ಶೃಂಗಾರಿಸಿ ಮುತ್ತೈದೆಯರು ಉಡಿ ತುಂಬುವರು. ಬಂದಂತಹ ಕುಲದ ಗುರು ಹಾಗೂ ಹಿರಿಯರಿಗೆಲ್ಲಾ ಊಟ ಅಥವಾ ಅಲ್ಪ ಆಹಾರದ ವ್ಯವಸ್ಥೆಯನ್ನು ಮಾಡಲಾಗುತ್ತದೆ. ಮಾರನೆಯ ದಿನದಿಂದ ಅವಳಿಗೆ ದೇವರ ಮನೆಗೆ ಪ್ರವೇಶಿಸಲು, ಅಡುಗೆಯನ್ನು ಮಾಡಲು, ಎಲ್ಲರ ಜೊತೆಗೆ ಸರಾಗವಾಗಿ ವ್ಯವಹರಿಸಲು ಅನುಮತಿ ಸಿಕ್ಕಂತಾಗುತ್ತದೆ. ಈ ರೀತಿಯಾಗಿ ಋತುಮತಿ ಶಾಸ್ತ್ರವನ್ನು ಸಾಂಪ್ರದಾಯದ ನಿಯಮದಂತೆ ಮಾಡಲಾಗುತ್ತದೆ.

ಮರಣ (ಮೌತ್)

ಸಾವಿನ ನಂತರದ ಕಲ್ಪನೆ : ಮನುಷ್ಯ ಹುಟ್ಟಿದ ಮೇಲೆ ಸಾವು ಕಟ್ಟಿಟ್ಟಿದ್ದು. ಹುಟ್ಟು-ಸಾವುಗಳು ಒಂದೇ ನಾಣ್ಯದ ಎರಡು ಮುಖಗಳು. ಪ್ರತಿಯೊಂದು ಜೀವಿ ಸಾಯಲೇ ಬೇಕು. ಮನುಷ್ಯ ಮರಣ ಹೊಂದಿದ ಮೇಲೆ ಆಚರಿಸುವ ವಿಧಿ ವಿಧಾನಗಳು, ಪದ್ಧತಿ ಸರಿಯಾಗಿ ಮಾಡಿದರೆ ಅವರ ಆತ್ಮಕ್ಕೆ ಶಾಂತಿ ದೊರೆಯುತ್ತದೆ. ಸರಿಯಾಗಿ ಮಾಡದಿದ್ದರೆ ಅವರ ಆತ್ಮಕ್ಕೆ ಶಾಂತಿ ದೊರೆಯುವುದಿಲ್ಲ. ಅವರ ಆತ್ಮ ಅಲೆಯುತ್ತಿರುತ್ತದೆ. ಸ್ವರ್ಗದಲ್ಲಿ ಸ್ಥಾನ ದೊರೆಯುವುದಿಲ್ಲ. ದೇವತೆ(ಹಿರಿಯರೊಂದಿಗೆ)ಗಳೊಂದಿಗೆ ಕೂಡುವುದಿಲ್ಲ ಕೊಲೆ ಆದವರ, ಆತ್ಮಹತ್ಯೆ ಮಾಡಿಕೊಂಡವರ ಆತ್ಮ ಇಲ್ಲಿಯೇ ಇರುತ್ತದೆ. ಅವರ ಮರಣದ ಸಮಯ ಬಂದಾಗ ಅವರಿಗೆ ಸ್ವರ್ಗ ಇಲ್ಲವೇ ನರಕದಲ್ಲಿ ಪ್ರವೇಶ ದೊರೆಯುತ್ತದೆ ಎಂದೂ ನಂಬುತ್ತಾರೆ. ಅಂಥವರು ದೆವ್ವಗಳಾಗಿ ಜನರನ್ನು ಕಾಡಿಸುತ್ತಾರೆ ಎಂದು ಮತ್ತು ಯಾರು ದಾನ, ಧರ್ಮ, ಒಳ್ಳೆಯ ಕೆಲಸಗಳನ್ನು ಮಾಡುತ್ತಾರೆಯೋ ಅವರಿಗೆ ಸ್ವರ್ಗ ದೊರೆಯುತ್ತದೆ ದೇವರ ರೂಪದಲ್ಲಿ ಅವರು ಕಾಣುತ್ತಾರೆ ಎಂದು ಭಾವಿಸುತ್ತಾರೆ.

ಶವ ಸಂಸ್ಕಾರ (ಮಾಟ್ಟಿಕರಣಾ) : ಕಂಜರಭಾಟರಲ್ಲಿ ಮರಣ ಸಂಭವಿಸಿದರೆ ಶವಸಂಸ್ಕಾರ ಮಾಡುತ್ತಾರೆ. ಸತ್ತ ನಂತರ ಹಾಸಿಗೆಯ ಮೇಲೆ ಶವವನ್ನು ಹಾಕಿ ಕಾಲುಗಳನ್ನು ಮಡಚುತ್ತಾರೆ. ನಂತರ ತಲೆಗೆ ಪಗಡಿ ಸುತ್ತುತ್ತಾರೆ. ಕಾಲು ಹಾಗೂ ತಲೆಯ ಹತ್ತಿರ ಚಾಕು ಇಲ್ಲವೆ ಚೂರಿಗಳನ್ನು ಇಡುತ್ತಾರೆ. ಮನೆಯ ಮುಂದೆ ಬೆಂಕಿ ಹಾಕುತ್ತಾರೆ. ಕಳ್ಳುಬಳ್ಳಿಯವರಿಗೆ ಹಾಗೂ ಬಂಧುಬಳಗ, ಮಿತ್ರರಿಗೆ ಸಾವಿನ ಸುದ್ದಿ ಮುಟ್ಟಿಸಲು ಒಬ್ಬ ವ್ಯಕ್ತಿಯನ್ನು ನೇಮಿಸಿ ಕಳಿಸುತ್ತಾರೆ. ಇಲ್ಲವೇ ಟಪಾಲು ಮತ್ತು ದೂರವಾಣಿಗಳ ಮುಖಾಂತರ ಸುದ್ದಿ ಮುಟ್ಟಿಸುತ್ತಾರೆ. ಈ ಸಮುದಾಯದ ದೈವದವರು ಸೇರಿ ಸತ್ತವರ ಹಿರಿಯರಿಗೆ ಮತ್ತು ಅವರ ಕುಲಗುರು(ಗೊಡ್ಡಿವಾನ)ಗಳಿಗೆ ಕರೆಯಿಸಿ ಜಾತಿಯ ಪದ್ಧತಿಯಂತೆ ಮುಂದಿನ ಕಾರ್ಯಗಳನ್ನು ಶುರುಮಾಡುತ್ತಾರೆ. ಸತ್ತವರ ಮನೆಯಲ್ಲಿ ಹಿರಿಯರು ಯಾರು ಇರುತ್ತಾರೋ ಅವರಿಗೆ ಶವಸಂಸ್ಕಾರದ ಕಾರ್ಯಗಳು ಮುಗಿಯುವವರೆಗೆ ಜವಾಬ್ದಾರಿಯನ್ನು ಕೊಟ್ಟು ತಲೆಯ ಮೇಲೆ ಟೊಪ್ಪಿಗೆ ಅಥವಾ ಪಗಡಿ ವಗೈರೆ ಇದ್ದರೆ ಅದನ್ನು ತಗೆಯುತ್ತಾರೆ.

ಅದಕ್ಕೆ 'ಮೊಡ್ನಾ' ಎನ್ನುತ್ತಾರೆ. ಅವನಿಂದ ಅವರ ಕುಲಗುರುಗಳಿಗೆ ೭ ರೂಪಾಯಿಗಳನ್ನು ಕೊಡಿಸುತ್ತಾರೆ. ಅದಕ್ಕೆ 'ಗೊಡ್ನಿ' ಎನ್ನುತ್ತಾರೆ. ಇವರಿಬ್ಬರೂ ಹೆಗಲು ಕೊಡುವವರಲ್ಲಿ ಮುಖ್ಯರು. ಇನ್ನಿಬ್ಬರು ಅವರ ಸಂಬಂಧಿಕರನ್ನು ಆಯ್ಕೆ ಮಾಡಿ ನಾಲ್ಕು ಜನರಿಗೆ ಶವಸಂಸ್ಕಾರದ ಜವಾಬ್ದಾರಿಯನ್ನು ಕೊಡುತ್ತಾರೆ. ಹೆಣಕ್ಕೆ ಹೆಗಲು ಕೊಡುವವರ ಮನೆಯಲ್ಲಿ ಹೆರಿಗೆಯಾದವರು ಇಲ್ಲವೇ ಮುಟ್ಟು ಆದಂತಹ ಹೆಣ್ಣು ಮಕ್ಕಳು ಇದ್ದರೆ ಅಂಥವರ ಮನೆಯ ಗಂಡುಮಕ್ಕಳು ಹೆಗಲು ಕೊಡುವುದಿಲ್ಲ. ಸತ್ತವರಲ್ಲಿ 'ಬಾಗಡ' ಬೆಡಗಿಗೆ ಸೇರಿದವರಾಗಿದ್ದಾರೆ ಹೊರಸಿನ (ಖಾಟ) ಮೇಲೆ ಒಯ್ಯುತ್ತಾರೆ. ನಾಳಾದವರು ಇದ್ದರೆ ಬಿದರಿನ ಚಟ್ (ಕಾಂಠಿ) ಕಟ್ಟಿ ಶವವನ್ನು ಒಯ್ಯುತ್ತಾರೆ.

ಪೇಟೆಗೆ ಹೋಗಿ ಮೊದಲು ಬಟ್ಟೆ ಖರೀದಿ ಮಾಡುತ್ತಾರೆ. ಗಂಡಸರು ಸತ್ತಿದ್ದರೆ ಬಿಳಿ ಬಣ್ಣದ ಬಟ್ಟೆ ತೆಗೆದುಕೊಳ್ಳುತ್ತಾರೆ. ಮೂರು ಮೀಟರ್ ಧೋತರ, ಒಂದೂವರೆ ಮೀಟರ್ ಅಂಗಿಗೆ ಮೂರು ಮೀಟರ್ ತಲೆಯ ಪಗಡಿಗೆ ಮೂರು ಮೀಟರ್ ಶವದ ಮೇಲೆ ಹೊದಿಸಲು (ಕಫನ) ಹಾಗೂ ಪಾವ್ ಮೀಟರನ ಎರಡು ತುಂಡುಗಳನ್ನು ಮಾಡಿ ಒಂದು ತುಂಡು ನಡಕ್ಕೆ ಕಟ್ಟಲು, ಒಂದು ತುಂಡು ತಲೆಗೆ ಕಟ್ಟಲು ತೆಗೆದುಕೊಳ್ಳುತ್ತಾರೆ. ಹೆಂಗಸರು ಸತ್ತಿದ್ದರೆ ಕೆಂಪು ಬಣ್ಣದ ಬಟ್ಟೆ ತೆಗೆದುಕೊಳ್ಳುತ್ತಾರೆ. ಮೂರು ಮೀಟರ್ ಲಂಗ, ಒಂದೂವರೆ ಮೀಟರ್ ಅಂಗಿಗೆ, ಮೂರು ಮೀಟರ್ ಶವದ ಮೇಲೆ (ಕಫನ) ಹಾಕಲು ಬಟ್ಟೆ ತೆಗೆದುಕೊಳ್ಳುತ್ತಾರೆ. ನಂತರ ಹೊರಸಿಗೆ ಕಾತಿ, ಡಂಬು ವಗೈರೆ ತೆಗೆದುಕೊಳ್ಳುತ್ತಾರೆ. ಚಟ್ಟ ತಯಾರಿಸುವುದು ಇದ್ದರೆ ಬಿದಿರು, ಕಾತಿ, ಸಣಬು ತೆಗೆದುಕೊಳ್ಳುತ್ತಾರೆ. ಇದಲ್ಲದೆ ಮೈದಾಹಿಟ್ಟು, ಗೋಧಿ, ಬ್ಲೆಡ್, ಗಂಧದ ಕಟ್ಟಿಗೆ, ಬಾಚಣಿಕೆ, ಗಂಧದೆಣ್ಣೆ, ಒಣಕೊಬ್ಬರಿ, ಕಡ್ಡಿಪೆಟ್ಟಿಗೆ, ಸಾಬೂನು, ತುಪ್ಪ, ಹರಳೆ, ಕುಳ್ಳು, ಹೂಮಾಲೆ, ಸೂಜಿ, ದಾರ, ಗಡಗಿ ಮುಂತಾದವುಗಳನ್ನು ತೆಗೆದುಕೊಳ್ಳುತ್ತಾರೆ. ನಂತರ ನಾಲ್ಕು ಜನರು ಒಂದು ಕೊಡ ನೀರು ತರುವರು. ಶವಕ್ಕೆ ಸಾಬೂನು ಹಚ್ಚಿ ಸ್ನಾನ ಮಾಡಿಸುವರು. ಧೋತರ ಉಡಿಸಿ, ಅಂಗಿ ಹಾಕಿ ತಲೆಗೆ ಪಗಡಿಯನ್ನು ಸುತ್ತಿ ನಡ ಕಟ್ಟುವರು. ತದನಂತರ ಹೊರಸು ಇದ್ದರೆ ಒಂದು ಕಡೆಯ ಬಿದರಿಗೆ ಕಚ್ಚು ಹಾಕಿ ಮನೆಯ ಯಜಮಾನನು ಮುರಿಯುವನು. ಹೊರಸು ಡಬ್ಬು ಹಾಕಿ ಅದನ್ನು ಕಾತಿಯಿಂದ ಕಟ್ಟುವರು. ಅದರ ಮೇಲೆ ಶವವನ್ನು ಹಾಕುತ್ತಾರೆ ಚಟ್ಟ ಇದ್ದರೆ ಅದರ ಮೇಲೆ ಉತ್ತರಕ್ಕೆ ತಲೆ ಮಾಡಿ ಶವ ಹಾಕುವರು. ಶವದ ಕೈಯಲ್ಲಿ ಮೈದಾಹಿಟ್ಟು ಇಟ್ಟು ಅದರಲ್ಲಿ ಒಂದು ಗಟ್ಟಿ ರೂಪಾಯಿ ಇಡುತ್ತಾರೆ. ಹಾಗೇ ಒಂದು ರೂಪಾಯಿ ಬಾಯಿಯಲ್ಲಿ, ಒಂದು ರೂಪಾಯಿ ಎದೆಯ ಮೇಲೆ ಇಡುತ್ತಾರೆ. ಕೊಡ್ಲಿಯನ್ನು ತೆಗೆದುಕೊಂಡು ಏಳು ಸಲ ಹಲ್ಲಿಗೆ ಬಡೆಯುತ್ತಾರೆ. ಗಡಗಿಗೆ ಕಲ್ಲಿನಿಂದ ಸ್ವಲ್ಪ ಒಡೆದು, ಕುಳ್ಳಿನೊಂದಿಗೆ ಬೆಂಕಿ ಹಾಕುವರು. ಗಡಗಿಯನ್ನು ಸತ್ತವರ ಮನೆತನದ ಹುಡುಗರಿಗೆ ಕೊಟ್ಟು ಶವದ ಮುಂದೆ ನಡೆಯಲು ಹೇಳುತ್ತಾರೆ. ಹರಳೆ, ಗೋಧಿ, ಕವಡಿಗಳನ್ನು ಬೆರಸಿ ಒಂದು ಅರಿವೆಯಲ್ಲಿ ಹಾಕಿ ಹುಡುಗನ ಕೈಯಲ್ಲಿ ಕೊಡುವರು. ಈ ರೀತಿ ಸಜ್ಜುಗೊಳಿಸಿ ಆರತಿ

ಮಾಡಿ, ನೇಮಿಸಿದ ನಾಲ್ಕು ಜನರು ಶವವನ್ನು ಹೊತ್ತೊಯ್ಯುತ್ತಾರೆ. ಕಂಜರಭಾಟ ಸಮುದಾಯದಲ್ಲಿ ಮದುವೆಯಾದವರನ್ನು ಸುಡುತ್ತಾರೆ. ಸಣ್ಣ ಮಕ್ಕಳನ್ನು ಹುಗಿಯುತ್ತಾರೆ. ಹದಿನೈದು ವರ್ಷದ ಮೇಲ್ಪಟ್ಟವರು ಮದುವೆಯಾಗದೆ ತೀರಿಕೊಂಡರೆ ಅವರಿಗೆ ಅರಿಷಿಣ ಹಚ್ಚಿ ಆಲದ ಗಿಡದ ಜೊತೆಗೆ ಮದುವೆಮಾಡಿ ಸುಡುತ್ತಾರೆ.

ಶವಯಾತ್ರೆ : ಶವದ ಮುಂಭಾಗದಲ್ಲಿ ಬೆಂಕಿಯ ಗಡಗಿಯನ್ನು ಅವರ ಮನೆತನದ ಹುಡುಗನು ತೆಗೆದುಕೊಂಡು ಹೋಗುತ್ತಾನೆ. ಒಬ್ಬನು ಹರಳೆ, ಗೋಧಿ, ಕವಡಿಗಳನ್ನು ದಾರಿಗುಂಟ ಚೆಲ್ಲುತ್ತಾ ಸಾಗುತ್ತಾನೆ. ಮುಕ್ತಿಧಾಮದ ಸಮೀಪಕ್ಕೆ ಬಾರಿಗಿಡವನು ನೋಡಿ ಆ ಗಿಡಕ್ಕೆ ನಾಲ್ಕು ಜನರು ಶವವನ್ನು ಹೊತ್ತುಕೊಂಡು ಮುಂಭಾಗದಿಂದ ನಾಲ್ಕು ಸುತ್ತು ನಂತರ ಹಿಂಭಾಗದಿಂದ ಮೂರು ಸುತ್ತು ಬಾರಿಗಿಡಕ್ಕೆ ಸುತ್ತುಹಾಕಿ ಶವವನ್ನು ಕೆಳಗೆ ಇಡುತ್ತಾರೆ. ಶವದ ಮೇಲೆ ಹಾಕಿದ ಬಿಳಿಬಟ್ಟೆಯ ತುದಿಯ ಒಂದು ಗೇಣು ನಾಲ್ಕು ಬೊಟ್ಟು ಅಳತೆ ಮಾಡಿ ಬಟ್ಟೆ ಹರಿಯುತ್ತಾರೆ. ಅದಕ್ಕೆ ಕಫನ ಎನ್ನುತ್ತಾರೆ. ಅದನ್ನು ಬಾರಿಗಿಡಕ್ಕೆ ಸುತ್ತುತ್ತಾರೆ. ನಂತರ ಕೈಯಲ್ಲಿದ್ದ ಮೈದಾಹಿಟ್ಟು ತೆಗೆದು ಅದರಲ್ಲಿಯ ಗಟ್ಟಿ ರೂಪಾಯಿ ತೆಗೆದುಕೊಂಡು ಮೈದಾಹಿಟ್ಟು ಬಾರಿಗಿಡದ ಬುಡಕ್ಕೆ ಹಾಕುತ್ತಾರೆ. ಶವವನ್ನು ಅಲ್ಲಿಯೇ ಬಿಟ್ಟು ನಾಲ್ಕು ಜನರು ಗಟ್ಟಿ ರೂಪಾಯಿ ತೆಗೆದುಕೊಂಡು ಮುಕ್ತಿಧಾಮಕ್ಕೆ ಹೋಗಿ ಸ್ಥಳವನ್ನು ಆಯ್ಕೆ ಮಾಡಿ ಅಲ್ಲಿ ರೂಪಾಯಿ ಇಟ್ಟು ಬರುತ್ತಾರೆ. ನಂತರ ಶವವನ್ನು ಮುಕ್ತಿಧಾಮಕ್ಕೆ ತರುವರು. ಆಯ್ಕೆ ಮಾಡಿದ ಸ್ಥಳದ ಮೇಲೆ ಕಟ್ಟಿಗೆಯ ಒಂದು ಥರವನ್ನು ಇಟ್ಟು ಶವವನ್ನು ಅದರ ಮೇಲೆ ಬೋರಲು ಹಾಕಿ ಕಟ್ಟಿಗೆಗಳನ್ನು ಇಡುತ್ತಾರೆ. ಸ್ವಲ್ಪ ದಂಟಿನ ಹೊರಿ ಕಟ್ಟಿ ಗಡಗಿಯಲ್ಲಿದ್ದ ಬೆಂಕಿಯಿಂದ ದಂಟಿಗೆ ಹಚ್ಚುತ್ತಾರೆ. ಮನೆತನದ ಯಜಮಾನ ಬೆಂಕಿ ಹಚ್ಚಿದ ದಂಟಿನ ಹೊರಿಯನ್ನು ತೆಗೆದುಕೊಂಡು ಶವದ ಸುತ್ತ ಏಳು ಸುತ್ತು ಹಾಕಿ ಅಂತಿಮ ಸಂಸ್ಕಾರದ ವಿಧಿ ಮುಗಿಸಿ ಬೆಂಕಿ ಹಚ್ಚುತ್ತಾನೆ. ಸ್ವಲ್ಪ ವೇಳೆಯ ನಂತರ ಗಂಡು ಬಿದಿರು (ಭೇಡಣೆ) ತೆಗೆದುಕೊಂಡು ತಲೆಗೆ ಏಳು ಸಲ ಬಡೆಯುತ್ತಾನೆ. ಶವಸಂಸ್ಕಾರಕ್ಕೆ ಬಂದ ಜನರಿಗೆ ಒಣಕೊಬ್ಬರಿ, ಗಂಧದ ಕಟ್ಟಿಗೆ ತುಂಡು, ಕುಳ್ಳು ಇವುಗಳನ್ನು ಕೊಟ್ಟು ಚಿತೆಯಲ್ಲಿ ಹಾಕಿಸುವರು. ಇದಕ್ಕೆ ಧರ್ಮ ಥಾಪಡಿ ಎನ್ನುತ್ತಾರೆ. ಶವಸಂಸ್ಕಾರದ ನಂತರ ಎಲ್ಲರೂ ಸ್ನಾನ ಮಾಡುತ್ತಾರೆ. ಮನೆಯ ಸಮೀಪಕ್ಕೆ ಸತ್ತವರ ಕುಟುಂಬದ ಹುಡುಗನು ನೀರು ತೆಗೆದುಕೊಂಡು ನಿಲ್ಲುತ್ತಾನೆ. ಶವಸಂಸ್ಕಾರ ಮುಗಿಸಿ ಬಂದ ಮನೆಯ ಯಜಮಾನನಿಗೆ ಮೊದಲು ನೀರು ಸಿಂಪಡಿಸುತ್ತಾನೆ. ನಂತರ ಆ ನೀರನ್ನು ಹಿಡಿದುಕೊಂಡು ಎಲ್ಲರ ಮೇಲೆ ಸಿಂಪಡಿಸುತ್ತಾನೆ. ಇದಾದ ಮೇಲೆ ಎಲ್ಲರೂ ಓಣಿಯಲ್ಲಿ ಹೋಗುವರು. ಮನೆತನದ ಬಂಧು ಬಳಗದವರು ಉಂಡಿ, ಪೇಡಾ, ಜಿಲೇಬಿ, ಮೈಸೂರುಪಾಕ ಮಿಠಾಯಿಯನ್ನು ತಂದಿರುತ್ತಾರೆ. ಮೈದಾಹಿಟ್ಟಿನಿಂದ ರೊಟ್ಟಿ ಬಡಿದು ಬೆಂಕಿಯ ಮೇಲೆ ಹಂಚು ಇಟ್ಟು ಒಂದೇ ಮಗ್ಗುಲಿಗೆ ರೊಟ್ಟಿಯನ್ನು ಬೇಯಿಸುತ್ತಾರೆ. ಸತ್ತವರ ಮನೆತನದ ಗುರುಗಳು ತಂದಂತಹ ಸಿಹಿ ತಿಂಡಿಗಳನ್ನು ಒಂದು ತಟ್ಟೆಯಲ್ಲಿ ತೆಗೆದುಕೊಂಡು ಓಣಿಯ ಹೊರಗೆ

ಹೋಗುತ್ತಾರೆ. ರೊಟ್ಟಿಯನ್ನು ಎಕ್ಕಿ ಎಲ್ಲೆಯ ಮೇಲೆ ಇಟ್ಟು ನಾಲ್ಕು ಭಾಗಗಳನ್ನು ಮಾಡಿ ನಾಲ್ಕು ದಿಕ್ಕಿಗೆ ಚಲ್ಲುತ್ತಾರೆ. ಇವತ್ತಿನಿಂದ ನಿನ್ನ ಪಾಲು ನಮ್ಮಿಂದ ಮುಗಿಯಿತು ಎಂದು ಹೇಳುತ್ತಾರೆ. ಇದಲ್ಲದೆ ತಂದಂತಹ ಸಿಹಿತಿಂಡಿಗಳನ್ನು ತಟ್ಟೆಯಲ್ಲಿ ಪುಡಿ ಮಾಡಿ ಭೂತಾಯಿಗೆ ಅರ್ಪಿಸುತ್ತಾರೆ. ನಂತರ ಎಲ್ಲರೂ ಉಳಿದ ಸಿಹಿತಿಂಡಿಗಳನ್ನು ತಿಂದು ವಿಷದ ಬಾಯಿ ತೊಳೆಯುತ್ತಾರೆ. ಈ ರೀತಿ ಅಂದಿನ ವಿಧಿಕಾರ್ಯಗಳು ಮುಗಿಯುತ್ತವೆ.

ಸಮಾಧಿ (ಕಬ್ಬರ) : ಶವಸಂಸ್ಕಾರದ ಮರುದಿನ ಚಿತಾಭಸ್ಮ ನಂದಿಸುವ ಕಾರ್ಯಕ್ರಮ. ಅಂದು ಸತ್ತವರ ಮನೆಯ ಮುಂದೆ ಎಲ್ಲರು ಬಂದು ಸೇರುವರು. ಬಂಧುಬಳಗ ಸಮುದಾಯದ ಹಿರಿಯರು ತಮ್ಮ ಶಕ್ತಿ ಅನುಸಾರ ಅಂದಿನ ಕ್ರಿಯಾ ವಿಧಿಗೆ ಹಣ ಕೊಡುವರು. ಮೊದಲು ಈ ಸಮುದಾಯದಲ್ಲಿ ಸಮಾಧಿಗಳನ್ನು ಕಟ್ಟುತ್ತಿರಲಿಲ್ಲ. ಈಗ ಮಾತ್ರ ಸಮಾಧಿಗಳನ್ನು ಕಟ್ಟುತ್ತಾರೆ. ಸಿಮೆಂಟ್, ಇಟ್ಟಿಗೆ, ಮರಳುಗಳಿಂದ ಸಮಾಧಿಗಳನ್ನು ನಿರ್ಮಿಸುವರು.

ಪಿಂಡ ಶ್ರಾದ್ಧಾ (ಪಿಂಡಿ) : ಶವಸಂಸ್ಕಾರದ ಮರುದಿನ ಚಿತಾಭಸ್ಮ ನಂದಿಸುವ ಕಾರ್ಯಕ್ರಮಕ್ಕೆ ಬೇಕಾಗುವ ಗೋಧಿಹಿಟ್ಟು, ಬೆಲ್ಲ, ತುಪ್ಪ, ಕಟ್ಟಿಗೆ, ಕಡ್ಡಿಪೆಟ್ಟಿಗೆ, ಅರ್ಧ ಮೀಟರ್ ಬಿಳಿ ಬಟ್ಟೆ, ಗಡಗಿ, ಮುಚ್ಚಳ, ಬಿಂದಗಿ, ಮಗಿ ತೆಗೆದುಕೊಂಡು ನೇರವಾಗಿ ಸ್ಮಶಾನಕ್ಕೆ (ಮುಕ್ತಿಧಾಮಕ್ಕೆ) ಹೋಗುತ್ತಾರೆ. ಈ ವಿಧಿ ಕಾರ್ಯಕ್ರಮ ಮಾಡುವ ಯಜಮಾನ ಅಂದು ಉಪವಾಸ ಇದ್ದು ಕಾರ್ಯಕ್ರಮಗಳನ್ನು ಮಾಡುತ್ತಾನೆ. ಮೊದಲು ಸ್ವಲ್ಪ ಬೆಲ್ಲ ತೆಗೆದುಕೊಂಡು ಕಟ್ಟಿಗೆಯಿಂದ ತಯಾರಿಸಿದ ವರ್ತುಲಾಕಾರದ ಪಾತ್ರೆ(ಡೋಕ್ಕಾ) ಯಲ್ಲಿ ಬೆರಸಿ ಮೊದಲು ಮನೆಯ ಯಜಮಾನ ಬೆಲ್ಲದ ನೀರನ್ನು ಚಿತಾಭಸ್ಮದ ಮೇಲೆ ಹಾಕಿ ತಣ್ಣಗೆ ಮಾಡುವನು. ನಂತರ ಉಳಿದ ಮೂವರು ಬೆಲ್ಲದ ನೀರು ಹಾಕುವರು. ಬಂದಂತಹ ಜನರು ತಂಬಿಗೆಯಿಂದ ನೀರು ಹಾಕಿ ತಣ್ಣಗೆ ಮಾಡುವರು. ನಂತರ ಚಿತೆಯಲ್ಲಿ ಹಾಕಿದ ಮೂರು ಗಟ್ಟಿ ರೂಪಾಯಿಗಳನ್ನು ಬೂದಿಯಲ್ಲಿ ಕೈಹಾಕಿ ಹುಡುಕುತ್ತಾರೆ ಹಾಗೂ ಅಸ್ಥಿ(ಎಲುವು)ಗಳನ್ನು ಆರಿಸಿ ಬಿಳಿ ಅರಿವೆಯಲ್ಲಿ ಹಾಕಿ ಇಡುತ್ತಾರೆ. ಸ್ಮಶಾನದಲ್ಲಿ ಏಳು ಒಲೆಗಳನ್ನು ನಿರ್ಮಿಸಿ ಹೆಣ್ಣು ಮಕ್ಕಳು ಚಪಾತಿ ಮಾಡುತ್ತಾರೆ. ಒಂದು ಡಬರಿಯಲ್ಲಿ ಬೆಲ್ಲದ ನೀರಿನ ಪಾಯಸ ಮಾಡುತ್ತಾರೆ. ಎಲ್ಲರ ಕಡೆಯಿಂದ ಇಪ್ಪತ್ತೊಂದು ಚಪಾತಿಗಳನ್ನು ತೆಗೆದುಕೊಂಡು ಸಣ್ಣಾಗಿ ಪುಡಿ ಮಾಡಿ ಅದರಲ್ಲಿ ಬೆಲ್ಲ ಮತ್ತು ತುಪ್ಪ ಹಾಕಿ ಕಲಿಸುತ್ತಾರೆ. ಅವುಗಳನ್ನು ಸರಿಯಾಗಿ ಬೆರೆಸಿ ಅದರಿಂದ ಪಿರಾಮಿಡ್ ಆಕಾರದ ಪಿಂಡ (ಪಿಂಡಿ) ತಯಾರಿಸುತ್ತಾರೆ. ಅದಕ್ಕೆ ಬೆಲ್ಲದ ಕಣ್ಣುಗಳನ್ನು ಹಚ್ಚುತ್ತಾರೆ. ಸಮಾಧಿ ತಯಾರಾದ ಮೇಲೆ ಬಾಗಡದವರು ಆಗಿದ್ದರೆ ಅಸ್ಥಿಗಳನ್ನು ಅರಿವೆಯಲ್ಲಿ ಸುತ್ತಿ ಗೋರಿಯ ಮೇಲೆ ಇಡುವರು. ಅದರ ಮುಂದೆ ತಯಾರಿಸಿದಂತಹ ಪಿಂಡ ಇಡುತ್ತಾರೆ. ನಾಳಾದವರಾಗಿದ್ದರೆ ನೀರು ತುಂಬಿದ ಬಿಂದಗಿಯನ್ನು ಸಮಾಧಿಯ ಮೇಲೆ ಇಡುತ್ತಾರೆ. ಪಿಂಡವನ್ನು ಕೆಳಗೆ ಇಡುತ್ತಾರೆ. ನಂತರ ಒಂದು ಪಾತ್ರೆಯಲ್ಲಿ ಚಪಾತಿ, ಬೆಲ್ಲ, ತುಪ್ಪದ ಮಿಶ್ರಣವನ್ನು

ತಯಾರಿಸಿ ನೈವೇದ್ಯಕ್ಕೆ ಕೊಡುತ್ತಾರೆ. ಶವಕ್ಕೆ ಹೆಗಲು ಕೊಟ್ಟವರು ನಾಲ್ವರು ಸಮಾಧಿಯ ಮುಂದೆ ಕುಳಿತು ಕೊಳ್ಳುವರು. ಬೆಂಕಿಯ ಕೆಂಡಗಳನ್ನು ತಂದು ಹಾಕುವರು. ಹಿರಿಯರು ಹೇಳಿದಂತೆ ಮನೆಯ ಯಜಮಾನನು ಪೂಜೆ ಪ್ರಾರಂಭ ಮಾಡುವನು. ಚಪಾತಿ, ಬೆಲ್ಲ, ತುಪ್ಪಗಳನ್ನು ಬೆರಸಿ ಬೆಂಕಿಯಲ್ಲಿ ಹಾಕಿ ಮೇಲೆ ತುಪ್ಪ ಸಿಂಪಡಿಸುವರು. ತುಪ್ಪ ಸಿಂಪಡಿಸಿದ ಮೇಲೆ ಧಗ್ಗನೆ ಬೆಂಕಿ ಹತ್ತಬೇಕು. ಬೆಂಕಿ ಹತ್ತುವವರೆಗೆ ಪೂಜೆ ನಡೆಯುವುದು. ಪೂಜೆಯ ಸಮಯಕ್ಕೆ ದೇವತೆಗಳ ಹೆಸರು, ಸ್ವರ್ಗವಾಸಿಯಾದ ಪ್ರತಿಯೊಂದು ಕುಲದ ಹಿರಿಯರ ಹೆಸರು ಪಠಣ ಮಾಡುವರು. ಬೆಂಕಿ ಹತ್ತಿದ ಮೇಲೆ ಅಂದಿನ ಕಾರ್ಯ ಸ್ವರ್ಗವಾಸಿಯಾದ ವ್ಯಕ್ತಿಗೆ ಮುಟ್ಟಿದಂತೆ ಪಿಂಡದ ಮೇಲಿನ ಭಾಗವನ್ನು ಕೈಯಿಂದ ತೆಗೆದು ಅವನ ಪಾಲಿದೆಂದು ಕಲ್ಲಿನ ಮೇಲೆ ಇಡುವರು. ನಂತರ ಉಪವಾಸ ಇದ್ದ ವ್ಯಕ್ತಿ ಮೊದಲು ಪ್ರಸಾದ ಸ್ವೀಕಾರ ಮಾಡಿ ನಂತರ ಉಳಿದ ಮೂವರಿಗೆ ಪ್ರಸಾದ ಕೊಟ್ಟು ಉಳಿದದ್ದನ್ನು ಗಂಡಸರಿಗೆ, ಹುಡುಗರಿಗೆ ಕೊಡುವರು. ಪಿಂಡದ ಪ್ರಸಾದ ಗಂಡಸರು ಮಾತ್ರ ತಿನ್ನುವರು. ಹೆಂಗಸರಿಗೆ ಕೊಡುವುದಿಲ್ಲ. ಮಾಡಿದಂತಹ ಅಡಿಗೆಯನ್ನು ಸ್ಮಶಾನದಲ್ಲಿ ಗಂಡಸರು, ಹೆಂಗಸರು, ಚಿಕ್ಕಮಕ್ಕಳು ಊಟ ಮಾಡುತ್ತಾರೆ. ಮಡಕೆಯಲ್ಲಿ ಅಸ್ಥಿಗಳನ್ನು ಮತ್ತು ಮೂರು ರೂಪಾಯಿಗಳನ್ನು ಹಾಕಿ ಮಡಕೆಯನ್ನು ಹುಗಿಯುತ್ತಾರೆ. ಕೊನೆಗೆ ಕಟ್ಟಿಗೆಯಿಂದ ಮಾಡಿದ ವರ್ತುಲಾಕಾರದ (ಡೊಕ್ಕು) ಪಾತ್ರೆಯನ್ನು ಎರಡು ಕಲ್ಲುಗಳ ಮೇಲೆ ಇಟ್ಟು ಬಿದರಿನಿಂದ ಒಡೆದು ತುಂಡು ಮಾಡಿ ಮನೆಗೆ ಹಿಂದಿರುಗುವರು.

ದಿನಕ್ರಮ (ಕುಂಡಾ) : ಮೂರನೆಯ ದಿನ ದಿನಕ್ರಮ ಮಾಡಲಾಗುವುದು. ಈ ಕಾರ್ಯಕ್ರಮವನ್ನು ವಾಸಿಸುವ ಸ್ಥಳದಿಂದ ದೂರ ಮಾಡುವರು. ಪೇಟೆಯಿಂದ ಅಕ್ಕಿ, ಸಕ್ಕರೆ, ತುಪ್ಪ, ಉತ್ತತ್ತಿ, ಬಾದಾಮಿ, ಗೊಡಂಬಿ, ದ್ರಾಕ್ಷಿ, ಕಸಕಸ, ಒಣಕೊಬ್ಬರಿ, ಸಿಹಿತಿಂಡಿಗಳು ಮುಂತಾದವುಗಳನ್ನು ತರುತ್ತಾರೆ. ಇದಲ್ಲದೆ ಒಂದು ಬಾನಿ (ಕುಂಡಾ), ಬಿಂದಗಿ, ಮಗಿ, ದೊಡ್ಡ ಮಡಕೆ ತರುತ್ತಾರೆ. ಈ ಎಲ್ಲ ವಸ್ತುಗಳನ್ನು ನೇರವಾಗಿ ದಿನಕ್ರಮ ಕುಂಡಾ ಮಾಡುವ ಸ್ಥಳಕ್ಕೆ ಒಯ್ಯುವರು. ಅಲ್ಲಿ ಮೊದಲು ಏಳು ಒಲೆಗಳನ್ನು ಇಡುವರು. ಒಂದು ಒಲೆಯ ಮೇಲೆ ದೊಡ್ಡ ಮಡಕೆಯನ್ನಿಟ್ಟು ೨-೩ ಕೆ.ಜಿ. ಅಕ್ಕಿ ಹಾಕುವರು. ಇದನ್ನು ಮನೆಯ ಯಜಮಾನ ಹಾಗೂ ಇನ್ನುಳಿದ ಮೂವರು ಹೆಗಲು ಕೊಟ್ಟವರು ಮಾಡುವರು. ಉಳಿದ ಒಲೆಗಳ ಮೇಲೆ ಹೆಣ್ಣು ಮಕ್ಕಳು ತಮ್ಮ ಪಾಲಿನ ಅಕ್ಕಿ ತೆಗೆದುಕೊಂಡು ಅನ್ನ ಮಾಡುವರು. ಒಂದು ಬಾರಿಗಿಡದ ಟೊಂಗೆಯನ್ನು ತಂದು ಅಲ್ಲಿ ಹುಗಿಯುವರು. ಬಾರಿಗಿಡದ ಕಟ್ಟಿಗೆಯಿಂದ ಸೌಟು ಮಾಡಿ ದೊಡ್ಡ ಮಡಕೆಯ ಅನ್ನ ಮಾಡಲು ಉಪಯೋಗಿಸುವರು. ಸಕ್ಕರೆ, ಉತ್ತತ್ತಿ, ಗೋಡಂಬಿ, ದ್ರಾಕ್ಷಿ, ಬಾದಾಮಿ, ಕಸಕಸಿ, ಒಣಕೊಬ್ಬರಿ, ತಂದಿರುವ ಸಿಹಿತಿಂಡಿಗಳ ಮಿಶ್ರಣ ಮಾಡುವರು. ಬಾರೆ ಗಿಡದ ಟೊಂಗೆಯ ಕೆಳಗೆ ಮರಳು ಹಾಕಿ ಬಾನಿಯನ್ನು ಅದರ ಮೇಲೆ ಡಬ್ಬು ಹಾಕಿ ಅರಿವೆಯಿಂದ ಮುಚ್ಚುವರು. ಸ್ವಲ್ಪ ವೇಳೆಯ ನಂತರ ಅರಿವೆಯನ್ನು ತೆಗೆಯುವರು. ಮರಳಿನ ಮೇಲೆ ಏನಾದರೂ

ಗುರುತು ಕಂಡರೆ ಸತ್ತ ವ್ಯಕ್ತಿ ಬಂದು ಇಂಥ ಗುರುತು ಕೊಟ್ಟು ಹೋದನು ಎಂದು ಹೇಳುವರು. ನಂತರ ಬಾನಿ(ಕುಂಡಾ)ಯನ್ನು ತೆಗೆದುಕೊಂಡು ದೊಡ್ಡ ಮಡಕೆಯ ಹತ್ತಿರ ಕುಳಿತುಕೊಳ್ಳುವರು. ಬಾರಿಗಿಡದ ಸೌಟುನಿಂದ ಮನೆಯ ಯಜಮಾನ ಏಳು ಸಲ ಅನ್ನವನ್ನು ತೆಗೆದು ಬಾನಿಯಲ್ಲಿ ಹಾಕುವನು. ಅದನ್ನು ಕೈಯಿಂದ ಸಮ ಮಾಡಿ ಮಿಶ್ರಣವನ್ನು ಅದರ ಮೇಲೆ ಹಾಕಿ ತುಪ್ಪ ಹಾಕುವನು. ಇದೇ ರೀತಿ ಉಳಿದ ಮೂವರು ಹೆಗಲು ಕೊಟ್ಟವರು ಒಂದೊಂದು ಪದರ ಅನ್ನ, ತುಪ್ಪ ಮಿಶ್ರಣ ಹಾಕುವರು. ಇನ್ನು ಮೂರು ಪದರುಗಳನ್ನು ಉಳಿದವರು ಯಾರಾದರೂ ಹಾಕಿ ಒಟ್ಟು ಏಳು ಪದರು ಹಾಕಿ ಅದರ ಮಧ್ಯದಲ್ಲಿ ನಾಲ್ಕು ಉತ್ತತ್ತಿಗಳನ್ನು ಹಾಕಿ ಬಾನಿಯನ್ನು ಬಾರಿಗಿಡದ ಬುಡಕ್ಕೆ ಇಡುವರು. ನಂತರ ಅರಿವೆಯಿಂದ ಮುಚ್ಚಿ ಬಿಂದಗಿಯನ್ನು ತೆಗೆದುಕೊಂಡು ನೀರು ತರುವರು. ಎಲ್ಲರೂ ಮಾಡಿದ ಅನ್ನದ ಡಬರಿಯಿಂದ ಒಂದೊಂದು ಚಮಚ ಅನ್ನವನ್ನು ತೆಗೆದುಕೊಂಡು ಅದರಲ್ಲಿ ಸಕ್ಕರೆ, ತುಪ್ಪ ಹಾಕುವರು. ಬೆಂಕಿಯ ಕೆಂಡಗಳನ್ನು ತಂದು ಹಾಕುವರು, ಮನೆಯ ಯಜಮಾನ ಅಂದು ಮುಂಜಾನೆಯಿಂದ ಉಪವಾಸ ಇರುತ್ತಾನೆ. ಅವನ ಹಸ್ತದಿಂದ ನೈವೇದ್ಯ ಕಾರ್ಯ ನಡೆಯುವುದು. ಹೆಗಲು ಕೊಟ್ಟ ನಾಲ್ವರು ಕುಳಿತುಕೊಳ್ಳುವರು ಸಮುದಾಯದ ಹಿರಿಯರು ಮರಣ ಹೊಂದಿದ ಹಿರಿಯರ ಹೆಸರು ಪಠಿಸುತ್ತಾ ನೈವೇದ್ಯದ ಅನ್ನವನ್ನು ಬೆಂಕಿಯಲ್ಲಿ ಹಾಕುವರು. ಅದರ ಮೇಲೆ ತುಪ್ಪ ಸಿಂಪಡಿಸುವರು. ತುಪ್ಪ ಹಾಕಿದ ಕೂಡಲೆ ಬೆಂಕಿ ಹತ್ತಿದರೆ ದಿನಕ್ರಮ ಮಾಡಿದ್ದು ಸಾರ್ಥಕವಾಯಿತು ಎಂದು ಭಾವಿಸುತ್ತಾರೆ. ಬೆಂಕಿ ಹತ್ತಿದ ಮೇಲೆ ಬಾರಿಗಿಡದ ಬುಡಕ್ಕೆ ಇಟ್ಟ ಬಾನಿಯ ಮೇಲಿನ ಅರಿವೆಯನ್ನು ತೆಗೆದು ಅದರ ಮಧ್ಯದಲ್ಲಿದ್ದ ಉತ್ತತ್ತಿಗಳೊಂದಿಗೆ ಕೈಯಿಂದ ಅನ್ನವನ್ನು ಮನೆಯ ಯಜಮಾನ ತೆಗೆದು ಸತ್ತವನ ಪಾಲಿಂದು ಕಲ್ಲಿನ ಮೇಲೆ ಇಡುವನು. ನಂತರ ತಾನು ನೈವೆದ್ಯದ ಪ್ರಸಾದವನ್ನು ತಿಂದು ಉಳಿದವರಿಗೆ ಹಂಚುವನು. ಬಾನಿಯಲ್ಲಿರುವ ಅನ್ನವನ್ನು ಮೊದಲು ಮೂರು ಜನ ಹೆಗಲು ಕೊಟ್ಟವರಿಗೆ ಹಾಕಿ ಕೊಡುವನು. ನಂತರ ಉಳಿದ ಗಂಡಸರಿಗೆ ಮಕ್ಕಳಿಗೆ ತೆಗೆದುಕೊಡುವನು. ಉಳಿದ ಅನ್ನುವನ್ನು ಬಾನಿಯಲ್ಲಿ ಅವನು ಊಟ ಮಾಡುವನು. ನಂತರ ಅದರಲ್ಲಿಯೇ ಕೈತೊಳೆದು ಏಳು ಸಲ ಬಾಯಿಯಲ್ಲಿ ನೀರು ತೆಗೆದುಕೊಂಡು ಮುಕ್ಕಳಿಸಿ ಉಗಳುವನು. ಉಳಿದನ್ನವನ್ನು ಬಾರಿಗಿಡದ ಕೆಳಗೆ ಡಬ್ಬು ಹಾಕುವನು. ಬಂದಂಥವರೆಲ್ಲರೂ ಊಟ ಮಾಡುತ್ತಾರೆ. ಕೊನೆಗೆ ದೊಡ್ಡ ಮಡಕೆಯನ್ನು ಒಲೆಯ ಮೇಲೆ ಇಟ್ಟು ಒಡೆದು ಮುಚ್ಚುತ್ತಾರೆ. ಹಾರಿಯಿಂದ ವರ್ತುಲಾಕಾರವನ್ನು ಹಾಕಿ ಮನೆಗೆ ಬರುವರು. ಇಲ್ಲಿ ಒಬ್ಬ ಹುಡುಗ ನೀರು ತೆಗೆದುಕೊಂಡು ಬಂದು ಮನೆ ಯಜಮಾನನ ಮೇಲೆ ಸಿಂಪಡಿಸುವನು. ನಂತರ ಅವನು ಎಲ್ಲರ ಮೇಲೆ ಸಿಂಪಡಿಸುತ್ತಾನೆ. ತರುವಾಯ ಎಲ್ಲರೂ ಮನೆಯ ಒಳಗೆ ಹೋಗುತ್ತಾರೆ. ಅವರ ಮನೆತನದ ಗುರು ಸತ್ತವರ ಗಂಡು ಮಕ್ಕಳ ಕೂದಲು ಕತ್ತರಿಸುವನು. ಇದಾದ ನಂತರ ಮನೆಯ ಅಕ್ಕ-ತಂಗಿಯರು ಒಂದು ಬಾಟ್ಲಿ ಸೆರೆ ತಂದು ದೇವರಿಗೆ ನೈವೇದ್ಯಕೊಟ್ಟು ಮನೆಯ ಯಜಮಾನನ ತಲೆಯ ಮೇಲೆ ಪಗಡಿಯನ್ನು ಕಟ್ಟುವರು.

ಈ ಕಾರ್ಯಕ್ರಮದ ನಂತರ ಅವನು ಎಲ್ಲರ ಜೊತೆಗೆ ಸೇರಿ ಊಟವನ್ನು ಮಾಡುವ ಅನುಮತಿ ದೊರೆಯುವುದು. ಈ ಎಲ್ಲ ಕಾರ್ಯಕ್ರಮಗಳು ಮುಗಿಯುವವರೆಗೆ ಅವನು ಯಾರ ಜೊತೆಗೆ ಊಟ ಮಾಡುವಂತಿಲ್ಲ. ಅವನ ತಿಂದ ಪದಾರ್ಥಗಳನ್ನು ಯಾರೂ ತಿನ್ನುವುದಿಲ್ಲ. ಈ ರೀತಿ ಮೂರು ದಿನ ಕಾರ್ಯಕ್ರಮಗಳನ್ನು ಮಾಡುತ್ತಾರೆ.

ಹದಿನೈದು ವರ್ಷದೊಳಗಿನ ಮಕ್ಕಳು ಸತ್ತರೆ ಅವರಿಗೆ ಹುಗಿಯುತ್ತಾರೆ. ಸತ್ತ ಮಗುವಿಗೆ ಬಿಳಿ ಅರಿವೆಯಲ್ಲಿ ಸುತ್ತಿ ಕುಣಿ ತೆಗೆದು ಹುಗಿಯುವರು. ೨-೩ ತಿಂಗಳ ಮಗು ಇದ್ದರೆ ಮರುದಿನ ಬಾರಿಗಿಡದ ಎಲೆ ತಂದು ಅದರಲ್ಲಿ ಉಂಡಿಯ ಪುಡಿಯನ್ನು ತುಂಬಿ ಎಲೆಯನ್ನು ಹರಿದು ಚೆಲ್ಲುತ್ತಾರೆ. ಊಟ ಮಾಡುವ ಮಗು ಮರಣ ಹೊಂದಿದರೆ ದೊಡ್ಡವರ ದಿನಕ್ರಮವನ್ನು ಮಾಡುವ ರೀತಿ ದಿನಕ್ರಮ (ಕುಂಡಾ) ಮಾಡುತ್ತಾರೆ.

ಹದಿನೈದು ವರ್ಷದ ಮೇಲ್ಪಟ್ಟ ಅವಿವಾಹಿತ ಗಂಡುಮಗು ತೀರಿಕೊಂಡರೆ ದೊಡ್ಡವರಿಗೆ ಮಾಡುವ ರೀತಿಯಲ್ಲಿ ಅಂತ್ಯಕ್ರಿಯೆ ಮಾಡುವರು. ಅರಿಷಣ ಹಚ್ಚಿ ಎಕ್ಕೆ ಗಿಡಕ್ಕೆ ತಾಳಿಕಟ್ಟಿ ಮದುವೆ ಮಾಡುತ್ತಾರೆ. ನಂತರ ಅವನಿಗೆ ಸುಡುತ್ತಾರೆ. ಅವಿವಾಹಿತ ಹೆಣ್ಣು ಮಗಳು ತೀರಿಕೊಂಡರೆ ದೊಡ್ಡವರಿಗೆ ಮಾಡುವ ಪದ್ಧತಿಯನ್ನು ಮಾಡುವರು. ಹಸಿರು ಬಳೆ ತೊಡಿಸಿ, ಅರಿಷಿಣ ಹಚ್ಚಿ ತಾಳಿ ಹಾಕಿ ಎಕ್ಕಿಗಿಡದ ಜೊತೆಗೆ ಮದುವೆ ಮಾಡಿ ಸುಡುತ್ತಾರೆ. ಎರಡು ದಿನದ ದಿನಕ್ರಮಗಳನ್ನು ದೊಡ್ಡವರಿಗೆ ಮಾಡುವ ಪದ್ಧತಿಯಂತೆ ಮಾಡುತ್ತಾರೆ. ಹೀಗೆ ಕಂಜರಭಾಟರಲ್ಲಿ ಹುಟ್ಟಿನಿಂದ ಸಾವಿನವರೆಗೆ ಹಲವಾರು ರೀತಿಯ ಆಚರಣೆಗಳು ಬಳಕೆಯಲ್ಲಿವೆ.

ಧಾರ್ಮಿಕ ವಿಧಿ ವಿಧಾನಗಳು

ಕಂಜರಭಾಟರು ದೇವರನ್ನು ಹೆಚ್ಚು ನಂಬುತ್ತಾರೆ. ನಾನಾ ರೀತಿಯ ಕಾರಣಗಳಿಂದಾಗಿ ಅವರು ದೇವರನ್ನು ಬೇರೆ ಬೇರೆ ಹೆಸರುಗಳಿಂದ ಪೂಜಿಸುತ್ತಾರೆ. ತಮ್ಮ ಕಷ್ಟನಷ್ಟಗಳ ಕಾಲಕ್ಕೆ ದೇವರುಗಳನ್ನು, ಕುಲದೇವರುಗಳನ್ನು ಬೇಡಿಕೊಳ್ಳುವರು. ಒಂದೊಂದು ರೋಗಕ್ಕೆ, ಒಂದೊಂದು ಕಾಟಕ್ಕೆ, ಸುಖ ಸಮೃದ್ಧಿಗೆ ಒಬ್ಬೊಬ್ಬ ದೇವರು ಎಂದು ನಿಗದಿ ಮಾಡಿ ಕೊಂಡಿರುತ್ತಾರೆ. ಮನೆದೇವರು, ಕುಲದೇವರು, ಊರದೇವರು ಹೀಗೆ ಅನೇಕ ಬಗೆಯ ದೇವರುಗಳನ್ನು ಸೃಷ್ಟಿಸಿಕೊಳ್ಳುತ್ತಾ ಕಲ್ಲು, ಗಿಡ ಮುಂತಾದವುಗಳನ್ನು ಸಹ ದೇವರ ರೂಪದಲ್ಲಿ ಕಾಣುತ್ತಾರೆ. ಈ ಜನ ತಮ್ಮ ಕುಲದೇವತೆಗಳಾದ ಕಾಳಿಕಾದೇವಿ, ರಾಮದೇವಜಿ (ಅಲಖ) ಹನುಮಾನ, ನಾಥ್ಯಾ, ಬೋಜ್ಯಾ, ಗುಗ್ಗಾ, ದುರ್ಗಾಮಾತಾ, ಶಿರಸಿ ಮಾರಿಕಾಂಬೆ, ಶ್ರೀಕೃಷ್ಣ, ವಿಠ್ಠಲ, ಶಿವ ಮುಂತಾದ ದೇವರುಗಳನ್ನು ಪೂಜಿಸುವರು. ಕೆಲದೇವರಿಗೆ ಬೇಟೆ ಸಹ ಕೊಡುತ್ತಾರೆ. ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಅವರು ಅನೇಕ ದೇವರ ಉಪಾಸನೆ ಮಾಡುತ್ತಾರೆ. ಅವರು ನಂಬಿದ ದೇವತೆಗಳ ಪೂಜೆ ಪುರಸ್ಕಾರಗಳನ್ನು ಭಕ್ತಿಯಿಂದ ಮಾಡುತ್ತಾರೆ.

ಕಾಳಿಕಾದೇವಿ ಪೂಜೆ : ಮಾಘ ಮಾಸದಲ್ಲಿ ಹೋಳಿ ಹುಣ್ಣಿಮೆ ಹಬ್ಬ ಬರುವುದು.

ಹೋಳಿ ಹುಣ್ಣಿಮೆಯ ದಿನ ಕಾಳಿಕಾದೇವಿಯ ಪೂಜೆಯನ್ನು ಬಹಳಷ್ಟು ವಿಜೃಂಭಣೆಯಿಂದ ಮಾಡಲಾಗುತ್ತದೆ. ಕಾಳಿಕಾದೇವಿ ಪೂಜೆಯನ್ನು ಕಂಜರಭಾಟ ಸಮುದಾಯದ ಕೆಲ ಜನರು ವರ್ಷಕ್ಕೊಮ್ಮೆ ಮಾಡುತ್ತಾರೆ. ಅಂದು ಮನೆಯ ಮುಖ್ಯಸ್ಥ ಉಪವಾಸ ಇರುವನು. ಮನೆಯ ಮುಂದೆ ಹಂದರವನ್ನು ಹಾಕಿ ಆಕಳ ಸಗಣಿ ಮತ್ತು ಆಕಳ ಗೋಮೂತ್ರವನ್ನು ತಂದು ನೆಲವನ್ನು ಸಾರಿಸುವರು. ಬಾಗಿಲನ್ನು ತಳಿರು ತೋರಣಗಳಿಂದ ಹಂದರವನ್ನು ಸಿಂಗರಿಸುವರು. ಹಂದರದ ಒಂದು ಕಡೆ ಕುಂಕುಮದಿಂದ ಸಿಂಗರಿಸಿ ಕಾಳಿಕಾದೇವಿ ಮೂರ್ತಿ ಹಾಗೂ ಫೋಟೊ ಇಡುವರು. ಮೂರ್ತಿಯ ಮುಂದೆ ಸೆರೆ ತುಂಬಿದ ಬಾಟ್ಲಿಯನ್ನು ಇಟ್ಟು ಸಿಹಿತಿಂಡಿಗಳನ್ನು ಹಾಗೂ ಹಣ್ಣು-ಹಂಪಲಗಳನ್ನು ಇರಿಸುತ್ತಾರೆ. ಹೂವುಗಳಿಂದ ಶೃಂಗಾರ ಮಾಡುವರು. ಇವರು ಎರಡು ಹೋತು(ಮೇಕೆ)ಗಳನ್ನು ತರುವರು. ಒಂದು ಬಲಿ ಕೊಡುವ ಹೋತು ಮರಿಯನ್ನು ಹಂದರದ ಮಧ್ಯದಲ್ಲಿ ನಿಲ್ಲಿಸಿ ಕೊರಳಿನಲ್ಲಿ ಹೂಮಾಲೆ ಹಾಕಿ ಹಣೆಗೆ ಕಾಲಿಗೆ ಕುಂಕುಮ ಹಚ್ಚಿ ಲಿಂಬೆಹಣ್ಣು ತಿನ್ನಿಸುವರು. ಅದರ ಮೈ ಮೇಲೆ ನೀರು ಹಾಕಿ ಕೈ ಆಡಿಸುವರು. ಹೋತು ತನ್ನ ಮೈಯನ್ನು ಕೊಡವಿದಾಗ ಕೂಡಲೇ ಅದನ್ನು ನೆಲಕ್ಕೆ ಹಾಕಿ ಚೂರಿಯಿಂದ ಅದರ ಕುತ್ತಿಗೆ ಕೊಯ್ದು ಒಂದು ಬಟ್ಟಲಿನಲ್ಲಿ ರಕ್ತವನ್ನು ಹಿಡಿದು ಪೂಜಾ ಸ್ಥಳದಲ್ಲಿ ಇಡುವರು. ನಂತರ ಹೋತುಮರಿಯ ಚರ್ಮ ಸುಲಿದು ತಲೆಕಾಲುಗಳನ್ನು ಬೇರೆ ಮಾಡಿ ಅವುಗಳನ್ನು ಬೇಯಿಸದೆ ಬಾಯಿಯಲ್ಲಿ ಒಂದು ಕಾಲು ಇರಿಸಿ ಉಳಿದ ಮೂರು ಕಾಲುಗಳನ್ನು ತಲೆಯ ಸುತ್ತಲು ಇಟ್ಟು ಪೂಜಾ ಸ್ಥಳದಲ್ಲಿ ಇಡುವರು. ಮಾಂಸದ ಸಾರು, ಅನ್ನ ಮಾಡಿ ನೈವೇದ್ಯ ಕೊಡುವರು. ಆಗ ಎಲ್ಲರೂ ಸೇರಿ ಕಾಳಿಕಾದೇವಿಯ ಹಾಡುಗಳನ್ನು ಹಾಡುವರು. ಡೋಲಕ, ಕಂಚಿನ ತಾಟುಗಳ ವಾದ್ಯಗಳೊಂದಿಗೆ ಹಾಡುವರು. ಅವರ ಮನೆತನದಲ್ಲಿ ಯಾರಿಗಾದರೂ ದೇವರು ಮೈಮೇಲೆ ಬರುತ್ತಿದ್ದರೆ ಅವರು ಕೈಯಲ್ಲಿ ಕಬ್ಬಿಣದ ಸರಪಳಿಯನ್ನು ಹಿಡಿದು ತನ್ನ ಮೈಗೆ ಬಡಿದುಕೊಳ್ಳುವರು. ಅವರ ಮನೆಯಲ್ಲಿ ಯಾರಾದರೂ ತಪ್ಪು ಮಾಡಿದ್ದರೆ ಅವರನ್ನು ಎಲ್ಲರ ಎದುರಿಗೆ ಕರೆಯಿಸಿ ಕಬ್ಬಿಣದ ಸರಪಳಿಯಿಂದ ಹೊಡೆದು ಅವರು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡಿಸುವರು. ನಂತರ ದೇವರಿಗೆ ನೈವೇದ್ಯವಾದ ಅನ್ನ ಹಾಗೂ ತುಪ್ಪವನ್ನು ಹೋಮದಲ್ಲಿ ಹಾಕುವರು. ಬೆಂಕಿ ಹತ್ತುವವರೆಗೆ ಅದರಲ್ಲಿ ಅನ್ನ ಹಾಗೂ ತುಪ್ಪ ಹಾಕುತ್ತಾರೆ. ಬೆಂಕಿ ಹತ್ತಿದ ಮೇಲೆ ಪೂಜೆ ಮಾಡಿದ್ದು ಸಾರ್ಥಕವಾಯಿತು ಎಂದು ಭಾವಿಸುತ್ತಾರೆ. ನಂತರ ಸೆರೆಯ ನೈವೇದ್ಯವನ್ನು ಕೊಟ್ಟು ಹಿರಿಯರ ಹೆಸರುಗಳನ್ನು ಪಠಿಸುತ್ತಾ ಉಪವಾಸ ಇದ್ದ ವ್ಯಕ್ತಿ ಬಟ್ಟಲದಲ್ಲಿ ಹಿಡಿದಿಟ್ಟ ಹಸಿ ರಕ್ತದಲ್ಲಿ ಸೆರೆಯನ್ನು ಹಾಕಿ ಕಾಳಿಕಾದೇವಿಯ ಹೆಸರನ್ನು ಸ್ಮರಿಸುತ್ತಾ ಕುಡಿಯುತ್ತಾನೆ. ಅನ್ನದ ಪ್ರಸಾದವನ್ನು ತೆಗೆದು ಕೊಂಡು ಉಪವಾಸ ಮುಕ್ತಾಯಗೊಳಿಸಿ ಬಂದಂತಹ ಜನರಿಗೆ ಊಟ ಮಾಡಿಸುವರು. ಪೂಜೆಗೆ ಇಟ್ಟ ಹೋತಮರಿಯ ತಲೆ ಹಾಗೂ ಕಾಲುಗಳನ್ನು ಹುರುದು ಅದರ ಪಲ್ಯೆಸಾರು ಮಾಡಿ ಮನೆತನದವರಷ್ಟೇ ತಿನ್ನುತ್ತಾರೆ. ಈ ರೀತಿ ಇವರು ಕಾಳಿಕದೇವಿಯ ಪೂಜೆ

ಮಾಡುತ್ತಾರೆ. ಕಾಳಿಕಾದೇವಿಯ ಅಧಿಷ್ಠಾನ ಗುಜರಾತದ ಪಾವಾಗಡ ಮತ್ತು ಪಶ್ಚಿಮ ಬಂಗಾಳದ ಕಲ್ಕತ್ತದಲ್ಲಿದೆ.

ಶ್ರೀರಾಮದೇವಜಿ ಪೂಜೆ (ಅಲಖ) : ಕಂಜರಭಾಟ ಸಮುದಾಯದವರು ಶ್ರೀರಾಮದೇವಜಿಯ ಪೂಜೆಯನ್ನು ಮಾಡುತ್ತಾರೆ. ಇದು ಕೆಲವರ ಕುಲದೇವರು. ರಾಜಸ್ಥಾನದ ರಣಭೋಡದಲ್ಲಿ ಶ್ರೀರಾಮದೇವಜಿಯ ದೇವಸ್ಥಾನ ಇದೆ. ಹೋಳಿ ಹುಣ್ಣಿಮೆಯ ೧೫ ದಿನ ಮೊದಲು ಪೂಜಾ ಸಮಾರಂಭ ನಡೆಯುವುದು. ಈ ಪೂಜೆಗೆ ಬೆಳದಿಂಗಳು ಇರಬೇಕು. ರಾಮದೇವಜಿಯ ಪೂಜಾ ಮಾಡುವ ಮನೆತನದ ಹಿರಿಯ ಅಂದು ಉಪವಾಸ ಇದ್ದು ಪೂಜೆಯನ್ನು ಮಾಡುತ್ತಾರೆ. ಮಾರುಕಟ್ಟೆಯಿಂದ ಗೋಧಿಹಿಟ್ಟು, ಬೆಲ್ಲ, ತುಪ್ಪ, ತೆಂಗಿನಕಾಯಿ, ಹೂವು, ಕುಂಕುಮ, ಊದಿನಕಡ್ಡಿ, ಸಿಹಿ ತಿಂಡಿ ಮುಂತಾದವುಗಳನ್ನು ತರುವರು. ಮನೆಯ ಮುಂದೆ ಹಂದರವನ್ನು ಹಾಕಿ ಆಕಳ ಸಗಣಿ ಮತ್ತು ಮೂತ್ರದಿಂದ ನೆಲವನ್ನು ಸಾರಿಸಿ ಬೆಳ್ಳಿಯ ಮೂರ್ತಿ ಹಾಗೂ ಫೋಟೊಗಳಿಗೆ ಕುಂಕುಮ ಹಚ್ಚಿ ಸಿಂಗರಿಸುವರು. ನಂತರ ಮನೆಯ ಹಾಗೂ ಸಮುದಾಯದ ಮಹಿಳೆಯರು ಎಲ್ಲಾ ಸೇರಿ ಒಂದು ಪಾತ್ರೆಯಲ್ಲಿ ಬೆಲ್ಲದ ಪಾಯಸ ಮಾಡುವರು. ಇಪ್ಪತ್ತೊಂದು ಚಪಾತಿಗಳನ್ನು ತೆಗೆದುಕೊಂಡು ಅವುಗಳನ್ನು ಸಣ್ಣಾಗಿ ಪುಡಿ ಮಾಡಿ ಅದರಲ್ಲಿ ಬೆಲ್ಲ, ತುಪ್ಪ, ಬೆರಸಿ ಮಿಶ್ರಣ ಮಾಡುವರು, ನಂತರ ಒಂದು ದೊಡ್ಡ ಪಿಂಡ ಮತ್ತು ಒಂದು ಸಣ್ಣಪಿಂಡ ಮಾಡಿ ಪೂಜೆಗೆ ಇಡುವರು. ನಂತರ ಚಪಾತಿ, ಬೆಲ್ಲ ತುಪ್ಪದ ಮಿಶ್ರಣವನ್ನು ತೆಗೆದುಕೊಂಡು ಮನೆಯ ಯಜಮಾನ ಪೂಜೆ ಪ್ರಾರಂಭ ಮಾಡುತ್ತಾನೆ. ಬೆಂಕಿಯನ್ನು ತರಿಸಿ ನೆಲದ ಮೇಲೆ ಹಾಕಿ ದೇವತೆಗಳ ಹೆಸರು ಮತ್ತು ಹಿರಿಯರ ಹೆಸರುಗಳನ್ನು ಪಠಿಸುತ್ತಾ ನೈವೇದ್ಯ ಬೆಂಕಿಯಲ್ಲಿ ಹಾಕಿ ತುಪ್ಪ ಸಿಂಪಡಿಸುವರು. ಅದರಿಂದ ಬೆಂಕಿ ಹತ್ತಿದರೆ ಪೂಜೆ ಮಾಡಿದ್ದು ದೇವರಿಗೆ ಅರ್ಪಿತವಾಯಿತು ಎಂದು ಹರ್ಷಪಡುತ್ತಾರೆ. ಮನೆಯ ಯಜಮಾನ ಮೊದಲು ಪ್ರಸಾದ ಸೇವಿಸಿ ಉಪವಾಸ ಮುಕ್ತಾಯ ಮಾಡಿ ಕುಲಗುರು(ಗೋಡ್ಡಿವಾನ) ಅವರಿಗೆ ಪ್ರಸಾದ ಕೊಟ್ಟು ನಂತರ ಉಳಿದ ಪ್ರಸಾದ ಪುರುಷರಿಗೆ ಕೊಡುವನು. ಸಣ್ಣ ಪಿಂಡವನ್ನು ಮನೆಯ ಯಜಮಾನ ತಿನ್ನುತ್ತಾನೆ. ದೊಡ್ಡ ಪಿಂಡವನ್ನು ಉಳಿದ ಪುರುಷರೆಲ್ಲರು ತಿನ್ನುವರು. ಪಿಂಡದ ಪ್ರಸಾದ ಮಹಿಳೆಯರಿಗೆ ಕೊಡುವುದಿಲ್ಲ. ನಂತರ ಚಪಾತಿ ಮತ್ತು ಬೆಲ್ಲದ ಪಾಯಸ ಎರಡೂ ಕೂಡಿಸಿ ಎಲ್ಲರೂ ಊಟವನ್ನು ಮಾಡುವರು. ಈ ರೀತಿ ಶ್ರೀರಾಮದೇವಜಿಯ ಪೂಜೆಯನ್ನು ಮಾಡುತ್ತಾರೆ.

ಶ್ರೀಕೃಷ್ಣ ಆಧ್ಯಾತ್ಮಿಕ ಮಂದಿರ : ಕಂಜರಭಾಟರು ದುಶ್ಚಟಗಳಿಗೆ ಬಲಿಯಾದ ಜನ. ಶ್ರೀ ಸಮರ್ಥ ಸದ್ಗುರು ಧೊಂಡೋಪಂತ ಮಹಾರಾಜ ಸೊಲ್ಲಾಪುರ ಅವರ ಕೃಪೆಯಿಂದ ಹಲವರು ಶಿಷ್ಯರಾದರು. ಶ್ರೀ ಸಮರ್ಥ ಸದ್ಗುರು ಶಿವಲಾಲಸ್ವಾಮಿ ಮಹಾರಾಜ, ಶ್ರೀ ಸಮರ್ಥ ಸದ್ಗುರು ಶಿವರಾಮ ಮಹಾರಾಜ ಅವರ ಆಶಿರ್ವಾದದಿಂದ ಕರ್ನಾಟಕದ ಕೆಲ ಜನರು ಅವರ ಶಿಷ್ಯರಾಗಿ ಆಧ್ಯಾತ್ಮಿಕ ಮಾರ್ಗದಲ್ಲಿ ಧುಮುಕಿದರು. ಹುಬ್ಬಳ್ಳಿಯಲ್ಲಿ

ನೆಲೆಯೂರಿದ ಕಂಜರಭಾಟ ವಸಾಹತಿಯಲ್ಲಿ ೧೯೭೮ರಲ್ಲಿ ಶ್ರೀಕೃಷ್ಣ ಆಧ್ಯಾತ್ಮಿಕ ಮಂದಿರ ಸ್ಥಾಪನೆಯಾಗಿ ಪ್ರತಿ ವರ್ಷ ಶ್ರೀಕೃಷ್ಣ ಜಯಂತಿ, ರಾಮನವಮಿ, ತುಳಸಿ ಮದುವೆ, ಗಣೇಶಚವತಿ ಮುಂತಾದ ಉತ್ಸವಗಳನ್ನು ಈ ಮಂದಿರಲ್ಲಿ ಮಾಡಲಾರಂಭಿಸಿದರು. ಇಲ್ಲಿ ನಿತ್ಯ ಭಜನೆ, ಆರತಿ ಕಾರ್ಯಕ್ರಮಗಳು ಜರುಗುತ್ತವೆ.

ಶ್ರೀ ಯೋಗೇಶ್ವರ ಕೃಷ್ಣ ಮಂದಿರ : ಗದಗ ಬೆಟಗೇರಿಯ ಗಾಂಧಿನಗರದಲ್ಲಿ ನೆಲೆಯೂರಿದ ಕಂಜರಭಾಟ ವಸಾಹತಿಯಲ್ಲಿ ೧೯೮೬ರಲ್ಲಿ ಈ ಮಂದಿರ ಸ್ಥಾಪನೆಯಾಗಿದೆ. ಶ್ರೀ ಸಮರ್ಥ ಸದ್ಗುರು ಧೊಂಡೋಪಂತ ಮಹಾರಾಜ ಸೊಲ್ಲಾಪುರ ಅವರ ಕೃಪೆಯಿಂದ ಹಾಗೂ ಶ್ರೀ ಸಮರ್ಥ ಸದ್ಗುರು ಶಿವಲಾಲ ಸ್ವಾಮಿ ಮಹಾರಾಜ ಮತ್ತು ಶ್ರಿ ಸಮರ್ಥ ಸದ್ಗುರು ಶಿವರಾಮ ಮಹಾರಾಜರ ಆಶೀರ್ವಾದದಿಂದ ೧೯೮೬ರಲ್ಲಿ ಶ್ರೀ ವಿಶ್ವೇಶ ತೀರ್ಥಂಗಳು, ಉಡುಪಿ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಶ್ರೀಕೃಷ್ಣ ಮೂರ್ತಿಯನ್ನು ಪ್ರತಿಷ್ಠಾಪಿಸಲಾಯಿತು. ಈ ಮಂದಿರಲ್ಲಿ ದಿನಾಲು ಭಜನೆ, ಆರತಿ ಜರಗುತ್ತವೆ. ಇಲ್ಲಿ ಶ್ರೀಕೃಷ್ಣ ಜಯಂತಿ, ರಾಮನವಮಿ, ಗಣೇಶ ಚವತಿ, ತುಳಸಿ ಮದುವೆ, ಶ್ರಾವಣ ಮಾಸದ ಕಾರ್ಯಕ್ರಮಗಳು ಜರುಗುತ್ತವೆ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಶ್ರೀಕೃಷ್ಣ ಮಂದಿರ ಸ್ಥಾಪಸಿ ನಿತ್ಯ ಭಜನೆ, ಆರತಿ ಮುಂತಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿವೆ.

ಶ್ರೀಕೃಷ್ಣ ಜನ್ಮಾಷ್ಟಮಿ : ಕಂಜರಭಾಟರು ಪ್ರತಿವರ್ಷ ಶ್ರಾವಣ ಮಾಸ ಕೃಷ್ಣಪಕ್ಷ ಅಷ್ಟಮಿಯ ದಿನ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸುತ್ತಾರೆ. ಕೃಷ್ಣಜನ್ಮಾಷ್ಟಮಿಯ ದಿನ ಎಲ್ಲರೂ ಉಪವಾಸ ಇರುತ್ತಾರೆ. ಅಂದು ಮುಂಜಾನೆ ಧ್ವಜಪೂಜೆ, ವೀಣಾ ಮತ್ತು ತಾಳದ ಪೂಜೆಯನ್ನು ಮಾಡುತ್ತಾರೆ ವೀಣೆಯನ್ನು ಎರಡು ದಿನಗಳವರೆಗೆ ನೆಲದ ಮೇಲೆ ಇಡುವುದಿಲ್ಲ. ನಂತರ ಶ್ರೀಕೃಷ್ಣ ಮೂರ್ತಿಯ ಅಭಿಷೇಕ ಭಜನೆ ಮಾಡುವರು. ಮೂರ್ತಿಯನ್ನು ಅರಿವೆಯಿಂದ ಮುಚ್ಚುವರು. ಅಂದು ರಾತ್ರಿ ದೇವತೆಗಳಿಗೆ ಒಡವೆಯ ವೇಷ-ಭೂಷಣಗಳಿಂದ ಅಲಂಕರಿಸಿ ಭಜನೆಯೊಂದಿಗೆ ಮನರಂಜನೆ ಮತ್ತು ಉಪನ್ಯಾಸ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತವೆ. ರಾತ್ರಿ ೧೨ ಗಂಟೆಗೆ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸುತ್ತಾರೆ. ಮುಚ್ಚಿದ ಮೂರ್ತಿಯ ಮೇಲಿನ ಅರಿವೆಯನ್ನು ತೆಗೆಯುತ್ತಾರೆ. ಶ್ರೀಕೃಷ್ಣನ ಜನ್ಮವಾಯಿತೆಂದು ಜೋಗುಳ ಹಾಡುವರು. ನಂತರ ಪ್ರಸಾದದೊಂದಿಗೆ ಎಲ್ಲರೂ ಉಪವಾಸ ಮುಗಿಸಿ ರಾತ್ರಿ ಊಟ ಮಾಡುತ್ತಾರೆ. ಮರುದಿನ ಶ್ರೀಕೃಷ್ಣ ಮಂದಿರದಿಂದ ದಿಂಡಿಯಾತ್ರೆ ಭಜನೆ ಮಾಡುತ್ತ ಮೊಸರು ಗಡಿಗೆ ಕಟ್ಟಿದ ಸ್ಥಳಕ್ಕೆ ಬರುವರು. ಎತ್ತರದಲ್ಲಿ ಮೊಸರು ತುಂಬಿದ ಗಡಿಗೆಯನ್ನು ಕಟ್ಟಿರುತ್ತಾರೆ. ಕೆಳಗೆ ನೆಲವನ್ನು ಅಗಿದು ನೀರು ಹಾಕಿರುತ್ತಾರೆ. ಅದರಲ್ಲಿ ಯುವಕರು ಮೊಸರಿನ ಗಡಿಗೆಯನ್ನು ಒಡೆಯಲು ಪ್ರಯತ್ನ ಮಾಡುತ್ತಾರೆ. ಅವರ ಮೇಲೆ ಇತರರು ಬಣ್ಣದ ನೀರು ಉಗ್ಗುತ್ತಾರೆ. ಯುವಕರು ಕೆಳಗೆ ವೃತ್ತಾಕಾರದಲ್ಲಿನಿಂತು ಒಬ್ಬರ ಮೇಲೊಬ್ಬರು ಹತ್ತಿ ಮೊಸರು ಗಡಿಗೆಯನ್ನು

ಹೊಡೆಯುತ್ತಾರೆ. ನಂತರ ಶ್ರೀಕೃಷ್ಣ ಮಂದಿರಕ್ಕೆ ಬಂದು ಭಕ್ತಿ ಭಾವಾವೇಶದಿಂದ ಸ್ತುತಿ ಮಾಡಿ ಕಾರ್ಯಕ್ರಮಗಳನ್ನು ಮುಕ್ತಾಯ ಮಾಡಿ ಪ್ರಸಾದ ಹಂಚುತ್ತಾರೆ. ಈ ರೀತಿ ಕಂಜರಭಾಟರು ಶ್ರೀಕೃಷ್ಣ ಜಯಂತಿ ಉತ್ಸವವನ್ನು ಆಚರಿಸುತ್ತಾರೆ.

ಹೋಳಿಹಬ್ಬ : ಹೋಳಿ ಹುಣ್ಣಿಮೆ ಹಬ್ಬವನ್ನು ನಮ್ಮ ದೇಶದ ತುಂಬೆಲ್ಲ ಆಚರಿಸುತ್ತಾರೆ. ಈ ಹಬ್ಬವನ್ನು ಜನರು ತಮ್ಮದೇ ಆದ ರೀತಿಯಿಂದ ಆಚರಿಸುತ್ತಾರೆ. ಕಂಜರಭಾಟರು ಆಚರಿಸುವ ಹಬ್ಬಗಳಲ್ಲಿ ಈ ಹಬ್ಬ ಬಹು ಪ್ರಮುಖವಾಗಿದೆ. ಇದೇ ಸಮಯಕ್ಕೆ ಇವರು ತಮ್ಮ ಕುಲದೇವತೆಗಳ ಪೂಜೆಯನ್ನು ಮಾಡುತ್ತಾರೆ. ಈ ಹಬ್ಬವನ್ನು ಗಂಡಸರು, ಹೆಂಗಸರು ಸೇರಿ ಆಚರಿಸುತ್ತಾರೆ. ಈ ಹಬ್ಬದಲ್ಲಿ ಹಾಡುವುದು, ಕುಣಿಯುವುದು ವಿಶೇಷವಾಗಿರುವುದರಿಂದ ಹೋಳಿ ಹಬ್ಬದ ಪೂರ್ವದಲ್ಲಿಯೇ ದಿನಾಲು ರಾತ್ರಿ ಹಾಡುವುದು ಕುಣಿಯುವುದು ರೂಢಿ ಮಾಡುತ್ತಾರೆ.

ಹೋಳಿ ಹಬ್ಬದ ದಿನ ಒಂದು ಔಡಲ ಗಿಡವನ್ನು ತಂದು ನೆಲದಲ್ಲಿ ಹುಗಿಯುತ್ತಾರೆ. ಅದರ ಸುತ್ತಲು ಕಟ್ಟಿಗೆ,ಕುಳ್ಳುಗಳನ್ನು ಇಟ್ಟು ಹೂವಿನ ಮಾಲೆ, ತೆಂಗಿನಕಾಯಿಯನ್ನು ಗಿಡಕ್ಕೆ ಜೋತು ಬಿಡುತ್ತಾರೆ. ಅಂದು ಎಲ್ಲರೂ ಹೊಸ ಬಟ್ಟೆ ಧರಿಸುತ್ತಾರೆ. ಮನೆಯಲ್ಲಿ ಹೋಳಿಗೆ ಮಾಡುತ್ತಾರೆ. ಗಂಡಸರು, ಹೆಂಗಸರು, ಹುಡುಗರು ಎಲ್ಲರೂ ಮದ್ಯಸೇವನೆ ಮಾಡಿ ಎಲ್ಲರೂ ರಸಭರಿತವಾದ 'ಕಾಮ'(ಲೈಂಗಿಕ) ಗೀತೆಗಳನ್ನು ಹಾಡುತ್ತಾ ಕುಣಿಯುತ್ತಾರೆ. ಕಾಮನ ದಹನದ ಸಿದ್ಧತೆಗಳನ್ನು ಮಾಡುತ್ತಾರೆ. ಅಲಂಕರಿಸಿದ ಔಡಲ ಗಿಡದ ಸುತ್ತಲು ಪುರುಷರು ಮಹಿಳೆಯರು, ಮಕ್ಕಳು ಕೈ ಕೈ ಹಿಡಿದು ಸುತ್ತುತ್ತಾರೆ. ಅಶ್ಲೀಲವಾದ ಬಿಂಗಿ ಪದಗಳನ್ನು ಹಾಡುತ್ತಾ ಹಿರಿಯರ ಹೆಸರುಗಳನ್ನು ಸ್ಮರಿಸುತ್ತ ಲಬ ಲಬ ಎಂದು ಬೊಬ್ಬೆ ಹೊಡೆಯುತ್ತಾರೆ. ಯಾವ ಭೇದ, ಭಾವ ಇಲ್ಲದೆ ಕಂಜರಭಾಟ ಸಮುದಾಯದ ಎಲ್ಲ ಕುಲಸ್ಥರು ಭಾಗವಹಿಸಿ ಈ ಹಬ್ಬವನ್ನು ಆಚರಿಸುವರು. ರಾತ್ರಿ ಸರಿಯಾಗಿ ೧೨ ಗಂಟೆಗೆ ಬೆಂಕಿ ಹಚ್ಚಿ ಕಾಮದಹನ ಮಾಡುತ್ತಾರೆ. ಸ್ವಲ್ಪ ವೇಳೆಯ ನಂತರ ಔಡಲ ಗಿಡವನ್ನು ಕಿತ್ತಿ ಬೆಂಕಿಗೆ ಏಳು ಸುತ್ತು ಹಾಕುತ್ತಾರೆ. ನಂತರ ಮಹಿಳೆಯರು ತಮ್ಮ ಮನೆಯಿಂದ ನೀರು ತಂದು ಔಡಲ ಗಿಡಕ್ಕೆ ಸುರಿದು ತಣ್ಣಗೆ ಮಾಡುತ್ತಾರೆ. ಎಲ್ಲರೂ ಹಾಡುತ್ತಾ ಕುಣಿಯುತ್ತ ಈ ಹಬ್ಬ ಆಚರಿಸುತ್ತಾರೆ. ಮರುದಿನ ಮುಂಜಾನೆ ಓಕಳಿಯನ್ನು ಆಡುತ್ತಾರೆ. ವಿವಿಧ ಬಣ್ಣಗಳಿಂದ ಹಾಗೂ ಸಗಣಿಯ ನೀರಿನಿಂದ ಹೆಂಗಸರು ಗಂಡಸರು ಪರಸ್ಪರ ಮೈಮೇಲೆ ಹಾಕಿ ಕುಣಿಯುತ್ತಾರೆ. ಅಂದು ಸಹ ಮದ್ಯವನ್ನು ಸೇವಿಸುತ್ತಾರೆ. ಈ ರೀತಿ ಹೋಳಿ ಹಬ್ಬವನ್ನು ಸಮುದಾಯದ ಎಲ್ಲರೂ ಸೇರಿ ಆಚರಿಸುತ್ತಾರೆ.

ದಸರಾ ದುರ್ಗಾದೇವಿ ಪೂಜೆ : ಈ ಹಬ್ಬವನ್ನು ಒಂಭತ್ತು ದಿನ ಆಚರಿಸುತ್ತಾರೆ. ಇದಕ್ಕೆ ನವರಾತ್ರಿ ಎಂದು ಕರೆಯುತ್ತಾರೆ. ಒಂಭತ್ತು ದಿನ ದುರ್ಗಾದೇವಿಗೆ ಶೃಂಗರಿಸಿ ದಿನಾಲು ಪೂಜೆ ಮಾಡುತ್ತಾರೆ. ಭಕ್ತಿ ಭಾವಗಳಿಂದ ಹಾಡಿ, ದಾಂಡಿಯಾ ಕೋಲಾಟ ಆಡುತ್ತಾರೆ. ಒಂತ್ತನೆಯ ದಿನ ಕುರಿಯನ್ನು ಬಲಿ ಕೊಟ್ಟು ತಮ್ಮ ಕುಲದೇವತೆಗೆ

ಪೂಜೆಯನ್ನು ಸಲ್ಲಿಸುತ್ತಾರೆ. ಕೊಟ್ಟ ಬಲಿಯನ್ನು ಸ್ವೀಕರಿಸಿ ಸಮಸ್ತ ಜನರಿಗೆ ಸುಖ, ಶಾಂತಿ, ಸಂಪತ್ತು ಕೊಟ್ಟು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಾರೆ. ದಶಮಿಯ ದಿನ ರಾತ್ರಿ ಬನ್ನಿಗಿಡದಿಂದ ಬನ್ನಿಯನ್ನು ತಂದು ಹಿರಿಯರಿಗೆ ಕೊಟ್ಟು, ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾರೆ. ಈ ರೀತಿ ನವರಾತ್ರಿ ಹಾಗೂ ವಿಜಯದಶಮಿಯನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುತ್ತಾರೆ.

ಶ್ರೀ ಸಮರ್ಥ ಸದ್ಗುರು ಶಿವಲಾಲ ಸ್ವಾಮಿ : ಇವರು ೧೯೨೫ರಲ್ಲಿ ಸೊಲ್ಲಾಪುರದಲ್ಲಿ ಜನಿಸಿದರು. ಇವರು ಚಿಕ್ಕ ವಯಸ್ಸಿನಲ್ಲಿ ಭಕ್ತಿಯಿಂದ ಭಜನೆಗಳನ್ನು ಮಾಡುತ್ತಿದ್ದರು. ಶಾಲೆಗೆ ಸರಿಯಾಗಿ ಹೋಗದೆ ಆರನೆಯ ತರಗತಿಯವರೆಗೆ ಕಲಿತು ಶಾಲೆಯನ್ನು ಬಿಟ್ಟರು. ತಂದೆ-ತಾಯಿಗಳು ಇವರ ಮದುವೆಯನ್ನು ನಿಶ್ಚಯಿಸಿದರು. ಆದರೆ ಇವರು ಮದುವೆ ಮಾಡಿಕೊಳ್ಳದೆ ಮನೆಯನ್ನು ಬಿಟ್ಟು ಹಿಮಾಲಯ ಪರ್ವತಕ್ಕೆ ಹೋದರು. ಅಲ್ಲಿ ಸಾಧು, ಸಂತರ ಸಹವಾಸ ಬೆಳೆಸಿ ಸಂಸ್ಕೃತ ಭಾಷೆಯನ್ನು ಕಲಿತರು, ತಪಸ್ಸು ಮಾಡಿದರು. ೩-೪ ವರ್ಷಗಳ ನಂತರ ತಿರುಗಿ ಸೊಲ್ಲಾಪೂರಕ್ಕೆ ಬಂದರು. ತಂದೆತಾಯಿಗಳು ಇವರ ಮದುವೆಯನ್ನು ಮಾಡಿದರು. ದಾಂಪತ್ಯ ಜೀವನ ಸಾಗಿಸುತ್ತಾ ಶ್ರೀ ಸಮರ್ಥ ಸದ್ಗುರು ಧೊಂಡೋಪಂತ ಭೋಸೆಕರ ಮಹಾರಾಜರ ಶಿಷ್ಯರಾದರು. ನಿತ್ಯ ಭಜನೆ, ಪ್ರವಚನ, ಕೀರ್ತನಗಳನ್ನು ಮಾಡತೊಡಗಿದರು. ಇವರು ಇಂಚಗಿರಿ ಸಂಪ್ರದಾಯದವರು. ಪ್ರತಿ ವರ್ಷ ಮಾಘಮಾಸಕ್ಕೆ ಸೊಲ್ಲಾಪುರದಿಂದ ಪಂಢರಾಪುರಕ್ಕೆ ಪಾದಯಾತ್ರೆ ಮಾಡುತ್ತಾರೆ. ಕಂಜರಭಾಟರಿಗೆ ದೀಕ್ಷೆಯನ್ನು ಕೊಟ್ಟು ಮದ್ಯಸೇವನೆ, ಮಾಂಸ ತಿನ್ನುವುದು, ಪರಸ್ತ್ರೀಯರನ್ನು ನೋಡುವುದು ಇಂಥ ದುಶ್ಚಟಗಳಿಂದ ದೂರ ಇರಬೇಕೆಂದು ಬೋಧಿಸಿದರು. ಎಷ್ಟೋ ಜನರು ಇವರ ಶಿಷ್ಯರಾಗಿ ದುಶ್ಚಟಗಳಿಂದ ದೂರವಾಗಿ ಇವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಡೆದು ತಮ್ಮ ಜೀವನವನ್ನು ಸಾರ್ಥಕ ಮಾಡಿಕೊಂಡಿದ್ದಾರೆ. ಇವರು ಮಹಾರಾಷ್ಟ್ರ, ಕರ್ನಾಟಕ, ಆಂಧ್ರ ಪ್ರದೇಶಗಳಲ್ಲಿ ಶ್ರೀಕೃಷ್ಣ ಮಂದಿರಗಳನ್ನು ಸ್ಥಾಪಿಸಿ ಕಂಜರಭಾಟರಿಗೆ ಧಾರ್ಮಿಕ ಮಾರ್ಗದಲ್ಲಿ ತೊಡಗಿಸಿದ್ದಾರೆ. ಸಾವಿರಾರು ಜನರು ದುಶ್ಚಟಗಳನ್ನು ತ್ಯಜಿಸಿ ಪೂಜೆ, ಭಜನೆಗಳನ್ನು ಮಾಡುತ್ತಾ ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಇವರ ಭಕ್ತಿಯ ವೈಖರಿಯನ್ನು ನೋಡಿ ಶ್ರೀ ಸಮರ್ಥ ಸದ್ಗುರು ಧೊಂಡೋಪಂತ ಮಹಾರಾಜರು ಇವರಿಗೆ ಸ್ವಾಮಿ ನಾಮಕರಣ ಕೊಟ್ಟು ಕರೆಯಲಾರಂಭಿಸಿದರು. ಮುಂದೆ ಇವರು ಶಿವಲಾಲ ಸ್ವಾಮಿ ಮಹಾರಾಜ ನಾಮಕರಣ ದೊಂದಿಗೆ ಮೆರೆದರು. ವರ್ಷದ ಹನ್ನೆರಡು ತಿಂಗಳು ಬೇರೆ ಬೇರೆ ಕಡೆಗೆ ಕಾರ್ಯಕ್ರಮಗಳನ್ನು ಮಾಡುತ್ತಾ ಇರುತ್ತಾರೆ. ಇವರು ಸೊಲ್ಲಾಪುರದಲ್ಲಿ ವಾಸ್ತವ್ಯ ಇದ್ದು ಹಿಂದು ಧರ್ಮದ ಪ್ರಚಾರ ಮಾಡುತ್ತ ಜನರ ಹಿತದ ಕಡೆಗೆ ಹೆಚ್ಚು ಗಮನ ಕೊಡುತ್ತಾರೆ. ಈಗ ಅವರಿಗೆ ೮೨ ವರ್ಷಗಳಾಗಿದ್ದರೂ ಸಹ ಭಜನೆ, ಕೀರ್ತನೆ, ಪ್ರವಚನ, ಜಪ, ತಪ ಮೊದಲಾದವುಗಳಲ್ಲಿ ಹೆಚ್ಚು ಸಮಯವನ್ನು ಕಳೆಯುತ್ತಾರೆ. ಕಂಜರಭಾಟರು

ಅಲೆಮಾರಿಗಳು ಧಾರ್ಮಿಕದ ಬಗೆಗೆ ಹೆಚ್ಚು ಅರಿವು ಇಲ್ಲದ ಜನ ಇಂಥವರಿಗೆ ಧಾರ್ಮಿಕ ಮಾರ್ಗದಲ್ಲಿ ತೊಡಗಿಸಿ ಇವರ ಜೀವನವನ್ನು ಪಾವನಗೊಳಿಸಿದ್ದಾರೆ. ಇವರು ನಿದ್ರಾಹಾರಗಳನ್ನು ತೊರೆದು ಹಗಲು ರಾತ್ರಿ ಧ್ಯಾನಾಸಕ್ತರಾಗಿ ಭಕ್ತರ ಚಿಂತನೆ, ಭಗವಂತನ ಸೇವೆಯನ್ನು ಮಾಡುತ್ತಿದ್ದಾರೆ. ಇವರು ಕಂಜರಭಾಟರ ಧರ್ಮ ಗುರುಗಳಾಗಿದ್ದು ಮಾರ್ಗದರ್ಶಕರಾಗಿದ್ದಾರೆ. ಇವರು ಭಕ್ತಿಯೊಂದಿಗೆ ಸಮಾಜ ಸೇವೆಯನ್ನು ಮಾಡುತ್ತಿದ್ದಾರೆ.

ಶ್ರೀ ಸಮರ್ಥ ಸದ್ಗುರು ಶಿವರಾಮ ಮಹಾರಾಜ : ಇವರು ಕಂಜರಭಾಟರ ಒಂದು ಬಡಕುಟುಂಬದಲ್ಲಿ ೧೯೧೦ರಲ್ಲಿ ಸೊಲ್ಲಾಪುರದಲ್ಲಿ ಹುಟ್ಟಿದರು. ಸಣ್ಣ ವಯಸ್ಸಿನಲ್ಲಿಯೇ ಭಜನೆ ಹಾಗೂ ಹಾರ್ಮೋನಿಯಂ ಬಾರಿಸುವುದನ್ನು ಕಲಿತುಕೊಂಡರು. ಎಳೆ ವಯಸ್ಸಿನಲ್ಲಿಯೇ ಶ್ರೀಸಮರ್ಥ ಸದ್ಗುರು ಧೊಂಡೋಪಂತ ಮಹಾರಾಜರ ಶಿಷ್ಯರಾಗಿ ಅವರ ಮಾರ್ಗದರ್ಶನದಲ್ಲಿ ನಡೆದರು. ಕಂಜರಭಾಟರು ಇರುವ ಸ್ಥಳಗಳಿಗೆ ಹೋಗಿ ಅಲ್ಲಿ ಭಜನೆಗಳನ್ನು ಮಾಡುತ್ತಿದ್ದರು. ದುಶ್ಚಟಗಳಿಂದ ದೂರವಿರಬೇಕೆಂದು ಬೋಧಿಸುತ್ತಿದ್ದರು. ಇವರು ದಾಂಪತ್ಯ ಜೀವನ ಸಾಗಿಸುತ್ತ ಭಗವಂತನ ಧ್ಯಾನವನ್ನು ಮಾಡುತ್ತಿದ್ದರು. ಹೆಂಡತಿ ಮಕ್ಕಳ ಕಡೆಗೆ ಹೆಚ್ಚು ಗಮನ ಕೊಡದೆ ಕಂಜರಭಾಟರನ್ನು ಸುಧಾರಣೆ ಮಾಡುವ ಕಡೆಗೆ ಹೆಚ್ಚು ಗಮನ ಹರಿಸಿದರು. ಕಂಜರಭಾಟರನ್ನು ಶಿಷ್ಯರನ್ನಾಗಿ ಮಾಡಿಕೊಂಡರು. ದುಶ್ಚಟಗಳನ್ನು ಬಿಡಿಸಿ ದೇವರ ಭಜನೆ, ಧ್ಯಾನ, ಭಕ್ತಿ ಕಡೆಗೆ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟರು. ಸೊಲ್ಲಾಪುರ ಹಾಗೂ ಹಲವಾರು ಕಡೆಗೆ ಶ್ರೀಕೃಷ್ಣ ಮಂದಿರಗಳನ್ನು ಸ್ಥಾಪಿಸಿ ಶಿಷ್ಯರಿಗೆ ನಿತ್ಯ ನಿಯಮಗಳನ್ನು ಮಾಡುವುದನ್ನು ಪರಿಪಾಠ ಹಾಕಿದರು. ಹಲವಾರು ಕಡೆಗೆ ಶ್ರೀ ಧೋಂಡೊಪಂತ ಮಾಹರಾಜರ ನಾಮ ಸಪ್ತಾಹಗಳನ್ನು ಮಾಡುತ್ತಾರೆ. ಇವರಿಗೆ ಸಾವಿರಾರು ಶಿಷ್ಯರಿದ್ದು ಭಜನೆ, ಪ್ರವಚನ, ಕೀರ್ತನಗಳ ಅಭಿರುಚಿಯನ್ನು ಭಕ್ತರಲ್ಲಿ ಹುಟ್ಟಿಸಿ ಒಳ್ಳೆಯ ಮಾರ್ಗಕ್ಕೆ ಹಚ್ಚಿದ್ದಾರೆ ಹಾಗೂ ಹಿಂದು ಧರ್ಮದ ಪ್ರಚಾರವನ್ನು ಮಾಡುತ್ತಿದ್ದಾರೆ. ಕತ್ತೆ ಕುದುರೆಗಳ ಮೇಲೆ ಸಂಚರಿಸುವ ಕಂಜರಭಾಟರಿಗೆ ಧ್ಯಾನ, ಭಕ್ತಿಗಳ ಪರಿಕಲ್ಪನೆಯನ್ನು ಮಾಡಿಕೊಟ್ಟರು. ಈಗ ೯೭ ವರ್ಷದ ಇವರು ನಿತ್ಯ ನಿಯಮಗಳನ್ನು ಪಾಲಿಸುತ್ತಾ ಭಗವಂತನ ಸೇವೆಯನ್ನು ಮಾಡುತ್ತಿದ್ದಾರೆ. ಕಂಜರಭಾಟರು ಇವರನ್ನು ಸಮುದಾಯದ ಧರ್ಮಗುರುಗಳನ್ನಾಗಿ ಸ್ವೀಕರಿಸಿದ್ದಾರೆ.

ಜನಪದ ವೈದ್ಯ

ಬುಡಕಟ್ಟಿನವರು ತಮ್ಮದೇ ಆದ ರೀತಿಯಲ್ಲಿ ರೋಗಿಗಳ ರೋಗ ನಿವಾರಣೆ ಮಾಡುವ ವಿಧಾನಗಳನ್ನು ಅಳವಡಿಸಿಕೊಳ್ಳುವರು. ಅವರು ವಾಸವಾಗಿರುವ ಸ್ಥಳಗಳಲ್ಲಿ ಲಭ್ಯವಾಗುವ ಗಿಡಮೂಲಿಕೆ, ಬೇರು, ತಪ್ಪಲು, ಪಕ್ಷಿಗಳಿಂದ ಔಷಧಿ ತಯಾರಿಸಿ ರೋಗಿಗಳಿಗೆ ತಮ್ಮ ಅನುಭವದ ಸಾಮರ್ಥ್ಯದಿಂದ ಜನಪದ ವೈದ್ಯಕೀಯವನ್ನು ಕಾರ್ಯರೂಪಕ್ಕೆ ತರುವರು. ಕಂಜರಭಾಟರು ಹಳ್ಳಿಯಿಂದ ಹಳ್ಳಿ ಸಂಚಾರಿಸುವ ಅಲೆಮಾರಿ ಜನ ತಮ್ಮದೇ ಆದ ರೀತಿಯಲ್ಲಿ ಈ ಸಮುದಾಯ ವೈದ್ಯ ಪದ್ಧತಿಯನ್ನು ಅಳವಡಿಸಿಕೊಂಡಿದೆ. ರೋಗಗಳಿಗೆ

ಯಾವ ರೀತಿಯ ಔಷಧೋಪಚಾರವನ್ನು ಇವರು ಮಾಡುತ್ತಾರೆ ಎಂಬುದನ್ನು ಇಲ್ಲಿ ವಿವರಿಸಲು ಪ್ರಯತ್ನ ಮಾಡಲಾಗಿದೆ.

ಕಣ್ಣುಬೇನೆ : ಕಣ್ಣು ಬೇನೆ ಬಂದವನಿಗೆ ಲಿಂಬೆಹಣ್ಣು ಹೋಳು ಮಾಡಿ ಒಂದು ತುಂಡು ಬಿಳಿ ಅರಿವೆಯಲ್ಲಿ ಕಟ್ಟಿ ೩-೪ ದಿನ ಸತತವಾಗಿ ಕಣ್ಣಿಗೆ ಒತ್ತುತ್ತಾರೆ. ಹೆಣ್ಣು ಮಕ್ಕಳ ಮೊಲೆಯ ಹಾಲನ್ನು ದಿನಕ್ಕೆ ಎರಡು ಸಲ ಕಣ್ಣಿನಲ್ಲಿ ಹಾಕುತ್ತಾರೆ. ಎಲೆ ಅಡಿಕೆ ತಂಬಾಕು ಬಾಯಿಯಲ್ಲಿ ಹಾಕಿ ಅದನ್ನು ನುರಿಸಿ ಅದರ ರಸವನ್ನು ಕಣ್ಣಲ್ಲಿ ಹಾಕುವರು. ಬಿಳಿ ಅರಿವೆಯನ್ನು ತೆಗೆದುಕೊಂಡು ಅರಿಶಿಣ ಪುಡಿಯನ್ನು ನೀರಿನಲ್ಲಿ ಕಲಿಸಿ ಅರಿವೆಯನ್ನು ಅದರಲ್ಲಿ ತೋಯಿಸಿ ಕಣ್ಣಿಗೆ ಕಟ್ಟುತ್ತಾರೆ. ಈ ರೀತಿ ಮಾಡುವುದರಿಂದ ಕಣ್ಣು ನೋವು ನಿವಾರಣೆಯಾಗುತ್ತದೆ.

ಹೊಟ್ಟೆನೋವು : ಅಜ್ವಾನ, ಲಿಂಬೆಹಣ್ಣು, ಉಪ್ಪು ಬಿಸಿ ಮಾಡಿ ತಿನ್ನುತ್ತಾರೆ. ಅರಿವೆಯ ಸಿಂಬೆ ಮಾಡಿ ಹೊಕ್ಕಳದ ಕೆಳಗೆ ಇಟ್ಟು ಹೊಟ್ಟೆ ನೋವು ಆದ ವ್ಯಕ್ತಿಯನ್ನು ಬೋರಲಾಗಿ ಮಲಗಿಸುತ್ತಾರೆ. ಇದಲ್ಲದೆ ಒಂದು ಲೋಟ ನೀರು ತುಂಬಿ ಹೊಕ್ಕಳದ ಮೇಲೆ ಖಾಲಿ ಲೋಟವಾಗಲಿ ಇಲ್ಲವೇ ಖಾಲಿ ಕಪ್ಪು ಡಬ್ಬಿ ಹಾಕಿ ಅದರ ಮೇಲೆ ತುಂಬಿದ ಲೋಟದಿಂದ ಸ್ವಲ್ಪ ಹೊತ್ತು ಒತ್ತಿದರೆ ಹೊಟ್ಟೆ ನೋವು ವಾಸಿಯಾಗುತ್ತದೆ. ಒಮ್ಮೊಮ್ಮೆ ಹೊಟ್ಟೆಯ ಗಂಟು ಸರಿದು ಹೊಟ್ಟೆ ನೋವಾಗುತ್ತದೆ. ಆಗ ಒಂದು ದಾರವನ್ನು ತೆಗೆದುಕೊಂಡು ಮೊಲೆಯ ತುದಿಯಿಂದ ಹೊಕ್ಕಳಕ್ಕೆ ಎರಡು ಕಡೆಯಿಂದ ದಾರ ಹಿಡಿಯುತ್ತಾರೆ. ಮೊಲೆ ಮತ್ತು ಹೊಕ್ಕಳಕ್ಕೆ ದಾರದಲ್ಲಿ ಅಂತರವಾದರೆ ಗಂಟು ಸರಿದಿದೆ ಎಂದು ಗೊತ್ತಾಗುತ್ತದೆ. ಆಗ ಅರಿವೆಯ ತುಂಡು ತೆಗೆದುಕೊಂಡು ಹೊಟ್ಟೆಗೆ ಸುತ್ತು ಹಾಕಿ ಅತ್ತಿತ್ತ ಅರಿವೆ ಜಗ್ಗುತ್ತಾರೆ. ಆಗ ಹೊಟ್ಟೆಯ ನೋವು ದೂರವಾಗುತ್ತದೆ.

ತಲೆನೋವು : ಕಣ್ಣಿನ ಹುಬ್ಬಿನ ಎಡಬಲಕ್ಕೆ ಸುಣ್ಣ ಹಚ್ಚುತ್ತಾರೆ. ಬಟ್ಟೆಯನ್ನು ತಲೆಗೆ ಗಟ್ಟಿಯಾಗಿ ಕಟ್ಟುತ್ತಾರೆ. ಗಂಧವನ್ನು ಅರಿದು ಹಣೆಗೆ ಹಚ್ಚುತ್ತಾರೆ. ಅರಳಿ ಗಿಡದ ಎಲೆಯನ್ನು ತಂದು ಸುರುಳಿಸುತ್ತಿ ಅದರ ತುದಿಯನ್ನು ಮುಗಿನೊಳಗೆ ಹಾಕಿ ಹುಬ್ಬಿನ ನರಕ್ಕೆ ಹೊಡೆದು ಸಂಧಿನಲ್ಲಿದ್ದ ಕೆಟ್ಟ ರಕ್ತವನ್ನು ಹೊರ ಹಾಕಿ ತಲೆನೋವು ಕಡಿಮೆ ಮಾಡುತ್ತಾರೆ. ಇದಲ್ಲದೆ ಹಸಿಶುಂಠಿ(ಅಲ್ಲಾ)ಯನ್ನು ಕುಟ್ಟಿ ರಸವನ್ನು ತೆಗೆದು ಮೂಗಿನಲ್ಲಿ ಹಿಂಡುತ್ತಾರೆ. ಈ ರೀತಿ ತಲೆ ನೋವಿನ ನಿವಾರಣೆಗೆ ಉಪಚಾರ ಮಾಡುತ್ತಾರೆ.

ಕೆಮ್ಮು : ಶುಂಠಿಯನ್ನು ಸಕ್ಕರೆ ನೀರಿನಲ್ಲಿ ಹಾಕಿ ಕಾಯಿಸಿ ಕಷಾಯ ತಯಾರಿಸಿಕೊಂಡು ಕುಡಿಯುತ್ತಾರೆ. ಸಣ್ಣ ಮಕ್ಕಳಿಗೆ ಸತಾಪ ಗಿಡದ ತೊಪ್ಪಲ ತಂದು ಕುಟ್ಟಿ ತಾಯಿಯ ಮೊಲೆ ಹಾಲಿನಲ್ಲಿ ಕಲಿಸಿ ರಸವನ್ನು ಕುಡಿಸುತ್ತಾರೆ. ಬಳ್ಳೊಳ್ಳಿಯನ್ನು ಸುಲಿದು ಅದರ ಪಕಳೆಗಳ ರಸವನ್ನು ಮಾಡಿ ಮಕ್ಕಳ ಕೊರಳಿಗೆ ಕಟ್ಟುತ್ತಾರೆ. ಅಜ್ವಾನವನ್ನು ಕುಟ್ಟಿ ಬಿಳಿ ಬಟ್ಟೆಯಲ್ಲಿ ಗಂಟು ಕಟ್ಟಿ ಮಕ್ಕಳ ಕೊರಳಿಗೆ ಕಟ್ಟುತ್ತಾರೆ. ರಾತ್ರಿ ಮಲಗುವಾಗ ಬೇಯಿಸಿದ

ತತ್ತಿಯನ್ನು ತಿಂದು ನೀರು ಕುಡಿಯದೇ ಮಲಗಬೇಕು. ಸಣ್ಣ ಮಕ್ಕಳಿಗೆ ಖ್ವಾಡಿ ಕೆಮ್ಮು ಆದರೆ ನಾಯಿಯಂತೆ ಕೆಮ್ಮುವರು ಹಾಗಿದ್ದರೆ ನೂರಾ ಒಂದು ಊರುಗಳ ಹೆಸರು ಒಂದು ಬಿಳಿ ಹಾಳೆಯಲ್ಲಿ ಬರೆದು (ಬರೆಯುವಾಗ ಊರಿನ ಹೆಸರ ಮುಂದೆ ಪೂರ ಬರಬೇಕು). ಉದಾಹರಣೆಗೆ ಪಂಢರಪುರ, ಕೊಲ್ಹಾಪುರ, ಸೊಲ್ಲಾಪುರ ಈ ರೀತಿ ಬರೆದು ಮಡಚಿ ಕಪ್ಪು ದಾರದಲ್ಲಿ ಕಟ್ಟಿ ದೇವರ ಮುಂದೆ ಲೋಬಾನ ಹಾಕಿ ಧೂಪ ಕೊಟ್ಟು ಅದನ್ನು ಮಗುವಿನ ಕೊರಳಿಗೆ ಕಟ್ಟುತ್ತಾರೆ. ಸರಾಯಿ ಕುಡಿಸುತ್ತಾರೆ.

ನೆಗಡಿ : ಒಂದು ಪಾತ್ರೆಯಲ್ಲಿ ಬೆಂಕಿಯ ಕೆಂಡಗಳನ್ನು ಹಾಕಿ ಅದರಲ್ಲಿ ಜೋಳದ ಹಿಟ್ಟು ಉದರಿಸಬೇಕು. ಮೈಮೇಲೆ ಹೋದಿಗೆ ಹಾಕಿಕೊಳ್ಳಬೇಕು. ಅದರ ಹೊಗೆಯಿಂದ ನೆಗಡಿ ವಾಸಿಯಾಗುತ್ತದೆ. ಸಣ್ಣ ಮಕ್ಕಳಿಗೆ ಔಡಲ ಗಿಡದ ಎಲೆಯನ್ನು ತಂದು ಕೊಬ್ಬರಿ ಎಣ್ಣೆಯನ್ನು ಸವರಿ ಸ್ವಲ್ಪ ಬಿಸಿ ಮಾಡಿ ತಲೆಗೆ ಕಟ್ಟುತ್ತಾರೆ. ಅರಿಷಿಣ ಪುಡಿಯನ್ನು ತಾಯಿಯ ಮೊಲೆ ಹಾಲಿನಲ್ಲಿ ಬೆರೆಸಿ ಅದನ್ನು ಬಿಸಿ ಮಾಡಿ ಒಂದು ಅರಿವೆಯಿಂದ ಮಗುವಿನ ನೆತ್ತಿಗೆ ಕಟ್ಟುತ್ತಾರೆ. ಮದ್ಯ ಕುಡಿಸುತ್ತಾರೆ.

ಮಂಗನಬಾವು : ಮಂಗನ ಬಾವು ಆದರೆ ಸುಣ್ಣ ಬೆಲ್ಲ ಕಲಿಸಿ ಕೆನ್ನೆಯ ಎರಡು ಬದಿಗೆ ಹಚ್ಚಿ ಬಿಸಿಲಿನಲ್ಲಿ ಕೂರಿಸಿ ಬಿಸಿಲಿನ ಕಾವು ಕೊಡುತ್ತಾರೆ. ಮಂಗನಿಗೆ ಹಣ್ಣು ಹಂಪಲ ತಿನ್ನಲು ಕೊಟ್ಟು ಎಂಜಲ ಮಾಡಿಸಿ, ಎಂಜಲ ಮಾಡಿದ ಹಣ್ಣು ಹಂಪಲವನ್ನು ರೋಗಿಗೆ ತಿನ್ನಿಸುತ್ತಾರೆ. ಇದರಿಂದ ಮಂಗನ ಬಾವು ವಾಸಿಯಾಗುವುದು ಎಂದು ನಂಬುತ್ತಾರೆ.

ಗಾಯ : ಕಾಲಿನ ಮೇಲೆ ಗಾಯವಾದರೆ ಗಾಯದ ಮೇಲೆ ಸ್ವಮೂತ್ರ ಹಾಕಬೇಕು ತಲೆ ಒಡೆದರೆ ಬಟ್ಟೆ ಸುಟ್ಟ ಬೂದಿಯನ್ನು ಗಾಯಕ್ಕೆ ತುಂಬಬೇಕು.ಇಲ್ಲವೆ ಸುಣ್ಣ ಅರಿಶಿಣ ಪುಡಿ ಕೊಬ್ಬರಿ ಎಣ್ಣೆಯಲ್ಲಿ ಬೆರೆಸಿ ಹಚ್ಚುತ್ತಾರೆ.

ಕಾಮಾಲೆ : ಕಾಮಾಲೆ ಆದವರಿಗೆ ಎಣ್ಣೆಯಲ್ಲಿ ಕರಿದ ಪದಾರ್ಥಗಳನ್ನು ತಿನ್ನಲು ನೀಡುವುದಿಲ್ಲ. ಉಪ್ಪು, ಖಾರ ಇಲ್ಲದ ಸಪ್ಪೆಯ ಊಟವನ್ನು ನೀಡುತ್ತಾರೆ. ತೊಳಿಗೆ ತುಂಬರೆ ಬಳ್ಳಿಯ ಬಳಿ ಹಾಕುತ್ತಾರೆ. ಅದು ಒಣಗಿದಂತೆ ಕಾಮಾಲೆ ರೋಗ ನಿವಾರಣೆ ಯಾಗುತ್ತದೆ. ತಿನ್ನಲು ಬೆಲ್ಲ, ಗೋಧಿ ಚಪಾತಿ, ಕಬ್ಬು ಕೊಡುತ್ತಾರೆ. ಎಂಟು ದಿನದವರೆಗೆ ಉಪ್ಪು ಖಾರ ಇಲ್ಲದ ಅಡಿಗೆ ತಿನ್ನಲು ಕೊಡುತ್ತಾರೆ. ಈ ರೀತಿ ಪತ್ಯೆ ಮಾಡುವುದರಿಂದ ಈ ರೋಗ ವಾಸಿಯಾಗುತ್ತದೆ.

ತುರಿ : ಮೈ ತಿಂಡಿ ಬಂದಾಗ ಜೋಳದ ಹಿಟ್ಟು ಹಾಗೂ ಉಳ್ಳಾಗಡ್ಡಿ(ಈರುಳ್ಳಿ) ಕುಟ್ಟಿ ಮೈಗೆ ಹಚ್ಚುತ್ತಾರೆ. ಮೈ ಮೇಲೆ ಕಂಬಳಿಯನ್ನು ಹೊದಿಸಿ ಅರ್ಧ ತಾಸಿನ ನಂತರ ತಣ್ಣೀರಿನಲ್ಲಿ ಸ್ನಾನ ಮಾಡಿಸುತ್ತಾರೆ.

ಜನಪದ ನಂಬಿಕೆಗಳು

ಮಾನವನ ಬದುಕು ಬಹು ವಿಚಿತ್ರವಾದುದು. ಅದು ನಂಬಿಕೆಗಳನ್ನು ಆಧರಿಸಿ ರೂಪಗೊಂಡಿರುತ್ತದೆ. ಮನುಷ್ಯ ಕೆಲಸ ಮಾಡುವ ವಿಧಾನ, ಕಲ್ಪನಾಶಕ್ತಿ, ಆಲೋಚನೆ ಆಧಾರದ ಮೇಲೆ ಭಿನ್ನ ಭಿನ್ನವಾದ ನಂಬಿಕೆಗಳು ಸೃಷ್ಟಿಗೊಂಡಿರುವ ಸಾಮಾನ್ಯವಾಗಿ ನಂಬಿಕೆ ಎಂದರೆ ಸಾಂಪ್ರದಾಯಿಕ ಜ್ಞಾನವೇ ಹೊರತು ಮತ್ತೇನು ಅಲ್ಲ. ಕಂಜರಭಾಟರು ತಮ್ಮದೇ ಆದ ಕೆಲ ನಂಬಿಕೆಗಳನ್ನು ಹೊಂದಿದ್ದಾರೆ. ಅವುಗಳಲ್ಲಿ ಕೆಲವೊಂದನ್ನು ಈ ಕೆಳಗಿನಂತೆ ಕೊಡಲಾಗಿದೆ.

* ಯಾವುದಾದರೊಂದು ಶುಭ ಕಾರ್ಯಕ್ಕೆ ಹೋಗುವಾಗ ಬೆಕ್ಕು ಅಡ್ಡ ಹೋದರೆ ಹೋಗುವ ಕೆಲಸ ಆಗುವುದಿಲ್ಲ.
* ಕಾಗೆ ತಲೆಯ ಮೇಲೆ ಕುಳಿತರೆ ಅಶುಭ
* ಒಂಟಿ ಸೀನು ಇಲ್ಲವೇ ಖಾಲಿ ಕೊಡ ಎದುರಾದರೆ ಹೋಗುವ ಕಾರ್ಯ ಕೆಟ್ಟದಾಗುತ್ತದೆ
* ಮಳೆಗಾಲದಲ್ಲಿ ಸೋದರ ಮಾವ ಮತ್ತು ಅಳಿಯ ಒಂದೇ ಕಡೆ ಕೂಡಿ ಇದ್ದಾಗ ಮಿಂಚಿದರೆ ಸಿಡಿಲು ಬೀಳುತ್ತದೆ.
* ನಸುಕಿನಲ್ಲಿ ಬಿದ್ದ ಕನಸುಗಳು ನಿಜವಾಗುತ್ತವೆ.
* ಅಮವಾಸ್ಯೆಯ ದಿನ ಪ್ರಯಾಣ ಮಾಡಬಾರದು.
* ಕುಲದೇವತೆಯನ್ನು ಸರಿಯಾಗಿ ಪೂಜಿಸದಿದ್ದರೆ ಕೆಡಕು ಉಂಟಾಗುತ್ತದೆ.
* ಕಾಗೆ ಮನೆಯ ಮೇಲೆ ಇಲ್ಲವೇ ಮರದಲ್ಲಿ ಕುಳಿತು ಮೇಲಿಂದ ಮೇಲೆ ಕೂಗಿದರೆ ಸತ್ತ ಸುದ್ದಿ ಬರುವುದು.
* ಹಂದಿ ಮನೆಯಲ್ಲಿ ಹೊಕ್ಕರೆ ಅಶುಭ.
* ಮನೆಯ ಬಾಗಿಲ ಚಿಲಕವನ್ನು ಬಾರಿಸಿದರೆ ಗಂಡಹೆಂಡತಿಯ ಜಗಳಾವಾಗುವುದು.
* ದೀಪ ಹಚ್ಚಿದ ಮೇಲೆ ಕಸ ಗೂಡಿಸಬಾರದು.
* ಕನಸಿನಲ್ಲಿ ಸತ್ತರೆ ಶುಭ, ಸತ್ತ ವ್ಯಕ್ತಿಯ ಅಯುಷ್ಯ ಬೆಳೆಯುವುದು.
* ಗ್ರಹಣ ಹಿಡಿದಾಗ ಗರ್ಭವತಿಯರು ಕೆಲಸ ಮಾಡಿದರೆ ಅಂಗವಿಕಲ ಮಕ್ಕಳು ಹುಟ್ಟುತ್ತಾರೆ.
* ಮಾತಾಡುವಾಗ ಹಲ್ಲಿ ಒದರಿದರೆ ಶುಭ.
* ಹುಣ್ಣಿಮೆ ಅಮವಾಸ್ಯೆಗೆ ದೆವ್ವಗಳು ಸಂಚರಿಸುತ್ತವೆ. ರಾತ್ರಿ ವೇಳೆಯಲ್ಲಿ ಆಲದ ಮರ, ಬೇವಿನ ಮರದ ಕೆಳಗೆ ಮಲಗಬಾರದು, ಅಲ್ಲಿ ದೆವ್ವಗಳು ವಾಸವಾಗಿರುತ್ತವೆ.
* ಯಾರಾದರು ಆತ್ಮಹತ್ಯೆ ಮಾಡಿಕೊಂಡರೆ, ಕೊಲೆಯಾದರೆ, ಅಪಘಾತಕ್ಕಿಡಾಗಿದ್ದರೆ ಅಂಥವರು ದೆವ್ವ ಆಗುತ್ತಾರೆ.
* ಇದ್ದಕ್ಕಿದ್ದಂತೆ ಜೋರಾಗಿ ಮಧ್ಯಾಹ್ನ ಗಾಳಿ ಬೀಸಿದರೆ ಅದು ದೆವ್ವದ ಗಾಳಿ ಆಗಿರುತ್ತದೆ.
* ಸತ್ತವರ ಕ್ರಿಯೆಗಳನ್ನು ಸರಿಯಾಗಿ ಮಾಡದಿದ್ದರೆ ಅವರ ಆತ್ಮಕ್ಕೆ ಶಾಂತಿ ದೊರೆಯುವುದಿಲ್ಲ ಹಾಗೂ ಸತ್ತವರು ಕಾಡಾಟ ನೀಡುತ್ತಾರೆ.



 ಕಂಜರಭಾಟ ಸಮುದಾಯ

೬

ಒಳಾಡಳಿತ ವ್ಯವಸ್ಥೆ

ನ್ಯಾಯ ಪಂಚಾಯತಿ ರಚನೆ

ಪ್ರತಿಯೊಂದು ಅಲೆಮಾರಿ ಸಮುದಾಯಗಳು ತಮ್ಮದೇ ಆದ ರೀತಿಯ ಒಳಾಡಳಿತ ವ್ಯವಸ್ಥೆಯನ್ನು ಒಳಗೊಂಡಿರುತ್ತವೆ. ಸಮುದಾಯದ ಪ್ರತಿಯೊಬ್ಬ ವ್ಯಕ್ತಿಯೂ ಅದರ ನಿರ್ದೇಶನದಂತೆಯೇ ನಡೆಯಬೇಕು. ಅಲಿಖಿತ ವ್ಯವಸ್ಥೆಯನ್ನು ಸಮುದಾಯಗಳು ತಲೆತಲಾಂತರಗಳಿಂದ ರೂಢಿಸಿಕೊಂಡು ಬರುತ್ತಿವೆ. ಅದಕ್ಕೆ ಕಂಜರಭಾಟರು ಹೊರತಲ್ಲ. ಅವರಲ್ಲಿರುವ ಒಳಾಡಳಿತ ವ್ಯವಸ್ಥೆ ಅದರಲ್ಲೂ ನ್ಯಾಯ ಪಂಚಾಯ್ತಿ ವ್ಯವಸ್ಥೆ ಎಂತಹದ್ದು ಎಂಬುದನ್ನು ಈ ಅಧ್ಯಾಯದಲ್ಲಿ ಗಮನಿಸಬಹುದು.

ಪ್ರತಿಯೊಂದು ಕಾರ್ಯಗಳನ್ನು ಸುಲಭ ಹಾಗೂ ಸುವ್ಯವಸ್ಥಿತ ರೀತಿಯಲ್ಲಿ ಕಂಜರಭಾಟ ಸಮುದಾಯವು ಮಾಡಲು ಪ್ರಯತ್ನಿಸುತ್ತಾ ಬಂದಿದೆ. ಸಮಾಜದ ಕಾರ್ಯಕಲಾಪಗಳು ಸರಿಯಾಗಿ ನಡೆಯಲು ಕೆಲ ನಿಮಯಗಳನ್ನು ಪಾಲಿಸಬೇಕಾಗುತ್ತದೆ. ಸಮುದಾಯದಲ್ಲಿ ಮದುವೆ, ಮರಣ, ನ್ಯಾಯ ಇತ್ಯಾದಿ ವ್ಯವಹಾರಗಳು ಸಮುದಾಯದ ಹಿರಿಯರ ಮುಖಾಂತರ ನಡೆಯುವುದು. ಈ ಜವಾಬ್ದಾರಿಯನ್ನು ಹಿರಿಯರು ಹೊತ್ತು ನ್ಯಾಯಬದ್ಧ ಹಾಗೂ ಪ್ರಾಮಾಣಿಕವಾಗಿ ಕಾರ್ಯಗಳನ್ನು ಮಾಡುತ್ತಾರೆ. ಕಂಜರಭಾಟ ಸಮುದಾಯದ ಸಾಮಾಜಿಕ ವ್ಯವಸ್ಥೆ ನೆಮ್ಮದಿ ಹಾಗೂ ಅದರ ಬೆಳವಣಿಗೆಗಾಗಿ ಪಂಚಾಯತ ವ್ಯವಸ್ಥೆ ಮಾಡಲಾಗಿದೆ. ಇದಕ್ಕೆ "ಜಾತ ಪಂಚಾಯತ್" ಎಂದು ಕರೆಯುತ್ತಾರೆ.

ಸಮುದಾಯದಲ್ಲಿ ಉದ್ಭವಿಸುವ ಸಮಸ್ಯೆಗಳು ಸಮುದಾಯದ ಪಂಚಾಯತಿಯಲ್ಲಿ ಬಗೆ ಹರಿಸಿಕೊಳ್ಳುತ್ತಾರೆ. ಇವರ ನ್ಯಾಯಗಳು ಪೋಲಿಸ್ ಠಾಣೆಗಳಿಗೆ ಹೋಗುವುದಿಲ್ಲ. ಕೊಲೆ, ಜಗಳ, ಕಳ್ಳತನ, ಮೋಸತನ, ಗಂಡಹೆಂಡತಿ ಜಗಳ, ಹೊಲ, ಮನೆತನದ ವ್ಯವಹಾರ, ಅನೈತಿಕ ಸಂಬಂಧ ಸೋಡಾಚೀಟಿ ಮುಂತಾದ ವಿಷಯಗಳ ಬಗ್ಗೆ ನ್ಯಾಯಗಳು ಬಂದರೆ ಅವು ಸಮುದಾಯದ ಪಂಚಾಯತಿಯಲ್ಲಿ ನ್ಯಾಯಬದ್ಧವಾಗಿ ಸರಿಯಾದ ನಿರ್ಣಯಗಳನ್ನು ಕೊಟ್ಟು ಸಮುದಾಯದ ದುಃಖಗಳನ್ನು ಪಂಚರು ತೆಗೆದುಕೊಂಡು ಅವರಿಗೆ ಸುಖ ಕೊಡುತ್ತಾರೆ. ಸಮುದಾಯದ ಪಂಚರು ಕೊಟ್ಟ ನ್ಯಾಯಕ್ಕೆ ಸಮಾಜದವರು ತಲೆ

ಬಾಗುತ್ತಾರೆ. ಹೀಗಾಗಿ ಇಲ್ಲಿಯವರೆಗೆ ಈ ಸಮುದಾಯದವರ ಮೇಲೆ ಕೇಸುಗಳು ದಾಖಲವಾಗಿರುವುದಿಲ್ಲ.

ಕಂಜರಭಾಟರಲ್ಲಿ ಪಾರಂಪರಿಕ ಜಾತಿ ಪಂಚಾಯತಿ ಪದ್ಧತಿ ಇರುವುದು. ಸಂಚಾರಿಗಳಾಗಿದ್ದವರು ೮-೧೦ ಕುಟುಂಬಗಳು ಒಂದು ಕಡೆ ಸೇರಿದಾಗ ತಮ್ಮ ನ್ಯಾಯಗಳನ್ನು ಪಂಚರಿಗೆ ಒಪ್ಪಿಸಿ ನ್ಯಾಯ ಪಡೆದುಕೊಳ್ಳುತ್ತಿದ್ದರು. ಜಾತಿ ಪಂಚಾಯತಿಯ ಸದಸ್ಯರೆಲ್ಲರೂ ಗಿಡದ ಬುಡಕ್ಕೆ ವೃತ್ತಕಾರದಲ್ಲಿ ಕುಳಿತು ಕೈಯಲ್ಲಿ ಡೊಂಕು ಮುಖದ ಬೆತ್ತದ ಬಡಿಗೆ(ಖುಂಡಿಯಾ)ಯನ್ನು ತೆಗೆದುಕೊಂಡು ನೆಲಕ್ಕೆ ಬಡಿದು, ಬಡಿದು ಪಂಚಾಯತಿ ಮಾಡುತ್ತಾರೆ.

ಪಂಚಾಯತಿ ನಡೆಸಲು ಸಮುದಾಯದಲ್ಲಿ ಒಬ್ಬ ಮುಖ್ಯಸ್ಥ ಇರುತ್ತಾನೆ. ಅವನಿಗೆ 'ಸರಪಂಚ' ಎಂದು ಕರೆಯುತ್ತಾರೆ. ಸರಪಂಚ ಪಂಚಾಯತಿಯ ಪ್ರತಿಯೊಂದು ಕಾರ್ಯಗಳನ್ನು ನಡೆಸುತ್ತಾನೆ. ಇವನು ಪಂಚಾಯತಿಯ ಮುಖ್ಯಸ್ಥನಾಗಿದ್ದು ಸಮುದಾಯದಲ್ಲಿ ಪ್ರತಿಷ್ಠಿತ ವ್ಯಕ್ತಿ ಆಗಿರುತ್ತಾರೆ. ಸಮುದಾಯದ ಅಂತರಿಕ ಹಾಗೂ ವ್ಯವಹಾರಿಕ ನ್ಯಾಯಗಳನ್ನು ಇತರ ಪಂಚರೊಂದಿಗೆ ಚರ್ಚಿಸಿ ಬುದ್ಧಿವಂತಿಕೆಯಿಂದ ಯಾರಿಗೂ ಅನ್ಯಾಯವಾಗದಂತೆ ಪ್ರತಿಯೊಬ್ಬರಿಗೂ ಯೋಗ್ಯ ನ್ಯಾಯ ದೊರೆಯುವಂತೆ ಮಾಡುತ್ತಾನೆ. ಸರಪಂಚ ನ್ಯಾಯಬದ್ಧವಾಗಿ ನಿರ್ಣಯಗಳನ್ನು ಕೊಟ್ಟರೆ ಸಮುದಾಯದಲ್ಲಿ ಅಂಥವರಿಗೆ ಗೌರವ ದೊರೆಯುವುದು. ಸಮುದಾಯದಲ್ಲಿ ಸರಪಂಚರಿಗೆ ಪೂರ್ವಕಾಲ ದಿಂದಲೂ ಗೌರವದಿಂದ ಕಾಣುತ್ತಾ ಬಂದಿದ್ದಾರೆ. ಸಮುದಾಯದ ಆಗುಹೋಗುಗಳಿಗೆಲ್ಲ ಸರಿಯಾಗಿ ನ್ಯಾಯ ಕೊಡಲು ಸಮುದಾಯದ ಅನುಭವಿಕ ಹಿರಿಯರನ್ನು ಕೂಡಿಸಿ ಪಂಚಾಯತಿ ಮಾಡುತ್ತಾರೆ. ಈ ಸಮುದಾಯದ ಆಡಳಿತ ಸ್ವರೂಪ ಇತರ ಸಮುದಾಯಗಳಿಗಿಂತ ಭಿನ್ನವಾಗಿದೆ. ಎಲ್ಲ ಹಂತಗಳಲ್ಲೂ ಸಮುದಾಯದ ಒಗ್ಗಟ್ಟನ್ನು ಕಾಯ್ದುಕೊಳ್ಳುವ ಸಾಮರ್ಥ್ಯ ಈ ಜನರಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಬ್ರಿಟಿಷರು ಕಂಜರಭಾಟರ ನ್ಯಾಯಗಳನ್ನು ಕುಳಿತು ವಿಕ್ಷಿಸುತ್ತಿದ್ದರು. ಇವರು ಸರಿಯಾದ ನ್ಯಾಯ ನಿರ್ಣಯ ಕೊಡುತ್ತಾರೆ ಎಂದು ತಮ್ಮ ವಾರ್ಷಿಕ ವರದಿಯಲ್ಲಿ ಪ್ರಕಟಿಸಿದ್ದಾರೆ.

ಈ ಪಂಚಾಯತಿ ಪದ್ಧತಿ ಸಮುದಾಯದಲ್ಲಿ ಇಲ್ಲಿಯವರೆಗೆ ಉಳಿಯಲು ಪಂಚರ ಮೇಲಿನ ವಿಶ್ವಾಸವೇ ಮುಖ್ಯವಾಗಿದೆ. ಪಂಚರೆಂದರೆ ದೇವರ ಸಮಾನ ಎಂದು ಹೇಳುತ್ತಾರೆ. ಈ ಪದ್ಧತಿ ಬಹಳ ವರ್ಷಗಳಿಂದ ನಡೆದು ಬಂದ ಪದ್ಧತಿ ಇದಕ್ಕೆ ಒಂದು ಉದಾಹರಣೆ ಇಲ್ಲಿದೆ.

ರಾಜಸ್ಥಾನದಲ್ಲಿ ಸಾಂಸಿ (ಕಂಜರಭಾಟ) ಜನರು ವಾಸವಾಗಿದ್ದರು ಇವರು ಧೈರ್ಯಶಾಲಿಗಳು, ಸಾಹಸಿ ವೀರರಾಗಿದ್ದರು. ರಜಪೂತ ರಾಜರ ಕಡೆಗೆ ಕೆಲಸವನ್ನು ಮಾಡುತ್ತಿದ್ದರು. ರಜಪೂತ ರಾಜರೊಬ್ಬರ ಕಡೆಗೆ ಸಾಂಸಿ ಸಮುದಾಯದ ಧೀರಿಯಾ ಎಂಬಾತ ಕೆಲಸಕ್ಕೆ ಇದ್ದನು. ರಾಜನು ಅವನಿಗೆ ರಸ್ತೆ ಮಾಡಿಸುವ ಕೆಲಸವನ್ನು ಒಪ್ಪಿಸಿದನು.

ಅವನು ದುಡಿಸಿಕೊಳ್ಳಲು ಜನರನ್ನು ಬೇರೆ ಬೇರೆ ಊರುಗಳಿಂದ ಹಿಡಿದು ತರುತ್ತಿದ್ದನು. ಸಾಂಸಿ ಸಮುದಾಯದ ಯುವಕ, ಯುವತಿಯರನ್ನು ಹಿಡಿದುಕೊಂಡು ದುಡಿಸತೊಡಗಿದನು. ಧೀರಿಯಾ ಸಮುದಾಯದ ಮೇಲೆ ಅತ್ಯಾಚಾರ ಮಾಡುತ್ತಿದ್ದನು. ಇವನು ಖೊಟ್ಟಿ ನಾಣ್ಯಗಳನ್ನು ಚಲಾವಣೆ ಮಾಡತೊಡಗಿದನು. ಅಸಲಿ ನಾಣ್ಯಗಳನ್ನು ಅರಮನೆಯ ಖಜಾಂಚಿಯೊಂದಿಗೆ ಸೇರಿ ತಾವೇ ಹಂಚಿಕೊಳ್ಳುತ್ತಿದ್ದರು. ಈ ಕಾರ್ಯ ಎಷ್ಟೋ ದಿನ ನಡೆಯುತ್ತಾ ಬಂತು. ಧೀರಿಯಾ ತನ್ನಪಕ್ಕೆ ತಾನು ನನ್ನಂಥವರು ಯಾರು ಇಲ್ಲ ಎಂದು ತಿಳಿದುಕೊಂಡನು. ಸಾಂಸಿ ಜನರು ಇವನ ಕೃತ್ಯಗಳಿಂದ ಬೇಸತ್ತಿದ್ದರು. ಧೀರಿಯಾನ ಮೊಮ್ಮಗ (ಮಗಳ ಮಗ) ಲಾಲಜಿ ಅಜ್ಜನ ಕಾರ್ಯಗಳನ್ನು ನೋಡಿ ನೊಂದುಕೊಂಡನು. ಇದನ್ನು ತನ್ನ ತಾಯಿಗೆ ಹೇಳಿದನು. ತಾಯಿ ಸಹ ತನ್ನ ತಂದೆಗೆ ಹೆದರುತ್ತಿದ್ದಳು. ಲಾಲಜಿ ೨-೩ ಸಲ ಅಜ್ಜನಿಗೆ ಹೇಳಿದ ಅಜ್ಜ ನೀನು ಮಾಡುತ್ತಿರುವ ಕಾರ್ಯ ಸರಿಯಿಲ್ಲ, ದ್ರೋಹದ ಕೆಲಸವಾಗಿದೆ ಎಂದಾಗ ಧೀರಿಯಾ ತನ್ನ ಮೊಮ್ಮಗನಿಗೆ ಸಿಟ್ಟು ಮಾಡಿದನು. ಲಾಲಜಿ ತನ್ನ ವಿಚಾರ ಬಿಡಲಿಲ್ಲ. ಪದೇ ಪದೇ ತನ್ನ ತಾಯಿಯ ಜೊತೆಗೆ ಚರ್ಚೆ ಮಾಡುತ್ತಾ, ಇದನ್ನು ಒಂದು ದಿನ ತಾಯಿಗೆ ಹೇಳುತ್ತಾನೆ. ನೋಡು ತಾಯಿ ನಿನ್ನ ತಂದೆಗೆ ಹೋಗಿ ಹೇಳು ಸಮುದಾಯದ ಯುವಕ ಯುವತಿಯನ್ನು ಬಿಟ್ಟು ಬಿಡು. ಇಂಥ ಕ್ರೂರ ಕೆಲಸ ಮಾಡಬೇಡವೆಂದು ಅಜ್ಜನಿಗೆ ತಿಳಿಸಲು ತಾಯಿಗೆ ಹೇಳುತ್ತಾನೆ. ಆಗ ಅವನ ತಾಯಿಯು "ನಾನು ಹೋಗುತ್ತೇನೆ ನನ್ನ ತಂದೆಗೆ ಹೇಳುತ್ತೇನೆ. ಕೇಳಿದರೆ ಒಳ್ಳೇಯದು. ನನ್ನ ಹಾದಿ ಮೂರು ದಿನ ಕಾಯು, ನಾನು ಒಂದು ವೇಳೆ ಮೂರುದಿನದೊಳಗೆ ಬರದಿದ್ದರೆ ನಾನು ಸಂಕಟದಲ್ಲಿ ಬಿದ್ದಿದ್ದೇನೆ ಎಂದು ನೀನು ತಿಳಿದುಕೊಳ್ಳಬೇಕು ಎಂದು ಮಗನಿಗೆ ಹೇಳಿ ಹೋದಳು. ಊರಿಗೆ ಹೋಗಿ ಲಾಲಜಿಯ ವಿಚಾರ ತಂದೆಗೆ ಹೇಳುತ್ತಾಳೆ. ಧೀರಿಯಾ ಸಿಟ್ಟಿಗೆದ್ದು ನನಗೆ ಬುದ್ಧಿವಾದ ಹೇಳಲು ಬಂದಿಯಾ ಸುಮ್ಮನೆ ಹೋಗು ಎನ್ನುತ್ತಾನೆ. ನಾನು ಹೋಗುವುದಿಲ್ಲ ಎಂದು ಹೇಳುತ್ತಾಳೆ. ಧೀರಿಯಾ ಸಿಟ್ಟಿಗೆದ್ದು ತನ್ನ ಮಗಳಿಗೆ ಗಿಡಕ್ಕೆ ಕಟ್ಟಿಹಾಕುತ್ತಾನೆ. ಈ ಸುದ್ದಿ ತಿಳಿದ ಕೂಡಲೆ ಲಾಲಜಿ ತನ್ನ ಅಜ್ಜನ ಊರಿಗೆ ಬರುತ್ತಾನೆ. ತಾಯಿಯ ಪರಿಸ್ಥಿತಿ ನೋಡಿ ಕಣ್ಣು ಕೆಂಪಾದವು. ಅಜ್ಜನ ತಪ್ಪುಗಳನ್ನು ಎತ್ತಿ ತೋರಿಸುತ್ತಾನೆ. ಆದರೆ ಅಜ್ಜ ಲಾಲಜಿಯ ಮಾತಿಗೆ ಬೆಲೆ ಕೊಡುವುದಿಲ್ಲ. ನಾನು ನಿನ್ನ ಕಾರಭಾರವೆಲ್ಲ ರಾಜನಿಗೆ ಹೇಳುತ್ತೇನೆ ಎಂದು ಹೇಳುತ್ತಾನೆ. ನೀನು ರಾಜನಿಗೆ ಹೇಳಿ ನನಗೆ ಬಂಧನಕ್ಕೊಳಪಡಿಸದಿದ್ದರೆ ನಿನಗೆ ಗೋಣಿ ಚೀಲದಲ್ಲಿ ಕಟ್ಟಿ ಸಮುದ್ರದಲ್ಲಿ ಚಲ್ಲುತ್ತೇನೆ ಎಂದು ಧೀರಿಯಾ ಹೇಳಿದನು. ನಿನ್ನ ನೈಜ ರೂಪವಯನ್ನು ರಾಜನಿಗೆ ತಿಳಿಸಿ ನಿನ್ನ ಅಪರಾಧಗಳನ್ನು ಸಿದ್ಧಪಡಿಸಿ ಬಂಧನಗೊಳಿಸಿ ಜೈಲಿಗೆ ಕಳಿಸದಿದ್ದರೆ ನನ್ನ ಹೆಸರು ಲಾಲಜನೇ ಅಲ್ಲ ನಿನಗೆ ಜೀವಂತ ಗೋಣಿ ಚೀಲದಲ್ಲಿ ಹಾಕಿ ಕಟ್ಟಿ ಸಮುದ್ರದಲ್ಲಿ ಚಲ್ಲುತ್ತೇನೆ ಎಂದು ಸವಾಲುಹಾಕಿ ತಾಯಿಗೆ ಬಿಡಿಸಿಕೊಂಡು ತನ್ನ ಊರಿಗೆ ಹೋದನು. ಸಮಯ ನೋಡಿ ರಾಜನಿಗೆ ಭೇಟಿಯಾಗಿ ಅಜ್ಜ ಮಾಡುತ್ತಿರುವ ಅನ್ಯಾಯದ ಬಗೆಗೆ

ಸವಿಸ್ತಾರವಾಗಿ ಹೇಳುತ್ತಾನೆ. ರಾಜ ತನ್ನ ಗುಪ್ತಚಾರರನ್ನು ಕಳಿಸಿ ನಿಜ ಸಂಗತಿ ತಿಳಿದು ಕೊಳ್ಳುತ್ತಾನೆ. ಲಾಲಜಿ ಹೇಳಿದ್ದು ನಿಜವೆಂದು ಗೊತ್ತಾದಾಗ ಧೀರಿಯಾನನ್ನ ಬಂಧಿಸಿ ಜೈಲಿಗೆ ಕಳಿಸುತ್ತಾನೆ. ಕೆಲ ದಿನಗಳ ನಂತರ ಧೀರಿಯಾ ಜೈಲಿನಿಂದ ಬಿಡುಗಡೆಯಾಗಿ ಬಂದು ಮೊದಲು ಮೊಮ್ಮಗ ಲಾಲಜಿಗೆ ಭೇಟ್ಟಿಯಾಗಿ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾನೆ. ಲಾಲಜಿ ತನ್ನ ಅಜ್ಜನಿಗೆ ಜೀವಂತ ಗೋಣಿ ಚೀಲದಲ್ಲಿ ಹಾಕಿ ಸಮುದ್ರದಲ್ಲಿ ಚೆಲ್ಲುತ್ತಾನೆ. ಧೀರಿಯಾನ ಎಲುವು ಲಾಲಜಿ ಮೀನುಗಳಿಗೆ ತಿನಿಸಿದನು ಎಂದು ಹೇಳುತ್ತಾರೆ. ಲಾಲಜಿ ಮಾಡಿದ ಸಾಹಸಕ್ಕೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಸ್ವಲ್ಪ ದಿನಗಳ ನಂತರ ದಿಲಾರಖಾ ಜೈಲಿನಿಂದ ಬಿಡುಗಡೆಯಾಗಿ ಬರುತ್ತಾನೆ. ಮನೆಗೆ ಬಂದು ತನ್ನ ತಂಗಿಯರ ಬಗೆಗೆ ವಿಚಾರಿಸುತ್ತಾನೆ. ಧೀರಿಯಾ ಹಿಡಿದುಕೊಂಡು ಹೋಗಿದ್ದಾನೆ ಎಂದು ಹೇಳುತ್ತಾರೆ. ಅವನು ಸಿಟ್ಟಿಗೆದ್ದು ಧೀರಿಯಾನ ಊರಿಗೆ ಒಂಟೆಯ ಮೇಲೆ ಹೋಗುತ್ತಾನೆ. ಧೀರಿಯಾ ಸತ್ತ ಸುದ್ದಿ ಹಾಗೂ ಲಾಲಜಿಯ ಸಾಹಸದ ಬಗೆಗೆ ದಿಲಾರಖಾಗೆ ಗೊತ್ತಾಗುತ್ತದೆ. ದಿಲಾರಖಾ ಸಮುದಾಯದ ಎಲ್ಲ ಜನರಿಗೆ ಬಿಡಿಸಿ ಅಲ್ಲಿಯೇ ಸಮುದಾಯದ ಹಿರಿಯರನ್ನು ಕೂಡಿಸಿ ಸಮುದಾಯದಲ್ಲಿ ಆಗುತ್ತಿರುವ ಅನ್ಯಾಯಗಳನ್ನು ತಡೆಗಟ್ಟಲು ಸಮುದಾಯದ ಪಂಚಾಯತಿ ಮಾಡುವುದು ಅವಶ್ಯ ಇದೆ ಎಂದು ಮನವರಿಕೆ ಮಾಡಿಕೊಡುತ್ತಾನೆ. ಎಲ್ಲರು ಅದಕ್ಕೆ ಒಪ್ಪಿಕೊಳ್ಳುತ್ತಾರೆ. ಒಂದು ದಿನ ಸಮುದಾಯದ 'ಮ್ಹಾಲ್ಲಾ' ಮತ್ತು 'ಬಿಡ್ಡು' ಪಂಗಡದ ಜನರು ಎಲ್ಲರೂ ಸೇರಿದರು. ಇವುಗಳಲ್ಲಿರುವ ಒಂಭತ್ತು ಮ್ಹಾಲ್ಲಾ ಹಾಗೂ ಒಂಭತ್ತು ಬಿಡ್ಡು ಬೆಡಗಿನವರು ಸೇರಿದರು. ಮೊದಲು ಮುಖ್ಯಸ್ಥನ ಆಯ್ಕೆ ಮಾಡಿದರು. ದಿಲಾರಖಾನಿಗೆ ಮುಖ್ಯಸ್ಥನ ಸ್ಥಾನಕೊಟ್ಟು ಆಯ್ಕೆ ಮಾಡಿದರು. ಸಮುದಾಯದ ಆಡಳಿತ ಸರಿಯಾಗಿ ನಡೆಸಲು ಮೊದಲು ಕಾಯ್ದೆ ಕಾನೂನುಗಳ ರಚನೆಯಾಗಬೇಕೆಂದರು. ಸಮುದಾಯದ ನ್ಯಾಯಗಳನ್ನು ನಾವೇ ನ್ಯಾಯ ಬದ್ಧವಾಗಿ ನಿರ್ಣಯಿಸಿ ಜನತೆಗೆ ಆಗುವ ಅನ್ಯಾಯಗಳನ್ನು ದೂರ ಮಾಡಬೇಕೆಂದು ಹೇಳಿದರು. ದಿಲಾರಖಾ ಸಭೆಗಳನ್ನು ಕರೆದು ಸಮುದಾಯದ ಕಾಯ್ದೆ ಕಾನೂನುಗಳ ರೂಪರೇಷೆಗಳನ್ನು ತಯಾರಿಸಿ ಸಮುದಾಯದಲ್ಲಿ ಕಾರ್ಯರೂಪಕ್ಕೆ ತಂದನು. ಎಲ್ಲರಿಗೂ ಒಂದೊಂದು ಪದವಿ(ಖಾತೆ)ಗಳನ್ನು ಕೊಟ್ಟು ಆಡಳಿತ ಪ್ರಾರಂಭಿಸಿದನು. ಘಟನಾ (ಸಂವಿಧಾನ) ರಚನೆ ಮಾಡುವ ಕಾರ್ಯವನ್ನು ಹದಿನೆಂಟು ಮನೆತನ ಹಿರಿಯರು ಸೇರಿ ಪ್ರಾರಂಭಿಸಿದರು.

ಆಡಳಿತಾತ್ಮಕ ಸಮಿತಿ

ಬೆಡಗು	**ಹೆಸರು**	**ಹುದ್ದೆ**
ತಮಾಯಚಿ (ಬಾಗಡೆ)	- ದಿಲಾರಖಾ	- ಬಜೀರ ಪ್ರಧಾನ
	- ಮೇಥಿಯಾ	- ಧರ್ಮ ಬಜೀರ
	- ಭೋಮಾ	- ಗೌರ್ನರ

ಮಾಥರ	- ಬನಿಯಾ	- ಬಿಡವಾನಿ
ಮೀಣಾ		- ಹಡಗುಗಳ ಮಾಲಿಕ ಮತ್ತು ಟಪಾಲಿಕರು
ಇಂದರಾ		- ಒಂಭತ್ತು ಊರಿನ ಮಾಲಿಕ
ಘಮಂಡಿ	- ಲಾಲಾಜಿ	-
ಭಜರಂಗ		
ಕರಾಳಾ		
ಕಾಂಬಳ		
ಡುಂಗರ		
ನೆಥಲಾ		- ಏಳು ಊರಿನ ರಾಜ
ಬಾಟ್ಟು		- ಒಂದೂವರೆ ಮನೆ ರಾಜ
ಗಾಗಡ		- ಸಂರಕ್ಷಕ (ಪನೇಶರ)
ಮಲಕಿಯಾ		- ಕೆಂಪು ಟೊಪ್ಪಿಗೆಯ ರಾಜ
ಗುಮಾನಾ		- ತಾರಮಾಸ್ತರ, ಸಂದೇಶವಾಹಕರು
ಗಾರಿಯಾ		- ರಸ್ತೆಗಳ ರಾಜ (ರೋಡ ಬಜೀರ)
ರಾವಳ		- ಲಲ್ಲುಸಾಹಿಬ
ಟಿಡ್ಡಾ		- ಲೈಟನ್ ಸಾಹೇಬ
ಅಭುವಾ		- ತಳವಾರ

ಈ ರೀತಿ ಆಡಳಿತಾತ್ಮಕ ಸಮಿತಿಯನ್ನು ಮಾಡಿ ಮೇಲಿಂದ ಮೇಲೆ ಸಭೆಗಳನ್ನು ತೆಗೆದುಕೊಂಡು ಸಮುದಾಯದ ಕಾಯ್ದೆಗಳನ್ನು ರಚಿಸಿದರು. ಬುಚ್ಚಾಕುವಾ, ರೇತಿಯಾ, ತಳಾವ, ಪೀಳಿಭಿಂತ, ಹಾಲತಿ ಕಿಂಕರ, ಬಾಡ್ನೇರ, ಭಾರಾಭಾಟ್ಟೆ ಈ ಊರುಗಳಲ್ಲಿ ಸಭೆ ಸೇರಿ ಜನತೆಯ ಹಿತರಕ್ಷಣೆಗಾಗಿ ನ್ಯಾಯ ಪಂಚಾಯತಿಯ ರಚನೆಯಾಯಿತು. ಇದೇ ಪದ್ಧತಿಯನ್ನು ಪ್ರತಿಯೊಂದು ಊರಲ್ಲಿ ಅನುಸರಿಸುತ್ತ ಇಂದಿಗೂ ನ್ಯಾಯ ನಿರ್ಣಯವನ್ನು ಕೊಡುತ್ತಾರೆ.

ಪಂಚಾಯತಿಯ ಕಾರ್ಯಗಳು : ಕಂಜರಭಾಟ ಸಮುದಾಯದಲ್ಲಿ ಪ್ರತಿಯೊಂದು ಊರಿಗೆ ಒಂದು ಪಂಚಾಯತಿ ಇದೆ. ಇದರಲ್ಲಿ ಒಬ್ಬ ಸರಪಂಚ ಇರುತ್ತಾನೆ. ಇನ್ನುಳಿದವರು ಪಂಚರು ಇರುತ್ತಾರೆ. ಪಂಚಾಯತಿ ಯಾವಾಗಲೂ ಗಿಡದ ಕೆಳಗೆ ವೃತ್ತಾಕಾರದಲ್ಲಿ ಕುಳಿತು ನ್ಯಾಯ ನಿರ್ಣಯ ಕೊಡುತ್ತಾರೆ. ಪಂಚಾಯತಿಯಲ್ಲಿ ಮಾತನಾಡುವವನು ಡೊಂಕು ಮುಖದ ಬೆತ್ತದ ಬಡಿಗೆ ಕೈಯಲ್ಲಿ ಹಿಡಿದು ಮಾತನಾಡುತ್ತಾನೆ. ಈ ಪರಂಪರೆ ತಲೆಮಾರುಗಳಿಂದ ನಡೆದು ಬಂದಿದೆ. ನ್ಯಾಯ ಪಂಚಾಯತಿಯ ಕೆಲಸವೆಂದರೆ ದೇವರ ಕೆಲಸ ಇದ್ದ ಹಾಗೆ. ಇಂದಿಗೂ ಈ ಸಮುದಾಯದ ಜಾತಿ ಪಂಚಾಯತಿ ಬಲಿಷ್ಠವಾಗಿದೆ.

ಸಮುದಾಯದ ರಕ್ಷಣೆ, ಆಗುಹೋಗುಗಳ ಬಗೆಗೆ ನಿಷ್ಪಕ್ಷಪಾತವಾಗಿ ಪ್ರಾಮಾಣೀಕತನದಿಂದ ನ್ಯಾಯ ಒದಗಿ ಜನರ ವಿಶ್ವಾಸವನ್ನು ಗಳಿಸಿದ್ದಾರೆ.

ನಿಶ್ಚಿತಾರ್ಥ, ಮದುವೆ, ವಿಧವೆಯರ ಮದುವೆ, ಸ್ತ್ರೀ ಅಥವಾ ಪುರುಷರ ಎರಡನೆ ಮದುವೆ, ಅಂತರಜಾತಿಯ ಮದುವೆ, ಅನೈತಿಕ ಸಂಬಂಧ, ಯುವತಿಯರನ್ನು ಮಾರಾಟ ಮಾಡಿದರೆ, ಗಂಡ-ಹೆಂಡರ ಜಗಳ, ಮರಣ, ಸೋಡಚೀಟಿ, ಕೊಲೆ, ಕಳ್ಳತನ, ದರೋಡೆ, ಮೋಸ, ಹುಡುಗಿಯನ್ನು ಓಡಿಸಿಕೊಂಡು ಹೋದರೆ, ಸಾಲ, ಹೊಲಮನೆ, ಮನೆತನದ ವ್ಯವಹಾರ ಮುಂತಾದ ನ್ಯಾಯಗಳು ಪಂಚರ ಕಡೆಗೆ ಬರುತ್ತದೆ. ನ್ಯಾಯದ ಬಗ್ಗೆ ತಕರಾರು ಕೊಡುವವರು ತಮ್ಮ ಊರಿನ ಸರಪಂಚರಿಗೆ ಫೀ ಕೊಟ್ಟು ಪಿರ್ಯಾದಿ ಕೊಡುವರು. ಪೀರ್ಯಾದಿ ಯಾರ ಹೆಸರಿಗೆ ಕೊಟ್ಟಿರುತ್ತಾರೆ ಅವರಿಗೆ ಸಮುದಾಯದ ತಳವಾರನನ್ನು ಕಳಿಸಿ ಸುದ್ದಿ ಮುಟ್ಟಿಸುವರು. ವಾದಿ ಮತ್ತು ಪ್ರತಿವಾದಿ ಹಾಗೂ ಪಂಚರಿಗೆ ದಿನ ಮತ್ತು ವೇಳೆಯನ್ನು ತಿಳಿಸಿ ಸರಿಯಾಗಿ ಹಾಜರಿರಲು ತಿಳಿಸುತ್ತಾರೆ. ಈ ರೀತಿ 'ಜಾತ ಪಂಚಾಯತಿ'ಯ ಕಾರ್ಯಗಳು ಪ್ರಾರಂಭವಾಗುವವು.

ನ್ಯಾಯ ನಿರ್ಣಯಗಳು : ಕಂಜರಭಾಟರ ನ್ಯಾಯಗಳು ಪೋಲಿಸ್ ಠಾಣೆಗಳಿಗೆ ಮತ್ತು ನ್ಯಾಯಾಲಯಗಳಿಗೆ ಹೋಗುವುದಿಲ್ಲ. ಒಂದು ವೇಳೆ ನ್ಯಾಯಾಲಯಕ್ಕೆ ನಿರ್ಣಯ ಪಡೆದುಕೊಂಡು ಬಂದರೆ ಅದಕ್ಕೆ ಸಮಾಜ ಒಪ್ಪಿಗೆ ಕೊಡುವುದಿಲ್ಲ. ಜಾತಿ ಪಂಚಾಯತಿಯಲ್ಲಿ ಮತ್ತೇ ವಾದಿ ಪ್ರತಿವಾದಿಗಳು ತಮ್ಮ ನ್ಯಾಯವನ್ನು ಮಂಡಿಸಿ ತೀರ್ಪನ್ನು ಪಂಚಾಯತಿಯಲ್ಲಿ ಪಡೆಯಬೇಕಾಗುತ್ತದೆ. ಸರ್ಕಾರಿ ನ್ಯಾಯಾಲಗಳಿಗಿಂತಲೂ ಜಾತಿ ಪಂಚಾಯತಿಗಳು ಶ್ರೇಷ್ಠವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಏಕೆಂದರೆ ಸರಿಯಾದ ನ್ಯಾಯ ಸಿಗುವವರೆಗೆ ವಾದಿ ಪ್ರತಿವಾದಿಗಳಿಗೆ ಬಿಡುಗಡೆ ದೊರೆಯುವುದಿಲ್ಲ. ಹೀಗಾಗಿ ಜಾತಿ ಪಂಚಾಯತಿ ಬಲಿಷ್ಠವಾಗಿದೆ. ನ್ಯಾಯ ಸರಿ ದೊರೆಯುವುದು ಜನರಿಗೆ ಖಚಿತವಾಗಿರುವುದರಿಂದ ಬೇಕಾದಂತಹ ನ್ಯಾಯವಿರಲಿ ಸಮಾಜದ ಪಂಚಾಯತಿಯಲ್ಲಿಯೇ ಪರಿಹರಿಸಿಕೊಳ್ಳುತ್ತಾರೆ.

ನ್ಯಾಯ ಪಂಚಾಯತಿ ಕೂಡಿದಾಗ ಎರಡೂ ಪಂಗಡದವರು ಬಂದು ಕೂಡುತ್ತಾರೆ. ಇವತ್ತಿನ ಪಂಚಾಯತಿ ಕೂಡಿಸಲು ಕಾರಣವೇನು ಎಂದು ಮೊದಲು ಪಿರ್ಯಾದಿ ಕೊಟ್ಟವನಿಗೆ ಕೇಳುತ್ತಾರೆ. ಇವನು ಮೊನ್ನೆ ನಮ್ಮ ಮನೆಗೆ ಬಂದಿದ್ದನು ಮನೆಯಲಿದ್ದ ಬಂಗಾರದ ಚೈನನ್ನು ಕಳುವ ಮಾಡಿದ್ದಾನೆ ಎಂದು ಸಾಕ್ಷಿ, ಪುರಾವೆಗಳೊಂದಿಗೆ ಅವನ ಮೇಲೆ ಅಪರಾಧ ಹೊರಿಸುತ್ತಾನೆ. ನಂತರ ಪ್ರತಿವಾದಿಗೆ ವಿಚಾರಿಸುತ್ತಾರೆ. ಇವರು ಹೇಳುವುದು ನಿಜವೇನು ಎಂದು ಕೇಳಿದಾಗ ಒಪ್ಪಿಕೊಂಡರೆ ಸರಿ ಇಲ್ಲದಿದ್ದರೆ ನಾನಾ ರೀತಿಯ ಉದಾಹರಣೆಗಳನ್ನು ಕೊಟ್ಟು ಅವನು ಕಳ್ಳತನ ಮಾಡಿದ್ದರೆ ಕಬೂಲ ಮಾಡಿಸುತ್ತಾರೆ. ಅವನು ತಪ್ಪು ಒಪ್ಪಿಕೊಂಡರೆ ಎರಡೂ ಕಡೆಯಿಂದ ಪಂಚಾಯತಿ ಶುಲ್ಕ ಹಾಕಿಸುತ್ತಾರೆ. ಮೊದಲು ಎರಡು ರೂಪಾಯಿ ತೆಗೆದುಕೊಳ್ಳುತ್ತಿದ್ದರು. ಈಗ ಮಾತ್ರ ಪಂಚಾಯತಿಯ ಶುಲ್ಕ ೫೦೦

ರೂಪಾಯಿಗಳು ಹಾಕಿ ಮತ್ತೇ ನ್ಯಾಯದ ವೈಖರಿಯನ್ನು ನೋಡಿ ದುಡ್ಡು ಹಾಕಿಸಿ ಅವರು ಕೊಟ್ಟ ನ್ಯಾಯದ ವಿಚಾರಣೆಗೆ ಪಂಚರು ಸಮುದಾಯದಿಂದ ಹೊರಗೆ ಕುಳಿತು ನ್ಯಾಯದ ಬಗೆಗೆ ಪ್ರತಿಯೊಬ್ಬ ಪಂಚರ ವಿಚಾರವನ್ನು ಪಡೆಯುತ್ತಾರೆ. ಎಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳು ಮತ್ತು ವಿಚಾರಗಳನ್ನು ಪ್ರಕಟ ಮಾಡುತ್ತಾರೆ. ಅವನು ಕಳ್ಳತನ ಮಾಡಿದ್ದನ್ನು ಒಪ್ಪಿಕೊಂಡ ಮೇಲೆ ಅವನು ಅಪರಾಧಿ ಎಂಬುದು ನಿರ್ಧರಿಸಿ ಅವನಿಗೆ ದಂಡ ಕಟ್ಟಬೇಕೋ ಅಥವಾ ಕ್ಷಮಿಸಬೇಕೊ ಎಂಬುದನ್ನು ನಿರ್ಧರಿಸಲಾಗುತ್ತದೆ. ಕಳ್ಳತನ ಮಾಡಿದ್ದು ತಪ್ಪು, ಬಂಗಾರದ ಚೈನನ್ನು ತಿರುಗಿ ಕೊಡಬೇಕು ಕಳ್ಳತನಕ್ಕೆ ಅವನಿಗೆ ದಂಡ ಕಟ್ಟಬೇಕೆಂದು ನಿರ್ಣಯಿಸಿ ತಿರುಗಿ ಸಮುದಾಯದಲ್ಲಿ ಬಂದು ಎರಡು ಕಡೆಯವರನ್ನು ಕರೆಯಿಸಿ ಪಂಚಾಯತಿಯ ಮಧ್ಯದಲ್ಲಿ ನೆಲದ ಮೇಲೆ ಒಂದು ವೃತ್ತಕಾರವನ್ನು ಹಾಕಿ ಮೊದಲು ಪೀರ್‍ಯಾದಿ ಕೊಟ್ಟವನನ್ನು ಕರೆಯಿಸಿ ನೆಲೆದ ಮೇಲೆ ಇರುವ ಸ್ವಲ್ಪ ಮಣ್ಣು ಕೈಯಲ್ಲಿ ತೆಗೆದುಕೊಂಡು ನೀವು ಕೊಟ್ಟ ನಿರ್ಣಯಕ್ಕೆ ನಾನು ಒಪ್ಪಿಕೊಳ್ಳುತ್ತೇನೆ ಎಂದು ಮಣ್ಣಿನ ಆಣೆ ಮೂರು ಸಲ ಮಾಡಿಸುತ್ತಾರೆ. ಇದೇ ರೀತಿ ಪ್ರತಿವಾದಿಗೂ ಅದೇ ರೀತಿ ಮಣ್ಣಿನ ಆಣೆ ಮಾಡಿಸಲಾಗುತ್ತದೆ. ನಂತರ ಬಂಗಾರದ ಚೈನ ಕಳ್ಳತನ ಮಾಡಿದ್ದ ಅಪರಾಧಿ ಚೈನನ್ನು ಹಿಂತಿರುಗಿಸಕೊಡಬೇಕು, ಕಳ್ಳತನ ಮಾಡಿದಕ್ಕೆ ಸಾವಿರ ಎರಡು ಸಾವಿರ ಹೀಗೆ ದಂಡ ಕಟ್ಟುತ್ತಾರೆ. ಬಂಗಾರದ ಚೈನ ಹಾಗೂ ದಂಡದ ಹಣವನ್ನು ವಸೂಲ ಮಾಡಿ ನ್ಯಾಯವನ್ನು ಬಗೆಹರಿಸುತ್ತಾರೆ.

ಗಂಡ-ಹೆಂಡತಿ ಜಗಳ : ಸೆರೆ ಕುಡಿದ ಅಮಲಿನಲ್ಲಿ ಗಂಡ ತನ್ನ ಹೆಂಡತಿಗೆ ಕಿರುಕುಳ ನೀಡುತ್ತಿದ್ದು ಹಾಗೂ ಹೊಡೆಯುತ್ತಿದ್ದು ಇದರಿಂದ ತಲೆ, ಕೈಕಾಲು ಮತ್ತು ದೇಹದ ಯಾವುದೇ ಭಾಗದಲ್ಲಿ ಗಾಯಗಳಾದಾಗ ಹೆಂಡತಿ ಗಂಡನ ಕಿರುಕುಳ ತಾಳಲಾರದೆ ಗಂಡನ ವಿರುದ್ಧ ಪಂಚಾಯತಿ ಕೂಡಿಸಲು ಸರಪಂಚರಿಗೆ ಪೀರ್‍ಯಾದಿಯನ್ನು ನೀಡುತ್ತಾಳೆ. ವಾದಿ ಮತ್ತು ಪ್ರತಿವಾದಿಗಳಿಗೆ ನಿಗದಿಪಡಿಸಿದ ಸಮಯಕ್ಕೆ ಪಂಚಾಯತಿಯನ್ನು ಕೂಡಿಸಲಾಗುತ್ತದೆ. ಪಂಚರ ಸಮಕ್ಷಮದಲ್ಲಿ ಪೀರ್‍ಯಾದಿಯನ್ನು ಕೇಳಲಾಗುತ್ತದೆ. ನೀನು ಯಾವ ಕಾರಣಕ್ಕಾಗಿ ಪಂಚಾಯತಿ ಕೂಡಿಸಿದೆ ನಿನಗೆ ಏನು ಅನ್ಯಾಯ ಅಥವಾ ತೊಂದರೆಯಾಗಿದೆ ಎಂದು ವಿಚಾರಿಸುತ್ತಾರೆ. ಆಗ ಅವಳು ತನಗೆ ಗಂಡನಿಂದ ಆಗಿರುವ ಅನ್ಯಾಯ ಅಥವಾ ತೊಂದರೆ ಗಳನ್ನು ತಿಳಿಸುತ್ತಾ ತನ್ನ ದೇಹಕ್ಕೆ ಆದ ಗಾಯಗಳೇ ಇವನ ವರ್ತನೆಯ ಸಾಕ್ಷಿಯಾಗಿರುತ್ತದೆ. ನಾನು ದುಡಿದು ತಂದಿರುವ ಹಣವನ್ನು ಸೆರೆ ಕುಡಿದು ಹಾಳು ಮಾಡುತ್ತಾನೆ, ಮಕ್ಕಳಿಗೆ ಉಪವಾಸ ಸಾಯಿಸುತ್ತಾನೆ. ನಾನು ಹೇಳಲಿಕ್ಕೆ ಹೋದರೆ ಈ ರೀತಿ ಹೊಡೆದಿದ್ದಾನೆ. ಇದರ ಬಗೆಗೆ ವಿಚಾರಣೆ ಆಗಬೇಕು ಎಂದು ಕೇಳಿಕೊಳ್ಳುತ್ತಾಳೆ. ನಂತರ ಪ್ರತಿವಾದಿಯಾದ ಗಂಡನು ತಾನು ಕುಡಿದ ಅಮಲಿನಲ್ಲಿ ಮಾಡಿದ ತಪ್ಪಿಗಾಗಿ ಕ್ಷಮೆಯಾಚಿಸುತ್ತೇನೆ ಇನ್ನು ಮುಂದೆ ಈ ತರಹ ಯಾವುದೇ ಘಟನೆಗಳನ್ನು ಆಗದಂತೆ ನೋಡಿಕೊಳ್ಳುವೆ ಎಂದು ತಪ್ಪೊಪ್ಪಿಗೆ ಕೇಳುತ್ತಾನೆ. ಆಗ ಪಂಚರು ನಡೆದ ಘಟನೆಗೆ ಹಾಗೂ ತಪ್ಪನ್ನು ಬೇಡುವ ವ್ಯಕ್ತಿಗೆ

ಬುದ್ದಿಯನ್ನು ಹೇಳಿ ನ್ಯಾಯ ತೀರ್ಮಾನಿಸಲು ನಿರ್ಧರಿಸಿದಾಗ ಪೀರ್ಯಾದಿ ನೀಡಿದ ವಾದಿದಾರಳಾದ ಸ್ತ್ರೀಯು ಒಪ್ಪದಿದ್ದಾಗ ಇದು ಕೇವಲ ನಿಮ್ಮ ಮುಂದೆ ತಪ್ಪೊಪ್ಪಿಗೆ ಪಡೆದು ನಂತರ ಇದೇ ರೀತಿಯ ಕಷ್ಟಗಳನ್ನು ನೀಡುತ್ತಾನೆ. ಇವರಿಗೆ ಸರಿಯಾದ ನ್ಯಾಯ ಹಾಗೂ ದಂಡವನ್ನು ವಿಧಿಸುವುದಾಗಿ ತಾಕೀತು ಮಾಡಿರಿ ಎಂದು ಕೇಳಿಕೊಳ್ಳುತ್ತಾಳೆ. ಇದಕ್ಕೆ ಪಂಚರು ಆರೋಪಿಯ ಸ್ಥಾನದಲ್ಲಿರುವ ಗಂಡಿಗೆ ನೀನು ಇನ್ನು ಮುಂದೆ ಇದೇ ರೀತಿ ನಡೆದುಕೊಂಡಲ್ಲಿ ೧೦೦೦ ರೂಪಾಯಿ ದಂಡವಾಗಿ ಕಟ್ಟಬೇಕಾಗುತ್ತದೆ ಹಾಗೂ ಕಠಿಣ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ ಎಂದು ಮುನ್ನೆಚ್ಚರಿಕೆ ನೀಡಿ ಅವನಿಗೆ ಬುದ್ದಿವಾದವನ್ನು ಹೇಳಲಾಗುತ್ತದೆ. ಗಂಡ-ಹೆಂಡತಿ ಯಾವುದೇ ಸಣ್ಣಪುಟ್ಟ ಮಾತಿಗೂ ಜಗಳವಾಡಬಾರದು ಎಂದು ಇಬ್ಬರಿಗೂ ತಾಕೀತ ಮಾಡಿ ನ್ಯಾಯವನ್ನು ಬಗೆಹರಿಸುತ್ತಾರೆ.

ಕೊಲೆ ಪ್ರಕರಣ : ಒಂದು ಮನೆತನದಲ್ಲಿ ತಂದೆಯ ಆಸ್ತಿಯ ಸಲುವಾಗಿ ಅಣ್ಣ-ತಮ್ಮಂದಿರು ಜಗಳಮಾಡಿಕೊಂಡು ಜಗಳದಲ್ಲಿ ತಮ್ಮ ಅಣ್ಣನ ಕೊಲೆಯನ್ನು ಮಾಡುತ್ತಾನೆ. ಇಂಥ ಸಮಸ್ಯೆ ಪೋಲಿಸ್ ಠಾಣೆಗೆ ಒಂದು ವೇಳೆ ಹೋದರೆ ಅಲ್ಲಿಂದ ಅವರು ಜಾಮೀನಿನ ಮೇಲೆ ಬಿಡುಗಡೆ ಆಗಿ ಬಂದ ಮೇಲೆ ಕೊಲೆ ಆದಂತಹ ವ್ಯಕ್ತಿಯ ಮನೆಯ ಮಕ್ಕಳು ಪಂಚಾಯತಿಯಲ್ಲಿಯೂ ಅವರನ್ನು ಎಳೆಯುತ್ತಾರೆ. ಪಂಚಾಯತಿಯ ಶುಲ್ಕ ಕೊಟ್ಟು, ಕೊಲೆ ಮಾಡಿದವನ ಹೆಸರಲ್ಲೇ ಪೀರ್ಯಾದಿ ಕೊಡುತ್ತಾರೆ. ಪಂಚರು ಹಾಗೂ ಸರಪಂಚನು ಸೇರಿ ತಲಾಟಿಗೆ ಕಳಿಸಿ ಆ ವ್ಯಕ್ತಿಯನ್ನು ಕರೆಯಿಸುತ್ತಾರೆ. ಅವನು ನನ್ನ ಕೇಸು ಪೋಲಿಸ್ ಠಾಣೆಯಲ್ಲಿದೆ ನಾನು ಪಂಚಾಯತಿಯಲ್ಲಿ ಬರುವುದಿಲ್ಲ ಎಂದು ಕೂಗಾಡಿದರೆ ಆಗ ಪಂಚರು ಅವನಿಗೆ ತಿಳಿ ಹೇಳಿ ಪಂಚಾಯತಿಯಲ್ಲಿ ಕೂಡಲು ಮನವಲಿಸುತ್ತಾರೆ. ಒಂದು ವೇಳೆ ಪಂಚಾಯತಿಗೆ ಬರಲು ಒಪ್ಪದಿದ್ದರೆ ಅವನಿಗೆ ಜಾತಿಯಿಂದ ಬಹಿಷ್ಕರಿಸಲಾಗುತ್ತದೆ. ಅವನು ಪಂಚಾಯತಿಗೆ ಬಂದು ಕೂಡುತ್ತಾನೆ. ಮೊದಲು ಫಿರ್ಯಾದಿ ಕೊಟ್ಟವರನ್ನು ಪಂಚರು ವಿಚಾರಿಸುತ್ತಾರೆ. ಏತಕ್ಕೆ ನಿಮ್ಮ ನ್ಯಾಯವಾಯಿತು. ಸವಿಸ್ತಾರವಾಗಿ ಹೇಳಿರಿ ಎಂದು ಹೇಳಿದಾಗ ಕೊಲೆಯಾದ ವ್ಯಕ್ತಿಯ ಕಡೆಯವರು ನಮ್ಮ ಅಜ್ಜ ಸತ್ತದಿನದಿಂದ ನಮ್ಮನೆಯಲ್ಲಿ ಆಸ್ತಿಯ ಬಗೆಗೆ ಜಗಳ ಪ್ರಾರಂಭವಾಗಿದ್ದವು. ನಮ್ಮ ತಂದೆ ಸ್ವಲ್ಪ ದಿನ ತಡೆ ಹಿರಿಯರನ್ನು ಕೂಡಿಸಿ ಆಸ್ತಿಯ ಬಟವಾಡೆ ಮಾಡೋಣ ಎಂದು ಹೇಳಿದರೂ ಸಹ ನಮ್ಮ ಚಿಕ್ಕಪ್ಪ ಕೇಳಲು ತಯಾರು ಇರಲಿಲ್ಲ. ರಾತ್ರಿಯ ವೇಳೆಯಲ್ಲಿ ಒಂದಿಷ್ಟು ಜನರನ್ನು ಕರೆದುಕೊಂಡು ಬಂದು ನಮ್ಮ ತಂದೆಯ ಜೊತೆಗೆ ವಾದ ವಿವಾದಕ್ಕೆ ಇಳಿದರು. ಎಷ್ಟು ಹೇಳಿದರೂ ಕೇಳಲಿಲ್ಲ. ನಮ್ಮ ತಂದೆಯನ್ನು ಎಳೆದಾಡಿ ಚಾಕುವಿನಿಂದ ಕೊಲೆ ಮಾಡಿದ್ದಾರೆ. ಎಂದು ಫಿರ್ಯಾದಿಯನ್ನು ಪಂಚರಿಗೆ ಕೊಟ್ಟಿದ್ದು ನಂತರ ಕೊಲೆಯಾದವನ ತಮ್ಮನಿಗೆ ಪಂಚರು ಕೇಳುತ್ತಾರೆ. ನಾನು ಮನೆಗೆ ಹೋದದ್ದು ನಿಜ ಆದರೆ ಕೊಲೆ ಮಾಡಿಲ್ಲ. ಸುಳ್ಳು ಅಪವಾದ ಕೊಡುತ್ತಿದ್ದಾರೆ. ಇದರ ಬಗೆಗೆ ನಿರಾಕರಿಸುತ್ತಾನೆ. ಇದು ನ್ಯಾಯ ನಿರ್ಣಯ ಕೊಡಲು ಜಟಿಲವಾದಾಗ ಆಣೆಕೇರಿ (ಗೋಳಾ) ಮಾಡಿಸುವ ಪ್ರಸಂಗ ಬರುವುದು. ಈ

ನ್ಯಾಯಕ್ಕಾಗಿ ಬೇರೆ ಊರುಗಳಿಂದ ಅನುಭವಿಕ ಪಂಚರನ್ನು ಕರೆಯಿಸಿ ಆಣೆಕೇರಿ(ಗೋಳಾ)ಯ ತಯಾರಿ ಮಾಡುತ್ತಾರೆ. ಎರಡೂ ಕಡೆಯವರಿಂದ ತಲಾ ೧೫೦೦೦ ರೂಪಾಯಿ ಪಂಚರ ಫೀ ತೆಗೆದುಕೊಳ್ಳುತ್ತಾರೆ.

ಆಪಾದನೆ ಯಾರ ಮೇಲೆ ಇದೆ ಆ ವ್ಯಕ್ತಿಯನ್ನು ಪಂಚರು ತಮ್ಮ ವಶದಲ್ಲಿ ತೆಗೆದುಕೊಂಡು ಎರಡು ರೂಪಾಯಿಯ ಬೆಲ್ಲ ತರಿಸಿ ಎಲ್ಲ ಪಂಚರು ಕೈಯಲ್ಲಿ ಬೆಲ್ಲ ತೆಗೆದುಕೊಂಡು ನಾನು ಪ್ರಾಮಾಣಿಕವಾಗಿ ನ್ಯಾಯ ಮಾಡುತ್ತೇನೆ ಯಾರ ಹಂಗಿನಲ್ಲಿ ಇರುವುದಿಲ್ಲ ಎಂದು ದೇವರ ಸಾಕ್ಷಿ ಎಂದು ಪ್ರತಿಜ್ಞೆ ಮಾಡುತ್ತಾನೆ. ಎಲ್ಲ ಪಂಚರು ಅವನನ್ನು ಊರ ಹೊರಗಿನ ಜನನಿಬಿಡದ ಪ್ರದೇಶದಲ್ಲಿ ಕರೆದುಕೊಂಡು ಹೋಗಿ ಒಂದು ಮರದ ಬುಡದಲ್ಲಿ ಅಂದು ರಾತ್ರಿ ಆರೋಪಿಯನ್ನು ಮಧ್ಯದಲ್ಲಿ ಮಲಗಿಸಿಕೊಂಡು ಸುತ್ತಲು ಪಂಚರು ಹಾಗೂ ಕುಲಸ್ಥರು ವೃತ್ತಕಾರದಲ್ಲಿ ಮಲಗುತ್ತಾರೆ. ಮುಂಜಾನೆ ಎದ್ದು ಕೂಡಲೆ ಅಪರಾಧಿಯನ್ನು ಸ್ನಾನ ಮಾಡಿಸಿ ಅವನಿಗೆ ಸಕ್ಕರೆ ತಿನ್ನಿಸುತ್ತಾರೆ. ಪ್ರತಿಯೊಬ್ಬ ಪಂಚರಿಗೆ ಒಂದೊಂದು ಕೆಲಸವನ್ನು ಒಪ್ಪಿಸುತ್ತಾರೆ. ಕುಳ್ಳಿನ ಬೆಂಕಿಯನ್ನು ಮಾಡಿ ಅದರಲ್ಲಿ ಕಬ್ಬಿಣದ ತುಂಡನ್ನು ಹಾಕುತ್ತಾರೆ. ಅದು ಬೆಂಕಿ ಕೆಂಡದಂತೆ ಆಗುವವರೆಗೆ ಕಾಯಿಸಿ ನಂತರ ಒಂದು ವೃತ್ತಕಾರವನ್ನು ಹಾಕಿ ಅದರ ಮಧ್ಯದಲ್ಲಿ ಅಪರಾಧಿಯನ್ನು ನಿಲ್ಲಿಸಿ ಅವನ ಕೈಗಳನ್ನು ಮೊದಲಿಗೆ ಪರೀಕ್ಷೆ ಮಾಡುತ್ತಾರೆ. ಕೈ ಮೇಲೆ ಯಾವುದಾದರೂ ಗಾಯ, ಕಲೆಗಳು ಇವೆಯೆ ಎಂದು ಪರೀಕ್ಷಿಸಿ ನಂತರ ಕೈ ಮೇಲೆ ಆಲದ ಎಲೆಗಳನ್ನು ಇಟ್ಟು ದಾರದಿಂದ ಸುತ್ತುತ್ತಾರೆ. ನಂತರ ಹತ್ತು ಹೆಜ್ಜೆಗೆ ಒಂದು ಗೆರೆಯನ್ನು ಹಾಕಿ ಅವನಿಗೆ ನಿಲ್ಲಿಸುತ್ತಾರೆ. ಪಂಚರು ದೇವರ ಸಾಕ್ಷಿಯಾಗಿ ಕಾದ ಕಬ್ಬಿಣದ ತುಂಡನ್ನು ಅವನ ಕೈ ಮೇಲೆ ಇಡುತ್ತಾರೆ. ಅವನಿಗೆ ಹತ್ತು ಹೆಜ್ಜೆ ನಡೆಯಲು ಹೇಳುತ್ತಾರೆ. ಅವನು ಅಪರಾಧಿ ಆಗಿದ್ದರೆ ದಾರ, ಎಲೆ ಸುಟ್ಟು ಅವನ ಕೈ ಸುಡುವುದು. ಒಂದು ವೇಳೆ ನಿರಪರಾಧಿ ಎಂದು ಹಾಗೂ ತಾನು ಹೇಳಿದ್ದು ಸತ್ಯವೆಂದಾದರೆ ದಾರ ಸಹಿತ ಸುಡುವುದಿಲ್ಲ. ಈ ನ್ಯಾಯವನ್ನು ನೋಡಲು ಸಾವಿರಾರು ಜನರು ಸೇರುವರು. ಈ ನ್ಯಾಯದಲ್ಲಿ ಪ್ರತಿವಾದಿ ಕೊಲೆಯಾದವನ ತಮ್ಮ ಕೊಲೆ ಮಾಡಿದ್ದು ಸಾಬೀತು ಆಯಿತು. ಕೈಯ ಮೇಲೆ ಕಾಯಿಸಿದ ಕಬ್ಬಿಣ ತುಂಡು ಇಟ್ಟ ತಕ್ಷಣ ಕೈಗೆ ಸುತ್ತಿದ ದಾರ ಮತ್ತು ಎಲೆ ಸುಟ್ಟು ಅವನ ಕೈಗೆ ಗಾಯಗಳಾದವು. ಇವನು ಪಂಚರಿಗೆ ಸುಳ್ಳು ಹೇಳಿದ್ದು ಸಾಬೀತಾಗಿ ಅವನು ಗುನ್ಹೆಗಾರನೆಂದು ಅವನಿಗೆ ದಂಡ ಕಟ್ಟುತ್ತಾರೆ. ಸತ್ತವನ ಕುಟುಂಬಕ್ಕೆ ೨ ಅಥವಾ ೩ ಲಕ್ಷ ರೂಪಾಯಿವರೆಗೂ ಕೊಡಿಸುತ್ತಾರೆ. ಈ ರೀತಿ ನ್ಯಾಯ ನಿರ್ಣಯ ಕೊಟ್ಟದನ್ನು ಕಂಡು ಎಲ್ಲರೂ ಆಶ್ಚರ್ಯ ವ್ಯಕ್ತಪಡಿಸುವರು.

ವಿಚ್ಛೇದನೆ (ಮುಸುಳ) : ಹುಡುಗನ ಇಚ್ಛೆಯ ವಿರುದ್ಧ ತಂದೆ-ತಾಯಿ ಒತ್ತಾಯ ಪೂರ್ವಕ ಮದುವೆಯನ್ನು ಮಾಡುತ್ತಾರೆ. ಮದುವೆ ಮಾಡಿ ಮೊದಲ ರಾತ್ರಿಯ ಕಾರ್ಯ ಕ್ರಮ ಮುಗಿಸಿ ಹುಡುಗಿಗೆ ಮನೆಗೆ ಕರೆದುಕೊಂಡು ಬರುತ್ತಾರೆ. ಮರುದಿನ ದಿಂದ ಗಂಡ ಹೆಂಡತಿಯ ಜೊತೆಗೆ ಮಾತನಾಡುವುದಿಲ್ಲ. ಅವಳ ಜೊತೆಯಲ್ಲಿ ಊಟ ಮಾಡುವುದಿಲ್ಲ.

ಪ್ರೀತಿ, ಪ್ರೇಮ ಮಾಡುವುದಿಲ್ಲ. ಪ್ರತಿಯೊಂದಕ್ಕೂ ಹೆಂಡತಿಗೆ ಎದುರಾಗಿ ಮಾತನಾಡುತ್ತಾನೆ. ನನಗೆ ನಿನ್ನ ಮೇಲೆ ಮನಸ್ಸು ಇಲ್ಲ. ನೀನು ನಿನ್ನ ತಂದೆ-ತಾಯಿ ಮನೆಗೆ ಹೋಗಿ ಬಿಡು ನಾನು ಬೇರೆ ಹುಡುಗಿಯನ್ನು ಪ್ರೀತಿಸುತ್ತಿದ್ದೇನೆ ಎಂದು ಹೇಳಿ ಅವಳ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ವರ್ತಿಸುವನು. ಅವಳು ಅವನ ನಡತೆಯನ್ನು ಕಂಡು ಸ್ವಲ್ಪ ದಿನಗಳಲ್ಲಿ ತವರು ಮನೆಗೆ ಹೋಗುತ್ತಾಳೆ. ತಂದೆ-ತಾಯಿಗೆ ನಡೆದಿರುವ ವಿಷಯದ ಬಗ್ಗೆ ಹೇಳುತ್ತಾಳೆ. ತಂದೆ-ತಾಯಿ ಬೀಗರಿಗೆ ಹಾಗೂ ಆಳಿಯನಿಗೆ ಮನವೊಲಿಸುತ್ತಾರೆ ಆದರೂ ಹಠ ಬಿಡದಿದ್ದಾಗ ಪಂಚಾಯಿತಿಗೆ ಮೊರೆಹೋಗುತ್ತಾರೆ.

ಪಂಚರು ಹಾಗೂ ಸರಪಂಚನು ಪಂಚಾಯತಿಯನ್ನು ಸೇರಿಸಿ ವಾದಿ ಪ್ರತಿವಾದಿಯನ್ನು ಕರೆಯಿಸಿ ನಡೆದಿರುವ ವಿಷಯದ ಬಗ್ಗೆ ವಾದಿ ಹಾಗೂ ಪ್ರತಿವಾದಿಯಿಂದ ಕೇಳಿ ತಿಳಿಯುತ್ತಾರೆ. ಮೇಲಿನ ಸವಿಸ್ತಾರವನ್ನು ಪಿರ್ಯಾದಿದಾರಳಾದ ಸ್ತ್ರೀಯು ಹೇಳಿದಾಗ ಇದಕ್ಕೆ ಪ್ರತಿಯಾಗಿ ಅರೋಪಿ ಸ್ಥಾನದಲ್ಲಿರುವ ಗಂಡನು ಮೇಲಿನ ಸತ್ಯಾಂಶವನ್ನು ಒಪ್ಪಿಕೊಂಡು ಇದು ಒತ್ತಾಯಪೂರ್ವಕ ಮಾಡಿದ ಮದುವೆ, ಇದರಲ್ಲಿ ಯಾವುದೇ ಆಸಕ್ತಿ ಇಲ್ಲ. ಹೀಗಾಗಿ ಇವಳಿಂದ ನನಗೆ ಬಿಡುಗಡೆ ನೀಡಿ ಎಂಬುದಾಗಿ ಪಂಚರಲ್ಲಿ ಕೇಳಿಕೊಳ್ಳುತ್ತಾನೆ. ಇದಕ್ಕೆ ಪಂಚರು ಹಾಗೂ ಆರೋಪಿಯ ತಂದೆ ತಾಯಿ ಸಾಕಷ್ಟು ಮನವೊಲಿಸಲು ಪ್ರಯತ್ನಿಸುತ್ತಾರೆ. ಪಂಚರು ನಿನಗೆ ದಂಡ ಕೊಡುವ ಪ್ರಸಂಗ ಬರುವುದು ಎಂದು ಹೇಳಿದರು ಇವರ ಪ್ರಯತ್ನಕ್ಕೆ ಫಲವಿಲ್ಲದಾಗ ಪಂಚರು ಸಮುದಾಯದ ಪಂಚಾಯಿತಿ ಕಟ್ಟೆಯಿಂದ ಹೊರ ಹೋಗಿ ಈ ವಿಷಯದ ಜಟಿಲತವನ್ನು ಚರ್ಚಿಸಿ ಸರಪಂಚರು ಹಾಗೂ ಪಂಚರು ಒಂದು ಅಂತಿಮ ನಿರ್ಧಾರಕ್ಕೆ ಬಂದು ಮತ್ತೇ ಪಂಚಾಯಿತಿ ಕಟ್ಟೆಗೆ ಬಂದು ಸೋಡ ಚೀಟಿ(ಮುಸಳ ಕಾಟಣಾ)ಯನ್ನು ನೀಡುವುದಾಗಿ ತಿಳಿಸಿ ಹಾಗೆಯೇ ವಾದಿಗೆ ಆಗಿರುವಂಥ ಅನ್ಯಾಯಕ್ಕೆ ಮತ್ತು ಅವಳ ಮುಂದಿನ ಭವಿಷ್ಯದ ಬಗ್ಗೆ ವಿಚಾರಿಸಿ ಇವಳಿಗೆ ಯಾರು ಮದುವೆ ಮಾಡಿಕೊಳ್ಳುತ್ತಾರೆ ಇವಳ ಜೀವನವನ್ನು ಹಾಳು ಮಾಡಿದ್ದಾನೆ. ಅದಕ್ಕೆ ಅವಳ ಜೀವನಕ್ಕಾಗಿ ೧,೫೦,೦೦೦ ರೂಪಾಯಿಗಳನ್ನು ಪರಿಹಾರವಾಗಿ ಹೆಣ್ಣಿಗೆ ನೀಡಬೇಕು ಎಂದು ಪಂಚರು ತೀರ್ಮಾನಿಸುತ್ತಾರೆ.

ತರುವಾಯ ಒಂದು ವೃತ್ತಾಕಾರದಲ್ಲಿ ವಾದಿ ಹಾಗೂ ಪ್ರತಿವಾದಿಗಳಿಗೂ ಮಣ್ಣಿನ ಆಣೆಯನ್ನು ತೆಗೆದುಕೊಂಡು ಪಂಚಾಯಿತಿ ನ್ಯಾಯಕ್ಕೆ ನಾವುಗಳು ಒಪ್ಪಿರುತ್ತೇವೆ ಎಂದು ಪ್ರಮಾಣೀಕರಿಸಲಾಗುತ್ತದೆ. ಆರೋಪಿಯು ಪಂಚಾಯತಿಯು ಕೇಳಿರುವ ಪರಿಹಾರದ ಹಣವನ್ನು ವೃತ್ತಕಾರದಲ್ಲಿ ಇಡಬೇಕಾಗುತ್ತದೆ. ಹಣವಿಟ್ಟ ನಂತರ ಕಟ್ಟಿಗೆಯ ತುಂಡು ಪಂಚರ ಮಧ್ಯದಲ್ಲಿ ಇಟ್ಟು ಕೊಡ್ಲಿ ತಂದು ಹುಡುಗನ ಕೈಯಿಂದ ಕಟ್ಟಿಗೆಯನ್ನು ಎರಡು ತುಂಡು ಮಾಡಿಸಿ ಇವತ್ತಿನಿಂದ ಈ ಹುಡುಗಿ ಅವರ ತಂದೆ-ತಾಯಿಗಳ ಮಗಳು. ಇವನ ಹೆಂಡತಿ ಅಲ್ಲ ಹಾಗೂ ಇವರ ಸೋಡಚೀಟಿ ಆಯಿತೆಂದು ಹೇಳಿ ೧,೫೦,೦೦೦ ರೂಪಾಯಿಗಳನ್ನು ಅವನಿಂದ ಪಡೆದು ಹುಡುಗಿಗೆ ಪರಿಹಾರದ ರೂಪವಾಗಿ ನೀಡುತ್ತಾರೆ.

ನಂತರ ಇಂತಹ ತಪ್ಪುಮಾಡದಂತೆ ಹುಡುಗನಿಗೆ ತಾಕೀತು ಮಾಡಿ ಅವನಿಂದ ಪಂಚಾಯತಿ ಶುಲ್ಕ ತೆಗೆದುಕೊಳ್ಳುತ್ತಾರೆ. ಗಂಡಿನವರು ಸಾತಬೀಸ್ (ಒಂದು ನೂರಾ ನಾಲ್ವತ್ತು) ಚೌದಬೀಸ್ (ಎರಡು ನೂರಾ ಎಂಭತ್ತು), ಏಕೀಸ್ ಬೀಸ್ (ನಾಲ್ಕು ನೂರಾ ಇಪ್ಪತ್ತು) ಈ ರೀತಿ ದಂಡ ಕಟ್ಟುತ್ತಾರೆ.

ಒಂದು ವೇಳೆ ಹೆಣ್ಣು ನನಗೆ ಈ ಗಂಡನ ಮೇಲೆ ಮನಸ್ಸು ಇಲ್ಲ ನನಗೆ ಇವನಿಂದ ಸೋಡಚೀಟಿ ಮಾಡಿಸಿ ಎಂದು ಹೇಳಿದಾಗ ಎಲ್ಲ ರೀತಿಯಿಂದ ವಿಚಾರಿಸಿ ಅದರಲ್ಲಿ ಗಂಡನ ಯಾವುದೇ ತಪ್ಪು ಕಾಣದಿದ್ದರೆ ಹೆಣ್ಣುಮಗಳು ಅವಳ ಗಂಡನನ್ನು ಅಲ್ಲಗಳೆದ ಕಾರಣ ಅವಳಿಗೆ ದಂಡ ವಿಧಿಸಿ ಸೋಡಚೀಟಿ ಮಾಡಿ ಗಂಡನ ಮನೆಯವರು ಮದುವೆಗಾಗಿ ಮಾಡಿರುವ ಖರ್ಚಿನ (ಮಂಟಪ, ಬ್ಯಾಂಡ, ಊಟ ಇತ್ಯಾದಿ) ಎಲ್ಲ ರೀತಿಯ ಬಾಬ್ತನ್ನು ಹುಡುಗಿಯ ಕಡೆಯವರು ಪರಿಹಾರವಾಗಿ ಕಟ್ಟಿಕೊಡಬೇಕಾಗುತ್ತದೆ.

ಪಾಪದ ಅನ್ಯೆತಿಕ ಸಂಬಂಧ : ತಾಯಿ-ಮಗ, ತಂದೆ-ಮಗಳು, ಅತ್ತೆ-ಅಳಿಯ, ಮಾವ-ಸೊಸೆ, ಚಿಕ್ಕಪ್ಪ-ಅಣ್ಣನ ಮಗಳು, ಚಿಕ್ಕಮ್ಮ-ಮೈದುನನ ಮಗ, ಸಹೋದರ-ಸಹೋದರಿ, ಮಾಲ್ಯಾ-ಮಾಲ್ಯಾ, ಬಿಡ್ನು-ಬಿಡ್ನು, ಇವುಗಳಲ್ಲಿ ಅನೈತಿಕ ಸಂಬಂಧವಾದರೆ ಅದಕ್ಕೆ ಪಾಪ ಎಂದು ಕರೆಯುತ್ತಾರೆ. ಇಂಥ ಘಟನೆ ಸಂಭವಿಸಿದರೆ ಅಂಥ ಸ್ತ್ರೀ-ಪುರುಷರಿಗೆ ಯಾವ ಶುಭಕಾರ್ಯಗಳಲ್ಲಿ ಪ್ರವೇಶ ಮಾಡದಂತೆ ನಿಷೇಧಿಸಲಾಗುತ್ತದೆ. ಶುಭಕಾರ್ಯಗಳಲ್ಲಿ ಅವರು ಭಾಗವಹಿಸಲು ಇಚ್ಛಿಸಿದರೆ ೨೦೦ ರೂಪಾಯಿಗಳ ದಂಡ ಕೊಟ್ಟು ಭಾಗವಹಿಸ ಬೇಕಾಗುತ್ತದೆ. ಇಂಥ ಅನೈತಿಕ ಘಟನೆ ಸಂಭವಿಸಿದರೆ ಪಂಚಾಯತಿಯಲ್ಲಿ ಈ ವಿಷಯ ಚರ್ಚೆಗೆ ಬಂದಾಗ ಗಂಡು ಮತ್ತು ಹೆಣ್ಣಿಗೆ ಪಂಚರು ವಿಚಾರಿಸಿ ಅವರಿಬ್ಬರಲ್ಲಿ ಅನೈತಿಕತೆ ಇರುವುದು ಸಾಬಿತಾದರೆ ಅಥವಾ ತಪ್ಪೊಪ್ಪಿಗೆ ಮಾಡಿಕೊಂಡರೆ ಅವರಿಗೆ ಸಮುದಾಯದಿಂದ ಕಠಿಣ ಶಿಕ್ಷೆಯನ್ನು ವಿಧಿಸಲಾಗುತ್ತದೆ. ಇದು ಒಂದು ರಕ್ತಸಂಬಂಧಕ್ಕೆ ಮಾಡಿದ ದ್ರೋಹ ಇಂಥವರು ಸಮಾಜಕ್ಕೆ ಕೆಡಕು ಹಾಗೂ ಸಮುದಾಯದ ಹೆಸರು ಕೆಡಿಸುತ್ತಾರೆ. ಆದ್ದರಿಂದ ಸಮುದಾಯದ ವಿಧಿ ವಿಧಾನಗಳನ್ನು ಮಾಡಿ ಜಾತಿಯಲ್ಲಿ ಸೇರಿಸಿಕೊಳ್ಳಬೇಕು. ಪಂಚಾಯತಿ ಇಂಥ ಆರೋಪಿಗಳಿಗೆ ತಲಾ ೨೦೦೦ ರೂಪಾಯಿಗಳನ್ನು ದಂಡವಾಗಿ ಕಟ್ಟಿಸಿಕೊಂಡು ನಿರ್ಣಯ ಕೊಡುವರು.

ಇಂಥ ಸಂಬಂಧ ಮಾಡಿದ ಹೆಣ್ಣಿಗೆ 'ಪಾಂತಣಿ' ಎಂದು ಕರೆಯುತ್ತಾರೆ. ಗಂಡಿಗೆ 'ಪಾಂತಿಯಾ' ಎಂದು ಕರೆಯುತ್ತಾರೆ. ಇವರು ಪಂಚಾಯತಿ ಸೇರಿಸಿ ಇನ್ನೊಮ್ಮೆ ಇಂಥ ಕೃತ್ಯವನ್ನು ಮಾಡದಂತೆ ತಾಕೀತು ಮಾಡಿ ದಂಡವನ್ನು ಕಟ್ಟುವಂತೆ ಆದೇಶಿಸುತ್ತಾರೆ. ತರುವಾಯ ಆರೋಪಿಗಳು ನಮಗೆ ಜಾತಿಯಲ್ಲಿ ಸೇರಿಸಿಕೊಳ್ಳಿ ಎಂದು ವಿನಂತಿಸಿ ಕೊಂಡಾಗ ಪಂಚರು ಸಮುದಾಯದ ವಿಧಿ-ವಿಧಾನಗಳನ್ನು ಅನುಸರಿಸಿ ಜಾತಿಯಲ್ಲಿ ಸೇರಿಕೊಳ್ಳಿರಿ ಎಂದು ತಿಳಿಸುತ್ತಾರೆ. ಪಾಪದ ಅನೈತಿಕ ಸಂಬಂಧ ಮಾಡಿದ ವ್ಯಕ್ತಿಗೆ ೧೮೦೦ ರೂಪಾಯಿ ಗಳನ್ನು ದಂಡ ಹಾಕುತ್ತಾರೆ, ಇದಲ್ಲದೇ ಇನ್ನಿತರ ಖರ್ಚಿನ ಬಾಬ್ತುಗಳನ್ನು ಗಣನೆ ಮಾಡಿ ದಂಡಿಸುತ್ತಾರೆ.

ವಿಧಿ-ವಿಧಾನ : ಪಾಪದ ಅನೈತಿಕ ಸಂಬಂಧ ಮಾಡಿದ ಇಬ್ಬರಿಗೂ ಪಂಚರು ತಮ್ಮ ಅಧೀನದಲ್ಲಿ ತೆಗೆದುಕೊಂಡು ಪೇಟೆಯಿಂದ ೩ ಮೀಟರ್‌ನ ಬಿಳಿ ಬಟ್ಟೆಯನ್ನು ತರಿಸುತ್ತಾರೆ. ಈ ವಿಧಿಯನ್ನು ಒಬ್ಬೊಬ್ಬರಿಗೆ ಮಾಡುತ್ತಾರೆ. ಪೇಟೆಯಿಂದ ಹಿಟ್ಟು ತರಿಸಿ ಅದರ ಉಂಡೆಗಳನ್ನು ಮಾಡಿಸುತ್ತಾರೆ. ಎಕ್ಕಿ ಗಿಡದ ಕಟ್ಟಿಗೆ ತಂದು ಹುಡುಗರ ಕೈಯಲ್ಲಿ ಕೊಡುತ್ತಾರೆ. ತಪ್ಪು ಮಾಡಿದವರಿಗೆ ಗಂಗಾ ನೀರು, ಹಾಲು ನೀರಿನಲ್ಲಿ ಹಾಕಿ ಸ್ನಾನ ಮಾಡಿಸುತ್ತಾರೆ. ಜನಿವಾರ ಹಾಕಿ ಅವರಿಗೆ ಬಿಳಿ ಬಟ್ಟೆಯನ್ನು ಸುತ್ತಿ ಬರೇ ಮೈಯಿಂದ ಅರವತ್ತು ಹೆಜ್ಜೆ ಓಡಲು ಹೇಳುತ್ತಾರೆ. ಓಡುವ ಸಮಯಕ್ಕೆ ಅವನಿಗೆ ಹಿಂದಿನಿಂದ ಹಿಟ್ಟಿನ ಉಂಡೆಗಳಿಂದ ಹೊಡೆಯುತ್ತಾರೆ. ಈ ಕಾರ್ಯಕ್ರಮವನ್ನು ಸಮುದಾಯದ ಸಾವಿರಾರು ಜನರು ವೀಕ್ಷಿಸುವರು. ಎಲ್ಲರ ಎದುರಿಗೆ ಇಂಥ ಶಿಕ್ಷೆಯನ್ನು ಕೊಟ್ಟು ಅವರಿಂದ ದಂಡ ಕಟ್ಟಿಸಿಕೊಂಡು ಮುಂದೆ ಎಂದೂ ಇಂತಹ ತಪ್ಪು ಮಾಡಬಾರದೆಂದು ಕಟ್ಟಪ್ಪಣೆ ನೀಡಿ ಇಂದು ನೀವು ಪವಿತ್ರವಾಗಿದ್ದಿರಿ ಎಂದು ಸಾರಿ ಬಿಡುತ್ತಾರೆ.

ಶಿಕ್ಷೆಗಳ ವಿವರ

ಕಂಜರಭಾಟ ಸಮುದಾಯದಲ್ಲಿ ಪಂಚರು ಪೂರ್ವಿಕರು ಹಾಕಿ ಕೊಟ್ಟ ಮಾರ್ಗದಲ್ಲಿ ನಡೆಯುತ್ತಿದ್ದಾರೆ. ಅವರು ಹಾಕಿ ಕೊಟ್ಟ ನ್ಯಾಯ ಪದ್ಧತಿ, ಶಿಕ್ಷೆ, ದಂಡನೆಗಳನ್ನು ಪಾಲಿಸುತ್ತಿದ್ದಾರೆ. ಸಮುದಾಯದಲ್ಲಿರುವ ದುಷ್ಟ ಕೃತ್ಯಗಳನ್ನು ಕಡಿಮೆ ಮಾಡುವಗೋಸ್ಕರ ಕಠಿಣವಾದ ಶಿಕ್ಷೆ ಹಾಗೂ ದಂಡಗಳನ್ನು ವಿಧಿಸುತ್ತಾರೆ. ಪೂರ್ವಜರು ಘಟನಾವಳಿಯ ಕಾಯ್ದೆ ಕಾನೂನುಗಳನ್ನು ಬಳಸಿ ನ್ಯಾಯಗಳನ್ನು ಮಾಡುತ್ತಾರೆ. ಪಂಚರು ಕೊಟ್ಟ ನ್ಯಾಯಕ್ಕೆ ಸಿರಿವಂತನಿರಲಿ, ಬಡವನಿರಲಿ ತಲೆಬಾಗಬೇಕು. ಎಲ್ಲರಿಗೂ ಒಂದೇ ಕಾನೂನು ಹಳೇ ಘಟನಾವಳಿಯ ಆಧಾರದ ಮೇಲೆ ನ್ಯಾಯಗಳ ಸ್ವರೂಪವನ್ನು ನೋಡಿ ದಂಡ, ಶಿಕ್ಷೆಗಳನ್ನು ಕೊಡಲಾಗುವುದು.

ಕೊಲೆ (ಖುನ್ಯಾಕಾ ಕೇಸ್) : ಕೊಲೆಯ ನ್ಯಾಯ ಇದ್ದರೆ ಸರಿಯಾದ ವಿಚಾರಣೆ ಮಾಡಿ ಕೊಲೆಗಾರನಿಗೆ ೧,೦೦,೦೦೦ (ಒಂದು ಲಕ್ಷ) ದಿಂದ ೩,೦೦,೦೦೦ (ಮೂರು ಲಕ್ಷ) ರೂ.ಗಳನ್ನು ದಂಡ ಹಾಕುತ್ತಾರೆ ಮತ್ತು ಪಂಚಾಯತಿಯ ಖರ್ಚುಗಳನ್ನು ವಾದಿ ಪ್ರತಿವಾದಿಗಳಿಬ್ಬರು ಭರಿಸಬೇಕು. ಈ ದಂಡ ಅಧಿಕವಾಗಿರಲೂ ಕಾರಣ ಈ ತರಹದ ಅಪರಾಧಗಳು ನಡೆಯದಿರಲೆಂಬುದೇ ಇದರ ಆಶಯ.

ಕಳ್ಳತನ (ಚೋರಿ) : ಕಳ್ಳತನ ಮಾಡಿದ ವ್ಯಕ್ತಿಯನ್ನು ಪಂಚಾಯಿತಿಯಲ್ಲಿ ವಿಚಾರಣೆ ನಡೆಯಿಸಿ ಅವನು ಕಳ್ಳತನದ ತಪ್ಪೊಪ್ಪಿಗೆ ಮಾಡಿಕೊಂಡರೆ ಕದ್ದ ವಸ್ತು ಹಾಗೂ ಅವನಿಂದ ಪಂಚಾಯತಿಯ ಖರ್ಚು ೧೪೦, ೨೪೦, ೪೨೦ ರೂಪಾಯಿಗಳನ್ನು ದಂಡವಾಗಿ ಕಟ್ಟಬೇಕು.

ಅನೈತಿಕ ಸಂಬಂಧ (ಛಿನಾಳಿ) : ಅನೈತಿಕ ಸಂಬಂಧ ಮಾಡಿದ ವ್ಯಕ್ತಿಯನ್ನು ಪಂಚಾಯತಿಯಲ್ಲಿ ಹೆಣ್ಣಿನವರು ಪಂಚರ ಮುಖಾಂತರ ಕರೆಯಿಸುತ್ತಾರೆ. ಮದುವೆಯ ಪೂರ್ವದಲ್ಲಿ ಶರೀರ ಸಂಬಂಧ ಬೆಳೆಯಿಸಿದರೆ ಅಂಥವರಿಗೆ ೧೦೦ ರೂಪಾಯಿಗಳ ದಂಡ ಹಾಗೂ

ಪಂಚಾಯಿತಿಯ ನಿಯಮಕ್ಕನುಗುಣವಾಗಿ ಶಾಸನ ಇಡುತ್ತಾರೆ. ಹೆಣ್ಣಿನವರು ತಮ್ಮ ಮನೆತನದ ದೇವರಿಗೆ ಸಲ್ಲುವ ಪೂಜೆ ಪುನಸ್ಕಾರಗಳನ್ನು ಮಾಡಬೇಕಾಗುತ್ತದೆ.

ಪರಜಾತಿಯ ಗಂಡಸಿನ ಜೊತೆಗೆ ದೈಹಿಕ ಸಂಬಂಧವಾಗಿದ್ದರೆ ಹೆಣ್ಣಿನ ಕಡೆಯವರಿಗೆ ೧೦೦೦ ರೂಪಾಯಿಗಳ ದಂಡ ಕಟ್ಟುತ್ತಾರೆ.

ರಕ್ತಸಂಬಂಧಿಕರೊಂದಿಗೆ ಅನೈತಿಕ ಸಂಬಂಧವಾದರೆ ಅದು ಪಾಪವೆಂದು ಪರಿಗಣಿಸ ಲಾಗಿದ್ದು ಅದಕ್ಕೆ ೧೮೦೦೦ ರೂಪಾಯಿಗಳನ್ನು ಪಂಚಾಯಿತಿ ಶುಲ್ಕವಾಗಿ ಕೊಡಬೇಕು. ಇದಲ್ಲದೆ ಪಾಪದ ಕೆಲಸವೆಂದು ಇಬ್ಬರಿಗೂ ತಲಾ ೫೦೦೦ ರೂಪಾಯಿಗಳ ದಂಡ ತೆತ್ತಬೇಕಾಗುತ್ತದೆ. ವಿಧಿ ವಿಧಾನಗಳು ಆಗುವವರೆಗೆ ಅವರಿಗೆ ಬಹಿಷ್ಕಾರ ಹಾಕಲಾಗುತ್ತದೆ.

ಮಕ್ಕಳ ಮಾರಾಟ ಮಾಡಿದರೆ ಅದರಲ್ಲೂ ಮಗಳನ್ನು ಮಾರಾಟ ಮಾಡಿದರೆ ಅಂಥವರಿಗೆ ಪಂಚಾಯತಿಯು ೫೦೦೦ ರೂಪಾಯಿಗಳ ದಂಡ ವಿಧಿಸುತ್ತದೆ. ಹಾಗೆಯೇ ಅವರಿಗೆ ಅಂದಿನಿಂದ ಪರಜಾತಿಯ ಹೆಣ್ಣು ಎಂದು ಘೋಷಿಸಿ ಅವರಿಗೆ ಸಮಾಜದ ಯಾವ ಕಾರ್ಯಕಲಾಪಗಳಿಗೆ ಬಾರದಂತೆ ಪ್ರತಿಬಂಧವನ್ನು ಮಾಡಲಾಗುತ್ತದೆ.

ಅಂತರ್ಜಾತಿಯ ಮದುವೆಯನ್ನು ಮಾಡಿಕೊಂಡರೆ ಅಂಥವರಿಗೆ ೫೦೦೦ ರೂಪಾಯಿಗಳ ದಂಡ ವಿಧಿಸಲಾಗುತ್ತದೆ.

ಹೆಂಡತಿಗೆ ಯಾವ ಕಾರಣವೂ ಇಲ್ಲದೆ ಸೋಡ ಚೀಟಿ ಮಾಡಿಸಿಕೊಂಡರೆ ಹೆಣ್ಣಿಗೆ ಜೀವನಾಧಾರವಾಗಿ ೧,೦೦,೦೦೦ ದಿಂದ ೨,೦೦,೦೦೦ ರೂಪಾಯಿಗಳವರೆಗೆ ದಂಡವನ್ನು ಗಂಡನಾದವನಿಗೆ ವಿಧಿಸಲಾಗುತ್ತದೆ.

ನ್ಯಾಯ ಪಂಚಾಯತಿಯಲ್ಲಿ ಹದ್ದು ಮೀರಿ ಮಾತನಾಡಿದರೆ ಅಂಥ ವ್ಯಕ್ತಿಯು ೨೫, ೬೦, ಇಲ್ಲವೇ ೧೦೦ ರೂಪಾಯಿಗಳವರೆಗೆ ದಂಡ ಕಟ್ಟಬೇಕಾಗುತ್ತದೆ.

ಪಂಚಾಯತಿಯಲ್ಲಿ ಪಂಚರು ತಂದ ತೀರ್ಪನ್ನು ಕೇಳದೇ ಪಂಚಾಯತಿ ಬಿಟ್ಟು ವಾದಿಯಾಗಲಿ, ಪ್ರತಿವಾದಿಯಾಗಲಿ ಹೋದರೆ ಅಂಥವರಿಗೆ ಬಹಿಷ್ಕಾರ ಹಾಕುತ್ತಾರೆ.

ಈ ರೀತಿ ಕಂಜರಭಾಟ ಸಮುದಾಯದಲ್ಲಿ ನಾನಾ ರೀತಿಯ ಕಟ್ಟಳೆಗಳನ್ನು ಹಾಕಿ ದಂಡ ಮತ್ತು ಶಿಕ್ಷೆಗಳನ್ನು ವಿಧಿಸುತ್ತಾರೆ. ಇವು ಇಡೀ ಸಮುದಾಯದಲ್ಲಿ ಚಾಚುತಪ್ಪದೇ ಪಾಲನೆಯಾಗುವುದರಿಂದ ಮತ್ತು ದಂಡದ ಮೊತ್ತ ಹೆಚ್ಚಾಗಿರುವುದರಿಂದ ಸಮುದಾಯದಲ್ಲಿ ಅಪರಾಧಗಳು ಕಡಿಮೆಯಾಗಿವೆ.

ಸಮುದಾಯದ ನ್ಯಾಯಗಳು ಸಮುದಾಯದಲ್ಲಿಯೇ ಬಗೆಹರಿಯಬೇಕು ಸರ್ಕಾರದಲ್ಲಿ ಹೋಗಬಾರದೆಂದು ನಾಲ್ಕು ವಿಭಾಗೀಯ ಪಂಚಾಯತಿಗಳನ್ನು ಮಾಡಿ ಸಮುದಾಯದ ನಾಗರಿಕರಿಗೆ ಅನುವು ಮಾಡಿದ್ದಾರೆ. ಸರ್ಕಾರದಲ್ಲಿ ಹೋದರೆ ಬೇಗನೆ ನ್ಯಾಯ ಸಿಗುವುದಿಲ್ಲ. ಇಲ್ಲಿ ಮಾತ್ರ ಒಂದು ದಿನ ಇಲ್ಲವೆ ಎರಡು ಮೂರು ದಿನಗಳಲ್ಲಿ ತೀರ್ಪು ಸಿಗುತ್ತದೆ. ತೀರ್ಪು ಬೇಗನೆ ಸಿಗಲೆಂದು ನಾಲ್ಕು ವಿಭಾಗಗಳನ್ನು ಮಾಡಿ. ಸಮುದಾಯದಲ್ಲಿ ನಡೆಯುವ ನ್ಯಾಯಗಳ ಇತ್ಯರ್ಥ ಬೇಗನೆ ಮಾಡಲಾಗುತ್ತದೆ.

ಊರಿನ ಪಂಚಾಯತಿ, ಜಿಲ್ಲಾ ಪಂಚಾಯತಿ, ರಾಜ್ಯ ಪಂಚಾಯತಿ (ಹೆಚ್ಚು ಸಮುದಾಯ

ಇದ್ದ ಊರು), ಖಂಡಪೀಠ (ಒಂದೇರಡು ರಾಜ್ಯಗಳ ನಾಮಾಂಕಿತ) ಎಂಬ ನಾಲ್ಕು ಹಂತದ ಪಂಚಾಯತಿಗಳಿವೆ. ಪಂಚರು ಸ್ಥಳೀಯ ಪಂಚಾಯತಿಯಲ್ಲಿ ನ್ಯಾಯ ಹೂಡಿ ತೀರ್ಪು ಕೇಳುತ್ತಾರೆ. ತೀರ್ಪು ಕೇಳಿ ಯಾರಿಗಾದರೂ ಕೊಟ್ಟಂತಹ ನ್ಯಾಯ ಸರಿ ಅನಿಸದಿದ್ದರೆ ಅವರು ಆಗಿಂದಾಗಲೆ ೮೦ ರೂಪಾಯಿ ಪಂಚಾಯಿಗೆ ಶುಲ್ಕ ಕೊಟ್ಟು ಅಪೀಲು ಮಾಡಿಕೊಳ್ಳುತ್ತಾರೆ. ನನಗೆ ಈ ನ್ಯಾಯ ಮಾಡಲು ಬೇರೆ ಊರಿಗೆ ಹೋಗಲು ಅನುಮತಿ ಕೊಡಬೇಕೆಂದು ಕೇಳುತ್ತಾರೆ. ಪಂಚರು ಅವರು ಕೇಳಿದ ಊರಾಗಲಿ ಅಥವಾ ಪಂಚರು ಯಾವುದಾದರೂ ಊರು ಆಯ್ಕೆ ಮಾಡಿ ತಾರೀಕು ನೀಡಲಾಗುತ್ತದೆ. ಇನ್ನೊಂದು ಪ್ರತಿವಾದಿಗೂ ಅಲ್ಲಿ ಹಾಜರಾಗಲು ತಿಳಿಸುತ್ತಾರೆ. ಇಲ್ಲಿ ನ್ಯಾಯ ಪಂಚಾಯತಿಯಲ್ಲಿ ನಡೆದ ವಿಷಯಗಳನ್ನು ಆ ಊರಿನ ಪಂಚರಿಗೆ ಟಪಾಲು ಮುಖಾಂತರ ಕಳಿಸುತ್ತಾರೆ. ವಾದಿ ಪ್ರತಿವಾದಿಗಳು ಅಲ್ಲಿ ಹೋಗಿ ತಮ್ಮ ನ್ಯಾಯ ಮಾಡಿಸಿಕೊಳ್ಳುತ್ತಾರೆ. ಅಲ್ಲಿಯೂ ಅವರಿಗೆ ತೀರ್ಪು ಮಾನ್ಯವಾಗದಿದ್ದರೆ ಮುಂದಿನ ಚಮ್ಮ ಖಂಡಪೀಠ ಸುಪ್ರೀಮ್ ಕೋರ್ಟ್‌ದಲ್ಲಿ ನ್ಯಾಯ ಮಾಡಿಸಿಕೊಳ್ಳುತ್ತಾರೆ. ಇದು ಕೊನೆಯ ಹಂತದ ನ್ಯಾಯಾಲಯವಾಗಿದ್ದು ಇಲ್ಲಿ ನೀಡುವ ತೀರ್ಪಿಗೆ ತಲೆ ಬಾಗಲೆಬೇಕು.



೭

ಆರ್ಥಿಕ ಜೀವನ

ಮೂಲ ಕಸಬು : ಕಂಜರಭಾಟರ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿದೆ. ಇವರು ಸಂಚಾರಿಗಳು, ಹಳ್ಳಿ ಹಳ್ಳಿಗೆ ಸಂಚಾರಿಸಿ ತಮ್ಮ ಜೀವನ ಸಾಗಿಸುವರು. ಭಿಕ್ಷಾಟನೆ, ಸೆರೆ, ತಯಾರಿಸುವುದು, ಕೂಲಿ ಮಾಡುವುದು, ರೀಕ್ಷಾ ನಡೆಸುವುದು, ಮೋಡಕಾ ಮುರಿದ ಸಾಮಾನುಗಳ ಸಂಗ್ರಹಣೆ ಮುಂತಾದ ಕಸಬುಗಳನ್ನು ಮಾಡುತ್ತಾರೆ.

ಭಿಕ್ಷಾಟನೆ : ಕಂಜರಭಾಟರು ಹಳ್ಳಿಯಿಂದ ಹಳ್ಳಿಗೆ ಸಂಚರಿಸಿ ಕಾಳುಕಡಿ ಸಂಗ್ರಹಿಸಿ ತಮ್ಮ ಜೀವನವನ್ನು ಸಾಗಿಸುತ್ತಾರೆ. ಸುಗ್ಗಿಯ ಕಾಲದಲ್ಲಿ ಕಣಗಳಿಗೆ ಹೋಗಿ ಕಾಳುಕಡಿ ಸಂಗ್ರಹಣೆ ಮಾಡುತ್ತಾರೆ. ಇನ್ನುಳಿದ ದಿನಗಳಲ್ಲಿ ಹಳ್ಳಿಯಲ್ಲಿ ಮನೆಗಳಿಗೆ ರೈತರಿಂದ ಕಾಳುಕಡಿ ಸಂಗ್ರಹ ಮಾಡುತ್ತಿದ್ದರು. ಇಡೀ ವರ್ಷ ಇದೇ ಕಾಯಕವನ್ನು ಮಾಡಿ ತಮ್ಮ ಜೀವನಕ್ಕೆ ಬೇಕಾಗುವಷ್ಟು ಕಾಳುಕಡಿ ಇಟ್ಟುಕೊಂಡು ಉಳಿದವುಗಳನ್ನು ಮಾರಿ ತಮ್ಮ ಜೀವನೋಪಾಯಕ್ಕೆ ಬೇಕಾಗುವ ವಸ್ತುಗಳನ್ನು ಖರೀದಿ ಮಾಡುತ್ತಾರೆ. ಬ್ರಿಟಿಶ್ ಸರ್ಕಾರ ಇವರಿಗೆ ಸಂಚರಿಸಲು ಗುರುತಿನ ಚೀಟಿ ಕೊಟ್ಟಿದ್ದರು. ಭಿಕ್ಷಾಟನೆಗೆ ಗಂಡಸರು, ಹೆಂಗಸರು, ಮಕ್ಕಳು ಒಟ್ಟಾಗಿ ಅಲೆಯುತ್ತಾರೆ. ಭಿಕ್ಷಾಟನೆಯಿಂದ ಬರುವ ಆದಾಯ ಅವರ ಕುಟುಂಬದ ಜೀವನ ಸಾಗಿಸಲು ಸಾಲುವುದಿಲ್ಲ.

ಸೆರೆ ತಯಾರಿಕೆ : ಹಳ್ಳಿಯಿಂದ ಹಳ್ಳಿಗೆ ಸಂಚರಿಸುವ ಈ ಜನ ತಮ್ಮ ದಣಿವು ನೀಗಿಸುವ ಸಲುವಾಗಿ ಸೆರೆಯನ್ನು ತಯಾರಿಸಿ ತಾವೇ ಕುಡಿಯುತ್ತಿದ್ದರು. ಇವರು ಈ ಕಾಯಕವನ್ನು ಹಳ್ಳಿಗಳಲ್ಲಿ ಪ್ರಾರಂಭಿಸಿದರು. ಇವರ ಕುಡಿತವನ್ನು ಕಂಡು ಹಳ್ಳಿ ಜನರು ಇವರ ಜೊತೆ ಸ್ನೇಹ ಬೆಳೆಸಿ ಅವರು ಕುಡಿಯಲು ಪ್ರಾರಂಭಿಸಿದರು ಹೀಗೆ ಬೇಡಿಕೆ ಹೆಚ್ಚಾಯಿತು. ಹೀಗಾಗಿ ಹೆಚ್ಚಿನ ಪ್ರಮಾಣದಲ್ಲಿ ಸರಾಯಿ ತಯಾರಿಸಿ ಮಾರಾಟ ಮಾಡಲು ಪ್ರಾರಂಭಿಸಿದರು. ಇತರೆ ಸಮಾಜದವರಿಗೆ ಇದು ಅಗ್ಗದ ದರದಲ್ಲಿ ದೊರೆಯುವುದರಿಂದ ಜನರು ಹೆಚ್ಚು ಕುಡಿಯಲು ಪ್ರಾರಂಭಿಸಿದರು. ಹಣ ಗಳಿಕೆಯ ಆಸೆಯಿಂದ ಸೆರೆ ತಯಾರಿಸಿ ಅದರಲ್ಲಿ ನೀರು ಕೂಡಿಸಿ ಮಾರಾಟ ಮಾಡತೊಡಗಿದರು. ಮುಂದೆ ಇದನ್ನೇ ಕಳ್ಳಭಟ್ಟಿ ಸರಾಯಿ ಯೆಂದು ಕರೆಯಲಾಯಿತು. ಇವರ ಉಪಜೀವನಕ್ಕೆ ಇದೊಂದು ಮುಖ್ಯ ಉದ್ಯೋಗ

ವಾಯಿತು. ಈ ಕಸಬಿನಿಂದ ಹೆಚ್ಚಿನ ಆದಾಯ ಬರುತ್ತದೆ. ಆದರೆ ಸರ್ಕಾರ ಈ ಕಸಬನ್ನು ಹೆಚ್ಚು ಬೆಳೆಯಲು ಆಸ್ಪದ ಕೊಡದೇ ಪೂರ್ಣ ಬಂದ ಮಾಡಲು ಪ್ರಯತ್ನಿಸಿತು. ಇಷ್ಟಾದರೂ ಸಹ ತಮ್ಮ ಹೊಟ್ಟೆಪಾಡಿಗಾಗಿ ಪಾರಂಪರಿಕವಾಗಿ ಸರಾಯಿ ತಯಾರಿಸಿ ಮಾರಾಟ ಮಾಡುತ್ತಾರೆ. ಈಗಲೂ ಸಹ ಸೆರೆ ಮಾರಾಟ ಮಾಡುವ ಉದ್ಯೋಗ ಮಾಡುತ್ತಿದ್ದಾರೆ.

ಕೂಲಿ : ಭೂ ಒಡೆತನ ಇರದ ಈ ಸಮುದಾಯದವರು ತಮ್ಮ ಹೊಟ್ಟೆಪಾಡಿಗಾಗಿ ಗೌಂಡಿಕೆಲಸ, ಬಣ್ಣಹಚ್ಚುವ ಕೆಲಸ, ಹಮಾಲಿ ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ಮಾಡುತ್ತಾರೆ.

ರಿಕ್ಷಾ ಚಾಲಕ : ಗದಗ, ಹುಬ್ಬಳ್ಳಿ, ಬಿಜಾಪುರದ ನಗರಗಳಲ್ಲಿ ಯುವಕರು ಉದ್ಯೋಗ ಇಲ್ಲದ ಕಾರಣ ಬೇರೆಯವರ ರಿಕ್ಷಾವನ್ನು ಬಾಡಿಗೆಗೆ ತೆಗೆದುಕೊಂಡು ಓಡಿಸುತ್ತಾರೆ. ಸ್ವಂತ ರಿಕ್ಷಾ ಖರೀದಿ ಮಾಡುವ ಸಾಮರ್ಥ್ಯವೂ ಸಹ ಇವರಲ್ಲಿ ಇಲ್ಲ. ಬಿಜಾಪುರದಲ್ಲಿ ಸೈಕಲ್‌ರಿಕ್ಷಾಗಳನ್ನು ತುಳಿಯುತ್ತಾರೆ. ಈ ಸಮುದಾಯದಲ್ಲಿ ಕಸುಬುಗಳನ್ನು ಮಾಡುವವರ ವಿವರ ಈ ಕೆಳಗಿನಂತಿದೆ.

ಕಾಯಕರ್ಹವಲ್ಲದ ವಯೋಗುಂಪು

ಸರ್ಕಾರವು ಸಾಮಾನ್ಯವಾಗಿ ೦-೧೭ರ ವಯೋಮಾನದವರನ್ನು ನೇಮಕಾತಿಗಳಿಗೆ ಅನರ್ಹವೆಂದು ಮತ್ತು ೬೦ ವರ್ಷ ದಾಟಿದವರನ್ನು ವೃದ್ಧರೆಂದು ಪರಿಗಣಿಸಿ ಕಾಯಕರ್ಹವಲ್ಲದ ಗುಂಪೆಂದು ಪರಿಗಣಿಸಿದೆ. ಕಂಜರಭಾಟರಲ್ಲಿ ೧೭ ವರ್ಷ ಒಳಗಿನವರ ಸಂಖ್ಯೆ ೮೬೩. ಹಾಗೆಯೇ ೬೧ ವರ್ಷಕ್ಕಿಂತ ಮೇಲ್ಪಟ್ಟವರ ಸಂಖ್ಯೆ ೬೫. ಹೀಗಾಗಿ ಕಾಯಕರ್ಹವಲ್ಲದ ಜನಸಂಖ್ಯೆ ೯೨೮ (ಕೋಷ್ಟಕ:೭.೧) ಎಂದು ಪ್ರಸ್ತುತ ಗಣತಿಯಲ್ಲಿ ದಾಖಲಾಗಿದೆ. ಇವರನ್ನು ಅವಲಂಬಿತ ಗುಂಪೆಂದು ಕರೆಯಬಹುದು.

ಕೋಷ್ಟಕ:೭.೧ ಕಂಜರಭಾಟರಲ್ಲಿಯ ಆಶ್ರಿತರ ವಯೋಗುಂಪು

ಸಂ.	ವಯೋ ಗುಂಪು	ಪುರುಷರು	ಮಹಿಳೆಯರು	ಒಟ್ಟು
೧.	೦-೧೭ ವರ್ಷ	೪೪೮	೪೧೫	೫೬೩
೨.	೬೧ ವರ್ಷ ಮೇಲ್ಪಟ್ಟವರು	೩೫	೩೦	೬೫
	ಒಟ್ಟು	೪೮೩	೪೪೫	೯೨೮

ಕಂಜರಭಾಟರಲ್ಲಿಯ ಕಾಯಕರ್ಹ ವಯೋಗುಂಪು

೧೮ ರಿಂದ ೬೦ರ ವಯೋಮಾನದೊಳಗಿನವರನ್ನು ಕಾಯಕರ್ಹ ಗುಂಪೆಂದು ಪರಿಗಣಿಸಲಾಗಿದೆ. ಅಂತಹವರು ಕಂಜರಭಾಟರಲ್ಲಿ ೧೦೮೫ ಜನರಿದ್ದಾರೆ. ಇದರಲ್ಲಿ ಪುರುಷರು ೫೩೨ ಮತ್ತು ಮಹಿಳೆಯರು ೫೫೩ ಸೇರಿರುವರು.

ಕೋಷ್ಟಕ: ೭.೨ ಕಂಜರಭಾಟರಲ್ಲಿಯ ಕಾಯಕರ್ಹ ವಯೋಗುಂಪು

ಸಂ.	ವಯೋ ಗುಂಪು	ಪುರುಷರು	ಮಹಿಳೆಯರು	ಒಟ್ಟು
೧.	೧೮-೪೦ ವರ್ಷ	೪೨೧	೪೪೬	೮೬೭
೨.	೪೧-೬೦ ವರ್ಷ	೧೧೧	೧೦೭	೨೧೮
	ಒಟ್ಟು	೫೩೨	೫೫೩	೧೦೮೫

ಕಂಜರಭಾಟರಲ್ಲಿಯ ೧೮ ರಿಂದ ೪೦ ವಯೋಗುಂಪಿನವರನ್ನು ವಿಶೇಷವಾಗಿ ಕಾಯಕರ್ಹ ಮತ್ತು ಪ್ರಜನನರ್ಹ ಗುಂಪೆಂದು ಪರಿಗಣಿಸಲಾಗಿದೆ. ಇವರಲ್ಲಿಯ ವಿವಿಧ ವೃತ್ತಿಗಳನ್ನು ಅವಲಂಬಿಸಿರುವವರು ಹೀಗಿದ್ದಾರೆ. ಸರ್ಕಾರಿ ನೌಕರರು ಪುರುಷರು ೨೪ ಇದ್ದು, ಮಹಿಳೆಯರು ಇರುವುದಿಲ್ಲ. ಇವರಲ್ಲಿ ಕೃಷಿಕರಾಗಲಿ, ಕೃಷಿಕೂಲಿ ಕಾರ್ಮಿಕರಾಗಲಿ ಕಂಡುಬರುವುದಿಲ್ಲ. ಬಾಟಲಿ ಚೂರು, ಪ್ಲಾಸ್ಟಿಕ್ ಇತ್ಯಾದಿ ಅನುಪಯುಕ್ತ ವಸ್ತುಗನ್ನು ಆರಿಸುವವರು, ಮುಂತಾದ ಕೆಲಸಗಳಲ್ಲಿ ತೊಡಗಿದವರಲ್ಲಿ ಪುರುಷರು ಶೇಕಡ ೮೩.೯೧ ರಷ್ಟಿರುವರು. ಅಂದರೆ ಒಟ್ಟು ೪೨೪ ಜನ ಇತರ ಕೆಲಸಗಳಲ್ಲಿ ತೊಡಗಿಸಿಕೊಂಡಿರುವುದನ್ನು ಅರಿಯಬಹುದು. ಇನ್ನು ಇವರಲ್ಲಿ ಭಿಕ್ಷಾಟನೆಯನ್ನು ಅವಲಂಬಿಸಿರುವವರು ಅಧಿಕ ಸಂಖ್ಯೆಯಲ್ಲಿಯೇ ಇರುವರು (ಕೋಷ್ಟಕ:೭.೩).

ಕೋಷ್ಟಕ:೭.೩ ಕೆಲಸಗಳಲ್ಲಿ ತೊಡಗಿಕೊಂಡಿರುವರ ಕಂಜರಭಾಟರ ಪ್ರಮಾಣ

ಸಂ.	ಕಾಯಕಗಳು	ಪುರುಷರು	ಮಹಿಳೆಯರು	ಒಟ್ಟು
೧	ಭಿಕ್ಷಾಟನೆ	೪೪	೫೯	೧೦೩
೨	ಸರ್ಕಾರಿ ನೌಕರರು	೨೪		೨೪
೩	ಇತರೆ ಕೆಲಸ	೩೫೩	೭೧	೪೨೪
	ಒಟ್ಟು	೪೨೧	೧೩೦	೫೫೧

ಕಂಜರಭಾಟರಲ್ಲಿಯ ಆಶ್ರಿತರು ೯೨೮, ಕಾಯಕರ್ಹರು, ಕೆಸಲಗಾರರು ಮತ್ತು ನಿರುದ್ಯೋಗಿಗಳನ್ನು ಗಮನಿಸಿದಾಗ ಇವರಲ್ಲಿ ನಿರುದ್ಯೋಗಿಗಳ ಪ್ರಮಾಣವು ಉದ್ಯೋಗಿಗಳ ಪ್ರಮಾಣಕ್ಕಿಂತ ಹೆಚ್ಚಾಗಿಯೇ ಇದ್ದು ಒಟ್ಟಾರೆ ೫೫೮ರಷ್ಟಿದೆ. ಅದರಲ್ಲಿ ಪುರುಷ ೯೯ ರಷ್ಟಿದ್ದರೆ, ಮಹಿಳಾ ೪೫೯ ರಷ್ಟು ನಿರುದ್ಯೋಗಿಗಳಾಗಿರುವುದು ಕಂಡುಬರುತ್ತದೆ.

ನಿರುದ್ಯೋಗಿಗಳು ಮಹಿಳೆಯರಲ್ಲಿ ೪೫೯ ರಷ್ಟು ಇರುವುದು ಗಮನಿಸಿದಾಗ ತಿಳಿದು ಬರುವ ವಿಚಾರವೆಂದರೆ ಮಹಿಳೆಯರೆಲ್ಲಾ ಒಂದರ್ಥದಲ್ಲಿ ನಿರುದ್ಯೋಗಿಳಾಗಿ ಇರುವುದಿಲ್ಲ ಎಂಬುದು ಗಮನಿಸಬೇಕಾದ ಅಂಶವಾಗಿದೆ. ಪ್ರಾಯಶಃ ಈ ಮಹಿಳೆಯರಲ್ಲಿ ಮನೆಯಲ್ಲಿ ಗೃಹಿಣಿಯರಾಗಿ ಕಾರ್ಯ ನಿರ್ವಹಿಸುತ್ತಿರುವುದು ಹಾಗೂ ಮೈನೆರೆದ ಹರೆಯದ ಹೆಣ್ಣು ಮಕ್ಕಳು ಹೊರಗೆಲ್ಲೂ ಹೋಗದೆ ಮನೆಯಲ್ಲಿ ಉಳಿಯುವ ಸಾಧ್ಯತೆಗಳು ಇರುವು ದಾಗಿರುತ್ತದೆ.

ಮೋದಕಾ ಸಾಮಾನು ಸಂಗ್ರಹಣೆ : ಸೈಕಲಗಳ ಮೇಲೆ ಹಳ್ಳಿಗಳಿಗೆ ಸಂಚರಿಸಿ ಮೊಡಕು ಸಾಮಾನುಗಳನ್ನು ಸಂಗ್ರಹಿಸುತ್ತಾರೆ. ಪ್ಲಾಸ್ಟಿಕ್‌ಚೀಲ, ಗಾಜು, ಖಾಲಿ ಬಾಟಲಿ, ಕಬ್ಬಿಣ, ತಗಡು, ಕೂದಲು ಮುಂತಾದವುಗಳನ್ನು ಸಂಗ್ರಹಿಸಿ ಮಾರಾಟ ಮಾಡುತ್ತಾರೆ. ಬಂದ ಹಣದಲ್ಲಿ ಜೀವನ ಸಾಗಿಸುತ್ತಾರೆ. ನಗರ ಪ್ರದೇಶದಲ್ಲಿ ಬೆರಳೆಣಿಕೆಯಷ್ಟು ಸರ್ಕಾರಿ ನೌಕರಿಯಲ್ಲಿ ಇದ್ದಾರೆ. ಇವರಿಗೆ ಇರಲು ಮನೆ ಇಲ್ಲ. ದುಡಿಯಲು ಉದ್ಯೋಗವಿಲ್ಲದೆ ಉಳಲು ಭೂಮಿ ಇಲ್ಲದಿರುವುದರಿಂದ ಇವರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು ಹೇಗೆ? ಇವರು ಬಡತನದಲ್ಲಿಯೇ ತಮ್ಮ ಜೀವನ ಸಾಗಿಸುತ್ತಿರುವುದು ಕಂಡುಬರುತ್ತದೆ.

ಭೂ ಒಡೆತನ : ಕಂಜರಭಾಟರಲ್ಲಿ ವಾಸಕ್ಕೆ ಮನೆಯಿಲ್ಲದವರು ಮತ್ತು ಊಳಲು ಭೂಮಿ ಇಲ್ಲದವರು, ದುಡಿಯಲು ಉದ್ಯೋಗವಿಲ್ಲದವರಿರುವರು. ಇಂಥ ಪರಿಸ್ಥಿತಿಯಲ್ಲಿ ಇರುವಾಗ ಇವರ ಆರ್ಥಿಕ ಸ್ಥಿತಿ ಸುಧಾರಿಸುವುದು ಕಷ್ಟದ ಮಾತಾಗಿದೆ. ಈ ಸಮುದಾಯ ದವರಲ್ಲಿ ಒಂದು ಗುಂಟೆ ಜಮೀನು ಇಲ್ಲ ಎಂಬುದು ತಿಳಿದುಬರುತ್ತದೆ. ಭೂಮಿ ಇಲ್ಲದ ಕಾರಣ ಬೇಸಾಯದ ಅನುಭವ ಎಳ್ಳಷ್ಟು ಇಲ್ಲದಾಗಿದೆ. ಇವರಿಗೆ ಹಣದ ಆಮಿಷ ನೀಡಿ ಬೇರೆಯವರ ಇಲ್ಲಸಲ್ಲದ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಾರೆ. ಹಿಂದೆ ಮುಂದೆ ವಿಚಾರಿಸದೆ ತಮ್ಮ ಶಕ್ತಿ ಬಲದಿಂದ ಅಂಥ ಕಾರ್ಯಗಳನ್ನು ಮಾಡಿ ಈ ಸಮುದಾಯದ ಪುರುಷರು ತೊಂದರೆಗೀಡಾಗುತ್ತಾರೆ. ಇವರಲ್ಲಿ ಅಜ್ಞಾನ, ಅನಾಗರಿಕತೆ, ತಿಳಿವಳಿಕೆ ಇಲ್ಲದಿರುವುದು ಉಳಿದ ಸಮುದಾಯಗಳ ಪರಿಸರಕ್ಕೆ ಹೊಂದಿಕೊಳ್ಳದೆ ತಮ್ಮದೇ ಆದ ರೀತಿಯಲ್ಲಿ ಜೀವನ ಸಾಗಿಸುತ್ತಿರುವುದು ಕಂಡುಬರುತ್ತದೆ. ರಾಜಕಾರಣಿಗಳು ಕೇವಲ ಇವರನ್ನು ಮತಕ್ಕಾಗಿ ಬಳಸಿಕೊಂಡು ನಂತರ ಇವರ ಬಗ್ಗೆ ಯಾವುದೇ ರೀತಿಯ ಗಮನ ನೀಡದಿರುವುದು ಕಂಡುಬರುತ್ತದೆ. ಇತರೆ ಹಿಂದುಳಿದ ಸಮುದಾಯಗಳಿಗೆ ಸಿಗುವಂತಹ ಯೋಜನೆಗಳು ಸಹ ಇವರಿಗೆ ಲಭಿಸದೆ ಇರುವುದು ವಿಪರ್ಯಾಸವೇ ಸರಿ.

ಆಹಾರ ಸಂಗ್ರಹಣೆ : ಆಹಾರ ಸಂಗ್ರಹಣೆಯು ಅವರ ಆರ್ಥಿಕ ಸ್ಥಿತಿಗತಿಯನ್ನು ಅವಲಂಬಿಸಿದೆ. ಭಿಕ್ಷಾಟನೆಯಿಂದ ಪಡೆದ ದವಸಗಳಲ್ಲಿ ಅರ್ಧದಷ್ಟು ಉಪಯೋಗಿಸಲು ಉಳಿದ ಇನ್ನರ್ಧ ದವಸ ಮಾರಾಟಮಾಡಿ ಜೀವನೋಪಾಯಕ್ಕಾಗಿ ಬೇಕಾಗಿರುವ ಇತರೆ ವಸ್ತುಗಳನ್ನು ಖರೀದಿಸುತ್ತಾರೆ. ಕೂಲಿನಾಲಿ ಮಾಡಿ ಆಹಾರ ವಸ್ತುಗಳನ್ನು ಸಂಗ್ರಹ ಮಾಡಿಕೊಂಡು ಬಡತನದ ಬದುಕು ನಿರ್ವಹಿಸುತ್ತಾರೆ.

ಆಹಾರ (ಖಾಣಾ) ಬಳಕೆ : ಕಂಜರಭಾಟ ಜನ ಮೂಲತಃ ಮಾಂಸಹಾರಿಗಳು, ಇವರು ಒಂದೂರಿನಿಂದ ಮತ್ತೊಂದು ಊರಿಗೆ ಅಲೆಯುವರು. ಅರಣ್ಯ ಪ್ರದೇಶಗಳಲ್ಲಿ ದೊರೆಯುವ ಹಣ್ಣು-ಹಂಪಲು, ಗಡ್ಡೆ-ಗಣೆಸು, ಪ್ರಾಣಿ-ಪಕ್ಷಿ, ಜಲಚರಗಳನ್ನು ಆಹಾರಕ್ಕಾಗಿ ಉಪಯೋಗಿಸುತ್ತಾರೆ. ಮಾಂಸಾಹಾರಿಗಳು ಆಗಿರುವ ಇವರು ಎಲ್ಲ ರೀತಿಯ ಪ್ರಾಣಿಗಳನ್ನು ತಿನ್ನುವುದಿಲ್ಲ. ದನ, ಕುರಿ, ಆಡು, ಚಿಗರೆ, ಮೊಲ, ಹಂದಿ, ಕೋಳಿ, ಮೀನು ಮುಂತಾದ ಪ್ರಾಣಿಗಳ ಮಾಂಸವನ್ನು ಮಾತ್ರ ತಿನ್ನುತ್ತಾರೆ.

ಆಹಾರ ಧಾನ್ಯಗಳಲ್ಲಿ ಮುಖ್ಯವಾಗಿ ತಾವು ನೆಲೆಯೂರಿದ ಸ್ಥಳಗಳಲ್ಲಿ ಸಿಗುವ ಜೋಳ, ಗೋಧಿ, ಅಕ್ಕಿ, ಸಜ್ಜೆ, ಬೇಳೆಕಾಳು, ಕಾಯಿಪಲ್ಯೆಗಳನ್ನು ಹೆಚ್ಚಾಗಿ ಉಪಯೋಗಿಸುವರು. ಇವರು ರೊಟ್ಟಿ ಮತ್ತು ಅನ್ನ ಹೆಚ್ಚಾಗಿ ತಿನ್ನುತ್ತಾರೆ. ಇದರ ಜೊತೆಗೆ ಮಾಂಸ ಎಂದರೆ ಇವರಿಗೆ ಪಂಚಪ್ರಾಣ. ಗೋಧಿ ರೊಟ್ಟಿಯನ್ನು ಬೆಲ್ಲದೊಂದಿಗೆ ಬೆರಸಿ ಬೇಯಿಸಿ ಪಾಯಸ ಮಾಡಿಕೊಂಡು ತಿನ್ನುತ್ತಾರೆ. ಇದಲ್ಲದೆ ಗೋಧಿ ರೊಟ್ಟಿಯನ್ನು ಮಾಂಸದ ಸಾರಿನಲ್ಲಿ ಹಾಕಿ ಬೇಯಿಸಿ ತಿನ್ನುತ್ತಾರೆ. ಇದಕ್ಕೆ 'ಖೋದ್ದಾ' ಎನ್ನುತ್ತಾರೆ. ಇದಲ್ಲದೆ ಮಾಂಸ ಮತ್ತು ರವಾ ಬೆರಸಿ ಅದರಲ್ಲಿ ಮಸಾಲೆ ಸಾಮಾನುಗಳನ್ನು ಹಾಕಿ ಪಾಯಸದಂತೆ ತಯಾರಿಸಿ ತಿನ್ನುತ್ತಾರೆ. ಇಂತಹ ಊಟಕ್ಕೆ ಇವರು 'ದಳಿಯಾ' ಎನ್ನುತ್ತಾರೆ. ಗೋಧಿ ಹಿಟ್ಟನ್ನು ತುಪ್ಪ ಇಲ್ಲವೆ ಒಳ್ಳೆಣ್ಣೆಯಲ್ಲಿ ಹುರಿದು ಅದರಲ್ಲಿ ಬೆಲ್ಲ ಇಲ್ಲವೆ ಸಕ್ಕರೆ, ಯಾಲಕ್ಕಿ, ಲವಂಗ ಮುಂತಾದ ವಸ್ತುಗಳನ್ನು ಸೇರಿಸಿ ವಿಶಿಷ್ಟವಾದ ರುಚಿಯನ್ನು ಹೊಂದಿರುವ ಪೌಷ್ಟಿಕ ಆಹಾರ ತಯಾರಿಸಿ ತಿನ್ನುತ್ತಾರೆ. ಇದಕ್ಕೆ ಇವರು 'ಸಾಂದಾ' ಎಂದು ಕರೆಯುತ್ತಾರೆ. ಗೋಧಿ ಹಿಟ್ಟನ್ನು ಸ್ವಲ್ಪ ತುಪ್ಪ ಹಾಕಿ ಅದರಲ್ಲಿ ಬೆಲ್ಲ ಯಾಲಕ್ಕಿ ಕೊಬ್ಬರಿ ಕಸಕಸಿ ಪದಾರ್ಥಗಳನ್ನು ಸೇರಿಸಿ ಕರದಂಟು ತಯಾರಿಸುತ್ತಾರೆ. ಇದನ್ನು ಒಂದು ತಿಂಗಳವರೆಗೆ ಇಟ್ಟರೂ ಕೆಡುವುದಿಲ್ಲ. ಇದಕ್ಕೆ ಈ ಜನ 'ಹುಕಡಿ' ಎನ್ನುತ್ತಾರೆ. ಗೋಧಿ ಹಿಟ್ಟು ಹಾಗೂ ಬೆಲ್ಲ ಸೇರಿಸಿ ಬೇಯಿಸಿ ಗಂಜಿ ಮಾಡಿ ಕುಡಿಯುತ್ತಾರೆ.

ಯಾವಾಗಲೂ ಅಲೆಮಾರಿಗಳಾಗಿ ಅಲೆಯುವುದರಿಂದ ಇವರಿಗೆ ಮಾಂಸ ಸಿಗುವುದು ವಿರಳ. ಆದಕಾರಣ ಅವರು ಹಸಿ ಮಾಂಸದ ತುಂಡುಗಳನ್ನು ಮಾಡಿ ಅದಕ್ಕೆ ಉಪ್ಪು, ಖಾರ ಹಚ್ಚಿ ಬಿಸಿಲಿನಲ್ಲಿ ಒಣಗಿಸಿ ಈ ಮಾಂಸದ ತುಂಡುಗಳನ್ನು ಕನಿಷ್ಟ ೧೫ ದಿನಗಳವರೆಗೆ ಉಪಯೋಗಿಸುತ್ತಾರೆ. ಈ ತುಂಡುಗಳನ್ನು ಸಾರಿನೊಂದಿಗೆ ಬೇಯಿಸಿ ತಿನ್ನುತ್ತಾರೆ. ಈ ಮಾಂಸವನ್ನು ಒರಳಿನಲ್ಲಿ ಕುಟ್ಟಿ ಚಟ್ನಿ ರೂಪದಲ್ಲಿ ಉಪಯೋಗಿಸುವರು. ಇದಲ್ಲದೆ ಬೆಂಕಿಯಲ್ಲಿ ಸುಟ್ಟು ತಿನ್ನುತ್ತಾರೆ. ಇಂಥ ಪದಾರ್ಥಗಳನ್ನು ಸೆರೆ, ಸೇಂದಿ ಸೇವಿಸುವಾಗ ಹೆಚ್ಚಾಗಿ ಉಪಯೋಗಿಸುವರು. ಈ ಸಮುದಾಯವು ಮಾಂಸ ಹಾಗೂ ಖಾರ ವಸ್ತುಗಳನ್ನು ಹೆಚ್ಚು ಉಪಯೋಗಿಸುತ್ತಾರೆ. ತುಪ್ಪ, ಹಾಲು ಇವುಗಳ ಬಳಕೆ ಕಡಿಮೆ. ಹಸಿಮೆಣಸಿನಕಾಯಿ ಹಾಗೂ ಶೆಂಗಾ ಚಟ್ನಿಯನ್ನು ಹೆಚ್ಚಾಗಿ ಆಹಾರದಲ್ಲಿ ಉಪಯೋಗಿಸುತ್ತಾರೆ. ಮಾಂಸದ ಅಡಿಗೆ ಮಾಡುವುದರಲ್ಲಿ ಈ ಸಮುದಾಯದ ಮಹಿಳೆಯರು ನಿಪುಣರಾಗಿದ್ದಾರೆ.

ಪಾನೀಯಗಳು (ಪೀಣಾ) : ಕಂಜರಭಾಟರು ಅಡವಿಯಲ್ಲೆಲ್ಲಾ ಸಂಚರಿಸಿ ದಣಿದು ಮನೆಗೆ ಬರುತ್ತಾರೆ. ಎಲ್ಲರೂ ಸೇರಿ ಹಾಗೂ ವೈಯಕ್ತಿಕವಾಗಿ ಮದ್ಯ ಪೇಯಗಳನ್ನು ಉಪಯೋಗಿಸುತ್ತಾರೆ. ಸಭೆ, ಸಮಾರಂಭ, ಹಬ್ಬ, ಮದುವೆ, ಹರಿದಿನಗಳಲ್ಲಿ ಸಾಮೂಹಿಕ ವಾಗಿ ಮದ್ಯಸೇವಿಸಿದರೆ ಇನ್ನೂಳಿದ ವೇಳೆಯಲ್ಲಿ ಮನೆಯಲ್ಲಿ ಸಾಮಾನ್ಯವಾಗಿ ಒಬ್ಬರೇ ಸೇವಿಸುತ್ತಾರೆ. ಮದ್ಯವನ್ನು ಸೇವಿಸುವಾಗ ಮಾಂಸಾಹಾರಿ ಪದಾರ್ಥಗಳನ್ನು ಉಪಯೋಗಿ ಸುತ್ತಾರೆ. ಇವರು ಒಂದೇ ತರಹದ ಮದ್ಯಪಾನೀಯಗಳನ್ನು ಉಪಯೋಗಿಸುವುದಿಲ್ಲ.

ನಾನಾ ತರಹದ ಪಾನೀಯಗಳನ್ನು ಸೇವಿಸುತ್ತಾರೆ. ಮಾದಕ ಪಾನೀಯಗಳನ್ನು ಗಂಡಸರು ಹೆಂಗಸರು, ಮಕ್ಕಳು ಎಲ್ಲರೂ ತೆಗೆದುಕೊಳ್ಳುತ್ತಾರೆ.

ಬೆಲ್ಲ, ನವಸಾಗರ, ಬ್ಯಾಲದ ಮರದ ತೊಗಟೆಗಳನ್ನು ಗಡಿಗೆ ಅಥವಾ ಬ್ಯಾರಲ್‌ಗಳಲ್ಲಿ ಹಾಕಿ ಅದರ ತುಂಬಾ ನೀರು ಹಾಕಿ ಕೊಳೆ (ರಸಾಯನ) ಮಾಡುತ್ತಾರೆ. ಎರಡು ದಿನಗಳ ನಂತರ ಆ ಕಚ್ಚಾ ರಸಾಯನವನ್ನು ಒಂದು ಟಾಕಿಯಲ್ಲಿ ಹಾಕಿ ಅದರ ಮೇಲೆ ಕಟ್ಟಿಗೆಯ ದುಂಡಾಕಾರದ ಪಾತ್ರೆಯನ್ನು ಇಟ್ಟು ಕಬ್ಬಿಣದ ಕೊಳವೆಯನ್ನು ಹಾಕಿ ಅದರ ಮೇಲೆ ನೀರು ತುಂಬಿದ ಬೋಗುಣಿಯನ್ನು ಇಡುತ್ತಾರೆ. ನಂತರ ಟಾಂಕಿಯ ಕೆಳಗೆ ಬೆಂಕಿಯನ್ನು ಹಚ್ಚಿ ಕೊಳೆ (ರಸಾಯನ) ಕಾಯಿಸುತ್ತಾರೆ. ಈ ರೀತಿ ಭಟ್ಟಿ ಇಳಿಸುವಿಕೆಯಿಂದ ಸೆರೆ ಉತ್ಪತ್ತಿಯಾಗುತ್ತದೆ. ತಾವೇ ತಯಾರಿಸಿದ ಸೆರೆಯನ್ನು ಸೇವಿಸುತ್ತಾರೆ.

ಭಾಂಗ್ : ಅಫೀಮ ಮತ್ತು ಕಸಕಸಿಯಿಂದ ಇದನ್ನು ತಯಾರಿಸಿ ಹೋಳಿ ಹಬ್ಬದಲ್ಲಿ ಕುಡಿಯುತ್ತಾರೆ. ಭಾಂಗ್ ಕುಡಿದ ಮತ್ತಿನಲ್ಲಿ ಹಾಡುವುದು, ಕುಣಿಯುವುದು ನಾನಾ ರೀತಿಯ ಮನರಂಜನೆ ಕಾರ್ಯಗಳನ್ನು ಮಾಡುತ್ತಾರೆ.

ಈಚಲಮರದಿಂದ ಸೇಂದಿಯನ್ನು ತೆಗೆಯುತ್ತಾರೆ. ಇದು ಮುಂಜಾವಿನಲ್ಲಿ ಸಿಹಿ ಇರುತ್ತದೆ. ಇದಕ್ಕೆ ನೀರಾ ಎನ್ನುತ್ತಾರೆ. ಬಿಸಿಲು ಏರಿದಂತೆ ಇದರಲ್ಲಿ ಹುಳಿ ಹೆಚ್ಚಾಗಿ ಸೇಂದಿ ತಯಾರಾಗುತ್ತದೆ. ಸೇಂದಿಯನ್ನು ಸಹ ಈ ಜನರು ದಿನಾಲು ಕುಡಿಯಲು ಉಪಯೋಗಿಸುವರು.

ಪ್ರಸ್ತುತ ದೇಶ ಹಾಗೂ ವಿದೇಶದ ಮದ್ಯಗಳಾದ ಬ್ರ್ಯಾಂಡಿ, ಬೀಯರ್, ವಿಸ್ಕಿ ಮುಂತಾದ ಮದ್ಯ ಪಾನೀಯಗಳನ್ನು ಸೇವಿಸುತ್ತಾರೆ. ಇದೊಂದು ಐಶಾರಾಮಿಯಾಗಿದ್ದು ಈ ಪಾನೀಯಗಳನ್ನು ಹಣವಂತರು ಹೆಚ್ಚಾಗಿ ಬಳಸುತ್ತಾರೆ. ಬಡವರಿಗೆ ದಿನಾಲು ಕುಡಿಯಲು ಈ ಪಾನೀಯಗಳು ದೊರೆಯುವುದಿಲ್ಲ. ಇದಲ್ಲದೆ ಹಾಲು, ಮೊಸರು, ಮಜ್ಜಿಗೆ, ಶರಬತ್, ಚಹಾ ಮುಂತಾದ ಪಾನೀಯಗಳನ್ನು ಸೇವಿಸುತ್ತಾರೆ.

ಉಡುಗೆ-ತೊಡುಗೆ : ಇವರ ಸಂಸ್ಕೃತಿಯಲ್ಲಿ ವೇಷಭೂಷಣಗಳಿಗೆ ತಮ್ಮದೇ ಆದ ಮಹತ್ವಯಿದೆ. ಇದರಿಂದ ಜನರನ್ನು ಗುರುತಿಸುವುದು ಸುಲಭವಾಗುತ್ತದೆ. ಕಂಜರಭಾಟರು ರಸಿಕರು ಎಂಬುದನ್ನು ಅವರ ಉಡುಗೆ-ತೊಡುಗೆಗಳ ಮೂಲಕ ಗುರುತಿಸಬಹುದು.

ಕಂಜರಭಾಟ ಮಹಿಳೆಯರು ಧರಿಸುವ ವೇಷಭೂಷಣಗಳು ರಾಜಸ್ಥಾನದ ಮಹಿಳೆಯರ ಉಡುಗೆ ತೊಡುಗೆಗಳನ್ನು ನೆನಪಿಸುತ್ತವೆ. ಅವರು ಧರಿಸುವ ಬಣ್ಣ ಬಣ್ಣದ ಬಟ್ಟೆಗಳು ಹಾಗೂ ಆಭರಣಗಳು ಸಹಜವಾದ ಸೌಂದರ್ಯಕ್ಕೆ ಮೆರಗು ತರುತ್ತವೆ. ಇವರ ಮಹಿಳೆಯರು ಬಣ್ಣ ಬಣ್ಣದ ಬಟ್ಟೆಗಳಿಗೆ ಹೆಚ್ಚು ಮಹತ್ವವನ್ನು ಕೊಡುತ್ತಾರೆ. ಕೆಂಪು, ನೀಲಿ, ಹಳದಿ ಮುಂತಾದ ಬಣ್ಣದ ಉಡುಗೆಗಳನ್ನು ಧರಿಸುತ್ತಾರೆ. ಮಹಿಳೆಯರು ೫-೬ ಮೀಟರ್ ಅರಿವೆಯ ಲಂಗ, ಉದ್ದ ತೋಳಿನ ಕುಪ್ಪಸ ಹಾಗೂ ಓಡಣಿಯನ್ನು ಧರಿಸುತ್ತಾರೆ.

ಸ್ತ್ರೀಯರು ಸೌಂದರ್ಯ ಉಪಾಸಕರು. ಬಟ್ಟೆಗಳ ಜೊತೆಗೆ ಆಭರಣಗಳು, ಆಭರಣ ಗಳಿಂದ ಅವರ ರೂಪಕ್ಕೆ ಸೌಂದರ್ಯ ಒದಗುತ್ತದೆ. ಮೈ ತುಂಬೆಲ್ಲ ಆಭರಣಗಳು ಕಾಣಿಸಿ

ಕೊಳ್ಳುತ್ತವೆ. ಬಂಗಾರ, ಬೆಳ್ಳಿ, ಲೋಹಗಳಿಂದ ತಯಾರಿಸಿದ ಆಭರಣಗಳನ್ನು ಧರಿಸುತ್ತಾರೆ. ಆಭರಣಗಳು ಭಾರವಾಗಿದ್ದರೂ ಅವುಗಳನ್ನು ಧರಿಸಿಕೊಳ್ಳಲು ಹಿಂಜರಿಯುವುದಿಲ್ಲ. ಕೈಯಲ್ಲಿ ಉಂಗುರ, ಬಳೆಗಳು, ಕೊರಳಲ್ಲಿ ಬೆಳ್ಳಿಯಿಂದ ತಯಾರಿಸಿದ ೨೦-೩೦ ತೊಲೆಯ ದಪ್ಪ ನಕ್ಲೆಸ್ ತರಹದ ಅಭರಣ, ಮೂಗಿನಲ್ಲಿ ನತ್ತು (ಮೂಗುತಿ), ಕಿವಿಯಲ್ಲಿ ಝುಮಕಿ, ಹೂ ಬೂಗಡಿ, ಕಾಲಿನಲ್ಲಿ ಬೆಳ್ಳಿ ಚೈನು, ತೊಡೆ, ಕಾಲಕಡ್ಗ, ಕೊರಳಲ್ಲಿ ಬಂಗಾರದ ಟೀಕಿ, ಬೋರಮಾಳ, ಬೆಳ್ಳಿ ನಾಣ್ಯಗಳಿಂದ ತಯಾರಿದ ಸರ (ಝೂಲರಾ) ಸೊಂಟಕ್ಕೆ ಬೆಳ್ಳಿಯ ಪಟ್ಟಿ (ಕಮರಪಟ್ಟಾ) ಧರಿಸುತ್ತಾರೆ.

ಪುರುಷರು ಸಾಮಾನ್ಯವಾಗಿ ಧೋತರ, ಅಂಗಿ, ತಲೆಯ ಮೇಲೆ ಬಣ್ಣ ಬಣ್ಣದ ಪಗಡಿ ಧರಿಸುತ್ತಾರೆ. ಕೆಲವರು ಜಾಕೇಟ ಹಾಕಿಕೊಳ್ಳುವರು. ಕಿವಿಯಲ್ಲಿ ಬಂಗಾರದ ಮುರುವು, ಕೈಯಲ್ಲಿ ಬೆಳ್ಳಿ ಅಥವಾ ಕಬ್ಬಿಣದ ಕಡಗ, ಸೊಂಟಕ್ಕೆ ಬೆಳ್ಳಿಯ ಉಡದಾರ ಹಾಕಿಕೊಳ್ಳುವರು.

ಸ್ತ್ರೀಯರ ಸ್ಥಾನಮಾನ : ಸ್ತ್ರೀಯರಿಗೆ ಸ್ವಾತಂತ್ರ್ಯ ಇಲ್ಲ. ಹೆಣ್ಣು ತಾಯಿಯಾಗಿ, ಅಕ್ಕ-ತಂಗಿಯಾಗಿ, ಮಗಳಾಗಿ, ಹೆಂಡತಿಯಾಗಿ ಪಾತ್ರ ನಿರ್ವಹಿಸುತ್ತಾಳೆ. ಬೆಳೆದ ಮನೆಗೂ, ಕೊಟ್ಟ ಮನೆಗೂ ಹೆಸರು ತರುತ್ತಾಳೆ. ಅವಳ ತಾಳ್ಮೆ, ಮೃದು ಸ್ವಭಾವ, ಸಂಸಾರದ ಉನ್ನತಿಗೆ ಕಾರಣವಾಗುತ್ತದೆ. ಹುಟ್ಟಿದ ಮನೆಯಲ್ಲಿ ಮಗಳಾಗಿ ಕೊಟ್ಟ ಮನೆಯಲ್ಲಿ ಗಂಡನ ಸಹಭಾಗಿಯಾಗಿ ಮಕ್ಕಳಿಗೆ ಮಮತೆಯ ತಾಯಿಯಾಗಿ ಪ್ರೀತಿ ವಾತ್ಸಲ್ಯ, ಮಮತೆಯಿಂದ ಮಕ್ಕಳನ್ನು ಸಾಕಿ ಸಲುಹಿ ಒಳ್ಳೆಯ ಸುಸಂಸ್ಕೃತರನ್ನಾಗಿ ಮಾಡುತ್ತಾಳೆ. ಕುಟುಂಬದಲ್ಲಿ ಸ್ತ್ರೀ ಪಾತ್ರ ಮಹತ್ವದ್ದಾಗಿರುತ್ತದೆ. ಅತ್ತೆ ಮಾವ, ಭಾವ, ಮೈದುನ ಮುಂತಾದವರ ಮಧ್ಯದಲ್ಲಿ ಅನೋನ್ಯವಾಗಿ ಬಾಳ್ವೆ ಮಾಡಬೇಕಾಗುತ್ತದೆ. ನವಗೃಹಣಿ, ಸತಿ ಶಿರೋಮಣಿ ಯಾಗಿ ಎಲ್ಲರ ಬೇಕು ಬೇಡಿಕೆಗಳನ್ನು ಪೂರೈಸುತ್ತಾ ಬಾಳಿದರೆ ಸಮಾಜದಲ್ಲಿ ಗೃಹಿಣಿಯ ಸ್ಥಾನಮಾನಕ್ಕೆ ಬೆಲೆ ಬರುತ್ತದೆ. ಕಂಜರಭಾಟ ಸಮುದಾಯದ ಹೆಣ್ಣು ಮಕ್ಕಳು ಸಹ ಈ ಎಲ್ಲ ಕರ್ತವ್ಯಗಳನ್ನು ಅನುಸರಿಸಿ ಬಡತನದ ಹೊಣೆಯನ್ನು ಹೊತ್ತು ಜೀವನ ಸಾಗಿಸುತ್ತಾ ಬಂದವರು. ಹೆಣ್ಣು ಮಕ್ಕಳಿಗೆ ವಿದ್ಯಾವಂತರಾಗಿ ಮಾಡಿಲ್ಲ. ಬೇರೆ ಸಮಾಜದ ಪರಿಸರದೊಂದಿಗೆ ಬೆರೆತು ಬಾಳುವ ಸ್ವಾತಂತ್ರ್ಯ ಈ ಸಮುದಾಯದ ಮಹಿಳೆಯರಿಗೆ ಇಲ್ಲ. ತಮ್ಮ ಮನೆಯ ಕೆಲಸಗಳು ಮಾಡುವದೊಂದೆ ಗೊತ್ತು. ಇಲ್ಲಿಯವರೆಗೆ ಸಮುದಾಯದಲ್ಲಿ ಒಬ್ಬ ಮಹಿಳೆಯು ಪದವಿಧರರಾಗಿಲ್ಲ. ಸ್ತ್ರೀಯರನ್ನು ಉದ್ಯೋಗಕ್ಕೆ ಕಳಿಸುವುದಿಲ್ಲ. ಆದಕಾರಣ ಶಿಕ್ಷಣಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿರುವುದಿಲ್ಲ. ಮನೆಯಲ್ಲಿ ಯಾವುದಾದರೂ ಮುಖ್ಯ ಕಾರ್ಯ ಬಂದರೆ ಮನೆಯ ಹೆಣ್ಣುಮಕ್ಕಳ ಜೊತೆಗೆ ಚರ್ಚೆ ಮಾಡುತ್ತಾರೆ. ಅವರು ಯಾವುದಾದರೂ ಸಮಸ್ಯೆ ಒಡ್ಡಿದರೆ ಅವರ ಬೇಡಿಕೆ ಯೋಗ್ಯ ವಾಗಿದ್ದರೆ ಮನ್ನಣೆ ದೊರೆಯುವುದು, ಇಲ್ಲದಿದ್ದರೆ ಇಲ್ಲ. ಹೆಣ್ಣು ಮಕ್ಕಳಿಗೆ ಶಿಕ್ಷಣ ಇಲ್ಲದ ಕಾರಣ ತಮ್ಮ ವಂಶಾವಳಿಯ ಶಿಕ್ಷಣದ ಬಗೆಗೆ ಚಿಂತನೆ ಮಾಡುವುದಿಲ್ಲ. ಸ್ತ್ರೀಯರಿಗೆ ಈ ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳನ್ನು ಕೊಟ್ಟಿರುವುದಿಲ್ಲ.

ಮದುವೆಯಾದ ಮದುಮಗಳು ಗಂಡನ ಮನೆಗೆ ಬರುತ್ತಾಳೆ. ತಂದೆ ತಾಯಿಗಳ ಮನೆಯಲ್ಲಿರುವ ಸ್ವಾತಂತ್ರ್ಯ ಇಲ್ಲಿ ದೊರೆಯುವುದಿಲ್ಲ. ಮಾವ, ಅತ್ತೆ, ಗಂಡನ ಆದೇಶಗಳನ್ನು ಪಾಲನೆ ಮಾಡಬೇಕಾಗುತ್ತದೆ. ಎಲ್ಲರ ಜೊತೆ ಪ್ರೀತಿಯಿಂದ ಇದ್ದು ಜೀವನ ಸಾಗಿಸಬೇಕಾಗುತ್ತದೆ. ಸ್ತ್ರೀಯರು ವಿವಾಹದ ನಂತರ ವಾಸವಾಗಿರುವ ಮನೆಯ ಕಾಯ್ದೆ ಕಟ್ಟಳೆಯಲ್ಲಿದ್ದು ಎಲ್ಲರ ಜೊತೆಗೆ ಹೊಂದಿಕೊಂಡು ಹೋಗಬೇಕಾಗಿರುತ್ತದೆ.

ಒಂದು ಕುಲದವರು ಪಾಲಿಸುವ ನಿಯಮವಳಿಗಳನ್ನು ಎಲ್ಲರೂ ಪಾಲಿಸಬೇಕಾಗುತ್ತದೆ. ವಂಶದ ನಿಯಮಾವಳಿಗಳು ಪ್ರತ್ಯೇಕವಾಗಿರುವುದಿಲ್ಲ. ಸಮುದಾಯದ ನಿಯಮಗಳನ್ನು ಎಲ್ಲರೂ ಪಾಲಿಸುತ್ತಾರೆ. ತಮ್ಮ ಕುಲದೇವರನ್ನು ಹೆಚ್ಚು ನಂಬುತ್ತಾರೆ. ವಂಶದ ಪ್ರತಿಯೊಬ್ಬನೂ ಕುಲದೇವತೆಯನ್ನು ಪೂಜಿಸಲೇಬೇಕು. ವರ್ಷಕ್ಕೊಮ್ಮೆ ವಿಶೇಷ ಪೂಜೆಯನ್ನು ಮಾಡುತ್ತಾರೆ. ಅಂದು ಕುಟುಂಬದ ಪ್ರತಿಯೊಬ್ಬ ಸದಸ್ಯರು ಸಮುದಾಯದ ಗುರು ಹಿರಿಯರನ್ನು ಕರೆಯಿಸಿ ಪೂಜಾ ಸಮಾರಂಭ ಮಾಡುವುದು ವೈಶಿಷ್ಟ್ಯವಾಗಿದೆ.

ಮನೆಯಲ್ಲಿ ಯಾರಿಗಾದರೂ ಅನಾರೋಗ್ಯವಾದರೆ, ಗಾಳಿಶಕೆ(ದೆವ್ವದ ಕಾಟ)ಯಾದರೆ, ಮಾಟ ಮಂತ್ರ ಇತ್ಯಾದಿಗಳನ್ನು ಮಾಡಿದ್ದರೆ ಮೊದಲು ಮನೆ ದೇವರನ್ನು ಬೇಡಿಕೊಳ್ಳುವರು. ಬಹುಶಃ ನಾವು ಏನಾದರೂ ತಪ್ಪು ಮಾಡಿರಬೇಕು ಅದಕ್ಕೆ ನಮ್ಮ ದೇವರು ನಮಗೆ ಕಾಡುತ್ತಿದೆ ಎಂದು ಮನೆ ಜನರು ವಿಚಾರಿಸುವರು. ಸಾಂಪ್ರದಾಯಿಕವಾಗಿ ಕುಲದೇವನರನ್ನು ಪೂಜಿಸಿ ನಮ್ಮಿಂದ ಏನಾದರೂ ತಪ್ಪಾಗಿದ್ದರೆ ಕ್ಷಮಿಸಬೇಕು. ಅಸ್ವಸ್ಥನಾದ ಮನುಷ್ಯನನ್ನು ಬೇಗನೆ ವಾಸಿಮಾಡಬೇಕೆಂದು ಬೇಡಿಕೊಳ್ಳುವರು. ಕಂಜರಭಾಟರು ಕುಲದೇವತೆಯ ಮೇಲೆ ಹೆಚ್ಚು ವಿಶ್ವಾಸ, ಶ್ರದ್ಧೆಯನ್ನಿರಿಸಿ ಪೂಜಿಸುವರು. ಪ್ರತಿಯೊಂದು ವಂಶಕ್ಕೆ ಬೇರೆ ಬೇರೆ ದೇವರು ಇದ್ದು ಪೂಜಿಸುವ ವಿಧಾನಗಳೂ ಬೇರೆ ಬೇರೆಯಾಗಿವೆ.

೮

ಸಾಹಿತ್ಯ ಮತ್ತು ಭಾಷೆ

ಸಾಹಿತ್ಯ

ಕಾವ್ಯ : ಕಂಜರಭಾಟ ಸಮುದಾಯದಲ್ಲಿ ಜನಪದ ಸಾಹಿತ್ಯ ವಿಪುಲವಾಗಿದೆ. ಇವರಲ್ಲಿ ಅವುಗಳನ್ನು ಇಂಪಾಗಿ ಹಾಡುವ ಗಾಯಕರಿದ್ದಾರೆ. ಪೂಜೆ, ಮದುವೆ, ಹೋಳಿ ಹುಣ್ಣಿಮೆ, ಪೂಜಾ ಸಮಾರಂಭಗಳಲ್ಲಿ ಒಳ್ಳೆಯ ತಾಳಬದ್ಧವಾಗಿ ಹಾಡುತ್ತಾರೆ. ಹಾಡು ಹಾಡುವಾಗ ಮೃದುಂಗ, ತಬಲಾ, ಡೋಲಕ, ತಾಳ ಮುಂತಾದ ವಾದ್ಯಗಳನ್ನು ಉಪಯೋಗಿಸುತ್ತಾರೆ. ಇವರಿಗೆ ನೃತ್ಯ, ಹಾಡು, ವಾದ್ಯ ಬಾರಿಸುವುದು ಅತ್ಯಂತ ಪ್ರಿಯವಾಗಿವೆ. ಇವರಿಗೆ ಪ್ರೋತ್ಸಾಹ ದೊರೆಯದ ಕಾರಣ ಇವರು ಈ ಕ್ಷೇತ್ರದಲ್ಲಿ ಹೆಚ್ಚು ಮುಂದುವರೆಯಲಿಲ್ಲ ಎನಿಸುತ್ತದೆ.

ಹೋಳಿ ಹಬ್ಬದ ಹಾಡು

೧. ಮೈನಾ ಪಾಗಳರೊ ಬಾಲಮಡಾ ಥಾರಿ ಹೋಳಿ ಆವರೆ
ಹೋಳಿ ಆವರೆ ಘರ ಕಿ ಘೋಳು ಆವರೆ ||ಮೈನಾ ಪಾಗಳರೊ ||
ಹಸಲ ಘಡಾವಣವಾಳೊ ಮಾರವಾಡ ಮೆ ಡೋಲೋರೆ
ಮೊಲಚುಕಾವಣ ವಾಳೊ ಥಳಿಯಾ ಲುಟುರೆ ||ಮೈನಾ ಪಾಗಳರೊ ||
ಬಡೋಡಿ ಕಹರ ಮನ ಕೇವಟ ಘಡಾಯಿ ದೊ
ಭೋಟಿ ತೊ ಕಹರ ಮ್ಹಾರೊ ಜೀವ ಓಳೊರೆ ||ಮೈನಾ ಪಾಗಳರೊ ||

[ಇಬ್ಬರು ಹೆಂಡರಲ್ಲಿ ಸಣ್ಣವಳು ಗಂಡನಿಗೆ ಹೇಳುತ್ತಾಳೆ ಹೋಳಿ ಹಬ್ಬ ಬಂದಿದೆ ನನಗೆ ಕೊರಳಲ್ಲಿ ಹಾಕಲು ಬೆಳ್ಳಿಯ ಕಡಗ ಹಸಲಿ ಮಾಡಿಸು ಮಾರವಾಡ ದೇಶದಲ್ಲಿ ನಿನ್ನ ಜೊತೆಗೆ ಮೆರೆಯಬೇಕಾಗಿದೆ.

ಹಿರಿಯ ಹೆಂಡತಿ ನನಗೆ ಬಂಗಾರದ ಸರ ಕೇವಟ ಮಾಡಿಸಿಕೊಡು ಎಂದಾಗ ಸಣ್ಣವಳು ಹೊಟ್ಟೆಕಿಚ್ಚು ಪಡುತ್ತಾಳೆ.]

೨. ಚಾಂದ ಛುಪ ಜಾ ಲಾಲ ಬದಳಿಯಾಮ ರೆ ಚಾಂದ ಛುಪ ಜಾ
ಬದಳಿಯಾ ಮ ರೆ ಬದಳಿಯಾ ಮ ರೆ ಚಾಂದ ಛುಪಜಾ
ಹುರಿ ಯೋ ಚಾಂದ ಛುಪ ಜಾ ||ಬದಳಿಯಾ||

ಉಪ ತಮ ಛುಪ ತಮ ದಾವಣ ಹೇಟಿ ಆಯೋ
ಸೌಡ ಭಿಛಾವೊ ಸುವೋ ಚುಂದಡಮಳಿರೆ ಚಾಂದ ಛುಪಜಾ
ಹುರಿಯೋ ಚಾಂದ ಛುಪ ಜಾ ||ಬದಳಿಯಾ ||

[ಚಂದ್ರ ಆಕಾಶದ ಮೋಡಗಳಲ್ಲಿ ಮರಿಯಾದ ಹಾಗೆ ನೀನು ಯಾರಿಗೂ ಗೊತ್ತಿಲ್ಲದ ಹಾಗೆ ಬಾ ನಾನು ನನ್ನ ಸೆರಗಿನಲ್ಲಿ ಮುಚ್ಚುತ್ತೇನೆ.]

೩. ನಂದ ಕಿ ಚೂಡಿ ಚಮಕ ರಹಾ ಜೋಬನಾ
ಫುಟಗಯಿ ಚೂಡಿ ಬಿಖರ ಗಯಾ ಜೋಬನಾ ... ನಂದ ಕಿ ಚುಡಿ
ಸ್ಯೆಯ್ಯಾ ತುರ್ಝು ಹಸಲಿ ಘಡಾಯಿ ದೊ ಜೋಬನಾ
ಸ್ಯೆಯ್ಯಾ ತುರ್ಝು ಹಸಲಿ ಘಡಾಯಿ ದೊ ಜೋಬನಾ... ನಂದ ಕಿ ಚುಡಿ
ಸ್ಯೆಯ್ಯಾ ತುರ್ಝು ಕೇವಟಾ ಘಡಾಯಿ ದೊ ಜೋಬನಾ
ಸ್ಯೆಯ್ಯಾ ತುರ್ಝು ಕೇವಟಾ ಘಡಾಯಿ ದೊ ಜೋಬನಾ... ನಂದ ಕಿ ಚುಡಿ
ಸ್ಯೆಯ್ಯಾ ತುರ್ಝು ಬಿಂದಲಿ ಘಡಾಯಿ ದೊ ಜೋಬನಾ
ಸ್ಯೆಯ್ಯಾ ತುರ್ಝು ಬಿಂದಲಿ ಘಡಾಯಿ ದೋ ಜೋಬನಾ... ನಂದ ಕಿ ಚುಡಿ

[ಕೈಯಲ್ಲಿ ತೊಟ್ಟಿರುವ ಬಳೆಗಳು ಆಕರ್ಷಣೀಯವಾಗಿದ್ದು ಅವು ಒಡೆದಾವು ಹುಶಾರ ನಿನಗೆ ಕೊರಳಿನ ಕಡಗ ಹಸಲಿ, ಬಂಗಾರ ಸರ, ಬಿಂದಲಿ ಮಾಡಿಸಿ ಕೊಡತಿನಿ]

೪. ಸರಕಿ ಪರಲಿ ರೊಟಿ ಮೇರಿ ಲೆಯ ಗಯ ರೆ ಸರಕಿ ಪರಲಿ
ಸರಕಿ ಪರಲಿ ರೊಟಿ ಮೇರಿ ಲೆಯ ಗಯರೆ ಸರಕಿ ಪರಲಿ...
ಉಡುರೆ ಸುಹುರೆ ಉನಕಿ ಗಾಲಾಪರ ಬೈಸೊ ||೨||
ಗಾಲಾ ಕೊ ರಸ ಲೆಯಿಗಯರೆ ಸರಕಿ ಪರಲಿ... ಸರಕಿ ಪರಲಿ ರೊಟಿ...
ಉಡುರೆ ಸುಹುರೆ ಉನಕಿ ಜಾಂಗಾಪರ ಬೈಸೊ ||೨||
ಜಾಂಗಾ ಕೊ ರಸ ಲೆಯಿಗಯರೆ ಸರಕಿ ಪರಲಿ... ಸರಕಿ ಪರಲಿ ರೊಟಿ...

[ನನ್ನ ಮನಸ್ಸು ನೀನು ಗೆದ್ದಿರುವಿ ನನ್ನ ಗಲ್ಲ ಮತ್ತು ಅಂಗಾಂಗಳ ಸವಿಯನ್ನು ಪಡೆದುಕೊಳ್ಳು ಎಂದು ಪ್ರೇಮಿ ಹೇಳುತ್ತಾಳೆ.]

೫. ಶ್ರಿಯಾ ರಾಮಣ ಲಚ್ಛಮಣ ದೋಯ ಭಾಯಿರೆ ಶ್ರೀರಾಮಣ
ಶ್ರಿಯಾ ರಾಮಣ ಲಚ್ಛಮಣ ದೋಯ ಭಾಯಿರೆ ಶ್ರೀರಾಮಣ... ಶ್ರಿಯಾ ರಾಮಣ
ರಾಮರೆ ಲಚ್ಛಮಣ ದೋನೊ ರೆ ಭಾಯಿ
ರಾಮರೆ ಲಚ್ಛಮಣ ದೋನೊ ರೆ ಭಾಯಿ
ಬಾಥು ಸೆ ಬಾಥ ಮಿಲಿ ರೆ ಜೋಡಿ ರೆ ಶ್ರಿಯಾ ರಾಮಣ... ಶ್ರಿಯಾ ರಾಮಣ
ಭುಜರ ಪಕಡಕರ ಮಿಲೆಂಗೆ ದೊ ನೊ ಭಾಯಿ
ಭುಜರ ಪಕಡಕರ ಮಿಲೆಂಗೆ ದೋನೊ ಭಾಯಿ

ಬಾಥು ಸೆ ಬಾಥ ಮಿಲಿ ರೆ ಜೋಡಿರೆ ಶ್ರಿಯಾ ರಾಮಣ... ಶ್ರಿಯಾ ರಾಮಣ

[ಶ್ರೀರಾಮ ಮತ್ತು ಲಕ್ಷ್ಮಣ ಇಬ್ಬರೂ ಸಹೋದರರು ಹೆಗಲಿಗೆ ಹೆಗಲು ಹಚ್ಚಿ ಪ್ರೀತಿಯಿಂದ ಕೆಲಸವನ್ನು ಮಾಡುತ್ತಾರೆ.]

೬. ಏ ಗುಲಬದನ ಮೆ ಪಹನಿ ಹ ಜೋಡಾ
ಗುಲಾಬಿ ತನಮೆ ಗುಲಾಬಿ ಅಂಗಿಯಾ...
ಜರದ ಚೋಟಿ ಗೋಹಿಕೆ ಪ್ರಿಯಾ
ಬಾಹರ ಪರಿಯಾ ಓ ದೋನೋ ಜೋಬನ
ಚಡಿತಿ ಲೈಲಾ ಸಾರಂಗ ಗೋಲಾ
ಗುಲಾಬಿ ತನಮೆ ಗುಲಾಬಿ ಅಂಗಿಯಾ...
ಹೊಟಪರ ಮಿಸಿ ಆಪನೆ ತಾಬೆ
ರಾಜಾ ಕೆ ಬಾತೋಮೆ ವಕ್ತ ಕಿ ರಾ ಹೆ
ಖಡಿತಿ ಲೈಲಾ ಸಾರಂಗ ಗೋಲಾ
ಗುಲಾಬಿ ತನಮೆ ಗುಲಾಬ ಅಂಗಿಯಾ...
ಬಿಛಾಯಿ ಛೇಜಾ ಫುಲೊಂಕೆ ಬಿಸ್ತರ
ಚಲೊ ಪಿಯಾಕಿ ಪಲಂಗ ಕೆ ಉಪರ
ಜಂಹಾ ಭಿ ಸೋನಾ ಓ ತೇರಾ ಮೇರಾ
ಗುಲಾಬಿ ತನಮೆ ಗುಲಾಬಿ ಅಂಗಿಯಾ...

[ಗುಲಾಬಿ ಹೂವನ್ನು ಕೈಯಲ್ಲಿ ಹಿಡಿದು ಪ್ರೇಮಿಗೆ ಹೇಳುತ್ತಾಳೆ ಜರದ ಟೋಪಿ ಹಾಕಿದ ನಿನ್ನ ಜೊತೆ ಲೈಲಾಳಂತೆ ಹೊರಗೆ ಬರುತ್ತೇನೆ. ನೀನು ಮೀಸೆ ತಿರುವುತ್ತಾ ಲೈಲಾಳ ಜೊತೆಗೆ ಬಾ ಪಲಂಗದ ಮೇಲೆ ಹೂವಿನ ಹಾಸಿಗೆ ಅಲ್ಲಿ ನನ್ನ ನಿನ್ನ ಪ್ರೇಮವಾಸ]

೭. ತಾ ತಾ ಪಾನಿ ಧರತ ಪೇಲಾ ತಾ ತಾ ಪಾನಿ ಧರೆತ ಪೇಲಾ
ಅರೆ ಗಿ ಜಾಪುರಿ ಖಾಲೋ ನಾಲೋ ದೇವರಿಯೋ
ಪಲಂಗಯಾಚಾ ಕರಿಯೋ, ಥಾಳೋ ನಾನೋ ದೇವರಿಯೋ
ಪಲಂಗಯಾಜಾ ಕರಿಯೋ
ಕಚಪಚ ಪಾನಿ ಕೆ ಬಿಡೆ ಬನಾಯೆ
ಕಚಪಚ ಪಾನಿ ಕೆ ಬಿಡೆ ಬನಾಯೆ
ಅರೆ ಗಿಜಾಪುರಿ ಖಾಲೋ ನಾಲೋ ದೇವರಿಯೋ
ಪಲಂಗಯಾಜಾ ಕರಿಯೋ, ಥಾಳೋ ನಾನೋ ದೇವರಿಯೋ ಪಲಂಗಯಾಬಾ..

[ನಿನಗೆ ನಾನು ಬಿಸಿ ನೀರು ಕೊಡುತ್ತೇನೆ. ಎಲೆಯ ತಾಂಬೂಲ ಕೊಡುತ್ತೇನೆ ಬಾ]

೮. ಶೋಭ್ಯಾ ಘಟಿ ರೆ ಮಾರ ಶೋಭ್ಯಾ ಘಟಿ
ಮ್ಹಾರ ಭಾಯಿನ ತಾಗಡಿ ಮೆ ಸೋನೇರಿ ತಾರ

ಶೋಭಾ ಘಟಿ ರೆ ಮ್ಹಾರ ಶೋಭಾ ಘಟಿ ರೆ
ಥಾರೊ ಬಾಯನ ತಾಗಡಿ ಮ ಕುತರೆಚಿ ಕಾಂಚ
ಶೋಭಾ ಘಟಿ ರೆ....
ಶೋಭ್ಯಾ ಘಟಿ ರೆ ಮ್ಹಾರ ಶೋಭಾ ಘಟಿ
ಮ್ಹಾರ ಭಾಯಿನ ಗಲಾ ಮ ಸೋನೆ ಕಾ ಹಾರ
ಶೋಭಾ ಘಟಿ ರೆ ಮ್ಹಾರ ಶೋಭಾ ಘಟಿ
ಥಾರೋ ಭಾಯನ ಗಳಾ ಮೆ ಕುತರೆಚ ಕಾಂಚ
ಶೋಭಾ ಘಟಿ ರೆ.....

[ನನ್ನ ಸಹೋದರನ ಉಡದಾರದಲ್ಲಿ ಬಂಗಾರದ ಚೈನು ಎಂದು ಒಬ್ಬಳು ಹೇಳಿದರೆ ನಿನ್ನ ಸಹೊದರನ ಉಡದಾರದಲ್ಲಿ ನಾಯಿಯ ಕರಳು ಎಂದು ಹೇಳುತ್ತಾಳೆ. ಅದಕ್ಕೆ ಉತ್ತರವಾಗಿ ನನ್ನ ಸಹೋದರನ ಕೊರಳಲ್ಲಿ ಬಂಗಾರದ ಚೈನು ನಿನ್ನ ಸಹೋದರನ ಕೊರಳಲ್ಲಿ ನಾಯಿಯ ಕರಳು ಎಂದು ಹೇಳುತ್ತಾಳೆ.]

೯. ಇನ್ ದೊಯ ಮಾಲಿ ಏಕ ಮುಝ್ಯುರೆ ದೇ ದೇರೆ
ಇನ್ ದೊಯ ಮಾಲಿ ಏಕ ಮುಝ್ಯು ರೆ ದೇ ದೇರೆ....
ಮುಝ್ಯು ರೇ ದೇ ದೇರೆ ತುಝ್ಯು ರೆ ಲೇ ಲೇ ರೇ
ಇನ್ ದೋಯ ಮಾಲಿ....

[ಈ ಇಬ್ಬರಲ್ಲಿ ನನಗೆ ಒಬ್ಬಳನ್ನು ಕೊಡು ಇಲ್ಲವೆ ನೀನಾದರೂ ತೆಗೆದುಕೊ ಎಂದು ಗೆಳೆಯನಿಗೆ ಹೇಳುತ್ತಾನೆ.]

೧೦. ಯೇ ವಲ್ಯಾ ವಲ್ಯಾ ದುಧಣೆ ತಳಾವಿ ಢೋಲಾ ಢೋಲ
ಏ ಢೋಲ ಉಠಾ ಮಾರವಾಡ ಲೇ ಲೆ ತೊ ಗಾರನಿ ಗೋತೊ
ಖಾಯ ಮಾರೋ ಸಿಂದಡೊ
ಓ ಹೋ ಜಲ್ಹಾಣಿ ಜೋಗಣ ಖಾಯ ಮಾರೋ ಸಿಂದಡೋ....

[ಮಾರವಾಡದ ಕೆರೆಯು ಹಾಲಿನಿಂದ ತುಂಬಿ ತುಳುಕುತ್ತಿದೆ ನೀನು ಸನ್ಯಾಸಿಯ ಹಾಗೆ ಏಕೆ ಅಲೆಯುತ್ತಾ ಇರುತ್ತಿ]

೧೧. ದೋ ಹಿತ ಕಾ ಡಂಕಾ ಯಾಲಮನೆ
ಬಜವಾದಿಯಾ ಕಮಲಿ ವಾಲೊನೆ.... ದೋ ಹಿತ ಕಾ
ಏ ಕಾಂದೆ ಕಮಲಿಯಾ ಹಾಥ ಮೆ ಲೋಟಾ
ವಹಿ ಖುದಾ ಕೆ ಕಿಸ್ಮತ ಸೆ ಶರಮಾ ದಿಯಾ
ಕಮಲಿ ವಾಲೋನೆ ದೋಹಿತ ಡಾಂಕ
ದಿನ ದಿಯೆ ಯರಮಾನ ದಿಯೆ
ಪಢಣ ಕೆ ಲಿಯೆ ಕುರಾನ ದಿಯೆ

ಶಬು ಶಾಲ ದುಶಾಲೆವಾಲೊ ಕೊ ಶರಮಾದಿಯಾ

ಕಮಲಿವಾಲೊ ಸಿ..... ದೋಹಿತ ಕಾ ಡಾಕಾ.....

[ಕೈಯಲ್ಲಿ ಲೋಟ ಹಿಡಿದು ದೇವರ ಭಕ್ತಿ ಮಾಡುತ್ತ ಅಲೆದಾಡಿದರೆ ದೈವ ತೆರೆಯುವುದಿಲ್ಲ. ಕುರಾನ ಪಠನ ಮಾಡಲಿಕ್ಕೆ ಕೊಟ್ಟರೆ ಇಟ್ಟನಂತೆ ಇದನ್ನು ಸಾರಿ ಸಾರಿ ಹೇಳುತ್ತಾರೆ.]

೧೨. ಲಾಗಾ ಸಾವನ ಮಹಿನೆ ಕಾ

ಗೋಡ್ಡಾ ಛಿಟಕ್ಯಾ ಗಾರಾ

ತೇರಿ ಮೇರಿ ತೊ ನಾಹಿ ಬಣಂಗಿ

ಪಲಂಗ ಬಿಛಾಲೆ ನಾರಾ....

[ಚಳಿಗಾಲ ಶುರುವಾಗಿದೆ ನಿನ್ನ ಮೊಣಕಾಲು ನೋವಾಗಿದೆ. ನನ್ನ ನಿನ್ನ ಸಹವಾಸ ಸರಿ ಆಗುವುದಿಲ್ಲ. ಬೇರೆ ಹಾಸಿಗೆ ಹಾಸಿ ಮಲಗಿಕೊ.]

ಮದುವೆ ಹಾಡುಗಳು

೧. ಏ ಬನೆ ಬನೆ ಯಾ ಬಲೋರೇ ಲಡಲೋಯಾ

ಬಲೋಯಾ ಬಲೋ ರೆ ಮೋರೆ ಸಂಯಾ

ಆರೆ ಮ್ಹಾರೆ ರಂಗೇ ಪಯರೆ ಬನಡೋಯಾ... ಬಲೋಯಾ ಬಲೋರೋ...

ಏ ಉದಿಯಾ ಸಾರ ರ ಖೋರೆ ಸಚ ಮೋತಿಯಾ

ಬಲೋಯಾ ಬಲೋ ರೆ ಮೊರೆ ಸಂಯಾ... ಏ ಬನೆ ಬನೆ ಯಾ....

ಬನೇಕಾ ತೊ ಸೇಲಾ ಗರದ ಕರ ಲಾಯಿ

ಬನಾ ಮುಸಕಿ ಖೋಲೊ ಲಡಿಕಾ ದಿಲ್ ಖೋಲೋ... ಏ ಬನೆ ಬನೆಯಾ...

ಬನೆ ಕಿ ತೊ ಹಲದಿ ರುಮಾಲವಸೆ ಝುಡತಿ

ಬನಾ ಮುಸ ಕಿ ಬೋಲೊ ಲಡಿಕಾ ದಿಲ್ ಖೋಲೋ... ಏ ಬನೆ ಬನೆಯಾ...

[ಮದುಮಗನಿಗೆ ಅರಿಷಿಣ ನೀರು ಸ್ನಾನ ಮಾಡಿಸಿ ಸಿಂಗರಿಸಿ ನಿನ್ನ ಹುಡುಗಿ ನಿನಗೆ ನೋಡಿದ ಕೂಡಲೇ ಮೆಚ್ಚಬೇಕೆಂದು ಮಹಿಳೆಯರು ಹೇಳುತ್ತಾರೆ.]

೨. ಧಡಮಸ ಧಡಮಸ ಗಾಡಿ ಜಾವೋ

ಡೋ ಡೋ ಜವಾಣ ಕೋ ಡೋ ಡೋ ಜವಾಣ ಕೋ... ಧಡಮಸ ಧಡಮಸ...

ಈಸ ಗಾಡಿಮೆ ಕೋಣ ಕೋಣ ಜಾಯೆ

ರೇಣುಕಾ ಜಗ್ಗು ಜಾಯೆ ಡೋ ಡೋ ಜವಾಣ ಕೋ... ಧಡಮಸ ಧಡಮಸ...

ಈಸ ಗಾಡಿಮೆ ಕೋಣ ಕೋಣ ಜಾಯೆ

ಲಚ್ಛಿ ಸುಡೇಶ ಜಾಯೆ ಡೋ ಡೋ ಜವಾಣ ಕೋ... ಧಡಮಸ ಧಡಮಸ...

ಈಸ ಗಾಡಿಮೆ ಕೋಣ ಕೋಣ ಜಾಯೆ

ಭಾವನಾ ಮಹೇಶ ಜಾಯೆ ಡೋ ಡೋ ಜವಾಣ ಕೋ... ಧಡಮಸ ಧಡಮಸ...

ಈಸ ಗಾಡಿಮೆ ಕೋಣ ಕೋಣ ಜಾಯೆ

ಸಂಜ್ಯಾ ನೀಶಾ ಜಾಯೆ ಡೋ ಡೋ ಜವಾಣ ಕೋ... ಧಡಮಸ ಧಡಮಸ...

[ನಿಧಾನವಾಗಿ ಗಾಡಿ ಸಾಗಿಸು ಈ ಗಾಡಿಯಲ್ಲಿ ನೀನು ಮತ್ತು ನಿನ್ನ ಹೆಂಡತಿ ಜೊತೆಯಲ್ಲಿ ಪ್ರಯಾಣ ಮಾಡು.]

೩. ಮಯಾ ಪ್ಯಾರಿ ಬನೆಕಾ ಬನಡಾ ಹೈ ಬಾಗಮೆ

ಮಯಾ ಪ್ಯಾರಿ ಬನೆಕಾ ಬನಡಾ ಹೈ ಬಾಗಮೆ

ಹಾತು ಮೆ ಲೇಲಿ ಥಿ ಮೇಹಂದಿ ಕಾ ಪುಡಾ

ಮೈ ತೊ ಗೌಳನ ಬನಕರ ಜಾವುಂಗಿ... ಮಯಾ ಪ್ಯಾರಿ ಬನೆಕಾ...

ಹಾತು ಮೆ ಲೇಲಿ ಥಿ ಫುಲೌಂಕಾ ಗಜರಾ

ಮೈ ತೊ ಮಾಲನ ಬನಕರ ಜಾವುಂಗಿ... ಮಯಾ ಪ್ಯಾರಿ ಬನೆಕಾ...

ಹಾತು ಮೆ ಲೇಲಿ ಥಿ ಮಿಸಿಯಾ ಕಾ ಪುಡಿ

ಮೈ ತೊ ದುಲ್ಹನ ಬನಕರ ಜಾವುಂಗಿ... ಮಯಾ ಪ್ಯಾರಿ ಬನೆಕಾ...

[ನನ್ನ ಮದುಮಗ ಶೃಂಗಾರ ಆಗಿ ವನದಲ್ಲಿ ಬಂದಿದ್ದಾನೆ. ನಾನು ಕೈಗೆ ಮದರಂಗಿ ಹಚ್ಚಿ ಶೃಂಗಾರ ಆಗಿ ಹೋಗುತ್ತೇನೆ. ಕೈಯಲ್ಲಿ ಮಿಶ್ರ ಪುಡಿ ಹಿಡಿದು ಮದುಮಗಳಾಗಿ ಹೋಗುತ್ತೇನೆ.]

೪. ಚಾಲಣಿ ಕೆ ಮಂಡವೆ ನೀಚೆ ಬನ್ನಾ ನಂಜರ ಲಾಯಾ ಹೊ

ಚಾಲಣಿ ಕೆ ಮಂಡವೆ ನೀಚೆ ಬನ್ನಾ ನಂಜರ ಲಾಯಾಹೊ... ಜಾಲಣಿ ಕೆ...

ಬನ್ನಾ ನಂಜರ ಲಾಯಾ ಛೋಟಿ ಸಾತಿ ರಂಗ ಲಾಯ

ಛೋಟಿ ಬಾಲಿ ರಂಗ ಲಾಯಾ ಹೋ... ಜಾಲಣಿ ಕೆ ಮಂಡವೆ...

ಸಾಸ ನೆ ಭೇಜಾ ಜರಕಾ ಚೇಲಾ ಪೇಚಿ ಪಲ್ಲಾ ಖಾಯಾ ಹೋ

ಫೇಚಿ ಪಲ್ಲಾ ಖಾಯಾ ಹೊ ಛೋಟಿ ಸಾಲಿ ರಂಗ ಲಾಯಾ ಹೊ

ಚೋಟಿ ಬಾಲಿ ರಂಗ ಲಾಯಾ ಹೋ... ಚಾಲಣಿ ಕೆ ಮಂಡವೆ...

[ಮದುವೆಯ ಹಂದರಲ್ಲಿ ಜರದ ಪಟಕಾ ಸುತ್ತಿ ಮದಮಗ ಬಂದರೆ ಆಭರಣಗಳನ್ನು ಧರಿಸಿ ಮದುಮಗಳ ಮದುವೆ ಮಂಟಪದಲ್ಲಿ ಬರುತ್ತಾಳೆ.]

೫. ಮಂಡವೆ ಕೆ ನೀಚೆ ದುಲ್ಹಾ ಬೈಠಾ

ದುಲ್ಹನ ಕಿ ಆಸ ಕರ ರಹಾ

ಮಂಡವೆ ಕೆ ನೀಚೆ ದುಲ್ಹನ ಬೈಠಿ

ದುಲ್ಹೆಕಿ ಆಸ ಕರ ರಹಿ

[ಮದುವೆಯ ಹಂದರಲ್ಲಿ ಮದುಮಗಳು ಬರುವುದನ್ನು ಕಾಯುತ್ತ ಮದುಮಗ ಕುಳಿತರೆ, ಮದಮಗ ಬರುವುದನ್ನು ಕಾಯುತ್ತ ಮದುಮಗಳು ಕುಳಿತ್ತಿದ್ದಾಳೆ.]

೬. ಮೈ ದೇಖು ಪೀಲಾ ಪೀಲಾ ಜಂಗಲೊ ಮೆ ಹರಾ ಹರಾ
ಶಾದಿ ಕಿ ಬರಾತ ಲೇ ಕೆ ಆಯಾ ಹೈ ಲಾಲ ಮೇರಾ
ಮೈ ದೇಖು ಪೀಲಾ ಪೀಲಾ ಜಂಗಲೊ ಮೆ ಹರಾ ಹರಾ
ಶಾದಿ ಕೆ ಮಂಡವೆ ಲೇ ಕೆ ಆಯಾ ಲಾಲ ಮೇರಾ...
ಮೈ ದೇಖು ಪೀಲಾ ಪೀಲಾ ಜಂಗಲೊ ಮೆ ಹರಾ ಹರಾ
ಶಾದಿ ಕಿ ಮಹಂದಿ ಲೇ ಕೆ ಆಯಾ ಲಾಲ ಮೇರಾ...
ಮೈ ದೇಖು ಪೀಲಾ ಪೀಲಾ ಜಂಗಲೊ ಮೆ ಹರಾ ಹರಾ
ಶಾದಿಕೆ ಕಪಡೆ ಲೇಕೆ ಆಯಾ ಲಾಲ ಮೇರಾ...
ಮೈ ದೇಖು ಪೀಲಾ ಪೀಲಾ ಜಂಗಲೊ ಮೆ ಹರಾ ಹರಾ
ಶಾದಿ ಕಾ ಭೋಜಣ ಲೇಕೆ ಆಯಾ ಲಾಲ ಮೇರಾ...

[ನಾನು ನೋಡುವುದೆಲ್ಲ ಹಳದಿ, ಅಡವಿಯಲ್ಲಿ ಕಾಣುವುದೆಲ್ಲ ಹಸಿರು, ಮೆರವಣಿಗೆಯಲ್ಲಿ ಬಂದಿದ್ದಾನೆ ನನ್ನ ಮಗ.]

ಸಾಮಾಜಿಕ ಗೀತೆಗಳು

೧. ಸಜನಾ ಹಮಸೆ ಕಂಗವಾ ಲಾದೇ
ಉಲಝೆ ಹಮಾರೇ ಬಾಲಾ ರೇ, ಸಂಯಾ ಉಲಝೆ ಹಮಾರೆ ಬಾಲಾರೇ
ಗಾಡಿ ಹೊ ತೇರಿ ರಂಗ ರಂಗೇಲಿ
ಪೈಯಾ ಲಾಲ ಗುಲಾಲ ರೇ
ಹಾಕ ನೆ ವಾಲೆ ಛಾಲ ಛಬೀಲೆ
ಬೈಠ ನೆ ವಾಲೆ ಜೋಡಿದಾರರೇ... ಸಜನಾ ಹಮಸೆ...

[ತನ್ನ ಪ್ರೇಮಿಗೆ ಹೇಳುತ್ತಾಳೆ, ನನ್ನ ಕೂದಲುಗಳನ್ನು ಬಾಚಣಿಕೆಯಿಂದ ಸರಿಮಾಡಿ ನಾನು ನಿನ್ನ ಗಾಡಿಯಲ್ಲಿ ಕುಳಿತುಕೊಳ್ಳುವೆ, ಇಬ್ಬರೂ ಜೋಡಿಯಿಂದ ಹೋಗೋಣ.]

೨. ನಾ ಪಹನು ತೇರಾ ಚಾಂದಿ ಯಾ ಸೋನಾ
ನಾ ಪಹನು ತೇರಾ ಗಹನಾ ರೆ
ಛೋಟಿ ಜೇಠಾಣಿ ನೆ ತಾನಾ ಮಾರಾ
ಏ ಲೇ ತೇರಾ ಗಹನಾ ರೇ.... ಸಜನಾ ಹಮಸೆ...

[ಹಿರಿಯ ಹೆಂಡತಿಗೆ ಬಂಗಾರದ ಆಭರಣ ಕೊಡುತ್ತಾನೆ. ನನಗೆ ನಿನ್ನ ಆಭರಣಗಳು ಬೇಕಾಗಿಲ್ಲ ನಿನ್ನ ಸಣ್ಣ ಹೆಂಡತಿ ನನಗೆ ಹಿಯಾಳಿಸಿದ್ದಾಳೆ ನಿನ್ನ ಆಭರಣ ತೆಗೆದುಕೊ.]

೩. ಕಂವಾರಿ ಹೋತಿ ತೊ ರಾಜಾ ಬರ ಮಿಲತಾಜಿ
ಏತೊಲಗಿ ಗಯೊ ಪರನಾರ ದಾಗ
ದಾಗ ಲಗಿಗೆಯೋ ರೆ ಹರಿಯಾಲೀಲಜಿ...

ಭಾಯಿ ಕಾ ಲಡಕಾ ಲೇಲೆ ಗೋದ್ಯಾಮ ಜಿ
ಏ ತೊ ಲಗಿ ಗಯೊ ಪರನಾರ ದಾಗ
ದಾಗ ಲಗಿಗೆಯೋ ರೆ ಹರಿಯಾಲೀಲಜಿ
ಕಂವಾರಿ ಹೋತಿ ತೊ ರಾಜಾ ದೇವಳ ಪುಜತಿ ಥಿ
ಏತೊಲಗಿ ಗಯೊ ಪರನಾರ ದಾಗ
ದಾಗ ಲಗಿಗೆಯೊ ರೇ ಹರಿಯಾಲೀಲಜಿ...
ಏ ತೊ ಫುಲ ಬಿನಂ ಝೂಲ ನಾಗರ ಬೇಲಜಿ
ಏ ತೊ ಲಗಿ ಗಯೊ ಪರನಾರ ದಾಗ
ದಾಗ ಲಗಿಗಯೊ ರೇ ಹರಿಯಾಲೀಲಜಿ

[ಒಬ್ಬ ಯುವತಿ ಹೇಳುತ್ತಾಳೆ, ನಾನು ಹರೆಯದವಳಾಗಿದ್ದರೆ ನಿನಗೆ ಭೇಟಿ ಆಗುತ್ತಿದ್ದೆ. ಆದರೆ, ನನ್ನ ಮೇಲೆ ಕಲಂಕ ಇದೆ ನಾನು ನಿನಗೆ ಹೇಗೆ ಭೇಟಿಯಾಗಲಿ.]

೪. ಠಾಕೂರ ಭಲೇ ಬಿರಾಜೋ ಜಿ
ಠಾಕೂರ ಭಲೇ ಬಿರಾಜೋ ಜಿ...
ಬಂಗಾಲಿ ಬೇಟಿ ಪ್ರೇಮ ಸುಂದರ
ಉನಕಿ ಲಂಬ ಚೋಟಿ
ಠಾಕೂರ ಭಲೆ ಬಿರಾಜೋ ಜಿ...
ದಾಲ ಪಕಾಯಿ ಭಾತ ಪಕಾಯಿ
ಬಯಂಗಣ ತರಕಾರಿ
ಠಾಕೂರ ಭಲೇ ಬಿರಾಜೋ ಜಿ...

[ಸುಂದರ ಉದ್ದನೆಯ ಕೂದಲವುಳ್ಳ ಬಂಗಾಲಿ ಮಗಳು ಅನ್ನ, ಸಾರು, ಪಲ್ಯೆ ಮಾಡಿದ್ದಾಳೆ, ಠಾಕೂರ ನೀನು ಬಾ ಎಂದು ದೇವರಿಗೆ ಕರೆಯುತ್ತಾಳೆ.]

೫. ಘರ ಘರ ಕೇಳಾ ಘರ ಘರ ನಾರಲ
ಘರ ಘರ ಠಾಕೂರವಾಡಿ
ಠಾಕೂರ ಭಲೇ ಬಿರಾಜೋ ಜಿ....

[ಮನೆಯಿಂದ ಹಣ್ಣು, ಹಂಪಲ, ತೆಂಗಿನಕಾಯಿ ತಂದಿದ್ದೇನೆ ನೀನು ಅದನ್ನು ಸ್ವೀಕರಿಸು.]

೬. ಅರೇ ರಾಜಾ ಪಿಯಾ ಮೋರಿ ರಂಗದೇ ಚುಂದರಿಯಾ
ಓ ಐಸಿ ರಂಗನಾ ಓ ರಂಗನಾ ಚಿವತೆ
ರಾಜಾ ಪಿಯಾ ಮೋರಿ ರಂಗದೇ....
ದೋಬಿ ಯಾ ನ ಧೋಬಿಯಾ
ಮೋರಿ ಸಾರಿ ಉಮರಿಯಾ
ರಾಜಾ ಪಿಯಾ ಮೋರಿ ರಂಗದೇ...

[ನನ್ನ ಸೀರೆಯ ಮೇಲೆ ಬಣ್ಣ ಹಾಕು, ಅದು ತೊಯ್ದು ಸೀರೆಯಿಂದ ಬಣ್ಣ ಇಳಿಯಬೇಕು.]

೭. ತು ಬಾರಾ ಬರಸ ಕಾ ಪೊಟ್ಟಾ
ಮೇರೆ ಸೆ ಕ್ಯೊಂ ಕರತಾ ಥಟ್ಟಾ
ತೇರಿ ಥಟ್ಟೆ ಮಿಟಾಯಿ ದೆಂಗಿರೆ
ಮತ ಛೇಡೊ ಗಾಲ್ಯಾ ದುಂಗಿ
ಭರನೆ ದೊ ಘಾಗರಿ
ಮೇರೆ ಕುವೆಪೆ ಝುಗಡಾ ಲಾಯಾ
ತಂವ ಕೌನ ಕಿದರ ಸೆ ಆಯಾ
ತೇರಾ ತಾಂಡಾ ಲುಟವಾಯದುಂಗಿ
ತೇರಿ ಬನಸಿ ಛೀನವಾದುಂಗಿ
ಚಕು ಏಠ್ಯಾಸ ನಸ್ಸವಾದುಂಗಿ

[ನೀನು ಹನ್ನೆರಡು ವರುಷದ ಹುಡುಗ ನನ್ನ ಜೊತೆ ಏಕೆ ಚೇಷ್ಟೆ ಮಾಡುತ್ತಿ, ನನಗೆ ಸಿಟ್ಟು ಬಂದರೆ ನಾನು ಬೈಯುತ್ತೇನೆ. ನೀನು ಎಲ್ಲಿಂದ ಬಂದಿ ನಿನ್ನ ಓಣಿ ಲೂಟಿ ಮಾಡಿಸಿ ಇಲ್ಲಿಂದ ಓಡಿಸಿ ಬಿಡುತ್ತೇನೆ.]

೮. ಹಮೇ ಪೋಲಿಸ ಕೆ ನೌಕರ ಬನೇ ಜಾನಿ
ಲಾಂಖೋಸೆ ರಂಡಿಯಾ ಭರೆ ಪಾನಿ
ಕಾಲಿ ಹೋ ಟೋಪಿ ಕಾಲಾ ಹೋ ದಂಡಾ
ತೆರೆ ಟೋಪಿ ಪೆ ನಂಬರ ಲಗಾಯೆ ಜಾನಿ
ಹಮೇ ಪೋಲಿಸ ಕೆ...
ಹಮೇ ಗಾದಿ ಕೆ ನೌಕರ ಬನಾಯೆ
ಬೈರಿ ಗಾದಿ ಪರ ಮೌಜಾ ಕರೋ ಜಾನಿ
ಹಮೇ ಪೋಲಿಸ್ ಕೆ...
ಪಾನೋ ಪಚೀಸ ಕೆ ಬೀಡೊ ಮಂಗಾವೊ
ಪೋಲಿಸವಾಲೊ ಕೊ ಪಹಲೆ ಖಿಲಾವೊ
ಹಮೆ ಪೋಲಿಸಕೆ...

[ನಾವು ಪೋಲಿಸ್ ಆಳಾಗಿ ದುಡಿಯುತ್ತೇವೆ, ಅವರ ಮನೆಯ ನೀರು ತುಂಬಿ ಅವರ ಚಾಕರಿ ಮಾಡುತ್ತೇವೆ.]

೯. ಏ ಮೇರಾ ಭಯ್ಯಾ ಹೇ ಮೇರೆ ತನಕಾ ಭಜಯ್ಯ ಭಯ್ಯಾರೇ
ಜಾವೊ ದಿಲ್ಲಿ ಕಿ ರಾಜ ಕಿ ಕೋರ್ಟ ಕಛೇರಿಯಾರೇ

ಜಾ ಮೇರಾ ಬವನ್ನಾ ತೇರಿ ಮಾ ಕು ಚೋದುರೇ
ಆಯಿ ಜಾ ಬಾರುದಾ ಕೆ ಖೋಲಿಯಾಮ ರೇ... ಜಾವೋ ದಿಲ್ಲಿ ಕಿ...
ಓ ಮೇರಿ ಬಹಣಾ ಮೇರಿ ತನ ಕಿ ಲೀಲಿ ಬಹಣಾ ರೇ
ಹಮಕು ಖಾರಕುಲಾಸ ದೇನಾ ರೇ ಜಾವೋ ದಿಲ್ಲಿ ಕಿ...

[ಬಾ ಸಹೋದರ, ನೀನು ದಿಲ್ಲಿ ರಾಜಧಾನಿಗೆ ಹೋಗು, ನಿನಗೆ ಯಾರಾದರೂ ಏನಾದರು ಹೇಳಿದರೆ ಅವರಿಗೆ ಮದ್ದಿನ ಮನೆಯಲ್ಲಿ ಹಾಕುತ್ತೇನೆ.]

೧೦. ಪಣಜಿ ರೆ ಪಣಜಿ ಏಕ ಬರಿ ಬೋಲರೆ
ಸೌಕನ ಕೊ ಮ್ಹಾರೊ ಹಟಿ ಪಡಿಗಯಿರೆ... ಪಣಜಿ ರೆ ಪಣಜಿ
ಥೋರೊ ಲಾಖಿಂನ ಕೊ ಬೇಪಾರಿ ರೇ
ಮನ ಪಣಜಿ ಕರಗಿಯೋ ರೇ ಮನ
ದುಪಾರೆ ಕಾ ತಾವಡಾ ಮನ ಪಾಣಿ ನ ಫಲಮ ವೋರೇ
ಮ್ಹಾರಿ ಫಾಗರಿ ಘುಟಗಯಿ ರೇ ಮನ ಪಣಜಿ ಕರಗಿಯೋ ರೇ...
ದುಪಾರೆ ಕಾ ತಾವಾಡ ಮನ ಪಾಣಿನ ಫುಲವಾ ವೋರೇ
ಮ್ಹಾರಿ ಪಾವಡಿ ಜಳಿಗಯೋರೇ ಮನ ಪಣಜಿ ಕರಗಿಯೋರೇ...
ಆಂಕಡೌಂಕಾ ಗಾಡಿ ಮಂಗಾಯಿ ದೇ
ಮಕೊಡೌಂಕೊ ಬೈಲ ಮಂಗಾಯಿ ದೇ... ಮನ ಪಣಜ ಕರಗಿಯೋರೇ...
ಪತಳಾ ರೆ ಪತಳಾ ಮಾಂಡಾ ರೇ
ಸಾರಿಗರಿ ಯಾ ರಿ ಭಾಜ್ಜಿ ರೇ ಮನ ಪಣಜಿ ಕರಗಿಯೋ ರೇ
ಜಿಮಣ ತೊ ಜಿಮಣ ಲೇ
ಮನ ಬಾಲಕ ಜೋಡಿರೇ... ಮನ ಪಣಜಿ ಕರಗಿಯೋ ರೇ
ಏ ಮೀಣಾ ಮಾಲಿ ಮೀಣೆ ರೇ
ಮ್ಯೆ ಜಾತ ಕಿ ಚಮಾರಿ ರೇ... ಮನ ಪಣಜಿಗಿ ಕರಿಗಿಯೊ ರೇ...

[ಪ್ರೇಮಿಗೆ ಹೇಳುತ್ತಾನೆ, ನಮ್ಮ ಬಾವಿಯಲ್ಲಿ ನೀರು ಇಲ್ಲ. ನೀನು ನನಗೆ ನೀರು ತಂದು ತಂದು ಕೊಡು, ಬಿಸಿಲು ಬಹಳ ಇದೆ. ನಿನಗೆ ಬೈಲಗಾಡಿ ತರಿಸಿ ಇರುವೆಗಳಿಂದ ಎಳಿಸಿ ಚಪಾತಿ ಪಲ್ಯ ತಿನಿಸುತ್ತೇನೆ. ನಾನು ಮೀಣಾ ಜಾತಿಯ ಸಮಗಾರನಾಗಿದ್ದೇನೆ.]

೧೧. ದೋ ಹಿತ ಕಾ ಡಂಕಾ ಯಾಲಮನೆ
ಬಜವಾ ದಿಯಾ ಕಮಲಿವಾಲೋನೆ
ಏ ಕಾಂಧೆ ಕಮಲಿಯಾ ಹಾಥಮೆ ಲೋಟಾ
ವಹಿ ಖುದಾ ಕೆ ಕಿಸ್ಮತ ಸೆ ಶರಮಾದಿಯಾ ಕಮಲಿ ವಾಲೋಸಿ...
ದಿನ ದಿಯೆ ಅರಮಾನ ದಿಯೆ
ಪಢಣೆ ಕೆ ಲಿಯ್ ಕುರಾನ ದಿಯೆ, ಸಬ ಶಾಲ ದುಶಾಲೆ ವಾಲೋಕೆ ಶರಮಾದಿಯಾ ಕಮಲವಾ

ಉಪರ ಕೆ ಛಾಪೆ ಟುಟಗಯೆ
ಸಾರೆ ಮದರಾಸ ಕಿ ದುನಿಯಾ ಲುಟಗಯಿ ಸಬ ಶಾಲ ದುಶಾಲೆ ವಾಲೊಂಕೊ
ಶರಮಾದಿಯಾ ಕಮಲವಾಲೊನಾ
ಬಿಬಿ ಫಾತಮಾ ಹಸೇನ ಹುಸೇನ
ತೆರೆ ಕಮರಮೆ ರಹಿತಾ ಏಕ ನಗಮ
ಸೆಟ್ಲಮೆಂಟ ಕಾ ಝೆಂಡಾ ಭಾರತ ಮೆ
ಗಡವಾ ದಿಯಾ ಕಮಲಿವಾಲೊನೆ

[ನಿನ್ನ ಮನಸ್ಸಿನ ಇಚ್ಛೆ ಪೂರ್ಣ ಮಾಡಬೇಕಾದರೆ ಕೈಯಲ್ಲಿ ಲೋಟಾ ಹಿಡಿದು ದೇವರನ್ನು ನೆನೆ. ಓದಲು ಕುರಾನ ಕೊಟ್ಟು ಹಸೇನ ಹುಸೇನರಿಗೆ ಸ್ಮರಿಸಿ ಸೆಟ್ಲಮೆಂಟ ನಿಶಾನಿ ಝಂಡಾ ಭಾರತದಲ್ಲಿ ಹಾರಿಸುತ್ತೇನೆ.]

೧೨. ಪಿಯಾ ಪಿಯಾ ರೆ ಪಿಯಾ ತುನೆ ಜುಲಮ ಕಿಯಾ
ಮೋರಿ ಬಾಲಿ ಉಮರಿಯಾ ಬರಬಾದ ಕಿಯಾ
ಮ್ಯೆ ಲಿಖ ಲಿಖ ಭೇಜು ಆಯಿನೆ ಮ
ಸನಿ ಆಯೆಗಾ ಕೋನಸೆ ಮಹಿನೆ ಮ
ಗೋರಿ ಕಾಯಕು ಲಿಖಾತಾ ಆಯಿನ ಮ
ಮ್ಯೆ ತೊ ಆವುಂಗಾ ಮೇ ಕೆ ಮಹಿನೆ ಮ...
ಮ್ಯೆ ಲಿಖ ಲಿಖ ಭೇಜು ಮೋಟರ ಮ
ಸನಿ ಆಯೆಗಾ ಕೋನಸೆ ಥೇಟರ ಮ
ಗೋರಿ ಕಾಯಕು ಲಿಖಾ ತಾ ಮೋಟರ ಮ
ಮ್ಯೆ ತೊ ಆವುಂಗಾ ಸಂಗಮ ಥೇಟರ ಮ...
ಮ್ಯೆ ಲಿಖ ಲಿಖ ಭೇಜು ಕಂಗವೆ ಮ
ಸನಿ ಆಯೆಗಾ ಕೋನಸೆ ಮಂಡವೆ ಮ
ಗೋರಿ ಕಾಯಕಾ ಲಿಖಾ ಥಾ ಕಂಗವೆ ಮ
ಮ್ಯೆ ಆವಂಗಾ ತೋರೆ ಮಂಡವೆ ಮ...

[ನನ್ನ ಯವ್ವನದಲ್ಲಿ ನನಗೆ ಬಹಳ ತೊಂದರೆ ಕೊಟ್ಟ ನೀನು ಯಾವಾಗ ಬರುತ್ತಿ ಅಂತಾ ಕನ್ನಡಿಯಲ್ಲಿ, ಮೋಟಾರದಲ್ಲಿ, ಬಾಚಣಕಿಯಲ್ಲಿ, ಬರೆದು ಕಳಿಸಿ ಅದಕ್ಕೆ ನೀನು ಮೇ ತಿಂಗಳಲ್ಲಿ ಸಂಗಮ ಥೇಟರದಲ್ಲಿ ಕೊನೆಗೆ ಲಗ್ನದ ಮಂಟದಲ್ಲಿ ಬರುತ್ತೇನೆ ಎಂದು ಹೇಳದಿ.]

೧೩. ಧರ ರೇ ಧರ ಕುಂಚ ಪರ ಕುಂಚ ಕಿದರ ಸೆ
ಗಯಾ ಬೆಲಾಲ ಮೇರಾ ದಿವಾಲನ

ಹಂಸೌಸೆ ಉಡಜಾರೆ ಪಖೇರಾ
ಜುಗಲಾ ಅಬ ಬಸೇರಾ ಮೇರಾ ದಿವಾಲನ...
ಛೇ ಮಹಿನೆ ಕಾ ಕರಾರ ಕರಕು
ಜಾತಿ ರೆ ದಖನ ಕೊ ದಿವಾಲನ ಜಾತಿ ರೆ ದಖನ ಕೊ...
ಮರತೆ ಜೀವಿಂಗೆ ಆಯೆ ಮಿಲಿಂಗೆ
ಸಲಾಮ ಹ್ಯೆ ಸಬಕು ಮೇರಾ ದಿವಾಲನ...

[ನನ್ನ ಗಂಡ ಮಲಗಿದ್ದಾನೆ, ನಿದ್ರಾವಸ್ಥೆಯಲ್ಲಿದ್ದಾನೆ ಹೇಗೆ ಎಬ್ಬಿಸಲಿ.]

೧೪. ಅಜಿ ಅಜಿ ಢೋಲಾ ಕಸೆ ಜುಗಾವಂಗಿ
ಅಜಿ ಅಜಿ ಢೋಲಾ ಕಸೆ ಜುಗಾವಂಗಿ...
ಅಜಿ ಅಜಿ ಬಾಬಲ ಕಸೆ ಜುಗಾವಂಗಿ
ಮರಡೊರೆ ಸುತಾರೆ ಭರಿ ನಿಂದಮೆ
ಮ್ಯೆ ಕಯಾ ಜುಗಾವಂಗಿ
ಅಜಿ ಅಜಿ ಸಾಜನ ಕ್ಯೆಸೆ ಜುಗಾವಂಗಿ...

[ಕರಾರು ಮಾಡಿ ತವರು ಮನೆಗೆ ಹೋಗುವಿ, ಆರು ತಿಂಗಳಗಟ್ಟಲೇ ನೀನು ಬರುವುದಿಲ್ಲ. ಹಂಸ ಪಕ್ಷಿಯಂತೆ ಬೇಗನೆ ಹಾರಿ ಬಾ, ನಾನು ನೀನು ಒಂದು ಕಡೆ ನೆಲೆಸೋಣ.]

ಕಾಳಿಕ ದೇವಿ ಕುರಿತು ಪದಗಳು

೧. ಕಾಳಿಕಾ ಕೆ ಭವನೆ ಮೆ ಬಕರೆ ಹೇ ಮಾ
ಬಕರೆ ಹೇ ಮಾರೆ ರೆ, ಬಕರೆ ಹೇ ಮಾರೆ ರೆ ಕಾಳಿ ತೇರೆ ಭವನೆ ಮೆ...
ಕಾಳಿಕಾ ಕೆ ಭವನೆ ಮೆ ಚೌಕೆ ಹೆ ಮಾಂಡೆ
ಚೌಕೆ ಹೆ ಮಾಂಡೆ, ಚೌಕೆ ಹೇ ಮಾಂಡೆರೆ ಕಾಳಿ ತೇರೆ ಭವನೆ ಮೆ...
ಕಾಳಿಕಾ ಕೆ ಭವನೆ ಮೆ ಸಾಕಳ ತೋಡೆ
ಸಾಕಳ ತೋಡೆ ಸಾಕಳ ತೋಡೆ ಕಾಳಿ ತೆರೆ ಭವನೆ ಮೆ...
ಕಾಳಿಕಾ ಕೆ ಭವನೆ ಮೆ ನಾರಳ ಫೋಡೆ
ನಾರಳ ಫೋಡೆ ನಾರಳ ಫೋಡೆರೇ ಕಾಳಿ ತೆರೆ ಭವನೆ ಮೆ...
ಕಾಳಿಕಾ ಕೆ ಭವನೆ ಮೆ ಲಡ್ಡು ತಪಾಸೆ
ಲಡ್ಡು ತಪಾಸೆ ಲಡ್ಡು ತಪಾಸೆ ರೆ... ಕಾಳಿ ತೆರೆ ಭವನೆ ಮೆ...
ಕಾಳಿಕಾ ಕೆ ಭವನೆ ಮೆ ಮಂದಕಿ ಧಾರಾ
ಮಂದಕಿ ಧಾರಾ, ಮಂದಕಿ ಧಾರಾ ರೇ... ಕಾಳಿ ತೇರೆ ಭವನೆ ಮೆ...
ಕಾಳಿಕಾ ಕೆ ಭವನೆ ಮೆ ಚಕ್ಕು ಏ ಚುರಿಯಾ
ಚಕ್ಕುವೆ ಚುರಿಯಾ, ಚಕ್ಕು ಏ ಚುರಿಯಾ ರೇ... ಕಾಳಿ ತೆರೆ ಭವನೆ ಮೆ...

೨. ಅಬ ತೇರಾ ಉಗಮ್ಮಾ ಹೆ ಏ ಬಕರೆ ಆವೆ ತೇರೆ ಝೂಮ ಝಿಣ ಮಾಯಿ
ಅಬ ತೇರಾ ಉಗಮ್ಮಾ ಹೆ ಏ ಸಾಂಕಳ ಆವೆ ತೇರೆ ಢೋಳತೆ ಝಿಣ ಮಾಯಿ
ಅಬ ತೇರಾ ಉಗಮ್ಮಾ ಹೆ ಏ ನಾರಲ ಆವೆ ತೇರೆ ಢೋಳತೆ ಝಿಣ ಮಾಯಿ
ಅಬ ತೇರಾ ಉಗಮ್ಮಾ ಹೆ ಏ ನಿಂಬು ಆವೆ ತೇರೆ ಢೋಳತೆ ಝಿಣ ಮಾಯಿ
ಅಬ ತೇರಾ ಉಗಮ್ಮಾ ಹೆ ಏ ಕಾಳಿ ಆವೆ ತೇರೆ ಢೋಳತೆ ಝಿಣ ಮಾಯಿ

೩. ಜಾಗೊ ರೆ ಜಾಗೊ ಮೇರಿ ಕಲಕತ್ತೆ ಕಿ ಮಾ, ಕಲಕ್ತಿ ಕಿ ಮಾ
ಆಜ ತೊ ಜಾಗೊ ದಿಯೋ ಮೇರಿ ಮಾ...
ಥಂಡೆ ಝೂಲೆ ತೇರೆ ಮೇರಿ ಮಾ
ಏ ಸಾಚೊ ಪರಚೊ ದಿಯೊ ಮೇರಿ ಮಾ
ಏ ಬಚನೊಂಕಿ ಬಾಂಧಿ ಆಯಿ ಮೇರಿ ಮಾ
ಏ ಕವಲೊಂಕಿ ಬಾಂಧಿ ಆಯಿ ಮೇರಿ ಮಾ
ಜಾಗೊ ರೆ ಜಾಗೊ ಮೇರಿ ಪಾವಗಡಕಿ ಮಾತಾ... ಪಾವಗಡಕಿ ಮಾತಾ
ಆಜ ತೊ ಜಾಗೊ ದಿಯೋ ಮೇರಿ ಮಾ...
ಜಾಗೋರೆ ಜಾಗೊ ಮೇರಿ ಕೊಲ್ಲಾಪುರ ಕಿ ಮಾತಾ... ಕೊಲ್ಲಾಪುರ ಕಿ ಮಾತಾ
ಆಜ ತೊ ಜಾಗೊ ದಿಯೋ ಮೇರಿ ಮಾ...
ಜಾಗೊರೆ ಜಾಗೊ ಮೇರಿ ತುಳಜಾಭವಾನಿ ಮಾತಾ... ತುಳಜಾಭವಾನಿ ಮಾತಾ
ಆಜ ತೊ ಜಾಗೊ ದಿಯೋ ಮೇರಿ ಮಾ...
ಜಾಗೊರೆ ಜಾಗೊ ಮೇರಿ ಶಿರಸಿ ಕಿ ಮಾತಾ... ಶಿರಸಿ ಕಿ ಮಾತಾ
ಆಜತೊ ಜಾಗೊ ದಿಯೊ ಮೆರಿ ಮಾ...
ಜಾಗೊರೆ ಜಾಗೊ ಮೇರಿ ಬಳ್ಳಾರಿ ಕಿ ಮಾತಾ... ಬಳ್ಳಾರಿ ಮಾತಾ
ಆಜ ತೊ ಜಾಗೊ ದಿಯೋ ಮೇರಿ ಮಾ...

ಕಂಜರಭಾಟರ ಚರಿತೆಯನ್ನು ಸಾರುವ ಹಿಂದಿ ಕವನ

ಸಿಸೋದಿಯಾ ಆರ್ ಸಿ ಅವರು ೧೯೬೪ರಲ್ಲಿ ಪ್ರಕಟಿಸಿದ *ಭಾರತ ವರ್ಷ ಮೆ ಜಾತಿಪ್ರಥಾ ಕಾ ಪ್ರಾದುರ್ಭಾವ* ಎಂಬೀ ಕೃತಿಯಲ್ಲಿ ಮಧ್ಯ ಪ್ರದೇಶದ ಭೂಪಾಲಿನ ಶ್ರೀ ರಾಮರೂಪ ಭಾನೆರಿಯಾ ಅವರು ರಚಿಸಿದ ಸಾಂಸಿ ಜಾತಿ ಕೀ ಕಹಾನಿ ಉಸಕಿ ಅಪನಿ ಜಬಾನಿ ಎಂಬೀ ಕವನವನ್ನು ಪ್ರಕಟಿಸಿದ್ದಾರೆ. ಕವನ ಇಂತಿದೆ.

ಸಾಂಸಿ ಜಾತಿ ಕಿ ಕಹಾನಿ ಉಸಕಿ ಅಪನಿ ಜುಬಾನಿ
ಸುನೋ ಸುನೋ ಏ ಲೋಗೊ ಮೇರಿ ಅಪನಿ ಜುಬಾನಿ
ಅನೇಕ ಉತಾರ ಚಢಾವೊ ಸೆ ಸುಸಜ್ಜಿತ ಮೆರಿ ಕಹಾನಿ
ಜನ್ಮಸ್ಥಲ ಹೈ ಮೇರಿ, ಧರತಿ ರಾಜಸ್ಥಾನಿ

ಜಂಹಾ ಥೆ ಮೇರೆ ಬೇಟೆ, ರಾಣಾ ಕೆ ವೀರ ಸೇನಾರಿ
ಶುರು ಶುರು ಥಾ ಮೇರಾ ಜೀವನ ವೈಭವಶಾಲಿ
ಫಿರ ಸಮಯ ಕಿ ಚೋಟನೆ ಕಯಿ ಟುಕಡೊಮೆ ಬಾಂಟ ಡಾಲಿ
ಡೋಲತಿ ಫೀರತಿ ಮೆ ವನವನ ಹೋಕರ ಬಡಿ ನಿರಾಲಿ
ಜೋ ಭಿ ಮಿಲಾ ಖಾನೆ ಕೊ ಉಸಸೆ ಹಿ ಭೂಕ ಮಿಟಾ ಡಾಲಿ
ಬಾದ ಇಸಕೆ ಧರತಿ ಮಾಲವಾ ಕಿ
ಬನಗಯಾ ಥಾ ಮೇರಾ ಮಕಾಮ
ಅಬ ಕಡಿಯಾ ಗುಲಖೇಡಿ, ಹುಲಖೇಡಿ, ಹೈ ಮೇರೆ ಅಪನೆ ಗ್ರಾಮ
ರೂಪ ದಲಾ ಸಮಯ ಕಾ ಸುಧಾರವಾಡಿ ಬೇಟೆ ಜನ್ಮಲೆನೆ ಲಗೆ
ಶಿಕ್ಷಾ ದಿಕ್ಷಾ ಲಕರ ಸರಕಾರಿ ಅಫಸರ ಬನನೆ ಲಗೆ
ಸಂಗ ಸಂಗ ಗದ್ದಾರ ಬೇಟೆ ಭ ಮುಝುಸೆ ಜನ್ಮಲೆನೆ ಲಗೆ
ಅಪನೆ ಸ್ವಾರ್ಥ ಮೆ ವೊ ಮೇರಿ ಏಕತಾ ಕೊ ಭಂಗಕರನೆ ಲಗೆ
ಮೇರಿ ಏಕತಾ ಕಾ ಸೀತರಾ ಟೂಟಗಯಾ
ಏಕ ಬೇಟಾ ದುಸರೆ ಕಾ ದುಶಮನ ಬನಗಯಾ
ಏಕ ಗರಿಬೊ ಕಾ ದಲ ಏಕ ಲುಟೆರೋ ಕಾ ಬನಗಯಾ
ಮೇರಾ ಪಂಚಾಯತಿ ರಾಜ ಅಬ ಗುಂಡಾ ರಾಜ ಬನಗಯಾ
ಅಪನೆ ಲುಟೇಕೆ ಬೇಟೊ ಕಾ ಕರತಬ ಮೈ ದೇಖರಹಿಥಿ
ಉನಕೆ ಅತ್ಯಾಚಾರ ಮೆ ಹರೆಕ ಜಿಂದಗಿ ಫಂಸರಹಿಥಿ
ಮೂಲ ಕಾ ದನ ಗುನಾ ವಸೂಲನೆ ಕಿ ರಿತಿ ಭಿ ಪನಪರಹಿಥಿ
ಕಿಸಿಕಿ ಬೇಟಿ ಕಿಸಿಕಿ ಜಮೀನ ಬಿಕನೆ ಪೆ
ಮೈ ಖೂನ ಕೆ ಆಂಸು ರೊ ಕಹಿಥಿ
ಪರಂಪರಾಂವೊ ಕೆ ತೀರಸೆ ಅಜ ಘಾಯಲ ಹುಂ ಮೈ
ಬಿಖರ ಗಯೆ ಘುಂಘರು ಜಸಕೆ ವಹಪಾಯಲ ಹುಂ ಮೈ
ಬದನಾಮಿ ಔರ ಬರಬಾದಿ ಕಾ ಅಬ ಜಲಾಲ ಹುಂ ಮೈ
ಸಚ್ಚೆ ವೀರ ಖತ್ಮ ಹೋಗಯೆ ಮೇರಿ ಬಸತಿವೆ ಅಬ ಕಮಾಲ ಹುಂ ಮೈ
ಆವೊ ಹಮ ಮಿಲಕರ ಕಸಮ ಖಾಯೆ
ಅಬ ನಂಹಿ ಲಡೆಂಗೆ ಹಮ ತುಮ
ಬಹುತ ಹೊ ಚುಕಿ ಹೈ ಲಡಾಯಿಯಾ
ಅಬ ಮಿಲಕರ ರಹೆಂಗೆ ಹಮ ತುಮ
ಪ್ರೇಮಸೆ ದುನಿಯಾ ಕಿ ಕಾನಾಕ

ಅಬ ಪ್ರೇಮ ಏರಾನೆ ಝೋಡೆ ಹಮ ತುಮ
ನಹಿ ಕಿಸಿಸೆ ನಫರತ ಕರೆಂಗೆ
ಸ್ನೇಹ ಪೂರ್ವಕ ಬೋಲೆಂಗೆ ಹಮ ತುಮ

(*ರಾಮರೂಪ ಭಾನೆರಿಯಾ :೧೯೯೪. ೩೪-೫*)

ಕವನದಲ್ಲಿಯ ಸಾಂಸಿ ಸಮುದಾಯದ ಚರಿತೆಯ ವಿವರ

"ಕೇಳಿರಿ ಕೇಳಿರಿ ಸಾಂಸಿ ಸಮುದಾಯದ ಒಳ್ಳೆ ಕಥೆ, ನನ್ನ ಜನ್ಮ ಭೂಮಿ ರಾಜಸ್ಥಾನ. ಅಲ್ಲಿಯ ವೀರ ಸುಪುತ್ರ ರಾಣಾಪ್ರತಾಪ ಸಿಂಹರ ಧೀರ ಸೈನಿಕರಾಗಿದ್ದೆವು. ಪ್ರಾರಂಭದಲ್ಲಿ ನಮ್ಮ ಜೀವನ ವೈಭವಶಾಲಿಯಾಗಿತ್ತು ಒಂದು ಸಮಯದಲ್ಲಿ ಹಲವಾರು ತುಂಡುಗಳಾಗಿ ಹಂಚಿ ಅಲೆಯುತ್ತಾ ಅರಣ್ಯಗಳಲ್ಲಿ ಸಿಕ್ಕ ಪದಾರ್ಥಗಳನ್ನು ತಂದು ನಮ್ಮ ಹಸಿವು ಹಿಂಗಿಸಿದೆವು. ನಂತರ ಮಾಳವಾದಲ್ಲಿ ಕಳ್ಳತನ, ದರೋಡೆಗಳನ್ನು ದಿನಾಲು ಮಾಡಿ ಕಡಿಯಾ, ಗುಲಖೇಡಿ, ಹುಲಖೇಡಿ ಗ್ರಾಮಗಳಲ್ಲಿ ನೆಲೆಸಿದೆವು. ಒಂದು ಸಮಯ ಇಂಥದು ಬಂತು ನಮ್ಮ ಹೊಟ್ಟೆಯಿಂದ ಒಳ್ಳೆಯ ಮಕ್ಕಳು ಹುಟ್ಟಿ ಶಿಕ್ಷಣ ಪಡೆದು ಅಧಿಕಾರಿಗಳಾದರು. ಇವರ ಜೊತೆಯಲ್ಲಿ ದುಷ್ಟ ಮಕ್ಕಳೂ ಸಹ ಹುಟ್ಟಿ ತಮ್ಮ ಸ್ವಾರ್ಥಕ್ಕಾಗಿ ಒಕ್ಕಟ್ಟಿನಲ್ಲಿ ವಿಘ್ನ ತಂದರು. ನಮ್ಮ ಒಕ್ಕಟ್ಟಿನ ನಕ್ಷತ್ರಗಳು ಭಿನ್ನ ಭಿನ್ನವಾಗಿ ಒಬ್ಬ ಮಗ ಮತ್ತೊಬ್ಬ ಮಗನ ವೈರಿಯಾದನು. ಒಂದು ಬಡವರ ದಂಡು ಇನ್ನೊಂದು ದರೊಡೆಖೋರರ ದಂಡು ಆಗಿ ನಮ್ಮ ನ್ಯಾಯ ಪಂಚಾಯತಿ ರಾಜ್ಯವನ್ನು ಗುಂಡಾಗಳ ರಾಜ್ಯವನ್ನಾಗಿ ಮಾಡಿದರು. ತಮ್ಮದೇ ಆದ ಪರಂಪರಾ ಜೀವನದಲ್ಲಿ ಆಗುತ್ತಿರುವ ಆಘಾತಗಳನ್ನು ಸಹಿಸಿ ಒಳ್ಳೆಯ ವೀರರು ಹೋಗಿ ಹಾಳು ಮಾಡುವಂತಹ ಪೀಳಿಗೆ ಬಂದಿದೆ. ಬನ್ನಿ ನಾವೆಲ್ಲರೂ ಕೂಡೋಣ ಯಾವ ಭೇದಭಾವ ಇಲ್ಲದೆ ಮರೆತು ಎಲ್ಲರೂ ಒಂದೇ ಎಂಬ ಭಾವನೆಯಿಂದ ಕೂಡಿ ಬಾಳೋಣ.

ಭಾಷೆ : ಕಂಜರಭಾಟ ಸಮುದಾಯದ ಪೂರ್ವಿಕರು ಕಂಜರಭಾಟ ಭಾಷೆಯನ್ನು ಮನೆಯಲ್ಲಿ ಹಾಗೂ ಸಮುದಾಯದಲ್ಲಿ ಬಳಸುತ್ತಾ ಬಂದಿದ್ದಾರೆ. ಇವರು ಮಾತನಾಡುವ ಭಾಷೆ ಹಿಂದಿಗೆ ಹೋಲುತ್ತದೆ. ಇವರು ಮಾತನಾಡುವ ಶೈಲಿ, ಶಬ್ದ ಇವುಗಳ ಬಳಕೆಯಿಂದ ಇವರದು ಕಂಜರಭಾಟ ಭಾಷೆ ಎಂದು ಗುರುತಿಸಲು ಸಾಧ್ಯವಾಗುತ್ತದೆ. ಕಂಜರಭಾಟರ ಭಾಷೆಗೆ ಕರ್ನಾಟಕ, ಮಹಾರಾಷ್ಟ್ರದಲ್ಲಿ ಕಂಜರಭಾಟ ಭಾಷೆ ಎಂದು ಕರೆದರೆ. ಗುಜರಾತದಲ್ಲಿ ಛಾರಾ ಭಾಷೆ, ರಾಜಸ್ಥಾನ ಹಾಗೂ ಉತ್ತರ ಭಾರತದ ಇನ್ನಿತರ ರಾಜ್ಯಗಳಲ್ಲಿ ಸಾಂಸಿ ಬೋಲಿ ಭಾಷೆ ಎಂದು ಕರೆಯುತ್ತಾರೆ. ಇದು ಇಂಡೊ ಆರ್ಯನ್ ಭಾಷಾ ಗುಂಪಿಗೆ ಸೇರಿದೆ. ಈ ಭಾಷೆಗೆ ಲಿಪಿ ಇಲ್ಲ ಹಾಗೂ ತನ್ನದೇ ಆದ ಸ್ವತಂತ್ರ ಇತಿಹಾಸವೂ ಇಲ್ಲ. ಆಯಾ ರಾಜ್ಯಗಳ ಭಾಷಾ ಪ್ರಭಾವಕ್ಕೆ ಒಳಗಾಗಿ ಇದೊಂದು ಮಿಶ್ರಭಾಷೆಯಾಗಿ ರೂಪಾಂತರಗೊಂಡಿದೆ. ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ವಲಸೆ ಬಂದ ಈ ಜನರ ಮೇಲೆ ಉತ್ತರ ಭಾರತದ ಭಾಷೆಗಳ ಪ್ರಭಾವ ಹೆಚ್ಚಾಗಿದೆ. ಈ ಭಾಷೆಯಲ್ಲಿ ಹಿಂದಿ

ಭಾಷೆಯ ಬಳಕೆ ಹೆಚ್ಚಿನ ಪ್ರಮಾಣ ಕಂಡುಬರುತ್ತದೆ. ಶತಶತಮಾನಗಳಿಂದ ಮೌಖಿಕ ರೂಪದಲ್ಲಿಯೇ ಈ ಭಾಷೆ ಉಳಿದಿದೆ. ಆಯಾ ಪ್ರಾಂತಿಯ ಭಾಷೆಗಳ ಲಿಪಿಯಲ್ಲಿಯೇ ಅವರ ಸಾಹಿತ್ಯ ನಿರ್ಮಾಣವಾಗಿದೆ. ಅನ್ಯ ಭಾಷೆಗಳ ಪ್ರಭಾವಕ್ಕೆ ಒಳಗಾಗಿದ್ದರೂ ತನ್ನದೇ ಆದ ವಿಶಿಷ್ಟ ಶಬ್ದ ಸಂಪತ್ತನ್ನು ಉಳಿಸಿಕೊಂಡಿದೆ.

ಕಂಜರಭಾಟರ ಭಾಷೆಯು ಆರ್ಯ ಪರಿವಾರದ ಹಿಂದಿ ಭಾಷೆಯ ಉಪಭಾಷೆಗಳಾದ ಮಾರವಾಡಿ ರಾಜಸ್ಥಾನಿ ಹಾಗೂ ಮಧ್ಯ ಪ್ರದೇಶದ ಮಾಳವಿ ಭಾಷೆಗಳೊಂದಿಗೆ ಹೆಚ್ಚಾಗಿ ಹೋಲುತ್ತದೆ. ಧ್ವನಿ ಶಬ್ದಗಳ ಉಚ್ಚಾರಣೆ, ಸಾಹಿತ್ಯದ ಹಿನ್ನೆಲೆ ಇವುಗಳನ್ನು ನೋಡಿದರೆ ಉತ್ತರ ಭಾರತದ ಭಾಷೆಗಳಿಗೆ ಇವರ ಭಾಷೆ ಹೋಲುತ್ತದೆ. ರಾಜಸ್ಥಾನಿ, ಗುಜರಾತಿ, ಹಿಂದಿ, ಮರಾಠಿ, ಲಂಬಾಣಿ, ಪಂಜಾಬಿ ಮುಂತಾದ ಭಾಷೆಗಳೊಂದಿಗೆ ನಿಕಟ ಸಂಬಂಧ ಕಂಡು ಬರುತ್ತದೆ. ಪ್ರಾಂತೀಯ ಭಾಷೆ ಮಾತನಾಡಿದರೂ ಸಹ ಇವರು ತಮ್ಮ ಭಾಷೆಯ ಸ್ವತಂತ್ರತೆಯ ಅಸ್ತಿತ್ವವನ್ನು ಕಳೆದುಕೊಂಡಿಲ್ಲ. ಭಾರತದ ಯಾವುದೇ ಪ್ರದೇಶಗಳಲ್ಲಿ ವಾಸಿಸುವ ಈ ಸಮುದಾಯದವರು ಪರಸ್ಪರ ಮಾತಾಡುವಾಗ ಇವರು ಇದೇ ಸಮುದಾಯದವರು ಎಂದು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಪ್ರತಿಯೊಂದು ಸಮುದಾಯದಲ್ಲಿ ಭಾಷೆ ತನ್ನ ಸ್ಥಾನಮಾನವನ್ನು ಕಾಯ್ದುಕೊಂಡಿದೆ. ಸಮುದಾಯದ ಭಾಷೆ ಗುರುತಿಸುವುದು ಸಮುದಾಯದ ಸಂಸ್ಕೃತಿಯ ಮೊದಲನೆಯ ಮೆಟ್ಟಿಲು. ಆದಕಾರಣ ಭಾಷೆಯನ್ನು ಗುರುತಿಸುವುದು ಅತೀ ಅವಶ್ಯಕವಾಗಿದೆ.

ಕಂಜರಭಾಟರು ಮನೆಯಲ್ಲಿ, ವ್ಯವಹರಿಸುವಾಗ ತಮ್ಮದೇ ಆದ ಕಂಜರಭಾಟ ಭಾಷೆಯನ್ನು ಮಾತನಾಡುತ್ತಾರೆ. ಮಗು ಹುಟ್ಟಿದ ಕೂಡಲೇ ತನ್ನ ತಾಯಿಯ ಜೊತೆಗೆ ಕಂಜರಭಾಟ ಭಾಷೆ ಮೊದಲು ಮಾತನಾಡುತ್ತದೆ. ಆದಕಾರಣ ಇವರ ಮಾತೃಭಾಷೆ "ಕಂಜರಭಾಟ ಭಾಷೆ"ಯಾಗಿದೆ.

ಕೋಷ್ಟಕ: ೮.೧ ಕಂಜರಭಾಟ ಸಮಾಜದ ವರ್ಗೀಕೃತ ಶಬ್ದಾವಳಿ

ಶರೀರದ ಅಂಗಗಳು

ಕನ್ನಡ	ಕಂಜರಭಾಟ	ಕನ್ನಡ	ಕಂಜರಭಾಟ
ಬುದ್ದಿಹಲ್ಲು	ಅಕ್ಕಲ್ ಧಾಡ	ಕಾಲ್ಬೆರಳು	ಪಾಂವಾಕಿ ಆಂಗಳ
ಕೈಬೆರಳು	ಹಾತಾಕಿ ಆಂಗಳ	ಹೆಬ್ಬೆರಳು	ಗೂಂಟ
ಕಣ್ಣು	ಆಂಖ	ಕರುಳು	ಆಂತಡಿ
ತುಟಿ	ಹೋಟ	ಹಿಮ್ಮಡಿ	ಏಡ್ಡಿ
ಭುಜ	ಕಾಂಧಾ	ಸೊಂಟ	ಕಮರ
ಮಣಿಕಟ್ಟು	ಪೌಂಛಾ	ಕಿವಿ	ಕಾನ
ಕಿರುಬೆರಳು	ಚಿಟ್ಲಿ	ಮೊಣಕೈ	ಕವ್ಹನಿ
ತಲೆಬುರುಡೆ	ಖೋಪಡಿ	ಕತ್ತು ಕುತ್ತಿಗೆ	ನಾಡ

ಗರ್ಭ	ಪೆಟ್ಟಾಸ	ಗಂಟಲು	ಘೀಂಟ
ಕೆನ್ನೆಗಳು	ಗಾಲ	ಗುದ	ಗಾಂಡ
ಮಂಡಿ	ಗೋಡ್ಡಾ	ಚರ್ಮ	ಖಾಲ
ಮೊಲೆತೊಟ್ಟು	ಜಿಜ್ಜಿ	ಮುಖ	ಮುಹ
ಎದೆ	ಛಾತಿ	ಮೊಲೆ	ಜಿಜಿ
ಹೊಟ್ಟೆ	ಪೇಟ	ದವಡೆ	ಧಾಡ
ಪಿತ್ತಕೋಶ	ಫೋಕ್ಕಾ	ನಾಲಿಗೆ	ಜೀಬ
ತುರುಬು	ಗೂಂಥ	ಕೀಲು	ಗೋಡ್ಡಾ
ಗಲ್ಲ	ಗಾಲ	ಅಂಗಾಲು	ಫಣ
ದವಡೆಹಲ್ಲು	ಧಾಡ	ದಾಡಿ	ಧಾಡಿ
ಹಲ್ಲು	ದಾಂತ	ಮೆದಳು	ಭೇಜ್ಜಾ
ಉಗುರು	ನಖ	ಮೂಗು	ನಾಕ
ನಾಡಿ	ನಸ್	ಹೊಕ್ಕಳು	ಸೂಂಡ
ಅನ್ನನಾಳ	ಖಾಣೆಕಿ ಆಂತಡಿ	ಪಕ್ಕೆಲಬು	ಪಾಸಳಿ
ಬೆನ್ನು	ಕಾಂಗಡಿ	ಕಣ್ಣುಗುಡ್ಡೆ	ಡೆಲ್ಲಾ
ಪಾದ	ಪಾಂವ	ಶ್ವಾಸಕೋಶ	ಸಾಸಾಕಿನಾಳ
ಕೂದಲು	ಬಾಳ	ಯೋನಿ	ಚೂತ
ಭ್ರೂಣ	ಟಾಬರ	ಹುಬ್ಬು	ಭೌಂರೆ
ವಸಡು	ಮಸೋಡೆ	ಮುಷ್ಠಿ	ಮೂಠ
ಬಾಯಿ	ಮೂಹ	ಮೀಸೆ	ಮೂಛ
ಸರ	ನಸ್	ರೋಮ	ಬಾಳ
ಜುಟ್ಟು	ಚುಂಟಿ	ಬೆನ್ನೆಲುಬು	ಕಾಂಗಡಿಯಾಕಾ ಹಾಡ್
ಹಣೆ	ಮಾಥಾ	ಜೊಲ್ಲು	ಲಾಳಾ
ಶಿಶ್ನ	ನೂನ	ರಕ್ತ	ಖೂನ
ಮೂಳೆ	ಹಾಡ	ಅಂಗೈ	ಥೇಳಿ
ಹೃದಯ	ಕಾಳಜಾ		

ರೋಗಗಳು ಮತ್ತು ದೇಹದ ಸ್ಥಿತಿಗಳು

ಕುರುಡು	ಆಂಧಾ	ಕಣ್ಣೀರು	ಆಂಸು
ಆಕಳಿಸು	ಬಾಸಿಯಾ	ಮನುಷ್ಯನ ಎತ್ತರ	ಉಂಚಾಯಿ
ಕಫ, ಶ್ಲೇಷ್ಮ	ಕಫ್, ಖಾಂಸಿ	ವಾಂತಿ	ಉಲ್ಟಿ
ಕಾಮಾಲೆ	ಕಾಮನಿ	ಒಕ್ಕಣ	ಏಕ ಆಂಖ

ತಟ್ಟಮ್ಮ	ಬೋದರಿ	ತುರಿತ	ಖುಜಾಳ
ಕಜ್ಜಿ	ಖುಜಲಿ	ಕೆಮ್ಮು	ಖಾಂಸಿ
ತುರಿ	ಖುಜಾಳ	ರಕ್ತಸ್ರಾವ	ಖುನಪಡಣಾ
ಗರ್ಭಪಾತ	ಪೇಟಪಡಣಾ	ಗಂಟಲುಕೆರೆತ	ಗಿಂಠಾಮ ಖುಜಾಳ
ಗಂಟಲು ಕಟ್ಟುವುದು	ಗೀಠ ಪಕಟಣಾ	ಟಾನ್ಸಿಲ್ಸ್	ಗಿಲಸವೆ
ಗಡ್ಡೆ	ಗೂಂಠ	ಬೊಕ್ಕತಲೆ	ಗಂಜಾ
ಗಾಯ	ಜಖಮ	ತಲೆಸುತ್ತುವುದು	ಚಕ್ಕರ
ಬೊಜ್ಜುಮೈ	ಥೊತ್ತಾ	ಗಾಯಗೊಳ್ಳುವುದು	ಜಖಮಿ
ಸೀನುವುದು	ಛೀಂಕ	ನೆಗಡಿ	ಸರದಿ
ಚಳಿಜ್ವರ	ತಾಪ	ಜ್ವರ	ತಾಪ
ಚಳಿ	ಜಾಡ್ಡಾ	ಆರೋಗ್ಯ	ಆರಾಮ
ಉಗುಳು	ಥೂಕ	ಉಬ್ಬಸ	ದಮ್ಮ
ನೋವು	ದುಃಖ	ತಲೆನೋವು	ಸೀರದರ್ದ್
ಹೊಟ್ಟೆನೋವು	ಪೇಟದುಖಣಾ	ಮಲ	ಝಾಡಾ
ತೆಳಗಿರುವುದು	ಸುಕಟಾ	ದೂರದೃಷ್ಟಿ	ದೂರಾಕಿ ನಜರ
ನಿದ್ರಾರೋಗ	ನಿಂದುಕಿ ಬೇಮಾರಿ	ನಿದ್ರೆ	ನಿಂದ
ಕಲ್ಲು	ಭಾಟ್ಟಾ	ಬೆವರು	ಪಸೀನಾ
ಹುಚ್ಚು	ಗಾಂಡಾ	ಕೀವು	ರಾಧ
ಆಮಶಂಕೆ	ಝಾಡಾ	ಬಿಳಿಸೆರಗು	ಧವಳಾಪಾಣಿ
ಬಾಯರಿಕೆ	ತೀಸ	ಗುಳ್ಳೆ	ಫೂಣಸಿ
ಸಿಹಿಮೂತ್ರ ರೋಗ	ಸಕ್ಕರ	ಹುಣ್ಣು	ಗುಮಡಿ
ಕುಳ್ಳ	ಗಿಡ್ಡಾ	ಮಚ್ಚೆ	ತೀಲ್
ಮೂತ್ರ	ಮೂತ	ಕಣ್ಣೆನಪರೆ	ಆಂಖಿಕಾ ಜಾಳಾ
ಕ್ಷಯ	ಟಿಬಿ	ರೋಗ	ಬಿಮಾರಿ
ಕುಂಟ	ಲಂಗಡಾ	ಶ್ವಾಸ	ಸಾಸ
ಮೂಗುಕಟ್ಟು	ನಾಕಗುಟನಾ	ಧ್ವನಿ	ಆವಾಜ
ವಾಂತಿಭೇದಿ ರೋಗ	ಕಾಲರಾ		

ವೇಷ-ಭೂಷಣ (ಪೋಷಾಕ)

ಅಂಗಿ ತೋಳು	ಝಾಗಲಿ	ಕುಪ್ಪಸ	ಜಂಪರ
ಇಂಗ್ಲಿಷರ ಟೋಪಿ	ಗೋಲ ಟೋಪಿ	ಉಣ್ಣೆ	ಉಲನ್
ಬಟ್ಟೆ	ಕಾಪಡಾ	ವಸ್ತ್ರಗಳು	ಕಾಪಡೆ

ಸೊಂಟಪಟ್ಟಿ	ಪಟ್ಟಾ	ಷರಟು	ಝಾಗಲಿ
ಷರಟಿನ ಬಟ್ಟೆ	ಝಾಗಲಿ ಯಾಕಾ ಕಾಪಡಾ	ಕಂಬಳಿ	ಕಾಮಳ
ಅಂಚು	ಧಡಿ	ಕೋಟು	ಕೋಟ
ಕೋಟು ಪ್ಯಾಂಟು	ಸೂಟ್	ಮಫ್ಲರ್	ಮಾಫ್ಲೊರ
ಲಂಗ	ಘಾಗರಾ	ಬುರಕಿ	ಬುರಕಾ
ಗಾದಿ	ಗಾದ್ದಿ	ದಾರ	ತಾಗ್ಗಾ
ಚಾದರ್	ಡೊರಿಯಾ	ಚೀಟಿಬಟ್ಟೆ	ಛೀಂಟ್
ಕಾಲುಚೀಲ	ಮೊಜ್ಜಾ	ಜೇಬು	ಖೀಸಾ
ಅಲಂಕಾರ	ಸಿಂಗಾರ	ಟೋಪಿ	ಟೊಪ್ಪಿ
ಚೌಕ	ಟವಾಲ	ಶಾಲು	ಶಾಲ
ನಡುವಂಗಿ	ಜಾಕೇಟ	ಗುಂಡಿ	ಘುಂಡಿ
ಮಕಮಲ್	ಮಕಮಲ್	ಮಲಮಲ್	ಮಲಮಲ್
ರಜಾಯಿ	ಸೀರಕ	ಹತ್ತಿ	ರೂ
ಕರವಸ್ತ್ರ	ಟವಾಲ	ರೇಷ್ಮೆ	ರೇಸಮ
ಉಡಿದಾರ	ತಾಗಡಿ	ಅಂಚು, ಸೆರಗು	ಧಡಿ
ಪೇಟ	ಪಾಗ	ಅಚ್ಚಬಣ್ಣ	ರಬ್‌ಕಲರ್
ತೆಳುಬಣ್ಣ	ಮಾಂದಾಕಲರ		

ಬಾಂಧವ್ಯ (ರಿಸ್ತೆ)

ಅತಿಥಿ	ಮಹಿಮಾನ	ಅಧ್ಯಾಪಕ	ಮಾಸ್ತರ
ಮಾಮ	ಮಾಮ್ಮಾ	ಉಪಪತ್ನಿ	ರಾಂಡ,ಧಗಡಣಿ
ಗ್ರಾಹಕ	ಗಿರಾಕ	ಚಿಕ್ಕಪ್ಪ	ಕಾಕಾ
ಚಿಕ್ಕಮ್ಮ	ಕಾಕಿ	ಶಿಷ್ಯ	ಚೇಲಾ
ಓರಗಿತ್ತಿ	ಭುವಾ	ತಾತ	ದಾದಾ
ಅಜ್ಜಿ	ದಾದಿ	ಅಳಿಯ	ಜಂವಾಯಿ
ಮಿತ್ರ	ದೋಸ್ತ	ತಾಯಿಯ ತಂದೆ	ನಾನಾ
ತಾಯಿಯ ತಾಯಿ	ನಾನಿ	ಗಂಡ	ಭಾಂತು
ಹೆಂಡತಿ	ಬಯರ	ಭಾವಮೈದುನ	ಮಾಮಾ
ಸೊಸೆ	ಬಹು	ತಂದೆ	ಬಾಪ
ಮಗ	ಬೆಟ್ಟಾ	ಮಗಳು	ಬೆಟ್ಟಿ
ಪ್ರೀತಿ	ಮೋಹಬತ್	ತಂಗಿ, ಅಕ್ಕ	ಭಾಣಾ
ಸೋದರ	ಭಾಯಿ	ಸೋದರಮಾವ	ಮಾಮಾ

ತಮ್ಮನ ಮಗ	ಭತೀಜ್ಜ	ಸೋದರತ್ತೆ	ಮಾಮ್ಮಿ
ಚಿಕ್ಕಮ್ಮ	ಮೌವಸಿ	ರೋಗಿ	ರೋಗಾಳಾ
ಸ್ವಂತದ್ದು	ಖುದ್ದ	ಅತ್ತೆ	ಸಾಸು
ಹೆಣ್ಣುಕೊಟ್ಟ		ಸಂಬಂಧಿಕ	ರೀಸ್ತೆದಾರ
ಮಾವ	ಸಸೂರಾ	ಮಲಮಗಳು	ಸೌತೇಲಿ ಬೆಟ್ಟಿ
ಮಲಮಗ	ಸೌತೇಲಾ ಬೆಟ್ಟಾ	ಮಲತಂದೆ	ಸೌತೇಲಾ ಬಾಪ
ಮಲತಂಗಿ	ಸೌತೇಲಿ ಭಾಣ	ಮಲಅಣ್ಣ	ಸೌತೇಲಾ ಭಾಯಿ

ಮನೆಬಳಕೆ ವಸ್ತುಗಳು (ಘರಾಕೆ ಸಾಮಾನ)

ಅಲ್ಮಾರಿ	ಕಪಾಟ	ಒನಕೆ, ಹಾರೆ	ಮೂಸಳ
ಬಟನ್	ಘುಂಡಿ	ಕೆಂಡ, ಇದ್ದಲು	ಖಂಗಾರ
ಕಬ್ಬಿಣ	ಲೋಖಂಡ	ಇಂಧನ, ಸೌದೆ	ಲಾಕಡಿ
ಕಡಾಯಿ	ಕಢಾಯಿ	ಸೌಟು	ಕಡಚಿ
ರೊಟ್ಟಿಡಬ್ಬಿ	ರೊಟ್ಟಿಯಾ ಕಾ ಡಬ್ಬಾ	ಹಣಿಗೆ	ಕಾಂಖಿ
ಕುರ್ಚಿ	ಕುರ್ಚಿ	ಮುಳ್ಳು ಚಮಚ	ಚಮಚಾ
ಚಾಪೆ	ಸಾರಲಿ	ಚಮಚ	ಚಮಚಾ
ಬೀಗದಕೈ	ಕುಂಚಿ	ಸ್ಟೋವ್	ಸ್ಟೋ
ಕೋಲು, ದೊಣ್ಣೆ	ಮುಸಳ	ಕೊಡೆ	ಛತರಿ
ಬುಟ್ಟಿ	ಟೋಕರಿ	ಪೆಟ್ಟಿಗೆ	ಪೇಟ್ಟಿ
ಮುಚ್ಚಳ	ಚಾಪಣಿ	ದಿಂಬು	ಗದ್ದಿ
ಮಂಚ	ಪಲಂಗ	ಬಟ್ಟಲು	ಕಚೋಳಿ
ತಕ್ಕಡಿ	ತರಾಜ್ಜು	ಬಟ್ಟಲತಟ್ಟೆ	ಬಸಿ
ತಂತಿ	ತಾರ	ಬೀಗ	ತಾಳಾ
ತಿಜೋರಿ	ತೀಜೋರಿ	ಒಲೆ	ಚುಲ್ಲಾ
ತಟ್ಟೆ	ಥಾಳಿ	ಕನ್ನಡಿ	ಆಯಿನಾ
ಕಡ್ಡಿಪೆಟ್ಟಿಗೆ	ಕಾಡಿಪೆಟ್ಟಿ	ಹಲ್ಲುಪುಡಿ	ದಂತಮಂಜನ್
ದಾರ	ತಾಗ್ಗ	ಧೂಪಾರ್ತಿ	ಲೋಭಾನ
ನಲ್ಲಿ	ನಳ	ಪಲ್ಲಕ್ಕಿ	ಪಾಲಕಿ
ಬಟ್ಟಲು	ಕೋಪ	ಹೂದಾನಿ	ಫೂಲಕಾ ಕುಂಡಾ
ಬತ್ತಿ	ಬತ್ತಿ	ಗಡಿಗೆ	ಹಾಂಡಿ
ಬಕೇಟ್	ಬಾದಲಿ	ಬ್ರಷ್	ಬುರಸ
ಲಟ್ಟಣಿಗೆ	ಪೋಳಿಪಾಟ ಬೇಲಣಾ	ಶೀಷೆ	ಸಿಸ್ಸಿ

ಗೋಣಿಚೀಲ	ಪೋತ್ರಾ	ಮೊಂಬತ್ತಿ	ಮೇಣಬತ್ತಿ
ಪಾತ್ರೆ	ಭಾಂಡೆ	ಹಗ್ಗ	ಜೇವಡಾ
ನೂಲು,ದಾರ	ತಾಗ್ಗಾ	ಬೂದಿ	ರಾಖ
ಲೇಖನಿ	ಕಲಮ	ದೀಪ	ದೀವಾ
ಬೋಗುಣಿ	ತಂಬಾ	ಸಾಬೂನು	ಸಾಬನ
ಸರಪಳಿ	ಸಾಂಕಳ	ಸೂಜಿ	ಸಂವ
ತಂಬಿಗೆ	ಲೋಟ್ಟಾ		

ಆಭರಣಗಳು (ಗಹಣೆ)

ಉಂಗುರ	ಗುಂಠಿ	ಕಡಗ	ಕಡಾ
ಸರ	ಮಾಳ	ಮುರವು	ಕುಡಕಿ
ಮುಕರ	ಬಿಲಾಖ	ಬೆಳ್ಳಿ	ಚಾಂದಿ
ಬಳೆ	ಚೂಡಿ	ಕಿವಿ ಒಡವೆ	ಕರನಪೂಲ
ತೋಡ	ತೋಡೆ	ಬುಲಾಕು	ಬಿಲಾಕ
ಡಾಬು	ಪಟ್ಟಾ	ಕಾಲ್ಕಡಗ	ಕಡಾ
ಅಲ್ಯೂಮಿನಿಯಂ	ಜರಮನ್	ಹವಳ	ಹೀರಾ
ಮುತ್ತು	ಮೋತಿ	ವಜ್ರ	ಹೀರಾ

ವಾದ್ಯಗಳು (ಸಾಜ)

ಗಂಟೆ	ಘಂಟಿ	ಖಂಜರಿ	ಖಂಜರಿ
ಮೃದಂಗ	ಮೃದಂಗ	ತಬಲ	ತಬಲಾ
ಶಂಖ	ಶಂಖ	ಸಿತಾರ್	ಸೀತಾರಾ
ಕಹಳೆ	ತುತೂರಿ	ನಗಾರಿ	ನಗಾರಾ
ಕೊಳಲು	ಬಾಂಸರಿ	ಶೀಟಿ	ಸಿಂಟಿ
ಹಾರ್ಮೋನಿಯಂ	ಪೇನಪಟ್ಟಿ		

ಧಾನ್ಯಗಳು ಮತ್ತು ಖಾದ್ಯ ಪದಾರ್ಥಗಳು

ಉಪ್ಪಿನಕಾಯಿ	ಅಂಚಾರ	ಕಾಳು, ಧಾನ್ಯ	ದಾಣೆ
ಹಿಟ್ಟು	ಆಟ್ಟಾ	ಫಲ್ಯ	ಭಾಜ್ಜಿ
ಕಾಫಿ	ಕಾಫೀ	ಐಸ್‌ಕ್ರೀಂ	ಐಸ್‌ಕ್ರಿಮ್
ಗೋಧಿ	ಗಿಂಹು	ತುಪ್ಪ	ಘೀ
ಚಟ್ನಿಣಿ	ಚಟ್ನಿ	ರೊಟ್ಟಿ	ರೊಟಿ
ಅನ್ನ	ಖಾಣಾ	ಚಹ	ಚಹಾ

ಚಪಾತಿ	ಮಾಂಡಾ	ಗಿಣ್ಣು	ಖೀಸ
ಗೋಂದು	ಅಂಟ	ಸಕ್ಕರೆ	ಸಕ್ಕರ
ಹೊಟ್ಟು	ಭುಸ್ಕಟ್	ಜೋಳ	ಜವಾರ
ಸಜ್ಜೆ	ಬಾಜರಾ	ಮಧ್ಯಾಹ್ನದ ಊಟ	ಧೋಪರಕಾ ಖಾಣಾ
ಗೋಧಿಹಿಟ್ಟು	ಆಟ್ಟಾ	ಮಾಂಸದಸಾರು	ಕಾಂಜಿ
ತರಕಾರಿ	ಭಾಜ್ಜಿ	ಎಳ್ಳು	ಅಳಪಿ
ಎಣ್ಣೆ	ತೇಲ	ಅಂಬಲಿ	ಖಿಟ್ಟಾ
ಮೊಸರು	ದಹಿ	ಬೇಳೆಕಾಳು	ದಾಳ
ಹಾಲು	ದೂಧ	ರೊಟ್ಟಿಯ ತುಂಡು	ಲಖಿಂಡ ರೊಟ್ಟಿ
ಬಿಸ್ಕತ್ತು	ಬಿಸಕೀಟ	ಮುಸುಕಿನಜೊಳ	ಮಕ್ಕಾ
ಔತಣದೂಟ	ದಾವತ	ಆಹಾರ	ಖಾಣಾ
ಬೆಣ್ಣೆ	ಮಖಣಿ	ಕೆನೆ	ಮಲಾಯಿ
ಚನ್ನಂಗಿ	ಮಸೂರ	ಮಾಂಸ	ಮಾಸ
ಭತ್ತ	ಧಾನ	ರಾತ್ರಿ ಊಟ	ರಾತ್ರಿಕಾ ಖಾಣಾ
ದನದ ಮಾಂಸ	ಭೈಂಸಿಕಾ ಮಾಸ	ಕುರಿ ಮಾಂಸ	ಬಕರೆ ಕಾ ಮಾಸ
ಹಂದಿ ಮಾಂಸ	ಸೂರಾ ಕಾ ಮಾಸ	ಸಿಹಿತಿಂಡಿ	ಮಿಠಾಯಿ
ಕಲ್ಲುಸಕ್ಕರೆ	ಖಡಿ ಸಕ್ಕರ	ಒಗ್ಗರಣೆ ಅನ್ನ	ಚೌಂಕಾಕೆ ಚಾವಳ
ಮೈದಾ	ಮೈದ್ದಾ	ಷರಬತ್ತು	ಶರಬತ್
ಜೇನುತುಪ್ಪ	ಸೈಂತ		

ಸಂಬಾರ ಪದಾರ್ಥಗಳು

ಕೊತ್ತಂಬರಿ	ಕೋತಮೀರ	ಶುಂಠಿ	ಸೂಂಟ
ಏಲಕ್ಕಿ	ಅಳಾಯಚಿ	ಖದಿರ, ಕಾಚು	ಕಥ್ಥಾ
ಕರ್ಪೂರ	ಕಪೂರ	ಕರಿಜೀರಿಗೆ	ಜೀರಾ
ಕರಿಮೆಣಸು	ಕಾಳಿಮಿರಚ	ಎಳ್ಳು	ಅಳಷಿ
ಮೆಣಸು	ಕಾಳಿಮಿರಚ	ಕೃತಕ ಪಟಿಕ	ಫಟ್ಕಿದಿ
ಕೇಸರಿ	ಕೇಸರ	ಗಂಧ	ಚನ್ನಣ
ಜಾಯಿಕಾಯಿ ಫಲ	ಜಾಯಫಳ	ಜೀರಿಗೆ	ಜೀರಾ
ತುಳಸಿ	ತುಳಸಿ	ದಾಲ್ಚಿನ್ನಿ	ದಾಲಚಿನ್ನಿ
ಕೊತ್ತಂಬರಿ ಬೀಜ	ಧಣಿಯಾ	ಉಪ್ಪು	ಲೂಣ
ಮೆಣಸಿನಕಾಯಿ	ಮಿರಚ	ಲವಂಗ	ಲವಂಗ

ಅಡಿಕೆ	ಸುಪಾರಿ	ಸಬ್ಬಕ್ಕಿ	ಸೋವಾ
ಅರಿಶಿನ	ಹಳದ	ಇಂಗು	ಹಿಂಗ

ಖನಿಜಗಳು (ಖಣಜ)

ಕಂಚು	ಕಾಶ್ಯಿ	ಕಲ್ಲಿದ್ದಲು	ಕೊಯಲಾ
ಸಾದಾ ಇದ್ದಲು	ಕೊಳಸಾ	ಸುಟ್ಟು ಸುಣ್ಣ	ಚುನ್ನಾ
ಬೆಳ್ಳಿ	ಚಾಂದಿ	ತಾಮ್ರ	ತಾಂಬಾ
ಉಕ್ಕು	ಲೋಖಂಡ	ಚಿಮಣಿ ಎಣ್ಣೆ	ಫಾಸ್ಟೇಲ್
ತಗಡು	ಪತರಾ	ಸೀಸ	ಕಥ್ಥೀಲ
ಸಿಂಧೂರ	ಸಿಂದೂರ	ಕಬ್ಬಿಣ	ಲೋಖಂಡ

ಮರಗಳು ಮತ್ತು ಅವುಗಳ ಭಾಗಗಳು (ಝಾಡ ಔರ ಉಸಕೆ ಫಾಂಟೆ)

ಮಾವಿನ ಮರ	ಆಂಬಾಕಾ ಝಾಡ	ಗೆಡ್ಡೆ	ಗಡ್ಡಾ
ಮುಳ್ಳು	ಕಾಂಟಾ	ಕಲ್ಲು	ಫತ್ತರ
ಆಲದಮರ	ಪೀಪಳ	ಜಾಲಿಗಿಡ	ಕಿಂಕರ
ಬೀಜ	ದಾಣಾ	ಬಿದುರು	ಬಾಂಬು
ಮರದ ತೊಗಟೆ	ಛೋಡ್ಡಾ	ಸಿಪ್ಪೆ	ಛಿಲ್ಲಾ
ಬೇರು	ಜಡ	ಕೊಂಬೆ	ಡಾಳಿ
ಕಾಂಡ	ಪೇಡ	ಎಲೆ	ಪಾನ
ಹೂವು	ಫೂಲ	ರಸ	ರಸ್

ಹೂವು, ಹಣ್ಣು ಮತ್ತು ತರಕಾರಿಗಳು (ಫೂಲ, ಫಳ, ಭಾಜ್ಜಿ)

ದಾಳಿಂಬೆ	ಧಾಡಮ	ದ್ರಾಕ್ಷಿಹಣ್ಣು	ದ್ರಾಕ್ಷಿ
ಸಣಬು	ಸೂತಳಿ	ಮಾವು	ಆಂಬ
ಆಲೂಗಡ್ಡೆ	ಆಲ್ಲು	ಹುಣಿಸೆಹಣ್ಣು	ಆಮ್ಲಿ
ಕಬ್ಬು	ಗಂಡಾ	ಸೌತೆಕಾಯಿ	ಕಾಕಡಿ
ಹಲಸಿನಹಣ್ಣು	ಫನಸ	ಕುಂಬಳಕಾಯಿ	ಭೋಪಳಾ
ಕಮಲ	ಕಮಲ	ಗೋಡಂಬಿ	ಗೋಡಂಬಿ
ನಾಯಿಕೊಡೆ	ಪಾದ	ಬಾಳೆಹಣ್ಣು	ಕೇಳಾ
ಖರ್ಜೂರ	ಖಜೂರ	ಕಲ್ಲಂಗಡಿ	ಕಲಂಗಡಾ
ನಿಂಬೆಹಣ್ಣು	ಲಿಂಬು	ಕೆಂಪು ಮೂಲಂಗಿ	ಗಾಜರ
ಗುಲಾಬಿ	ಗುಲಾಬ	ಹುಲ್ಲು	ಘಾಸ
ತುರಾಯಿ	ತುರಾ	ಮಲ್ಲಿಗೆ	ಮಲಗಿ

ಸಂಪಿಗೆ	ಸಂಪಂಗಿ	ತಂಬಾಕು	ತಮಾಖು
ಕಲ್ಲಂಗಡಿ	ಕಲಂಗಡಾ	ಕೊತ್ತಂಬರಿ	ಕೊತ್ತಮೀರ
ಪೇರುಹಣ್ಣು	ಜಾಮ	ತೆಂಗಿನಕಾಯಿ	ನಾರಲ
ಕಿತ್ತಳೆಹಣ್ಣು	ಝುಮೀರಿ	ನಿಂಬೆಹಣ್ಣು	ಲಿಂಬು
ಪರಂಗಿಹಣ್ಣು	ಪಪಾಯಿ	ವೀಳ್ಯದೆಲೆ	ಪಾನ
ಸೀತಾಫಲ	ಸೀತಾಫಳ	ಪುದೀನಾ	ಪೋದಿನಾ
ಈರುಳ್ಳಿ	ಕಾಂದಾ	ಬದನೆಕಾಯಿ	ಬಯಂಗಣ
ಬಟಾಣಿ	ವಟಾಣೆ	ನೆಗಡಲೆಕಾಯಿ	ಸೇಂಗಾ
ಮೂಲಂಗಿ	ಮೂಳಾ	ಮೂಸಂಬಿ	ಮೊಸಂಬಿ
ಗೆಣಸು	ರತಾಳ	ಹತ್ತಿ	ರೂ
ಬೆಳ್ಳುಳ್ಳಿ	ಲಸ್ಸಣ	ಸೇಬು	ಸೇಬ
ಕಿತ್ತಳೆ	ಝುಮೀರಿ		

ಕಟ್ಟಡ ಮತ್ತು ಅದರ ಭಾಗಗಳು

ಆಸ್ಪತ್ರೆ	ದವಾಖಾನ್ನಾ	ಅಂಗಣ	ಆಂಗಣ
ಕಟ್ಟಡ	ಘರ	ಕೋಣೆ	ಖೋಲ್ಲಿ
ಕಸಾಯಿ ಖಾನೆ	ಕಸಾಯಿ	ಕಾರ್ಖಾನೆ	ಕಾರಖಾನ್ನಾ
ಕೋಟೆ	ಕಿಲ್ಲಾ	ಹೆಂಚು	ಹಂಚ
ಕಿಡಕಿ	ಖಿಡಕಿ	ಅಂತಸ್ತು	ಮ್ಹಾಡಿ
ಗುಮ್ಮಟ	ಗುಮಟಾ	ಬಾಗಿಲ ಚೌಕಟ್ಟು	ದರವಾಜ್ಜಾ
ಮಾಳಿಗೆ	ಛತ್ತ	ಸರಳು	ಸಳಾಯಿ
ಗುಡಿಸಲು	ಝೂಂಪಡಿ	ಬಾಗಿಲು	ಬಾಗಲಾ
ಹೊಸ್ತಿಲು	ಚೌಕಟ	ತೊಲೆ	ಕಂಬಾ
ಬಚ್ಚಲು	ನ್ಹಾಣಿ	ಶೌಚಗೃಹ	ಹಗರಿ
ಕಲ್ಲು	ಫತ್ತರ	ನೆಲ	ಜಮೀನ
ವರಾಂಡ	ಆಂಗಣ	ಬಂಗಲೆ	ಬಂಗಲಾ
ಮನೆ	ಘರ	ದೇವಸ್ಥಾನ	ದೇವಳ
ಮಸೀದಿ	ಮಸೀತ	ಅರಮನೆ	ರಾಜವಾಡಾ
ಕಮಾನು	ಕಮಾನ	ಅಡಿಗೆಮನೆ	ಖಾಣೆ ಕಿ ಖೊಲ್ಲಿ
ಶಾಲೆ	ಶಾಳ	ಸ್ನಾನಗೃಹ	ಬಚಲಾ
ಸಿಮೆಂಟ್	ಸಿಮೆಂಟ	ಮೆಟ್ಟಿಲು	ಸೀಡಿಯಾ

ಉಪಕರಣಗಳು

ಗರಗಸ	ಕರಗಸ	ಮೊಗೆಗುದ್ದಲಿ	ಖುದಾಳಿ
ಕೊಡಲಿ	ಕುಹಾಡಿ	ಕತ್ತರಿ	ಕತರಣಿ
ಉಳಿ	ಉಳಿ	ನಟ್	ನಟ್
ತಕ್ಕಡಿ	ತಕಡಿ	ಕುಡುಗೋಲು	ದಾಂತಿ
ಗೂಟ	ಖೂಂಟಾ	ಚೂರಿ	ಛೂರಿ
ಸಲಿಕೆ	ಫಾವಡಾ	ಮರದ ಕೊಡತಿ	ಮೊಗರಿ
ಸುತ್ತಿಗೆ	ಹತೋಡಿ		

ಯುದ್ಧ ಸಾಮಗ್ರಿ (ಲಡಾಯಾಕೆ ಸಾಮಾನ)

ಅಣುಬಾಂಬ್	ಬಾಂಬ್	ದಾಳಿ	ಹಮಲಾ
ಹಳ್ಳ	ನಾಳಾ	ಗುಂಡು	ಗೋಳಿ
ಮುತ್ತಿಗೆ	ಘೇರಾ	ತೋಪು	ತೋಫ
ದಿಗ್ಬಂಧನ	ಗಿರಫದಾರ	ಬಾಂಬಿನ	
ಭೋಜನ		ಸುರಿಮಳೆ	ಬಾಂಬಕಿ ಝಡಿ
ಸಾಮಗ್ರಿಗಳು	ಖಾಣಕೆ ಸಾಮಾನ	ಯುದ್ಧ	ಲಡಾಯಿ
ಶಸ್ತ್ರಾಸ್ತ್ರಗಳು	ಅಸ್ತರ	ದಂಗೆ	ದಂಗಾ
ಒಪ್ಪಂದ	ಬಾತ, ಚೀತ	ಸೈನ್ಯ	ಪೈಜ
ಶತ್ರು	ದುಶ್ಮನ		

ವೃತ್ತಿಗಳು (ಕಾಮ್)

ಉಪಾಧ್ಯಾಯ	ಗುರೂಜಿ	ಇಂಜಿನಿಯರ್	ಇಂಜನಿಯರ
ಹಾಲಿನವನು	ದೂಧಾಳಾ	ಗೌಳಿಗಿತ್ತಿ	ಗೌಳನ
ಕಟುಕ	ಕಸಾಯಿ	ಕಲಾವಿದ	ಕಲಾಕಾರ
ರೈತ	ಕಿಸಾನ	ಬಂಡಿಹೊಡೆಯುವವನು	ಗಾಡಿವಾನ
ಜಮೀನುದಾರ	ಜಮೀನದಾರ	ಚಮ್ಮಾರ	ಮೋಚಿ
ವೈದ್ಯ	ಹಕೀಮ	ಅಂಚೆ ಬಟವಾಡೆಯವ	ಡಾಕೀಯಾ
ಎಣ್ಣೆ ವ್ಯಾಪಾರಿ	ತೇಲಿಯಾ	ದರ್ಜಿ	ದರ್ಜಿ
ದಳ್ಳಾಳಿ	ದಲಾಲ	ನೃತ್ಯಗಾರ	ನಾಚಣವಾಳೆ
ಭಿಕ್ಷುಕ	ಭಿಕಾರಿ	ಅಡಿಗೆಯವನು	ಖಾಣೆಆಳಾ
ಬೆಸ್ತ	ಮಛೇರಾ	ಮಾಲೀಕ	ಸಾವಕಾರ
ತೋಟಗಾರ	ಬಗೀಚ್ಛೆಯಾಳಾ	ಕಮ್ಮಾರ	ಘಿಸಾಡಿ
ಅಕ್ಕಸಾಲಿಗ	ಸುನಾರ	ವ್ಯಾಪಾರಿ	ಬೇಪಾರಿ

ವ್ಯಾವಹಾರಿಕ ಶಬ್ದಾವಳಿ

ಆದಾಯ	ಕಮಾಯಿ	ಅಂಗೀಕೃತ ನಾಣ್ಯ	ಸಚ್ಚಾ ಪೈಸಾ
ಸಾಲ	ಉಧಾರ	ಗ್ರಾಹಕ	ಗಿರಾಕ
ಸಾಲ ಕೊಡುವವರು	ಉಧಾರಿಯಾ	ಕಾಗದದ ನಾಣ್ಯ	ನೋಟ
ಹುದ್ದೆ	ಕಾಮ	ಬೆಲೆ	ಕಿಮತ್
ನಿವ್ವಳ ಗಳಿಕೆ	ಅಜಮಾಸ ಕಮಾಯಿ	ನಿವ್ವಳ ನಷ್ಟ	ಅಜಮಾಸ ಲುಕ್ಸಾನ
ಸಾಲದ ಪುಸ್ತಕ	ಉಧಾರಾಕಿ ಬುಕ್	ಜಮಾ ಪುಸ್ತಕ	ಜಮಾಕಿ ಬುಕ್
ಏರಿಳಿತ	ಹೇರ ಫೇರ	ಜಮಾ ಮಾಡು	ಜಮಾವ
ಖೋಟಾನೋಟು	ಖೋಟ್ಟಾನೋಟ	ವಸೂಲಾಗದ ಸಾಲ	ನಾಹಿಲವಣಾ ಉಧಾರ
ಟಂಕಸಾಲೆ	ಛಾಪಖಾನಾ	ದಿವಾಳಿ	ಬರಬಾದ
ಅಂಗಡಿ	ದುಕಾನ	ನಗದು ಹಣ	ರೋಕಡಿ
ಉತ್ಪತ್ತಿ	ಉತ್ಪನ್ನ	ಹಿಂದಿನ ಲೆಕ್ಕ	ಅಗಲಾ ಬಾಕಿ
ಹಳೆ ಚೆಕ್	ಜುನ್ನಾ ಚಕ್	ಹೆಚ್ಚಿಗೆ ಹಣ	ಜಾದಾ ಪೈಸೆ
ಬಾಕಿ ಹಣ	ಬಾಕಿ ಪೈಸೆ	ಬಾಕಿ	ಬಾಕಿ
ಲೆಕ್ಕದ ಪುಸ್ತಕ	ಹಿಸೊಬ್ಬಾಕಿ ಬುಕ್	ಪೇಟೆ	ಬಜಾರ
ಪೇಟೆದರ	ಬಜಾರಾ ಕಾ ಭಾವ	ಬ್ಯಾಂಕ ಸಾಲ	ಬ್ಯಾಂಕಾ ಉಧಾರ
ಪಾಲುಗಾರ	ಬಾಂಟೆ ಆಳಾ	ಮಧ್ಯಸ್ಥಿಕೆಗಾರ	ಬಿಚ್ಚಾಮ
ಬೇಡಿಕೆ	ಮಾಂಗಣೆ	ಸರಕುಗಳು	ಸಾಮಾನ
ನಾಣ್ಯ ವಿನಿಮಯ	ಪೈಸೆ ಅದಲ-ಬದಲ	ವರ್ಷದ ಲಾಭ	ಬರಸ್ಕಾ ಫಾಯದಾ
ವಾರ್ಷಿಕ ಲೆಕ್ಕ	ಬರಸಾಕಾ ಹಿಸೋಬ	ವಾರ್ಷಿಕ ವೇತನ	ಬರಸ್ಕಾ ಪಗಾರ
ವೇತನ, ಸಂಬಳ	ಪಗಾರ	ಸರ್ಕಾರಿ ಸಾಲ	ಸರ್ಕಾರಕಾ ಉಧಾರ
ನಷ್ಟ	ಲುಕ್ಸಾನ		

ಬರವಣಿಗೆಯ ಸಾಮಗ್ರಿಗಳು (ಲೀಖಣ ಕೆ ಸಾಮಾನ)

ಕಪಾಟು	ಕಪಾಟ	ಆರಾಮ ಕುರ್ಚಿ	ಆರಾಮ ಕುರ್ಚಿ
ಕಾಗದ	ಕಾಗಜ	ಕಾರ್ಡ್	ಕಾರ್ಡ್
ಕಪ್ಪುಶಾಯಿ	ಕಾಳಿಮಸಿ	ಬಣ್ಣದ ಪೆನ್ಸಿಲು	ರಂಗಾ ಕಿ ಸೀಸ್
ರಿಜಿಸ್ಟರ್	ರಜಿಸ್ಟರ್	ಛಿದ್ರ	ಛಿಂಡ
ಗೋಂದು	ಅಂಟ	ಬೆಂಚು	ಬಾಕ
ಮೇಜು	ಮೇಜ	ತಂತಿ	ತಾರ
ಟೀಪಾಯಿ	ಸ್ಟೂಲ	ಶಾಯಿ ಕುಡಿಕೆ	ಮಸಿ ಬಾಟ್ಲಿ
ನಕ್ಷೆ	ನಕ್ಷಾ	ನೀಲಿಶಾಯಿ	ನೀಳಿ ಮಸಿ

ಮೊಹರು	ಸಿಕ್ಕಾ	ರಬ್ಬರ್	ರಬ್ಬರ
ಕಸದ ಬುಟ್ಟಿ	ಕಚರೆ ಕಿ ಟೋಕರಿ	ಶಾಯಿ	ಮಸಿ
ಲಕೋಟೆ	ಪಾಕೀಟ		

ಪ್ರಾಣಿಗಳು (ಜಾನವರ)

ಒಂಟೆ	ಉಂಟ	ನಾಯಿ	ಕುತ್ತಾ
ಹೆಣ್ಣು ನಾಯಿ	ಕುತ್ತಿ	ಮೊಲ	ಸುಸ್ಸಾ
ಕತ್ತೆ	ಗಾಢ್ಢೊ	ಹಸು	ಗಾಂಯ
ಕುದುರೆ	ಘೋಡಾ	ಹೆಣ್ಣು ಕುದುರೆ	ಘೋಡಿ
ಚಿರತೆ	ಚಿತ್ತಾ	ಇಲಿ	ಮೂಸಾ
ಕಾಡುಹಂದಿ	ಜಂಗಲಿ ಸೂರ	ಜಿರಾಫೆ	ಜಿರಾಫ
ಮುಂಗುಸಿ	ಮುಂಗಲಿ	ಬಾಲ	ಪೂಂಚ
ಮೇಕೆ (ಗಂಡು)	ಬಕರಾ	ಮೇಕೆ (ಹೆಣ್ಣು)	ಛೇಳಿ
ಕರು	ಬಾಛಡಾ	ಬೆಕ್ಕು	ಬಿಲ್ಲಿ
ಕೋತಿ	ಬಾಂದರ	ಹುಲಿ	ಬಾಘ
ಸಾರಂಗ	ಸಾರಂಗ	ಜಿಂಕೆ	ಹರಣ
ಎತ್ತು	ಬಳಧ	ಕರಡಿ	ರಿಂಛ
ತೋಳ	ಲಾಂಡಕಾ	ಎಮ್ಮೆ	ಭೈಂಸ
ಟಗರು	ಮಿಂಡಾ	ಬೇಟೆನಾಯಿ	ಸಿಕಾರಿ ಕುತ್ತಾ
ಸಿಂಹ	ಸಿಂಹ	ಹಂದಿ	ಸೂರ
ಆನೆ	ಹಾಥಿ	ಮೊಸಳೆ	ಮಗರಮಛ

ಹುಳುಗಳು ಮತ್ತು ಕೀಟಗಳು (ಕೀಡೆ ಹೌರ ಮಕೋಡೆ)

ನಾಗರಹಾವು	ಸಾಫ	ತಿಗಣೆ	ಖಟಮಲ್
ಹಲ್ಲಿ	ಕಿರಲಿಯಾ	ವಿಷ	ಜಹರ
ವಿಷದಹಲ್ಲು	ಜಹೀರಲಾ ದಾಂತ	ಹೇನು	ಜೂಂ
ಚಿಟ್ಟೆ	ಪಾತರಗಿತ್ತಿ	ಹೆಡೆ	ಫಣಿ
ಚೇಳು	ಬಿಚ್ಛು	ಸೊಳ್ಳೆ	ಮಚ್ಛರ
ಮೀನು	ಮಚ್ಛಿ	ಕಪ್ಪೆ	ಡಾಡ
ಶಂಖ	ಶಂಖ		

ಹಕ್ಕಿಗಳು

ಮೊಟ್ಟೆ	ಅಂಡಾ	ಗೂಬೆ	ಗೂಗಿ
ಪಾರಿವಾಳ	ಕಬೂತರ	ಕೋಗಿಲೆ	ಕೋಯಲ

ಕಾಗೆ	ಕಾಗ	ಹದ್ದು	ಚಿಹ್ಲ
ಗೂಡು	ಘೋಸಲಾ	ಕೊಕ್ಕು	ಚೊಂಚ
ಗಿಳಿ	ಪೋಪಟ	ರೆಕ್ಕೆ	ಪಂಖ
ಗರಿ	ಪಂಖ	ಬಾತುಕೋಳಿ	ಬದಕ್
ಬುಲ್‌ಬುಲ್	ಬುಲಬುಲೆ	ಹುಂಜ	ಮುರಗಾ
ಕೋಳಿ	ಮುರಗಿ	ನವಿಲು (ಗಂಡು)	ಮೋರ
ನವಿಲು (ಹೆಣ್ಣು)	ಮೋರನಿ	ಹಂಸ	ಹಂಸ

ಕಂಜರಭಾಟ ಭಾಷೆಯ ವಾಕ್ಯ ರಚನೆಗಳು

ನಿನ್ನ ಹೆಸರೇನು?	*ತೇರಾ ನಾವ ಕ್ಯಾ*
ನನ್ನ ಹೆಸರು ರಾಮಸಿಂಗ್	*ಮೆರಾ ನಾವ ರಾಮಸಿಂಗ್*
ನಿಮ್ಮ ಮನೆಯಲ್ಲಿ ಎಷ್ಟು ಜನರಿದ್ದಾರೆ?	ಥಾರೆ ಘರಾಮ ಕಿತೆ ಆದಮಿ ಹೈ
ನಿನ್ನ ಮನೆ ಎಲ್ಲಿದೆ?	ತೇರಾ ಘರ ಕತೋಡ ಹೈ
ನಿಮ್ಮ ಊರು ಯಾವುದು?	ಥಾರಾ ಗಾಂವ ಕೋಯಿಸಾ
ನಿಮ್ಮ ಓಣಿ ಎಲ್ಲಿದೆ?	ಥಾರಾ ಪೇಡಾ ಕತೋಡ ಹೈ
ನಿನ್ನ ಹೆಂಡತಿ ಹೆಸರೇನು?	ತೇರೆ ಬಯರಿಕಾ ನಾವ ಕ್ಯಾ
ಏನು ಕೆಲಸ ಮಾಡುತ್ತಿ?	ಕ್ಯಾ ಕಾಮ ಕರತಾ
ತಂದೆ ಹೆಸರೇನು	ಬಾಪಾ ಕಾ ನಾವ ಕ್ಯಾ
ತಾಯಿಯ ಹೆಸರೇನು	ಮಾವ ಕಾ ನಾವ ಕ್ಯಾ
ಎಲ್ಲಿ ಹೋಗುತ್ತಿ	ಕತೋಡ ಜಾಯಿರಾ
ಅವರು ಬಂದರು	ಬೇ ಆಯಿಗೆ
ಅವರು ಎಲ್ಲಿ ಹೋದರು	ಬೇ ಕತೋಡ ಗಯೆ
ಅವರು ಎಷ್ಟು ಜನರಿದ್ದರು	ಬೇ ಕಿತಣೆ ಆದಮಿ ಥೇ
ನಿನ್ನ ಸಹೋದರನ ಹೆಸರೇನು	ತೆರೆ ಭಾಯೆಕಾ ನಾವ ಕ್ಯಾ
ನಿನ್ನ ಸಹೋದರಿಯ ಹೆಸರೇನು	ತೆರೆ ಭಾಣಾಕಾ ನಾವ ಕ್ಯಾ
ನಿನ್ನ ಹೆಂಡತಿ ಎಲ್ಲಿ	ತೇರಿ ಬಯರ ಕಡ
ದಿನಾಲು ಏನು ತಿನ್ನುತ್ತಿ	ದಿನ್ನಾ ಕಾ ಕ್ಯಾ ಖಾತ್ತಾ
ನಿನಗೆ ಹಾಡು ಹಾಡಲು ಬರುತ್ತಿದೆಯೇ	ಚಕು ಗೀತ ಗಾವಣ ಆವತಾ ಕ್ಯಾ
ನೀನು ಶಾಲೆಗೆ ಹೋಗುತ್ತಿ ಏನು	ತಂವ ಶಾಳಿ ಜಾತ್ತಾ ಕ್ಯಾ
ನಿನ್ನ ಶಾಲೆ ಎಲ್ಲಿದೆ	ತೇರಿ ಶಾಳ ಕತೋಡ ಹೈ
ಹುಡುಗ ಹುಡುಗಿ ಏನು ಮಾಡುತ್ತಾರೆ	ಛೋರಾ ಛೋರಿ ಕ್ಯಾ ಕರತೆ
ಬಸ್ಸಿನಲ್ಲಿ ಹೋಗುತ್ತಿ ಏನು	ಬಸ್ಸಾಮ ಜಾಯರಾ ಕ್ಯಾ

ಫೋನ ಮಾಡಿರಿ	ಫೋನ ಕರಿಯ
ಸೋಪಾ ಮೇಲೆ ಕುಳಿತು ಕೊಳ್ಳು	ಸೋಪೆಪರ ಬಯಸ
ಏನು ಬರೆಯುತ್ತಾ ಇದ್ದಿ	ಕ್ಯಾ ಲಿಖ್ಖಿ ರಹಾ
ನಿಮ್ಮಪ್ಪ ಎಲ್ಲಿ	ಥಾರಾ ಬಾಪ ಕಡ
ಶಾಲೆಗೆ ಹೋಗು	ಶಾಳಿ ಜಾ
ಗಿಡದ ಮೇಲೆ ಹತ್ತು	ಝಾಡಾ ಪರ ಚಢ
ಮಾವಿನ ಹಣ್ಣುತಿನ್ನು	ಆಂಬ ಖಾ
ಊಟ ಮಾಡು	ಖಾಣಾ ಖಾ
ನೀರು ಕುಡಿ	ಪಾಣಿ ಪೀ
ಹಾಲು ಕುಡಿ	ದುಧ ಪೀ
ಸೆರೆ ಕುಡಿಯಬಾರದು	ದಾರು ನಾಂಹಿ ಪೀಣಾ
ಮಾಂಸ ತಿನ್ನಬಾರದು	ಮಾಸ ನಾಂಹಿ ಖಾಣಾ

ಕೋಷ್ಟಕ: ೮.೨ ಕಂಜರಭಾಟರ ಗುಪ್ತ (ಪಾರ್ಸಿ) ಭಾಷೆ

ಕನ್ನಡ	ಕಂಜರಭಾಟ	ಗುಪ್ತಭಾಷೆ
ಹುಡುಗ	ಛೋರಾ	ಚುಬಕಾ
ಹುಡುಗಿ	ಛೋರಿ	ಚುಬಕಿ
ಪೋಲಿಸ	ಪೋಲಿಸ್	ಚಿವಡ
ಸುಮ್ಮನಿರು	ಗಪ್ಪರಹ	ಟವ್ಯಾರವಗ
ಕಲ್ಲು	ಪತ್ತರ	ನಧ್ಧರ
ಹೊಲದಲ್ಲಿ	ಖೇತ್ತಾಮ	ರೇಥ್ಥಾಮ
ತಗ್ಗು	ಖಡ್ಡಾ	ರ್ಥಡ್ಡೇಮ
ಮನೆ	ಘರ	ಖೌಲ್ಲಾ
ಗಂಡಸು	ಆದಮಿ	ಕೌದಮಿ
ನೀರು	ಪಾಣಿ	ಚಂಯ
ಓಡು	ನ್ಹಸ	ಖಿಸಕ
ದುಡ್ಡು	ಪೈಸೆ	ಡೊಖಳಿ
ಸೆರೆ	ದಾರು	ತ್ಯಾರಿ
ಹೆಂಡತಿ	ಬಯರ	ಛಿತಾಣಿ
ಗಂಡ	ಭಾಂತು	ಛಾಂತು
ಒಂದು	ಏಕ	ಬೇಕ

ಎರಡು	ದೊ	ಧೋರ
ಮೂರು	ತೀನ	ಥೇರ
ನಾಲ್ಕು	ಚಾರ	ಚೌಗ
ಐದು	ಪಾಂಚ	ನಾಂಚ
ಹತ್ತು	ದಸ	ಖಸ
ಇಪ್ಪತ್ತು	ಬೀಸ	ಖಬೀಸ
ಮೂವತ್ತು	ತೀಸ	ಖತೀಸ
ನಾಲ್ವತ್ತು	ಚಾಳಿಸ	ನಾಳಿಸ
ಐವತ್ತು	ಪಚಾಸ	ನಚಾಸ
ಕಣ್ಣು	ಆಂಖ	ಕೌಂಖ
ಕೈ	ಹಾಥ	ಖೌತ
ಹೊಟ್ಟೆ	ಪೆಟ	ನೇಟ
ಬೆರಳು	ಆಂಗಳ	ಕೌಂಗಳ
ಬಟ್ಟೆ	ಕಾಪಡೆ	ಡಿಫಡೆ
ಹರಿ	ಫಾಡ	ನ್ಹಾಢ
ಹೊಡೆ	ಫೋಡ	ನೋಹಡ
ನೀರು ಕುಡಿ	ಪಾಣಿ ಪೀ	ಚಂಯ ಟೋಫು
ಸೈಕಲ್ ಮೇಲೆ	ಸಾಯಕಲಿಪರ	ನೈಹಿಕಲಿಪರ
ಮೋಟಾರು	ಮೋಟರ	ಟುಮರ
ಸಕ್ಕರೆ	ಸಕ್ಕರ	ನ್ಹಕ್ಕರ
ಬಂಗಾರು	ಸವನ್ನಾ	ಬೌನ್ನಾ
ಆಫೀಸ	ಆಫೀಸ್	ನ್ಹಾಪೀಸ
ಕಛೇರಿ	ಕಚೇರಿ	ನಚೇರಿ
ಕಳು	ಚೋರಿ	ಬೌಲಿ
ಆಟಕ್ಕೆ	ಖೇಲಣ	ರೇಲಣ
ಮಲಗಲು	ಸೋವಣ	ನುಂಜಣ

ಭಾಷಾಶಾಸ್ತ್ರೀಯ ಹಿನ್ನೆಲೆಯಲ್ಲಿ ಕಂಜರಭಾಟ ಭಾಷೆಯ ಸ್ವರೂಪ

ಕಂಜರಭಾಟರು ಮಾತನಾಡುವ ಭಾಷೆಯನ್ನು 'ಸಾಂಸಿಬೋಲಿ' ಎಂದು ಕರೆಯಲಾಗುತ್ತದೆ. ಹಾಗೆ 'ಭಿಲ್ಕಿ' ಭಾಷೆ ಎಂದೂ ಸಹ ಇದಕ್ಕೆ ಹೆಸರಿದೆ. ಕಂಜರಬಾಟರು ಎಲ್ಲಿಯೇ ವಾಸವಾಗಿರಲಿ ಅವರು ವ್ಯವಹಾರಕ್ಕಾಗಿ ಚಾಲ್ತಿಯಲ್ಲಿರುವ ಆಯಾ ಪ್ರಾದೇಶಿಕ ಭಾಷೆಗಳನ್ನು ಮಾತನಾಡುವರು ಮತ್ತು ಮನೆಯಲ್ಲಿ ಕುಟುಂಬದ ಸದಸ್ಯರೊಂದಿಗೆ ಹಾಗೂ

ಸಮುದಾಯದವರೊಂದಿಗೆ ಮಾತನಾಡುವಾಗ ಸಾಂಸಿ ಬೋಲಿ ಭಾಷೆಯನ್ನು ಮಾತನಾಡುತ್ತಾರೆ.

ಭಾರತದಾದ್ಯಂತ ಮುಖ್ಯವಾಗಿ ಪಂಜಾಬ, ರಾಜಸ್ಥಾನ, ಹರ್ಯಾಣ, ದೆಹಲಿ, ಮಧ್ಯ ಪ್ರದೇಶ, ಉತ್ತರ ಪ್ರದೇಶ, ಕರ್ನಾಟಕ, ಆಂಧ್ರ ಪ್ರದೇಶ, ಒರಿಸ್ಸಾ ಮುಂತಾದ ಕಡೆಗಳಲ್ಲಿ ಕಂಜರಭಾಟರು ಕಂಡುಬರುತ್ತಾರೆ. ಹಾಗೆ ಭಾರತದ ಹೊರಗೆ ಪಾಕಿಸ್ತಾನದಲ್ಲಿಯೂ ಈ ಭಾಷೆ ಬಳಕೆ ಇರುವುದಾಗಿ ತಿಳಿದುಬರುತ್ತದೆ. ಈ ಭಾಷೆಗೆ ಲಿಪಿ ಇರುವುದಿಲ್ಲ. ಇಂಡೋ ಆರ್ಯನ್ ಭಾಷಾ ವರ್ಗಕ್ಕೆ ಸೇರುವ ಈ ಭಾಷೆಯು ಭಿನ್ನ ಭಿನ್ನ ಪ್ರದೇಶದ ಭಾಷೆಗಳ ಪದಗಳನ್ನು ತನ್ನೊಳಗೆ ಸೇರಿಸಿಕೊಂಡಿದೆ. ಸುಮಾರು ೬೦,೦೦೦ ಜನರು ಈ ಭಾಷೆಯನ್ನು ಮಾತನಾಡಬಹುದು ಎಂದು ಅಂದಾಜಿಸಲಾಗಿದೆ. ಸಾಂಸಿ ಎಂದರೆ ಸಾಹಸಿ ಎನ್ನುವ ಅರ್ಥದಲ್ಲಿ ಬಳಕೆಗೊಳ್ಳುತ್ತಿರಬೇಕು ಎಂದು ಕೆಲವರು ತಿಳಿದರೆ ಸ್ವಾಸ ದೇಹದೊಳಗೆ ತೆಗೆದುಕೊಳ್ಳುವ ಹಾಗೂ ಹರಬಿಡುವ ಉಸಿರಾಟ ಎನ್ನುವುದರಿಂದ ಬಂದಿದೆ ಎನ್ನುವ ವಾದವೂ ಇದೆ. ಸಾಂಸಿ ಬೋಲಿ ಭಾಷೆಯನ್ನು ಸೋಚಿ ಎಂದು ಸಹ ಕರೆಯಲಾಗುತ್ತದೆ.

ಸಾಂಸಿ ಬೋಲಿಯ ಭಾಷೆಯು ರಾಜಸ್ಥಾನದ ಪ್ರಾಂತೀಯ ಭಾಷೆಗಳಲ್ಲಿಯೇ ಅತೀ ಅಪಾಯದ ಅಂಚಿನಲ್ಲಿರುವ ಭಾಷೆ ಎಂದು ಪರಿಗಣಿಸಲ್ಪಟ್ಟಿದೆ. ಅಂದರೆ ಭಾರತೀಯ ಅಪಾಯದ ಅಂಚಿನಲ್ಲಿರುವ ಭಾಷೆಗಳಲ್ಲಿ ಇದೂ ಒಂದಾಗಿದೆ. ಈ ಭಾಷೆಯು ಯಾವುದೇ ಒಂದು ಭೌಗೋಳಿಕ ಮಿತಿಗೆ ಒಳಗಾಗಿರದೇ ಇರುವುದರಿಂದ ಹಾಗೂ ಅನೇಕ ಭಾಷೆಗಳ ಪ್ರಭಾವ ಈ ಭಾಷೆಯ ಮೇಲಾಗಿರುವುದರಿಂದ ಇದನ್ನು ಭಾಷಾಶಾಸ್ತ್ರದ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡುವುದು ಸ್ವಲ್ಪ ಕಷ್ಟ ಸಾಧ್ಯದ ಕೆಲಸವೆಂದೇ ಭಾವಿಸಬೇಕಾಗುತ್ತದೆ. ೨೦೦೧ರ ಜನಗಣತಿಯನ್ವಯ ಭಾರತದಲ್ಲಿರುವ ಸಾಂಸಿ ಬೋಲಿ ಭಾಷೆಯನ್ನು ಮಾತನಾಡುವ ಸಮುದಾಯಗಳು ೬೦,೦೦೦ ಇದ್ದರೂ ಅವರ ಮೂಲ ಸ್ವರೂಪವನ್ನು ಕಾಯ್ದಿಟ್ಟುಕೊಂಡವರು ಕೇವಲ ಶೇಕಡ ೧೧ರಷ್ಟು ಜನ ಮಾತ್ರ ಎಂದು ವರದಿಯೊಂದರಲ್ಲಿ ತಿಳಿಸಿದೆ.

ಸ್ವರಗಳು: ಸಾಂಸಿ ಬೋಲಿ ಭಾಷೆಯಲ್ಲಿ ಒಟ್ಟು ಹತ್ತು ಸ್ವರಗಳಿವೆ. ಅವುಗಳನ್ನು ಉಚ್ಚಾರಣಾ ಸ್ವರೂಪದ ಮೇಲೆ ಹೀಗೆ ತಿಳಿಸಬಹುದು.

	ಮುಂಭಾಗ	ಕೇಂದ್ರ ಮಧ್ಯಭಾಗ	ಹಿಂಭಾಗ
ಉನ್ನತ	ಈ	—	ಊ
ಕೆಳ ಉನ್ನತ	ಇ	—	ಉ
ಮಧ್ಯ	ಏ	ಆ	ಓ
ಕೆಳ	ಎ	ಅ	ಒ

ಉನ್ನತ ಮುಖ ಈ ಗೆ ಕೆಳ. ಉನ್ನತ ಮುಖ ಇ ಹಾಗೆ ಮಧ್ಯ ಮುಖ ಗೆ ಕೆಳ ಮುಖ ಎ ಕೇಂದ್ರಮಧ್ಯಭಾಗದ ಆ ಗೆ ಕೆಳಮಧ್ಯಭಾಗ ಅ ಉನ್ನತ ಹಿಂಭಾಗ ಊ ಕೆಳ ಉನ್ನತ

ಹಿಂಭಾಗ ಉ ಮಧ್ಯ ಹಿಂಭಾಗ ಮಧ್ಯ ಹಿಂಭಾಗ ಓ ಹಾಗೂ ಕೆಳ ಮುಖ ಹಿಂಭಾಗ ಒ ಗಳನ್ನು ಕಾಣಬಹುದು.

ಸಾಂಸಿಬೋಲಿಯಲ್ಲಿ ತುಟಿಸುತ್ತಿ ಮಾತನಾಡುವ ವೈಶಿಷ್ಟ್ಯವಿರುವುದಿಲ್ಲ. ಕೇವಲ ಹಿಂದಿರುವ ಸ್ವರಗಳಿಗೆ ಮಾತ್ರ ತುಟಿಸುತ್ತಿ ಮಾತನಾಡಲಾಗುತ್ತದೆ. ಸ್ವರಗಳ ವಿಸ್ತಾರವು ಈ ಭಾಷೆಯ ವಿಶೇಷ ಲಕ್ಷಣವಾಗಿದೆ. ಕ್ಷಣಿಕ ಸ್ವರಗಳು ಸಂಪೂರ್ಣವಾಗಿ ಧ್ವನಿಶಾಸ್ತ್ರಕ್ಕೆ ವಿರುದ್ಧವೆಂಬಂತೆ ಬಳಕೆಗೊಳ್ಳುವುದೇ ಈ ಭಾಷೆಯ ವೈಶಿಷ್ಟ್ಯ.

ವ್ಯಂಜನಗಳು: ಸಾಂಸಿಬೋಲಿ ಭಾಷೆಯಲ್ಲಿ ಒಟ್ಟು ೩೧ ವ್ಯಂಜನಗಳಿವೆ. ಅವುಗಳನ್ನು ಎರಡು ತುಟಿಗಳನ್ನು ಉಪಯೋಗಿಸಿ ನುಡಿಯುವ ಶಬ್ದಗಳು. ದಂತೋಷ್ಟಗಳು, ತಾಲವ್ಯಗಳು ಹಿಂದಕ್ಕೆ ತಿರುಗಿದಂತೆ ಬಳಕೆಗೊಳ್ಳುವ ಶಬ್ದಗಳು, ತಾಲವ್ಯಗಳು ಗಂಟಲಿನಿಂದ ಹೊರ ಬರುವ ಶಬ್ದಗಳು ಎಂದು ವಿಭಾಗಿಸಬಹುದು.

ಸ್ವರ ಸಂಧಿಗಳು: ಸಾಂಸಿಬೋಲಿ ಭಾಷೆಯಲ್ಲಿ ಎರಡು ಸ್ವರ ಸಂಧಿಗಳನ್ನು ಕಾಣಬಹುದು. ಇವುಗಳನ್ನು ಎಲ್ಲಾ ಸ್ಥಾನಗಳಲ್ಲಿಯೂ ಸ್ವರ ಸಂಧಿಗಳಾಗಿ ಉಚ್ಚರಿಸಲ್ಪಡುತ್ತವೆ. ಆದಕಾರಣ ಅವುಗಳ ಉಚ್ಚಾರಣೆಯ ಮೇಲೆ ಪ್ರಾಥಮಿಕ, ಮಧ್ಯ ಮತ್ತು ಕೊನೆ ಎಂದು ವಿಭಾಗಿಸಬಹುದು.

ಅನುನಾಸಿಕಗಳು: ಮೂಗಿನಿಂದ ಉಚ್ಚರಿಸಲ್ಪಡುವ ಸ್ವರಗಳು ಸಾಂಸಿಬೋಲಿಯಲ್ಲಿ ಧ್ವನಿಮಾ ರೂಪದಲ್ಲಿ ಕಾಣಬಹುದು. ಚಿನ್ಹೆ ಇರುವ ಕಡೆ ಇವು ಅನುನಾಸಿಕಗಳೆಂದು ತಿಳಿಯಬೇಕು. ಹಾಗೆ ಬೇರೆ ರೀತಿಯ ಚಿನ್ಹೆಗಳಿದ್ದರೆ ಸ್ವರ ಮುಗಿದ ತಕ್ಷಣವೇ ಹೊರಹೊಮ್ಮಿದ ಮೂಗಿನಿಂದ ಉಚ್ಚರಿತಗೊಂಡವುಗಳೆಂದು ತಿಳಿಯಬೇಕು. ಮೂಗಿನಿಂದ ಉಚ್ಚರಿಸುವಾಗ ಕ್ರಿಯೆಯು ಎಲ್ಲಾ ಸ್ವರಗಳಲ್ಲಿಯೂ ಹಾಗೂ ಎಲ್ಲ ಸ್ಥಾನಗಳಲ್ಲಿಯೂ ನಡೆಯುತ್ತವೆ. ಆದ್ದರಿಂದ ಇವುಗಳನ್ನು ಪ್ರಥಮ, ಮಧ್ಯ, ಅಂತ್ಯಸ್ಥಾನಗಳಲ್ಲಿ ಇವುಗಳ ಉಚ್ಚಾರಣೆ ಕಾಣಬಹುದು.

ಉಚ್ಚರಣೆ: ಸ್ವರ ಸಹಿತ ಉಚ್ಚಾರ ಹಾಗೂ ಸ್ವರ ಭಾರ ಹಾಕಿ ಉಚ್ಚರಿಸುವುದು. ಈ ಎರಡರಲ್ಲಿಯೂ ಸಾಂಸಿಬೋಲಿಯ ಭಾಷೆಯಲ್ಲಿ ವ್ಯತ್ಯಾಸಗಳು ಇರುವುದು ಭಿನ್ನ ಲಕ್ಷಣಗಳು ಸ್ವರಗಳಿಗೆ ಭಾರವನ್ನು ಹಾಕಿ ಉಚ್ಚರಿಸುವುದು ಮುಖ್ಯವಾಗಿ ವಿವರಣಾತ್ಮಕವಾಗಿ ಉಚ್ಚರಿಸುವಾಗ ಮಾತ್ರ ನಡೆಯುತ್ತದೆ. ಈ ರೀತಿ ಮಾಡುವುದರಿಂದ ಉಚ್ಚರಣೆಯಲ್ಲಿ ಬದಲಾವಣೆಗಳು ಕಂಡುಬರುತ್ತದೆ. ಒಂದೇ ಅಥವಾ ಅದೇ ವಾಕ್ಯವನ್ನು ಪ್ರಶ್ನಾರ್ಥಕವಾಗಿ ಮಾಡಿ ನುಡಿದಾಗ ಉಚ್ಚರಣಾ ಕ್ರಿಯೆ ಬದಲಾಗುತ್ತದೆ. ಸ್ವರ ಭಾರ ಹಾಕಿ ಹಾಗೂ ಹಾಕದೇ ಉಚ್ಚರಿಸುವುದರಿಂದ ಈ ಭಾಷೆಯಲ್ಲಿ ವಿವಿಧ ಅರ್ಥಗಳು ಉಂಟಾಗುತ್ತವೆ ಹಾಗೂ ಉಚ್ಚರಣೆಯಲ್ಲಿ ಬದಲಾವಣೆಗಳಾಗುತ್ತವೆ.

ಸಂಧಿ: ಸಾಂಸಿಬೋಲಿಯಲ್ಲಿ ಸಂಧಿಯಸಹಿತ ಧ್ವನಿಮಾವಾಗಿದೆ. ಇದನ್ನು ಕಿವಿಗೆ ಕೇಳಲಾಗದ, ಮಾತಿನ ಮಧ್ಯದ ವಿರಾಮ ಎನ್ನಬಹುದು. ಸಾಮಾನ್ಯವಾಗಿ ಕೆಳ ಹಂತದಲ್ಲಿ

ಕೋಷ್ಟಕ: ೮.೩ ಕಂಜರಭಾಟರ ಧ್ವನಿ ಸ್ವರೂಪ

	ಎರಡು ತುಟಿ ಬಳಸಿ ಉಪಯೋಗಿಸುವ ಶಬ್ದ	ದಂತೋಷ್ಟ	ಹಿಂದಕ್ಕೆ ತಿರುಗಿದ ಶಬ್ದಗಳು	ತಾಲವ್ಯಗಳು	ಗಂಟಲಿನಿಂದ ಹೊರಹೊಮ್ಮುವ ಶಬ್ದಗಳು (ಕಂಠ್ಯ)
	(Bilabial)	**(Dental)**	**(Retroblen)**	**(Palatal)**	**(Glottal)**
ನಿಲುಗಡೆ Stop					
VL Unasp	ಪ್	ತ್	ಟ್	ಚ್	ಕ್
VLasp	ಫ್	ಥ್	ಠ್	ಛ್	ಖ್
VL Unasp	ಬ್	ದ್	ಡ್	ಜ್	ಗ್
ಅನುನಾಸಿಕಗಳು (Nasal)	ಮ್	ನ್	ಣ್	—	—
ಘರ್ಷಣಾತ್ಮಕ (Fricatives)	—	ಸ್	—	—	—
ಪಾರ್ಶ್ವ ಮೂಲಕ ಹೊರಹೊಮ್ಮುವ (Lateral)	—	ಲ್	ಳ್	—	—
ಕಂಪನ ಸ್ವರಗಳು (Trill)	—	ರ್	—	—	—
ರೆಕ್ಕೆಗಳಂತೆ ಹೊಡೆದು ಕೊಳ್ಳುತ್ತಾ ಹೊರಹೊಮ್ಮುವ ಶಬ್ದಗಳು (Flap)	—	ರ್‍	—	—	—
ಅರೆ ಸ್ವರಗಳು (Semi vowels)	ವ್	—	ಯ್	—	—

ಮಾತನಾಡುವಾಗ ಈ ರೀತಿಯ ವಿರಾಮವನ್ನು ಈ ಭಾಷೆಯಲ್ಲಿ ಕಾಣಬಹುದು. ಉದಾಹರಣೆಗೆ ಕನ್ನಡ ಭಾಷೆಗೆ ಹೋಲಿಕೆ ಮಾಡಿದರೆ ಇದನ್ನು ಮನುಷ್ಯ ಪರದೇಸಿ ಹೀಗೆ ಹೇಳಬಹುದು.

ಧ್ವನಿ: ಸಾಂಸಿಬೋಲಿಯ ಭಾಷೆಯಲ್ಲಿ ಧ್ವನಿ ವ್ಯತ್ಯಾಸಗಳಿರುವುದನ್ನು ಗುರುತಿಸಬಹುದು. ಅವುಗಳನ್ನು ಉನ್ನತ, ಮಧ್ಯಮ, ಕೆಳ ಹಂತದ ಧ್ವನಿಗಳೆಂದು ವಿಭಾಗಿಸಬಹುದು. ಉನ್ನತ ಧ್ವನಿಯಲ್ಲಿ ಬಳಕೆಗೊಂಡರೆ ಕೆಳಹಂತದಲ್ಲಿ ಎಂದು ಧ್ವನಿ ಹೊಮ್ಮುತ್ತದೆ. ಮಧ್ಯಮ ಹಂತ ದ ಧ್ವನಿ ಎಲ್ಲಿಯೂ ಉಚ್ಚರಣೆಯನ್ನು ಪ್ರತಿನಿಧಿಸುವುದಿಲ್ಲ. ಏಕೆಂದರೆ ಅದು ಪುನರಾವರ್ತಿತ ನಿಯಮದಿಂದ ಅದನ್ನು ಅಂದಾಜು ಮಾಡಲು ಸಾಧ್ಯವಾಗುವುದಿಲ್ಲ.

ಶಬ್ದರಚನಾ ಶಾಸ್ತ್ರ: ಸಾಂಸಿಬೋಲಿಯಲ್ಲಿ ಪುಲ್ಲಿಂಗ ಹಾಗೂ ಸ್ತ್ರೀಲಿಂಗ ಸಚೇತನ ಲಿಂಗಗಳಿವೆ. ನಾಮ ಪದಗಳನ್ನು ಅರಿಯಲು ನಾವು ಲಿಂಗಗಳ ಈ ಭಾ,ಎಯಲ್ಲಿ ಮೊರೆ ಹೋಗಬೇಕಾಗುತ್ತದೆ. ನಾಮಪದದಲ್ಲಿ ಪದಗಳು ವ್ಯಂಜನಗಳಿಂದ ಅಂತ್ಯ ಗೊಳ್ಳುತ್ತವೆಯೋ ಅಥವಾ ಸ್ವರಗಳಿಂದ ಅಂತ್ಯಗೊಳ್ಳುತ್ತವೆಯೋ ಎನ್ನುವುದರ ಮೂಲಕ ಅವು ಯಾವ ಸ್ಥಾನದಲ್ಲಿ ನಿಲ್ಲುತ್ತವೆ ಎಂಬುದನ್ನು ಗುರುತಿಸಬಹುದು.

ವಚನ: ಸಾಂಸಿಬೋಲಿ ಭಾಷೆಯಲ್ಲಿ ಏಕವಚನ ಹಾಗೂ ಬಹುವಚನಗಳು ಕಂಡುಬರುತ್ತವೆ. ಇವುಗಳ ವ್ಯತ್ಯಾಸವನ್ನು ಅ, ಒ ಗಳ ಮೂಲಕ ಗುರುತಿಸಬಹುದು.

ಛೋರಾ ಎಂದರೆ ಹುಡುಗ ಅದೇ ಛೋರೊ ಎಂದರೆ ಹುಡುಗರು. ಅದೇ ರೀತಿಯಲ್ಲಿ ಘೋಡ ಎಂದರೆ ಕುದುರೆ, ಘೋಡೊ ಎಂದರೆ ಕುದುರೆಗಳು ಎನ್ನುವ ಅರ್ಥಗಳು ದೊರೆಯುತ್ತವೆ. ಛೋರ್ ಅ ಛೋರಾ ಏಕವಚನ ಛೋರ್ ಒ ಛೋರೊ ಬಹುವಚನ ಸ್ತ್ರೀ ಲಿಂಗಗಳಲ್ಲಿ ಬಳಕೆಗೊಳ್ಳುವಾಗ ಇದು ಸ್ವಲ್ಪ ವ್ಯತ್ಯಾಸಗೊಳ್ಳುತ್ತದೆ. ಛೋರ್ ಇ ಛೋರಿ ಹುಡುಗಿ ಏಕವಚನ ಛೋರ್ ಇ ಅ ಛೋರಿಯಾ ಹುಡುಗಿಯರು ಬಹುವಚನ.

ಲಿಂಗಗಳು: ಸಾಂಸಿಬೋಲಿಯಲ್ಲಿ ಎರಡು ರೀತಿಯ ಲಿಂಗ ವ್ಯವಸ್ಥೆ ಇರುವುದನ್ನು ಕಾಣಬಹುದು. ಒಂದು ಪುಲ್ಲಿಂಗ ಮತ್ತೊಂದು ಸ್ತ್ರೀಲಿಂಗ. ನಪುಸಕಲಿಂಗವು ಈ ಭಾಷೆಯಲ್ಲಿ ಕಂಡುಬರುವುದಿಲ್ಲ.

ಒ ಪ್ರಾಸದಿಂದ ಕೊನೆಗೊಳ್ಳುವ ಪದಗಳು ಪುಲ್ಲಿಂಗಗಳಾಗಿರುತ್ತವೆ. ಉದಾ ಚೋರೊ ಘೋಡೆ ಇತ್ಯಾದಿ

ಹಾಗೆಯೇ ಸ್ತ್ರೀ ಲಿಂಗಕ್ಕೆ ಪದದ ಕೊನೆಗೆ ಇ ಪ್ರತ್ಯಯ ಬರುತ್ತದೆ. ಉದಾ ಛೋರಿ ಘೋಡಿ ಇತ್ಯಾದಿ

ಅದೇ ರೀತಿಯಾಗಿ ಯಾವುದೇ ನಾಮಪದಗಳು ಆನ್ ಇಂದ ಕೊನೆಗೊಳ್ಳುತ್ತಿದ್ದರೆ, ಸ್ತ್ರೀಲಿಂಗ ಸೂಚಕಗಳಾಗಿರುತ್ತವೆ. ಉದಾ ರಾಜಸ್ಥಾನ ರಾಜಸ್ಥಾನಿ ಎನ್ನುವ ಅರ್ಥವನ್ನು ಈ ಭಾಷೆ ಕೊಡುತ್ತದೆ.

ಕೇವಲ ನಾಮಪದಗಳು ಯಾವ ರೀತಿಯಲ್ಲಿ ಕೊನೆಗೊಳ್ಳುತ್ತವೆ ಎನ್ನುವುದರ ಮೇಲೆ

ಗುರುತಿಸಲಾಗುವುದು. ಇವುಗಳನ್ನು ಸಚೇತನ ಹಾಗೂ ಅಚೇತನ ನಾಮಪದಗಳಲ್ಲಿಯೂ ಬಳಕೆಗೊಳ್ಳುತ್ತದೆ.

ಕಾಗತ ಕಾಗದ ಪುಲ್ಲಿಂಗ ಜಮಾತ ಸ್ತ್ರೀ ವರ್ಗ

ವಿಭಕ್ತಿ ಪ್ರತ್ಯಯಗಳು ಈ ಭಾಷೆಯಲ್ಲಿ ಸಾಂಸಿಬೋಲಿ ಇಂಡೋ ಆರ್ಯನ್ ಭಾಷೆಗಳಂತೆಯೆ ಮೂರು ಪ್ರತ್ಯಯಗಳು ಇವೆ. ಅವುಗಳನ್ನು ನೇರ ಪ್ರತ್ಯಯ, ಪರ್ಯಾಯ ಪ್ರತ್ಯಯ, ಸಂಭೋದನಾ ಪ್ರತಯ್ಯಗಳು ಎಂದು ಮೂರು ಭಾಗಗಳಲ್ಲಿ ಪ್ರಮುಖವಾಗಿ ವಿಭಾಗಿಸಲಾಗಿದೆ.

ಕೋಷ್ಟಕ: ೮.೪ ಕಂಜರಭಾಟರ ವಿಭಕ್ತಿ ಪ್ರತ್ಯಯಗಳು

ವಿಭಕ್ತಿಗಳು Case	ನಾಮಪದಗಳು Noun	ಉತ್ತರ ಪೂರ್ವ Past-position
ಪ್ರಥಮ ವಿಭಕ್ತಿ	ಚೋರೊ	--
ಪರ್ಯಾಯ ವಿಭಕ್ತಿ	ಚೋರ - ಇ	--
ದ್ವಿತೀಯ ವಿಭಕ್ತಿ	ಚೋರ್+ಇ+ನ್ಇ+ಕು	ನೆಯ್/ಕು
ಸಾಧನೀಭೂತ ವಿಭಕ್ತಿ	ಚೋರಯ್+ಸು	ಸು
ಪಂಚಮಿ	ಚೋರ್ ಇ+ಸು	ಸು
ಷಷ್ಠಿ	ಚೋರ ಇ+ಕೊ / ಕಿ / ಕಾ	ಕೊ (ಮ್ಪ್)/ಕಿ (ಫನ್/ಸ್) ಕ (ಮ್ಪ್)
ಸಪ್ತಮಿ	ಚೋರ ಇ+ಮಇ+ಪ ಆರ್	ಮ ಇ, ಪ ಆ ರ್
ಸಂಭೋದನೆ	ಓ ಚೋರಾ	

ವಿಭಕ್ತಿ ಪ್ರತ್ಯಯಗಳು ನೇರವಾಗಿದ್ದಾಗ ನಾಮಪದವು ಕತೃಪದವಾಗಿ ಬಳಕೆಗೊಳ್ಳುತ್ತದೆ. ಈ ಭಾಷೆಯಲ್ಲಿ ಪರ್ಯಾಯ ವಿಭಕ್ತಿ ಪ್ರತ್ಯಯಗಳನ್ನು ಸ್ವತಂತ್ರವಾಗಿ ಉಪಯೋಗಿಸಲಾಗುವುದಿಲ್ಲ. ವಿಭಕ್ತಿ ಪ್ರತ್ಯಯಗಳ ಸಂಬಂಧಗಳನ್ನು ಹೇಳುವಾಗ ಅವುಗಳ ಮೊದಲಿನ ಸ್ಥಾನಗಳನ್ನು ಜೊತೆಯಾಗಿಯೇ ಹೇಳಬೇಕಾಗುತ್ತದೆ. (ನೋಡಿ ವಿಭಕ್ತಿ ಪ್ರತ್ಯಯಗಳ ಕೋಷ್ಟಕ) ಸಂಭೋದನಾ ವಿಭಕ್ತಿ ಪ್ರತ್ಯಯವನ್ನು ಇನ್ನೊಬ್ಬನನ್ನು ಕುರಿತು ಕರೆಯುವಾಗ ಉಪಯೋಗಿಸಬೇಕು (ಓ ರಾಮ, ಓ ಸೀತ್ಸಾ ಇತ್ಯಾದಿ).

ಸರ್ವನಮಾಮ ಪದಗಳು: ಸಾಂಸಿಬೋಲಿ ಭಾಷೆಯಲ್ಲಿ ಆರು ವಿಧದ ಸರ್ವನಾಮ ಗಳನ್ನು ಕಾಣಬಹುದು. ಅವುಗಳನ್ನು ಕ್ರಮವಾಗಿ ಹೀಗೆ ಹೇಳಬಹುದು.

೧. ವ್ಯಕ್ತಿವಾಚಕ ಸರ್ವನಾಮಪದ

೨. ಪ್ರತಿಪಾದಕ ಸರ್ವನಾಮಪದ

೩. ಕರ್ಮಕೃತವಾಚಕ ಸರ್ವನಾಮಪದ

೪. ಪ್ರಶ್ನಾರ್ಥಕ ಸರ್ವನಾಮಪದ

೫. ಅನಿಶ್ಚಿತ ಸರ್ವನಾಮಪದ

೬. ಸಂಬಂಧಿತ ಸರ್ವನಾಮಪದ

ಸಾಮಿತ್ವ ವಾಚಕ (Possession): ಈ ಭಾಷೆಯಲ್ಲಿ ಸಾಮಿತ್ವ ವಾಚಕವನ್ನು ಕ್ರಿಯಾಪದದ ಹಾನ್ (hon) ಓ (o) ಉಪಯೋಗಿಸುವುದರೊಂದಿಗೆ ತೋರಿಸಬಹುದು. ಸಾಮಿತ್ವ ವಾಚಕವು ಸಚೇತನವಾಗಿರಬಹುದು. ಅಥವಾ ಅಚೇತನವೂ ಆಗಿರಬಹುದು. ಸಾಮಿತ್ವ ವಾಚಕವು ಕರ್ತೃಪದಗಳಲ್ಲಿ ಕ್ರಿಯಾಪದ ಹಾಗೂ ಕರ್ಮಪದಗಳೊಂದಿಗೆ ಬಳಕೆಗೊಳ್ಳುತ್ತದೆ.

ಸ್ಥಾನ	ಸ್ವಾಮಿತ್ವ ವಾಚಕ	ಉತ್ತರ ಪೂರ್ವಕತ್ವ ಸಂಬಂಧಿ
ಸಚೇತನ	ಪರಕೀಯ	ಕ್ ಇ ಕನ್ನ ಇ ಸ್ವಾಮಿತ್ವ ವಾಚಕ
ಸಚೇತನ	ಸ್ಥಳಾಂತರಗೊಳ್ಳದ್ದು	ಕೊ ಕಿ ಕ ಸ್ವಾಮಿತ್ವ ವಾಚಕ
ಅಚೇತನ	ಪರಕೀಯವಾದದ್ದು	ಮ್ ಇ ಇನ್
ಅಚೇತನ	ಸ್ಥಳಾಂತರಗೊಳ್ಳದ್ದು	ಕೊ ಕಿ ಕ ಸ್ವಾಮಿತ್ವ ವಾಚಕ
ಸಚೇತನ	ಖಾಯಂ ಆಗಿರುವುದು	ಮ್ ಇ ಇನ್
ಸಚೇತನ	ತಾತ್ಕಾಲಿಕ	ನ ಇ ಟು

ವಿಶೇಷಣಗಳು: ಸಾಂಸಿಬೋಲಿ ಭಾಷೆಯಲ್ಲಿ ವಿಶೇಷಣಗಳನ್ನು ಎರಡು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯದು ಓ ದಿಂದ ಕೊನೆಗೊಳ್ಳುವಂಥಾದ್ದು ಮತ್ತೊಂದು 'ಓ' ದಿಂದ ಕೊನೆಗೊಳ್ಳಲಾರದಂಥಾದ್ದು. ಸಾಮಾನ್ಯವಾಗಿ 'ಓ' ದಿಂದ ಕೊನೆ ಗೊಳುವಂಥವುಗಳು ಪುಲ್ಲಿಂಗಗಳಾಗಿರುತ್ತವೆ. ಅವುಗಳು ಮುಖ್ಯವಾಗಿ ನಾಮಪದದ ಜೊತೆ ಹೊಂದಾಣಿಕೆಯಿಂದ ಇರುತ್ತವೆ. ಇದರಿಂದಾಗಿಯೇ ಲಿಂಗ ಹಾಗೂ ಸಂಖ್ಯೆಗಳನ್ನು ಗುರುತಿಸಬಹುದಾಗಿದೆ. ಓ ಎನ್ನುವ ವಿಭಕ್ತಿಯು ಕ್ರಿಯಾಪದದಲ್ಲಿ ಇ ಯಾಗಿ ಬದಲಾವಣೆಗೊಳ್ಳುತ್ತದೆ. ಇಲ್ಲಿ ಇ ಯು ಏಕವಚನ ವಿಭಕ್ತಿಯಾಗಿರುತ್ತದೆ. ಇ ಯು ಅ ಎಂಬುದಾಗಿ ಬದಲಾವಣೆಗೊಳ್ಳುವ ಮೂಲಕ ಬಹುವಚನವಾಗಿ ಪರಿವರ್ತಿತವಾಗುತ್ತದೆ. ಎಲ್ಲಿ ವಿಶೇಷ ಗುಣಗಳು ಓ ದಿಂದ ಕೊನೆಗೊಳ್ಳುವುದಿಲ್ಲವೋ ನಾಮಪದದ ಸಂಖ್ಯೆಗಳಲ್ಲಿ ಹಾಗೂ ಲಿಂಗದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಹೀಗಾಗಿ ಇವುಗಳು ಯಾವುದೇ ವಿಧದಿಂದ ಬದಲಾವಣೆಗೊಳ್ಳದೆ ಅವು ಏಕವಚನ ಹಾಗೂ ಬಹುವಚನಗಳಲ್ಲಿ ಪರ್ಯಾಯ ವಿಭಕ್ತಿಗಳಾಗಿ ಉಳಿಯುತ್ತವೆ.

ವಿಭಕ್ತಿ	ಪುಲ್ಲಿಂಗ		ಸ್ತ್ರೀಲಿಂಗ	
	ಏಕವಚನ	ಬಹುವಚನ	ಏಕವಚನ	ಬಹುವಚನ
ನೇರ ಸರಳ	ಕೊಖೊ	ಕೊಖಾ	ಕೊಖೀ	ಕೊಖೀ
ವಕ್ರ	ಕೊಖೆ	ಕೊಖಾ	ಕೊಖೀ	ಕೊಖೀ

ಕ್ರಿಯಾ ವಿಶೇಷಣಗಳು

ಸಾಂಸಿಬೋಲಿಯಲ್ಲಿ ಸರ್ವನಾಮಗಳನ್ನು ಆಧರಿಸಿದ ಕ್ರಿಯಾ ವಿಶೇಷಣಗಳು ಕಂಡುಬರುತ್ತವೆ. ಅವುಗಳನ್ನು ನಾವು ಈ ರೀತಿಯಲ್ಲಿ ವಿಂಗಡಿಸಬಹುದು.

೧. ಕಾಲಿಕ ಕ್ರಿಯಾ ವಿಶೇಷಣಗಳು

೨. ಸ್ಥಳ ನಾಮಿತ ಕ್ರಿಯಾ ವಿಶೇಷಣಗಳು

೩. ಗುಣತ್ವ ಕ್ರಿಯಾ ವಿಶೇಷಣ

೪. ಸ್ಥಿತಿ ಸ್ಥಾನಿಕ ಕ್ರಿಯಾ ವಿಶೇಷಣ

೫. ನಿರ್ದೇಶಿತ ಕ್ರಿಯಾ ವಿಶೇಷಣ

೬. ಕಾರಣ ಕ್ರಿಯಾ ವಿಶೇಷಣ

ಕ್ರಿಯಾವಿಶೇಷಣ	ಸಮೀಪದ	ದೂರವರ್ತಿ	ಸಂಬಂಧಿತ	ಪ್ರಶ್ನಾರ್ತಕ
ಸಮಯ	ಆ, ಬ		ಜ, ಆ, ಡ	ಕ್, ಆ, ಡ
ಸ್ಥಳ	ಆ, ಟ,	ಬಾ, ಟ	ಜ ಆ ಟ	ಕ್ ಆ ಟ
	ಥ, ಇ	ಥ, ಇ	ಥ, ಇ	ಥ, ಇ
ನಿರ್ದೇಶಿತ	ಈ, ನ್,	ಬ, ಈ,	ಜ, ಈ, ನ್,	ಕ್, ಈ, ನ್,
	ನ್ಇ	ನ್ಣ, ಇ	ಣ್, ಇ	ಣ್, ಇ
ಗುಣಸೂಚಿತ	ಈ ಯ ಆ	ಬ ಈ ಯ ಆ	ಜಈ ಯ ಆ	ಕ್ ಈ ಯಆ
ಕಾರಣ ಸೂಚಕ	ಈ ಯ ಆ			ಕಯ ಆಯ ಈ

ಕಾಲ: ಸಂಸಿಬೋಲಿಯಲ್ಲಿ ಮೂರು ಕಾಲಗಳ ಪ್ರಯೋಗ ಮಾಡಲಾಗುತ್ತದೆ. ಅವು ವರ್ತಮಾನ, ಭೂತ ಮತ್ತು ಭವಿಷ್ಯತ್ ಹಿ ಡ್ಇ ಎಂಬುವುದರಿಂದ ಅಥವಾ ಹೇಳುವುದ ರಿಂದ ವರ್ತಮಾನಕಾಲ ಹೊ ಎಂದು ಹೇಳಿದಾಗ ಭೂತಕಾಲ, ಇವುಗಳೇ ಕ್ರೀಯಾ ಮೂಲ ಸಹಾಯಕ ಪದಗಳಾಗಿ ಮೂಲವಲ್ಲದ ಕ್ರಿಯಾ ಪದಗಳ ಜೊತೆಗೆ ಉಪಯೋಗಿಸ ಲಾಗುತ್ತದೆ. ಇವುಗಳಿಂದಲೇ ವರ್ತಮಾನ ಮತ್ತು ಭೂತ ಕಾಲಗಳನ್ನು ಗುರುತಿಸಲಾಗುತ್ತದೆ.

ದೃಷ್ಟಿ: ಇನ್ನಿತರ ಭಾಷೆಗಳಂತೆ ಸಾಂಸಿಬೋಲಿಯಲ್ಲಿಯೂ ಅಭಿವ್ಯಕ್ತಿಗೊಳಿಸುವ ದೃಷ್ಟಿಯು ಕಾಲವನ್ನು ಅಭಿವ್ಯಕ್ತಗೊಳಿಸುವ ಅಂತರಿಕ ಹೊಂದಾಣಿಕೆ ಇದೆ. ದೃಷ್ಟಿಯು ಪೂರ್ಣತ್ವ ಮತ್ತು ಅಪೂರ್ಣತ್ವದ ವ್ಯತ್ಯಾಸದ ಅರ್ಥನೀಡುವುದು. ಅಲ್ಲಿ ಸಂಪೂರ್ಣವಾದ ದೃಷ್ಟಿವಿರುವುದು ಉದಾಹರಣೆಗೆ ನಡೆದ ಅಥವಾ ಆಗಿ ಹೋದ ಸನ್ನಿವೇಶಗಳನ್ನು ಸೂಚಿಸುವ ರಚನೆಗಳು ಅವು ವರ್ತಮಾನಕ್ಕೆ ಸಂಬಂಧಿತ ದೃಷ್ಟಿ ನೋಟ ಇರುತ್ತವೆ. ಇವು ಹೆಚ್ಚುವರಿ ಸಹಾಯಕ ಕ್ರಿಯಾಪದಗಳನ್ನು ಕ್ರಿಯಾಪದಗಳಿಗೆ ಸೇರಿಸಿ ರಚನೆಗೊಂಡಿವೆ. ಹೊದೊ "ho do" ಇವು "to be" (ಮುಂದೆ) ಕ್ರಿಯಾಪದಗಳ ಭೂತಕೃದ್ವಾಚಕಗಳಾಗಿವೆ. ಈ ಸಂಪೂರ್ಣ ದೃಷ್ಟಿಯು ಈ ಮೂರು ಕಾಲಗಳಲ್ಲಿ ಉತ್ಪನ್ನವಾಗಿರುತ್ತದೆ. ಇಲ್ಲಿ ವರ್ತಮಾನ, ಭೂತ, ಭವಿಷ್ಯತ್ ಪೂರ್ಣಗೊಳ್ಳುವಿಕೆಯ ರಚನೆಗಳು ಇವೆ.

ಸ್ಥಿತಿ: ಸ್ಥಿತಿವಾಚಕ ಪದ ಇದು ವ್ಯಾಕರಣಾತ್ಮಕ ವರ್ಗದಲ್ಲಿರುವುದು. ಇದು ಪ್ರಮಾಣ ಮಾನ ಅಥವಾ ನಿಖರತೆಯ ಗುಣ ಮಾತನಾಡುವವ ಹೊಂದಿರುವನೆಂಬುವುದರ ಅಭಿವ್ಯಕ್ತಿಯಾಗಿದೆ. ಸಂಸಿಬೋಲಿಯಲ್ಲಿ ಆರು ರೀತಿಯ ವ್ಯತ್ಯಾಸಗಳನ್ನು ರಚಿಸಲಾಗಿದೆ. ಅವು ೧. ಆಜ್ಞಾಪಿಸುವ ೨. ಸೂಚಕ ೩. ವಿಧಿಯುಕ್ತ ೪. ಕಲ್ಪನಾ ೫. ಪೂರ್ವಾಗ್ರಹ ಮತ್ತು ೬. ಅನಿಶ್ಚಿತತೆ.

ನಕಾರಾತ್ಮಕ: ಸಾಂಸಿಬೋಲಿಯಲ್ಲಿ ಮೂರು ರೀತಿಯಲ್ಲಿ ನಕಾರಾತ್ಮಕ ಪದಗಳು ಉಪಯೋಗಿಸಲಾಗುವುದು. ಅವು ಕೊನ್ಯಾ (Konya) ನಾಅಯಿ (Näi) ಇವುಗಳ ಹೊರತುಪಡಿಸಿ ಕೊನ್ಯಾ konya, ಗುರುತಿಸಲಾರದಂತಹ ನಿಷೇಧಾತ್ಮಕ ಪದ ಇಂಗ್ಲಿಷ್‌ನಲ್ಲಿ 'Not' ಉಪಯೋಗಿಸಿದಂತೆಯೇ ಉಪಯೋಗಿಸಲಾಗುತ್ತದೆ. ಅಂದರೆ ಇಂಗ್ಲಿಷ್‌ನ Notಗೆ ಸಮವಾಗಿದೆ. ಯಾವಾಗ ನಾ (Na) ಮತ್ತು ನಾಅಯಿ (Näi) ಗಳು ಕಲ್ಪನಾತ್ಮಕ ಮತ್ತು ಸೂಚಾತ್ಮಕ, ನಿಬಂರ್ದಾತ್ಮಕ ತಿಳಿಸುವಲ್ಲಿ ಬಳಸುತ್ತಾರೆ. 'ಅದನ್ನು', 'ಅದು' ಇಲ್ಲವೆಂಬ ಪದಗಳನ್ನು ಮೂಲ ವಾಕ್ಯದಲ್ಲಿ (ಹೇಳಿಕೆಗಳಲ್ಲಿ) ಬಳಸುತ್ತಾರೆ.

ಪದಗಳ ಸ್ಥಾನಗಳಲ್ಲಿ ನಕಾರಾತ್ಮಕ ಪದಗಳು ಕ್ರಿಯಾಪದಗಳೊಂದಿಗೆ ಹೊಂದಿಕೆ ಮಾಡಲಾಗುವುದು ಮತ್ತು ಕ್ರಿಯಾ ಹೇಳಿಕೆಗಳೊಂದಿಗೆ ಹೊಂದಿಕೆ ಮಾಡಲಾಗುತ್ತದೆ. ನಾಕಾರಾತ್ಮಕ ಪದವು ಒಮ್ಮೆಲೇ ಕ್ರಿಯಾಪದ ಗುಂಪಿನಲ್ಲಿ ಮುಂದುವರಿಯುತ್ತದೆ. ನಿರ್ಬಂಧಿತ ಪೂರ್ವ ಕ್ರಿಯಾಪದದ ಸ್ಥಾನವು ಎರಡು ನೀತಿಗಳಲ್ಲಿ ನಕಾರಾತ್ಮಕ ಪದಗಳಲ್ಲಿ ಮೀರಿರುತ್ತದೆ. ೧. ಭಿನ್ನತೆಯ ನಿಷೇಧಾತ್ಮಕ ೨. ಆಜ್ಞಾಪಕವಲ್ಲದ ರಚನೆಗಳಲ್ಲಿ ಕ್ರಿಯಾಪದ ನಂತರದ ಸ್ಥಳಗಳಲ್ಲಿ ಇದು ನಿಷೇಧಾತ್ಮಕ ಮಿತಿಯಲ್ಲಿರುತ್ತದೆ. ಇದು ಕೇವಲ ಕ್ರಿಯಾಪದಗಳಿಗೆ ಅಥವಾ ದೃಷ್ಟಿಗೆ ಸೀಮೀತಗೊಂಡಿರುತ್ತದೆ.

ಮುಖ್ಯವಾದ ಈ ಮೂರು ನಿಷೇಧಾತ್ಮಕ ಪದಗಳ ವ್ಯತ್ಯಾಸಗಳು ಈ ರೀತಿಯಾಗಿ ಇಲ್ಲಿ ಮುಖ್ಯವಾಗಿ ಕೊನ್ಯಾ ಎಂಬ ಪದ ಕೇವಲ ಕ್ರಿಯಾ ನಂತರದ ಪದವಾಗಿಸಿ ಉಪಯೋಗಿಸಲ್ಪಡುತ್ತದೆ. ಆದರೆ ನಾ ನಾಅಯಿ ಎಂಬ ಪದಗಳು ಕ್ರಿಯಾ ನಂತರ ಉಪಯೋಗಿಸಲಾರದಂತವುಗಳು ನಿಷೇಧಿತ ಆಜ್ಞಾಪಿತವಲ್ಲದ ವ್ಯಕ್ತತೆಯು ನಾ, ನಾಅಯಿ ಎಂದು ಉಪಯೋಗಿಸಲಾಗುತ್ತದೆ.

ಸಕರ್ಮಕತ್ವ: ಸಾಂಸಿಬೋಲಿಯಲ್ಲಿ ಕ್ರಿಯಾಪದಗಳನ್ನು ಸಕರ್ಮಕ ಮತ್ತು ಅಕರ್ಮಕ ವೆಂದು ವರ್ಗಿಕರಿಸುವುದು ಸಾಧ್ಯವಿದೆ. ಇದು ಅವು ಕರ್ಮಪದ ಜೊತೆ ಉದ್ಭವಿಸಿವೆ. ಎಂಬುದನ್ನು ಆಧರಿಸಿ ತಿಳಿಯಲಾಗಿದೆ. ಬೇರೆ ವ್ಯಾಕರಣದಂತೆಯೇ ಇಲ್ಲಿಯು ಸಕರ್ಮಕ ಮತ್ತು ಅಕರ್ಮಕ ಕ್ರಿಯಾ ಪದಗಳ ವ್ಯತ್ಯಾಸ ತಿಳಿಯಬಹುದಾಗಿದೆ. ಸಾಂಸಿಬೋಲಿಯಲ್ಲಿ ಕ್ರಿಯಾಪದಗಳು ನಾಮಪದಗಳಿಂದಲೂ ಉತ್ಪನ್ನವಾಗಿವೆ. ನಾಮ ವಿಶೇಷಣಗಳು, ಕ್ರಿಯಾ ವಿಶೇಷಣಗಳು ಮತ್ತು ಕ್ರಿಯಾಪದಕೋಶದಿಂದ ತಿಳಿಯಲಾಗಿದೆ.

ಪ್ರಯೋಗಗಳು: ಕರ್ಮಣಿ ಪ್ರಯೋಗಗಳನ್ನು ಸಾಂಸಿಬೋಲಿಯಲ್ಲಿ ಈ ರೀತಿಯಾಗಿ

ರಚಿಸಲಾಗುತ್ತದೆ. ೧. ವಾಕ್ಯದಲ್ಲಿರುವ ಕರ್ತೃಪದವು ವಾಕ್ಯದಲ್ಲಿರುವ ಕರ್ಮಪದದ ಸ್ಥಾನದ ನಂತರದಲ್ಲಿ ಉಪಯೋಗಿಸಲಾಗುತ್ತದೆ. ೨. ಭೂತ ಕೃದ್ವಾಚಕ ಪದಗಳನ್ನು ಮುಖ್ಯವಾದ ಕ್ರಿಯಾಪದ ರಚನೆಯ ಕರ್ತರಿ ಸಹಾಯಕ ಕ್ರಿಯಪದಗಳೊಂದಿಗೆ ಉಪಯೋಗಿಸಲಾಗುತ್ತದೆ. ಜಾ ಹೋಗು ಮತ್ತು ಕೆಲವು ಪ್ರಕರಣಗಳಲ್ಲಿ ಅಂತ್ಯ ಪ್ರತ್ಯಯ ಸೇರಿಸಲಾಗುತ್ತದೆ. ಈಜ್ ಇದು ಭೂತ ಕೃದ್ವಾಚಕ ಬದಲಾಗಿ ಉಪಯೋಗಿಸಲಾಗುತ್ತದೆ. ಸ್ಪಷ್ಟತೆ ಕ್ರಿಯಾಪದ ಬಳಕೆ ಮಾಡಲಾಗುತ್ತದೆ. ದೀಯಿಜ ಗ್ಯೋ ಎಂಬುವದು ಕೋಡುವೆಂಬುದರ ಕರ್ತರಿ ಪದವಾಗಿದೆ. ಸ್ಪಷ್ಟ ಕ್ರಿಯಾಪದ ಕೊನೆಗೊಳ್ಳುವುದು ಕಾಲ ಮತ್ತು ದೃಷ್ಟಿಯ ಒಪ್ಪಂದದಲ್ಲಿ.

ವಾಕ್ಯದ ಪ್ರಕಾರಗಳು: ಇಂಡೋ ಆರ್ಯನ್ ಭಾಷೆಗಳಂತೆ ನಾಲ್ಕು ಮುಖ್ಯವಾದ ವಾಕ್ಯದ ಪ್ರಕಾರಗಳು ಸಾಂಸಿಬೋಲಿಯಲ್ಲಿವೆ. ಅವುಗಳು ೧. ಹೇಳಿಕಾ ವಾಕ್ಯ, ೨. ಪ್ರಶ್ನಾರ್ಥಕ ವಾಕ್ಯ, ೩. ನಮ್ರ ಅಥವಾ ಅಧಿಕಾರವಾಣಿ ವಾಕ್ಯ, ೪. ಸಂಬೋಧನ ವಾಕ್ಯ. ವಾಕ್ಯದ ಪ್ರಕಾರದ ಅರ್ಥವೆಂದರೆ ನಿರಂತರವಾಗಿ ಸಂಪರ್ಕದಲ್ಲಿರಿಸುವ ಮುಖ್ಯ ಗೊತ್ತುಪಡಿಸಿದ ವ್ಯವಸ್ಥಿತ ರಚನೆ ಮತ್ತು ಪದ ಅರ್ಥೈಯಿಸುವ ಪದಶಾಸ್ತ್ರೀಯ ಕಾರ್ಯವಾಗಿದೆ. ಆದ್ದರಿಂದ ಹೇಳಿಕಾ ವಾಕ್ಯಯು ಯಾವುದೇ ಹೇಳಿಕೆ ನೀಡುವಲ್ಲಿ ಬಳಸುವ ವಾಕ್ಯವಾಗಿದೆ. ಪ್ರಶ್ನೆಕೇಳುವಲ್ಲಿ ಪ್ರಶ್ನಾರ್ಥಕ ವಾಕ್ಯ ಉಪಯೋಗಿಸಲಾಗುತ್ತದೆ. ವಿನಮ್ರ ಮತ್ತು ಆಜ್ಞಾಪಿಸುವಲ್ಲಿ ಆಗ್ರಹಿಸುವ ವಾಕ್ಯ ಬಳಸಲಾಗುತ್ತದೆ. ಸಂಬೋಧನ ವಾಕ್ಯವನ್ನು ಕಡಿಮೆ ಅಥವಾ ಹೆಚ್ಚು ಭಾವುಕವುಳ್ಳ ಹೇಳಿಕೆಗಳನ್ನು ನೀಡುವಲ್ಲಿ ಉಪಯೋಗಿಸಲಾಗುತ್ತದೆ. ಹೀಗೆ ಇವೆಲ್ಲ ವಾಕ್ಯಗಳನ್ನು ವ್ಯಾಕರಣಬದ್ಧವಾಗಿ ವ್ಯತ್ಯಾಸ ರೀತಿಯಿಂದ ಬಳಸಲಾಗುತ್ತದೆ.

ಸರಳ ವಾಕ್ಯ: ಸರಳ ವಾಕ್ಯವೆಂದರೆ ಕೇವಲ ಒಂದೇ ಮೂಲ ಕ್ರಿಯಾಪದ ಬಳಸುವ ಮತ್ತು ಅಭಿವ್ಯಕ್ತಿಸುವ ಅಥವಾ ತಿಳಿಯಲ್ಪಡುವ ವಾಕ್ಯವಾಗಿದೆ. ವಾಕ್ಯಗಳಲ್ಲಿ ಗುರುತಿಸಲಾರದ ಪದಗಳನ್ನು ಈ ರೀತಿ ಸಂಯೋಜಿಸಿ ವಾಕ್ಯ ರಚಿಸಲಾಗುವುದು. ಅದು SOV (Subject-Object-Verb) ಅಂದರೆ ಕೃ+ಕ+ಕ್ರಿ (ಕರ್ತೃ+ಕರ್ಮ+ಕ್ರಿಯಾಪದ) ಪದಗಳಿಗೆ ಸಂಬಂಧಿಸಿ ನಾಮಪದ ಹೇಳಿಕೆಗಳಲ್ಲಿ ನೀಡಲಾಗುವುದು. ನಾನು ವಿಶೇಷಣಗಳು ಕೊಡುಗೆಗಳು (A) ಮತ್ತು ಮೂಲರೂಪಾಂತರಗಳು (G) ಮುಖ್ಯ ನಾಮಪದಗಳನ್ನು ಹೇಳುತ್ತವೆ. ಹಾಗೂ ಆದರಿಂದ ಸಾಂಸಿಬೋಲಿಯಲ್ಲಿ AN ಮತ್ತು GN ಭಾಷೆಯಂತೆ ಗುಣವನ್ನಾಗಿ ತಿಳಿಯಲಾಗಿದೆ. S O V ಭಾಷೆಗಳು ಸ್ಥಾನಾಂತ್ಯಗಳಾಗಿವೆ. ಅವು ಅಷ್ಟಾಗಿ ಪೂರ್ವಸ್ಥಾನಿಕಗಳಲ್ಲಿ ಈ ಸಾಮಾನ್ಯ ಪದ್ಧತಿ ಸಾಂಸಿಬೋಲಿಯಲ್ಲಿ ಸತ್ಯವಾಗಿ ಗೋಚರಿಸಿದೆ.

ಹೋಲಿಕೆಗಳ ರಚನೆಗಳಲ್ಲಿ - ಹೋಲಿಕಾ ಮಟ್ಟವು ನಾಮವಿಶೇಷಣ ಹೋಲಿಕೆಯಲ್ಲಿ ಮುಂದುವರೆದಿದೆ. ಸಹಾಯಕ ಕ್ರಿಯಾಪದಗಳು ಮುಖ್ಯ ಕ್ರಿಯಾಪದಗಳನ್ನು ಅನುಸರಿಸುತ್ತವೆ ಮತ್ತು ಕ್ರಿಯಾವಿಶೇಷಣದ ರೂಪಾಂತರಗಳು ಮತ್ತು ನಿರಾಕರಣೆಗಳು ಕ್ರಿಯಾ ಪದದ ಮುಂದೆ ಉಪಯೋಗಿಸಲಾಗುವುದು. ಕ್ರಿಯಾವಿಶೇಷಣಗಳು ವಾಕ್ಯಗಳಾಗಿ ಮುಂದು

ವರಿಯುತ್ತವೆ. ಸಂಬಂಧಿತ ಭಾಗದ ರಚನೆಯಲ್ಲಿ ಸಂಬಂಧಿತ ಭಾಗವು ಮುಖ್ಯ ನಾಮ ಪದವನ್ನು ಅನುಸರಿಸುತ್ತವೆ.

ಸಂಕೀರ್ಣವಾಕ್ಯ: ಸಂಕೀರ್ಣ ವಾಕ್ಯವೆಂದರೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾಗಗಳನ್ನು ಒಂದೇ ವಾಕ್ಯದಲ್ಲಿ ಬಳಸುವುದಾಗಿದೆ. ಈ ಸಹಭಾಗಿತ್ವ ಭಾಗಗಳು ತಮ್ಮಷ್ಟಕ್ಕೆ ಸ್ವತಂತ್ರವಾಗಿದ್ದು ಇವುಗಳು ಸಂಯೋಜನಾತ್ಮಕ ಪದಗಳಿಂದ ಜೋಡಿಸಲಾಗುತ್ತದೆ. ಇದನ್ನು ಸಾಪೇಕ್ಷ ಪದ್ಧತಿ ಎಂದು ಕರೆಯಲಾಗಿದೆ. ಈ ಸಾಪೇಕ್ಷೆಯು ಎರಡು ರೀತಿಯ ಹೇಳಿಕೆಗಳನ್ನು ತಿಳಿಸುವ ಅಥವಾ ತೋರ್ಪಡಿಸುವ ಪದಗಳನ್ನು ಒಳಗೊಂಡಿರುತ್ತದೆ. ಸಾಪೇಕ್ಷಗಳ ಅಥವಾ ಸಾಪೇಕ್ಷ ಸಂಯೋಜಕಗಳು ಈ ಸಾಪೇಕ್ಷಗಳು ಒಂದೇ ಶ್ರೇಣಿಯ ಸಂಯೋಜಕಗಳಾಗಿವೆ. ಸಾಂಸಿಬೋಲಿಯಲ್ಲಿ ಈ ಕೆಳಗಿನ ಎರಡು ಅಂಶಗಳಲ್ಲಿ ಸಾಪೇಕ್ಷಗಳನ್ನು ಉತ್ಪನ್ನ ಮಾಡಲು ಅಪ್ಪಣೆಗ್ಯೆಯುವುದು ಅವು ವಾಕ್ಯದ ಭಾಗದಲ್ಲಿಯು ಮತ್ತು ವಾಕ್ಯದ ಮಟ್ಟದಲ್ಲಿಯೂ ೧. ಸಂಯೋಜಕ ಮತ್ತು ೨. ವಿರೋಧ ಸೂಚಕ ಸಂಯೋಜಕ päD 'but' ಪಾಡ ಆದರೆ ೩. ಅಸಂಯೋಜಕ kE/jya 'or' ಕೇ/ಜಯಾ (ಅಥವಾ) ಮತ್ತು ೪. ನಿಷೇಧಾತ್ಮಕ ಅಸಯೋಜಕಗಳು nä... nä... neither... nor (ನಾ-ನಾ), (ಇಲ್ಲ-ಇಲ್ಲ).

ಸಾಮಾನ್ಯವಾಗಿ ಭಾರತದಂತಹ ವೈವಿಧ್ಯ ಸಾಂಸ್ಕೃತಿಕ ದೇಶದಲ್ಲಿ ಭಾಷೆಗಳ ಗುರುತು ಹಚ್ಚುವದು ಪ್ರಾಂತೀಯತೆಯ ನಿರ್ವಹಣೆಯಿಂದ ಸಾಧ್ಯವೆಂದು ನಂಬಲಾಗಿದೆ. ಆದರೆ ಅತೀ ವೇಗವಾಗಿ ಬದಲಾಗುತ್ತಿರುವ ಸಾಮಾಜಿಕ, ಆರ್ಥಿಕ ಹಂತಗಳಿಂದ ಮತ್ತು ವಲಸೆಗಳಿಂದ (ಚಿಕ್ಕ) ಅಲ್ಪಸಂಖ್ಯಾತ ಭಾಷೆಗಳ ಮಟ್ಟವು ಕೆಳಗೆ ಕುಸಿಯುತ್ತದೆ. ಹೀಗಾಗಿ ಭೌಗೋಳಿಕ ಸ್ಥಾನಗಳು ಮತ್ತು ಸಾಮಾಜಿಕ ಆರ್ಥಿಕ ಅಂಶಗಳು ಬಹಳ ಕಡಿಮೆಯಾಗಿ ಪ್ರಾಂತೀಯ ಭಾಷೆಗಳಲ್ಲಿ ಸ್ವಲ್ಪ ಅಂಶಗಳಾಗಲಿ ಅಥವಾ ಸಂಪೂರ್ಣವಾಗಲಿ ಸಂಯೋಜನೆ ಗೊಂಡಿವೆ.

ಸಾಂಸಿಬೋಲಿಗೆ ಅಪಾಯವು ಕೇವಲ ಸಾಂಸಿಗಳ ವಲಸೆಯಿಂದಾಗಿ ಅಷ್ಟೇ ಆಗಿಲ್ಲ. ಹಿಂದಿ ಭಾಷಿಕ ಅಥವಾ ಪಂಜಾಬಿ ಭಾಷಿಕರಲ್ಲಿ ಸಾಂಸಿಬೋಲಿಗಳು ಒಂದಾಗಿ ಹೋಗಿದ್ದ ರಿಂದಲೂ ಅಪಾಯವುಂಟಾಗಿದೆ. ಕೆಲವೇ ಮಕ್ಕಳು ಸಾಂಸಿಬೋಲಿ ಕಲಿಯುತ್ತಿದ್ದಾರೆ. ಹೀಗಾಗಿ ಅಳಿವಿನ ಅಪಾಯದಲ್ಲಿ ಭಾಷೆ ಬಂದು ಮುಟ್ಟಿದೆ. ಈ ಬಾಷೆಯ ಬಳಸುವವರ ಸಂಖ್ಯೆ ತೀವ್ರವಾಗಿ ಕ್ಷೀಣವಾಗಲು ರಾಜಕೀಯ ಮತ್ತು ಆರ್ಥಿಕ ಒತ್ತಡಗಳು, ಈ ಸಮುದಾಯದ ಮೇಲೆ ಉಂಟಾಗಿರುವುದರಿಂದ ಇಂತಹ ಸಾಂಪ್ರದಾಯಿಕ ಭಾಷೆಯನ್ನು ಹೊಸ ಸಮುದಾಯದ ಉದ್ದೇಶವು ಕಡೆಗಣಿಸಿದೆ. ಒಟ್ಟಾಗಿ ಇಂದಿನ ಅತೀವ ಭಾಷಿಕ ಶಾಸ್ತ್ರದಲ್ಲಿ ಸಾಂಸಿಬೋಲಿಯು ಭೌಗೋಳಿಕ ಸಾಮಾಜಿಕ ಮತ್ತು ರಾಜಕೀಯ ಒತ್ತಡಗಳಿಂದ ಹೊರಬಂದು ಪ್ರಕಟಗೊಳ್ಳಬೇಕಾಗಿದೆ.

೯

ಪ್ರದರ್ಶಕ ಕಲೆಗಳು

ಜನಪದ ಕಲೆಗಳಲ್ಲಿ ನೃತ್ಯ, ಸಂಗೀತ, ಶಿಲ್ಪಕಲೆ, ಚಿತ್ರ, ಹಾಡುವುದು ಮುಖ್ಯ ವಾಗಿರುತ್ತದೆ. ಈ ಕಲೆಗಳು ಸಮುದಾಯದ ಜೀವನಾಡಿ ಇದ್ದಂತೆ. ಪ್ರತಿಯೊಂದು ಸಮುದಾಯ ತನ್ನದೇ ಆದ ರೀತಿಯಲ್ಲಿ ಕಲೆಗಳನ್ನು ಪ್ರದರ್ಶಿಸುತ್ತಾ ಬಂದಿದೆ. ಧಾರ್ಮಿಕ ಹಿನ್ನೆಲೆಯ ಮನರಂಜನೆಯ ಮುಖಾಂತರ ಕಲೆಯನ್ನು ಉಳಿಸಿಕೊಂಡು ಬಂದಿದ್ದಾರೆ. ಕಂಜರಭಾಟರು ಕುಣಿತ, ಹಾಡುವುದು ಮತ್ತು ಸಂಗೀತದಲ್ಲಿ ನಿಪುಣರಾಗಿದ್ದಾರೆ.

ನೃತ್ಯ: ಕಂಜರಭಾಟರು ವಾದ್ಯಗಳ ತಾಳಕ್ಕೆ ತಕ್ಕಂತೆ ಹೆಚ್ಚೆ ಹಾಕುತ್ತಾ ಸಾಮೂಹಿಕವಾಗಿ ನೃತ್ಯ ಮಾಡುತ್ತಾರೆ. ಗುಂಪು ಕುಣಿತದಲ್ಲಿ ಅವರ ವೇಷಭೂಷಣಗಳು ಬಹು ಆಕರ್ಷಣೀಯ ವಾಗಿರುತ್ತವೆ. ಬಣ್ಣ ಬಣ್ಣದ ಬಟ್ಟೆಗಳನ್ನು ಧರಿಸಿ ಕುಣಿಯುತ್ತಾರೆ. ನೃತ್ಯ ಇವರಿಗೆ ಒಲಿದ ಕಲೆಯಾಗಿದೆ. ನೃತ್ಯಕ್ಕಾಗಿ ಪೂರ್ವದಿಂದಲೂ ಡೋಲಕ ಉಪಯೋಗಿಸುತ್ತಾ ಬಂದಿದ್ದಾರೆ. ಈಗಲೂ ಸಹ ಡೋಲಕ ವಾದ್ಯವನ್ನು ಉಪಯೋಗಿಸಿ ನೃತ್ಯ ಮಾಡುತ್ತಾರೆ. ಹೆಣ್ಣು ಮಕ್ಕಳು ಗುಂಪು ನೃತ್ಯಗಳಲ್ಲಿ ಎತ್ತಿದ ಕೈ. ಹೋಳಿ ಹಬ್ಬದಲ್ಲಿ, ಮದುವೆಯ ಸಮಯಕ್ಕೆ ನೃತ್ಯ ಮಾಡುತ್ತಾರೆ. ಶ್ರೀ ಕೃಷ್ಣನ ಗೀತೆಗಳೊಂದಿಗೆ ವೇಷ-ಭೂಷಣಗಳನ್ನು ಧರಿಸಿ ಕುಣಿಯುತ್ತಾರೆ. ಇದಲ್ಲದೆ ವಿವಿಧ ದೇವತೆಗಳ ರೂಪ ಧರಿಸಿ ಗೀತೆಯೊಂದಿಗೆ ನೃತ್ಯ ಮಾಡುತ್ತಾರೆ. ಕಂಜರಭಾಟ ಯುವಕ-ಯುವತಿಯರು ಸೇರಿ ಸಾಮೂಹಿಕವಾಗಿ ಕೋಲಾಟ ಹಾಕುತ್ತಾ ನೃತ್ಯ ಮಾಡುತ್ತಾರೆ. ಕೋಲಾಟದ ನೃತ್ಯದಲ್ಲಿ ಯುವತಿಯರು ಲಂಗಾ, ಜಂಪರ, ಓಡಣಿಯನ್ನು ಉಪಯೋಗಿಸುತ್ತಾರೆ. ಭಜನೆಯ ಹಾಡುಗಳನ್ನು ಹಾಡುತ್ತಾರೆ. ಇವರು ದೈವಭಕ್ತರು ದೇವರನ್ನು ಒಲಿಸುವುದರ ಸಲುವಾಗಿ ತಮ್ಮದೇ ಆದ ರೀತಿಯಲ್ಲಿ ಭಜನೆಯ ಹಾಡುಗಳನ್ನು ಹಾಡುತ್ತಾರೆ. ಢೋಲಕ, ಮೃದಂಗ, ತಬಲಾ ಬಾರಿಸುವುದರಲ್ಲಿ ಇವರು ಸಿದ್ಧಹಸ್ತರು, ಸಾಮಾನ್ಯವಾಗಿ ಗಂಡಸರು ಈ ವಾದ್ಯಗಳನ್ನು ನುಡಿಸುತ್ತಾರೆ.

ರಂಗೋಲಿ, ಕಸೂತಿ ಇವು ಹೆಣ್ಣು ಮಕ್ಕಳ ಅತ್ಯಂತ ಪ್ರಿಯ ಕಲೆಗಳು. ಮನೆಯ ಅಂಗಳ, ದೇವಸ್ಥಾನ ಮುಂತಾದ ಕಡೆ ಬಣ್ಣ ಬಣ್ಣದಿಂದ ಆಕರ್ಷಣೆಯ ರಂಗೋಲಿ ಹಾಕುತ್ತಾರೆ. ಹಬ್ಬಗಳಲ್ಲಿ ಅಥವಾ ಯಾವುದಾದರು ಶುಭದಿನವಿದ್ದಾಗ ರಂಗೋಲಿ

ಹಾಕುವುದು ಕಂಡುಬರುತ್ತದೆ. ಕಸೂತಿಯನ್ನು ಮಹಿಳೆಯರು ಹಾಕುತ್ತಾರೆ. ಕಂಜರಭಾಟ ಸಮುದಾಯದ ಮಹಿಳೆಯರು ದಾರದ ಎಳೆಗಳಿಂದ ಕಸೂತಿ ಹಚ್ಚುತ್ತಾರೆ. ಬಣ್ಣ ಬಣ್ಣದ ದಾರಗಳನ್ನು ಉಪಯೋಗಿಸುತ್ತಾರೆ. ಬಟ್ಟೆಗಳ ಮೇಲೆ ನಾನಾ ರೀತಿಯ ಚಿತ್ರಗಳನ್ನು ತೆಗೆದು ಅದರಲ್ಲಿ ದಾರದ ಎಳೆಗಳಿಂದ ತುಂಬಿಸುತ್ತಾರೆ. ಈ ರೀತಿ ವಿವಿಧ ಕಲೆಗಳಲ್ಲಿ ನಿಪುಣರಾಗಿದ್ದು ಯಾವುದೇ ಹೊರ ಪ್ರಪಂಚದ ಪ್ರೋತ್ಸಾಹ ದೊರಯದ ಕಾರಣ ಈ ಕಲೆಗಳು ಮುಖ್ಯವಾಹಿನಿಗೆ ಮುಂದುಬರುವಲ್ಲಿ ಸಾಧ್ಯವಾಗುತ್ತಿಲ್ಲ.

ಕ್ರೀಡೆಗಳು

ಪ್ರತಿಯೊಂದು ಸಮುದಾಯದ ಜನ ತಮ್ಮ ಬಿಡುವಿನ ವೇಳೆಯಲ್ಲಿ ನಾನಾ ಕ್ರೀಡೆಗಳ ಹಾಗೂ ವಿನೋದಗಳಲ್ಲಿ ತೊಡಗಿಕೊಳ್ಳುವುದು ಸಹಜವಷ್ಟೆ. ಹಾಗೆ ಕಂಜರಭಾಟರೂ ತಮ್ಮ ಬಿಡುವಿನ ವೇಳೆಯಲ್ಲಿ ಹುಲಿ-ದನ, ಕಣ್ಣಾಮುಚ್ಚಾಲೆ, ಕವಡೆ, ಚೌಕಾಬಾರ ಮುಂತಾದ ಆಟಗಳನ್ನು ಆಡುತ್ತಾರೆ. ಸಾಮಾನ್ಯವಾಗಿ ಇವರ ಮಕ್ಕಳು ಕಬ್ಬಡಿ, ಕಣ್ಣಾಮುಚ್ಚಾಲೆ, ಮರಕೋತಿ, ಚಿನ್ನಿದಾಂಡು ಮುಂತಾದವುಗಳನ್ನು ಆಡಿದರೆ ಹಿರಿಯ ಪುರುಷರು ಹುಲಿ-ದನದಂತಹ ಒಂದೇ ಕಡೆ ಕುಳಿತು ಆಡಬಹುದಾದ ಆಟಗಳನ್ನು ಆಡುತ್ತಾರೆ. ಹೆಣ್ಣು ಮಕ್ಕಳು ಚೌಕಾಬಾರ, ಕವಡೆಯಂತಹ ಆಟಗಳನ್ನು ಆಡುವುದನ್ನು ಕಾಣಬಹುದಾಗಿದೆ. ಇತ್ತೀಚೆಗೆ ನಗರಗಳಲ್ಲಿ ವಾಸಿಸುವ ಕಂಜರಭಾಟ ಯುವಕರು ಹೊಸ ತಲೆಮಾರಿನ ಆಟಗಳಾದ ಹಾಕಿ, ಫುಟಬಾಲ್, ಕಬ್ಬಡಿ, ಮುಂತಾದ ಆಟಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಿರುವುದನ್ನು ಕಾಣಬಹುದಾಗಿದೆ.

ಕರ್ನಾಟಕದಲ್ಲಿ ಕಂಜರಭಾಟರು ಹಾಕಿ, ಓಟ, ಫುಟ್‌ಬಾಲ, ಕಬ್ಬಡ್ಡಿಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದಾರೆ. ಹಾಕಿ ಆಟ ನಮ್ಮ ದೇಶದ ಆಟವಾಗಿದೆ. ಈ ಆಟವನ್ನು ಇವರು ತಮ್ಮ ಮನೆಯ ಆಟವನ್ನಾಗಿ ಮಾಡಿಕೊಂಡಿದ್ದಾರೆ. ಒಂದೊಂದು ಮನೆಯಲ್ಲಿ ೩-೪ ಹಾಕಿ ಆಟಗಾರರು ಇದ್ದಾರೆ. ಬ್ರಿಟಿಷರ್ ಕಾಲದಿಂದಲೂ ಇವರಲ್ಲಿ ಹಲವರು ಹಾಕಿ ಆಟದಲ್ಲಿ ಆಸಕ್ತಿ ವಹಿಸಿದ್ದಾರೆ. ಬ್ರಿಟಿಷರು ಇವರಿಗೆ ತರಬೇತಿಯನ್ನು ಕೊಡುತ್ತಿದ್ದರು. ದಿರ್ಯಾ, ದಲ್ಯಾ, ರುಬ್ಬಿ, ಮಾಣಿಕ, ಇವರು ಉತ್ತಮ ಆಟಗಾರರಾಗಿ ಸಮುದಾಯಕ್ಕೆ ಕೀರ್ತಿಯನ್ನು ತಂದಿದ್ದಾರೆ. ಈ ಸಮುದಾಯದ ಚಿಕ್ಕಮಕ್ಕಳು ಜಾಲಿಕಟ್ಟಿಗೆಯ ಸ್ಟಿಕ್‌ಗಳನ್ನು ಮಾಡಿ ಹಾಕಿ ಆಟವನ್ನು ಆಡುತ್ತಿದ್ದರು. ಬರಬರುತ್ತಾ ಇವರು ಈ ಆಟದಲ್ಲಿ ಒಳ್ಳೆಯ ಪ್ರಗತಿಯನ್ನು ಸಾಧಿಸಿ ಅಂತರರಾಷ್ಟ್ರ, ರಾಷ್ಟ್ರಮಟ್ಟದ ಹಾಕಿ ಪಟುಗಳಾಗಿ ಹೊರಹೊಮ್ಮಿದ್ದರು. ಈಗ ಈ ಸಮುದಾಯದಲ್ಲಿ ಸಾಕಷ್ಟು ಹಾಕಿ ಪಟ್ಟುಗಳಿದ್ದು ಸಮುದಾಯಕ್ಕೆ, ಊರಿಗೆ, ದೇಶಕ್ಕೆ, ರಾಜ್ಯಕ್ಕೆ, ಕೀರ್ತಿ ತಂದಿದ್ದಾರೆ.

ಬೇನು ಭಾಟ : ಅಂತರರಾಷ್ಟ್ರೀಯ ಹಾಕಿ ಪಟು ಬೇನು ಭಾಟ ಗದುಗಿನ ಬಡ ಕುಟುಂಬದಲ್ಲಿ ಜನಿಸಿದರು. ಚಿಕ್ಕವಯಸ್ಸಿನಲ್ಲಿ ಹಾಕಿ ಆಟವನ್ನು ಆಡತೊಡಗಿದರು. ರೇಲ್ವೆ ನೌಕರರಾಗಿ ಒಳ್ಳೆಯ ಹಾಕಿ ಪಟುಗಳಾಗಿ ಬೆಳಕಿಗೆ ಬಂದರು. ಇವರು ದೆಹಲಿ, ಮುಂಬಾಯಿ,

ಕಲಕತ್ತಾ, ಮದ್ರಾಸ್, ಬೆಂಗಳೂರು, ವಾರಣಾಸಿ, ಜಲಂದರ, ಹೈದರಾಬಾದ್, ಕೊಯಮತ್ತೂರು ಮುಂತಾದ ನಗರಗಳಲ್ಲಿ ಆಟವನ್ನು ಆಡಿದ್ದಾರೆ. ರಾಷ್ಟ್ರಮಟ್ಟ ಹಾಗೂ ಅಂತರ ರಾಷ್ಟ್ರ ಮಟ್ಟದಲ್ಲಿ ಆಡಿ ರಾಷ್ಟ್ರಕ್ಕೆ ಕೀರ್ತಿಯನ್ನು ತಂದಿದ್ದಾರೆ. ಮೂರು ಸಲ ಶ್ರೀಲಂಕಾಕ್ಕೆ ಹೋಗಿ ಆಡಿಬಂದಿದ್ದಾರೆ. ಅಂತರಾಷ್ಟ್ರೀಯ ಆಟಗಾರರಾದರೂ ಇವರಿಗೆ ಸರ್ಕಾರದಿಂದ ದೊರೆಯಬೇಕಾದ ಯಾವ ಸೌಲಭ್ಯಗಳು, ಸವಲತ್ತುಗಳು ದೊರೆಯದೇ ಕಠಿಣ ಜೀವನವನ್ನು ಸಾಗಿಸುತ್ತಿದ್ದಾರೆ. ಕಂಜರಭಾಟರಲ್ಲಿಯೇ ವಿದೇಶದಲ್ಲಿ ಆಡಿದ ಪ್ರಥಮ ಕ್ರೀಡಾಪಟು ಇವರು ಲೆಫ್ಟ್‌ಔಟ್ ಆಟಗಾರನಾಗಿದ್ದಾರೆ.

ರಾಜು ಜೆ ಬಾಗಡೆ : ಅಂತರ ರಾಷ್ಟ್ರೀಯ ಹಾಕಿ ಕ್ರೀಡಾಪಟು ಇವರು. ಹಾಕಿ ಆಟಗಾರ ರಾಜಕುಮಾರ ಜಾಕ್ಸಿನ್ ಬಾಗಡೆ ಗದುಗಿನಲ್ಲಿ ಹುಟ್ಟಿ ಮಧ್ಯಮಿಕ ಶಿಕ್ಷಣವನ್ನು ಗದುಗಿನಲ್ಲಿ ಮುಗಿಸಿ ಕ್ರೀಡಾ ಹಾಸ್ಟೆಲಿಗೆ ಆಯ್ಕೆಯಾಗಿ ಬೆಂಗಳೂರಿಗೆ ತೆರಳಿ ಶಿಕ್ಷಣದ ಜೊತೆಗೆ ಹಾಕಿ ಆಟದ ತರಬೇತಿಯನ್ನು ಪಡೆದರು. ಬೆಂಗಳೂರಿನಲ್ಲಿ ತರಬೇತಿಯನ್ನು ಪಡೆದು ಉತ್ತಮ ಆಟಗಾರನಾಗಿ ಬೆಂಗಳೂರು ಹೀರೊ ಎಂದು ಹೆಸರುವಾಸಿಯಾದರು. ದೆಹಲಿ, ಮುಂಬಾಯಿ, ಮದ್ರಾಸ್, ಜಲಂದರ, ಪಟಿಯಾಲಾ, ಜಮ್ಮು ಮತ್ತು ಕಾಶ್ಮೀರ, ಗ್ವಾಲಿಯರ, ಉದಯಪುರ, ಕೊಯಲಪಟ್ಟ ಮತ್ತು ದೇಶದ ಮೂಲೆಮೂಲೆಗಳಲ್ಲಿ ಆಡಿ ಕೀರ್ತಿ ತಂದವರು. ೧೯೯೧ರಲ್ಲಿ ಭಾರತ ಹಾಕಿ ಪಂಗಡಕ್ಕೆ ಆಯ್ಕೆಯಾಗಿ ಜರ್ಮನ, ಸ್ಪೇನ್, ಹಾಲಂಡ ದೇಶಗಳಲ್ಲಿ ಆಡಿದರು. ಮುಂದೆ ದಕ್ಷಿಣ ಆಫ್ರಿಕಾ, ಮಲೇಶಿಯಾ, ದುಬೈಗಳಲ್ಲಿ ಆಡಿದರು. ಭಾರತದಲ್ಲಿ ಕೆನ್ಯಾ, ಇಟಲಿ ತಂಡಗಳ ವಿರುದ್ಧ ಆಟವನ್ನು ಆಡಿದ್ದಾರೆ. ಮುಂಬಾಯಿಯ ಟಾಟಾ ಕಂಪನಿಯಲ್ಲಿ ಕೆಲಸವನ್ನು ಮಾಡುತ್ತಿದ್ದಾರೆ. ಹಾಕಿ ಆಟದಲ್ಲಿ ಉತ್ತಮ ಆಟಗಾರ ಎಂಬ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಸೆಂಟರ್‌ಫಾರ್ವಡ ಆಟಗಾರರಾಗಿ ಗೋಲು ಹೊಡೆಯುವುದರಲ್ಲಿ ನಿಪುಣರಾಗಿದ್ದಾರೆ. "ಬಾಂಬೆ ಬಾಂಬರ" ಎಂದು ಗೋಲು ಹೊಡೆಯುವವರಲ್ಲಿ ಪ್ರಸಿದ್ಧರಾಗಿದ್ದಾರೆ. ಬುಡಕಟ್ಟು ಜನಾಂಗದಲ್ಲಿ ಹುಟ್ಟಿ ದೇಶಕ್ಕೆ ಕೀರ್ತಿ ತರುವ ಕಾರ್ಯವನ್ನು ಮಾಡಿದ್ದಾರೆ.

ಜಾಕ್ಸಿನ್ ಮಾನಸಿಂಗ ಬಾಗಡೆ, ವಿಜಯಸಿಂಗ ತಾತ್ಯಾ ಗಾಗಡೆ, ಅನಾರ ಭಾಟ, ಈ ಸಮುದಾಯದ ಉತ್ತಮ ಹಾಕಿ ಪಟುಗಳು. ಗದಗ, ಹುಬ್ಬಳ್ಳಿಯಲ್ಲಿ ಈ ಸಮುದಾಯಕ್ಕೆ ಸೇರಿದ ಹಾಕಿ ಪಟುಗಳು ಇದ್ದಾರೆ. ಅಂತರರಾಷ್ಟ್ರ, ರಾಷ್ಟ್ರ, ವಿಶ್ವವಿದ್ಯಾಲಯ ಮಟ್ಟದಲ್ಲಿ ಆಡಿ ಸಮುದಾಯಕ್ಕೆ ಊರಿಗೆ, ರಾಜ್ಯಕ್ಕೆ, ದೇಶಕ್ಕೆ ಕೀರ್ತಿಯನ್ನು ತಂದಿದ್ದಾರೆ. ಹಾಕಿ ಆಟ ಅಂದರೆ ಇವರಿಗೆ ಪಂಚಪ್ರಾಣ, ಎಂಥ ಕಷ್ಟನಷ್ಟ ಇದ್ದರೂ ಹಾಕಿ ಸ್ಟಿಕ್ ಖರೀದಿ ಮಾಡಿ ಆಡುತ್ತಾರೆ. ಕ್ರೀಡೆ ದೈಹಿಕ, ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗೆ ಸಹಾಯಕಾರಿ ಯಾಗಿದೆ. ಈ ಸಮುದಾಯದ ಯುವಕರು ಕ್ರೀಡೆಗಳಿಗೆ ಹೆಚ್ಚು ಮಹತ್ವವನ್ನು ಕೊಟ್ಟು ತಮ್ಮ ಆರೋಗ್ಯವನ್ನು ಕಾಯ್ದುಕೊಂಡಿದ್ದಾರೆ. ಯುವಕರು ಕ್ರೀಡೆಯಲ್ಲಿ ಆಸಕ್ತಿ ವಹಿಸಿದಂತೆ ಯುವತಿಯರು ಹೆಚ್ಚು ಆಸಕ್ತಿ ವಹಿಸಿಕೊಂಡಿಲ್ಲ. ಯುವಕರು ಮಾತ್ರ ಉತ್ತಮ ಆಟಗಾರರಾಗಿ ಕ್ರೀಡೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ.

ಕಂಜರಭಾಟರ ಹಾಕಿ ಪಟುಗಳು

ಬೇನು ಬಾಳು ಬಾಟ	ಅಂತರ ರಾಷ್ಟ್ರೀಯ ಹಾಕಿ ಪಟು
ರಾಜಕುಮಾರ ಜೆ. ಬಾಗಡೆ	ಅಂತರ ರಾಷ್ಟ್ರೀಯ ಹಾಕಿ ಪಟು
ಮಹೇಶ ಜೆ. ಬಾಗಡೆ	ರಾಷ್ಟ್ರೀಯ ಹಾಕಿ ಪಟು
ಜೀತೆಂದ್ರ ಕೆ. ಬಾಗಡೆ	ಕಿರಿಯ ರಾಷ್ಟ್ರೀಯ ಹಾಕಿ ಪಟು
ರಮೇಶ ಲೇಮು ಕಟ್ಟಿಮನಿ	ಕರ್ನಾಟಕ ವಿಶ್ವವಿದ್ಯಾಲಯ ಹಾಕಿಪಟು
ರವಿ ಮೋಹನ ಕಟ್ಟಿಮನಿ	ಕರ್ನಾಟಕ ವಿಶ್ವವಿದ್ಯಾಲಯ ಹಾಕಿ ಪಟು
ಮಲ್ಲೇಶಿ ಅನಾರ ಗಾಗಡೆ	ಕರ್ನಾಟಕ ವಿಶ್ವವಿದ್ಯಾಲಯ ಹಾಕಿಪಟು
ಮನೋಜ ಸಿಕಂದರ ಬಾಗಡೆ	ಕರ್ನಾಟಕ ವಿಶ್ವವಿದ್ಯಾಲಯ ಹಾಕಿಪಟು
ಸುರೇಶ ಮೋಹನ ಕಟ್ಟಿಮನಿ	ಕರ್ನಾಟಕ ವಿಶ್ವವಿದ್ಯಾಲಯ ಹಾಕಿಪಟು
ಮಂಜುನಾಥ ಜೆ. ಬಾಗಡೆ	ಕಿರಿಯ ರಾಷ್ಟ್ರೀಯ ಹಾಕಿಪಟು, (ಶ್ರೀಲಂಕಾ ಕಿರಿಯರ ತಂಡದ ವಿರುದ್ಧ ಆಡಿದ್ದಾನೆ, ಬೆಂಗಳೂರು)
ಗಣೇಶ ಸಿಕಂದರ ಬಾಗಡೆ	ಕ್ಯಾಪ್ಟನ್, ಕರ್ನಾಟಕ ವಿಶ್ವವಿದ್ಯಾಲಯ ಹಾಕಿಪಟು
ಶ್ಯಾಮ ಮಾಣಿಕ ಬಾಗಡೆ	ಕರ್ನಾಟಕ ವಿಶ್ವವಿದ್ಯಾಲಯ ಹಾಕಿಪಟು
ರವಿ ಬೇನು ಗಾಗಡೆ	ಕರ್ನಾಟಕ ವಿಶ್ವವಿದ್ಯಾಲಯ ಹಾಕಿಪಟು
ನರೇಶ ಜೆ. ಬಾಗಡೆ	ಕಿರಿಯ ರಾಷ್ಟ್ರೀಯ ಕರ್ನಾಟಕ ವಿಶ್ವವಿದ್ಯಾಲಯ ಹಾಕಿಪಟು, (ಇಂಗ್ಲೆಂಡ ತಂಡದ ವಿರುದ್ಧ ಮುಂಬಯಿಯಲ್ಲಿ ಆಡಿದ್ದಾನೆ)
ಸಂಜಯ ರಮೇಶ ಕಟ್ಟಿಮನಿ	ಕರ್ನಾಟಕ ವಿಶ್ವವಿದ್ಯಾಲಯ ಹಾಕಿಪಟು
ಲೋಕೇಶ ರಮೇಶ ಗಾಗಡೆ	ಕಿರಿಯ ರಾಷ್ಟ್ರೀಯ ಹಾಕಿಪಟು
ವಿನೋದ ರಮೇಶ ಕಟ್ಟಿಮನಿ	ಕರ್ನಾಟಕ ವಿಶ್ವವಿದ್ಯಾಲಯ ಹಾಕಿಪಟು

ಈ ಸಮುದಾಯದವರಿಗೆ ಇನ್ನು ಉತ್ತಮ ತರಬೇತಿ, ಉದ್ಯೋಗಗಳನ್ನು ದೊರಕಿಸಿ ಕೊಟ್ಟರೆ ಮುಂದಿನ ಪೀಳಿಗೆಯಲ್ಲಿ ಇನ್ನು ಉತ್ತಮ ಮಟ್ಟದ ಆಟಗಾರರು ಸೃಷ್ಟಿಯಾಗಬಲ್ಲರು ಎನ್ನುವ ಆಶಾಭಾವನೆಯನ್ನು ಈ ಸಮುದಾಯದ ಮಾಹಿತಿದಾರರು ವ್ಯಕ್ತಪಡಿಸುತ್ತಾರೆ.

೧೦

ವಿಮುಕ್ತ ಬುಡಕಟ್ಟು

ಕಂಜರಭಾಟರು ರಾಜಸ್ಥಾನದಿಂದ ವಲಸೆ ಬಂದವರು. ಕತ್ತೆ-ಕುದುರೆಗಳ ಮೇಲೆ ತಮ್ಮ ಜೀವನೋಪಾಯದ ಸಾಮಗ್ರಿಗಳನ್ನು ಹೇರಿಕೊಂಡು ಪಾದಚಾರಿಗಳಾಗಿ ಸಂಸಾರಸಮೇತ ಮಳೆ ಬಿಸಿಲು ಗಾಳಿ ಯಾವುದನ್ನು ಲೆಕ್ಕಿಸದೆ ಹಳ್ಳಿ ಹಳ್ಳಿ ಸಂಚರಿಸಿ ಭಿಕ್ಷಾಟನೆ ಮಾಡುತ್ತಾ ಹೊಟ್ಟೆಪಾಡಿಗಾಗಿ ಸಣ್ಣಪುಟ್ಟ ಕಳ್ಳತನ, ದರೋಡೆ ಮುಂತಾದ ಗುನ್ಹೆ(ಅಪರಾಧ)ಗಳನ್ನು ಮಾಡಿಸುವವರ ಕೈವಶವಾದರು ಅಥವಾ ಮಾಡುವವರಾದರು. ಭಾರತ ದೇಶದಲ್ಲಿ ಬ್ರಿಟಿಷರ ಆಡಳಿತ ಬಂದಾಗ ಅಲೆಮಾರಿಗಳ ಮೇಲೆ ಬ್ರಿಟಿಷರ ವಕ್ರದೃಷ್ಟಿ ಬಿತ್ತು ಇವರ ಧೈರ್ಯ, ಚಾತುರ್ಯ, ಶೂರತನ ಕಂಡು ಸಹಿಸದವರಾಗಿ ೧೮೭೧ರಲ್ಲಿ ಇಂಥವರನ್ನು ಗುನ್ಹೆಗಾರ ಸಮುದಾಯವೆಂದು ಘೋಷಿಸಿ ಕಾಯ್ದೆ ಜಾರಿಗೊಳಿಸಿದರು. ಸಮುದಾಯದ ಯಾರೇ ತಪ್ಪು ಮಾಡಿದರೂ ಇಡೀ ಸಮುದಾಯಕ್ಕೆ ಗುನ್ಹೆಗಾರ ಅಂದರೆ ಅಪರಾಧಿ ಸಮುದಾಯವೆಂದು ಘೋಷಿಸಿ ಬಂಧಿಸಲಾರಂಭಿಸಿದರು. ಬ್ರಿಟಿಷರ ಭಾರತದಲ್ಲಿ ೧೯೧೧ ರಲ್ಲಿ ಗುನ್ಹೆಗಾರ ಜಾತಿ ಕಾಯದೆಯನ್ನು ಪರಿಷ್ಕರಿಸಿ ಜಾರಿಗೆ ತರಲಾಯಿತು. ೧೯೨೦ರಲ್ಲಿ ಬಾಂಬೆ ಪ್ರಾಂತದ ಈಗಿನ ಕರ್ನಾಟಕದ ಬಿಜಾಪುರದಲ್ಲಿ ಮೊದಲನೆಯ ಸೆಟ್ಲಮೆಂಟ್ ಸ್ಥಾಪನೆಯಾಯಿತು. ಬಾಂಬೆ ಪ್ರಾಂತದಲ್ಲಿ ಈ ಕಾಯ್ದೆಯಡಿಯಲ್ಲಿ ಒಟ್ಟು ೫೨ ಸೆಟ್ಲಮೆಂಟಗಳು ಸ್ಥಾಪನೆಯಾದವು. ಉತ್ತರ ಪ್ರದೇಶದಲ್ಲಿ ಕಂಜರ ಮತ್ತು ಸಾಂಸಿಯ, ಮದ್ರಾಸ್, ಮುಂಬೈಗಳಲ್ಲಿ ಕಂಜರ್, ಪಂಜಾಬಿನಲ್ಲಿ ಭೇಡಕೂಟ್, ಕಂಜರ್ ಮತ್ತು ಸಾಂಸಿಯ, ರಾಜಸ್ತಾನದ ಜೋಧಪುರ ಭಾಗದಲ್ಲಿ ಭಾಟ್, ಮಧ್ಯಭಾರತ, ರಾಜಸ್ತಾನ, ಅಜಮೀರ್ ಮತ್ತು ಭೋಪಾಲಗಳಲ್ಲಿ ಕಂಜರ್ ಮತ್ತು ಸಾಂಸಿಯ ಸಮುದಾಯಗಳನ್ನು ಅಪರಾಧಿ ಬುಡಕಟ್ಟಿನ ಪಟ್ಟಿಗೆ ಸೇರಿಸಲಾದವು. ಇವುಗಳ ವಿವರಗಳನ್ನು ವಿಮುಕ್ತ ಬುಡಕಟ್ಟುಗಳ ವರದಿಯಲ್ಲಿ ಹೀಗೆ ದಾಖಲಿಸಲಾಗಿದೆ.

Bhantns- Bhnutus are notified as a Criminal Tribe in the Uttar Pradesh. According to the tradition, they are the descendants of Rajputs, who after the define of Rana Pratap Singh, became homeless wanderers with no other means of substance except regular looting. Bhantis

and Karwals are almost alike. They intermarry and have similar social and religious customs. Before being confined settlement they were mostly in Rohilkhand Division. They claim to be Kshater and some of the Karwals, who are educated, write Rajput after their names. The Karwals are so much intermixed with Haburas, Bhantus and Sansis that it difficult distinguishes their social customs. In the Uttar Pradesh they are now confined in settlements in are restricted in the villages and hamlets near police stations.. Bhantus have no hereditary lawful occupations or means of livelihood and when they find it difficult to commit crime, they take to begging. Their crimes are similar to these of Kanjars, Nats and Sansis with whom they associate also. In the Uttar Pradesh they are classified as a scheduled Caste.

Bhedkuts:- Bhedkuts are notified as a Criminal Tribe in the Punjab. They are reported to belong to the Sansi fraternity and their mode of life is similar too they of Sansis, Bhedkut is a functional name, derived from Bhed meaning goat as they used to commit thefts of goats.

Kanjars:- Kanjars have been declared as a Criminal Tribe in the Punjab, Patiala and East Punjab States Unions, Madhya Bharat, Rajasthan, the Uttar Pradesh, Ajmer and Bhopal States. They were notified as a criminal tribe in the Madras and Bombay States also before the repeal of the Criminal Tribes Act, in those states.

Sansias:- Sansias have been notified as a Criminal Tribe in the Uttar Pradesh, Ajmer, Delhi, Bhopal, Madhya Bharat, Rajasthan the Punjab and Patiala and East Punjab States Union and part of Jammu and Kashmir State. Sansias are a vagrant tribe, and trace their origin from Marwar and Ajmer. They trace their descent from one sans mal of Bharatpur whom they still revere as their Guru. The Sansia is a near kinsman of other wandering tribes such as Kanjara, Beriyas Haburas annd Bhatus. Some of them say that they are a sub-caste of Nats, but the Nats do not acknowledge their kinship. They act as a sort of Bhats or bards to some tribes of jats and to some Chauhan Rajputs. They generally eat all kinds of meat, vermin's and leavings of all castes except perhaps sweepers. They are Hindus but some of them have now been converted to Islam or Sikhism. The Sansi groups who are criminal are said to admit any caste to their fraternity on payment. They commit thefts, burglary, highway robbery and also dacoities. Sansis in the Punjab, Patiala and East Punjab States Union and Jammu and Kashmir State have settled down.

ಅಲೆಮಾರಿಗಳ ಸಹಜ ಬದುಕನ್ನು ತಪ್ಪೆಂದು ಪರಿಗಣಿಸಿಣ ಅವರನ್ನು ಬಂಧಿಸ ತೊಡಗಿದರು. ಇವರಿಗೆ ವಿಶೇಷ ಜೇಲುಗಳನ್ನು ಸ್ಥಾಪಿಸಿದರು. ಸುತ್ತಲು ಮುಳ್ಳಿನ ತಂತಿಯ ಬೇಲಿ ಕಂಪೌಂಡ ಹಾಕಿ ಮಧ್ಯದಲ್ಲಿ ಮನೆಗಳನ್ನು ಕಟ್ಟಿಸಿ ಅವುಗಳಲ್ಲಿ ಅವರ ಕುಟುಂಬ ದೊಂದಿಗೆ ಬಂಧಿಯಲ್ಲಿಡುತ್ತಿದ್ದರು. ಇದರ ನಿರ್ವಹಣೆಗಾಗಿ ವಿಶೇಷ ಅಧಿಕಾರಿ ಹಾಗೂ ಸಿಂಬ್ಬಂದಿಗಳನ್ನು ನೇಮಿಸಲಾಗಿತ್ತು. ಇವರು ಹೊರಗೆ ಹೊಗಬೇಕಾದರೆ ಅಧಿಕಾರಗಳ ಪರವಾನಿಗೆ ಪಡೆದುಕೊಂಡು ಹೋಗಬೇಕಾಗುತ್ತಿತ್ತು.

೩೧.೩.೧೯೩೫ರಂದು ಮದ್ರಾಸ ಉಚ್ಚನ್ಯಾಯಾಲಯದ ನ್ಯಾಯಾಧೀಶರಾದ ದಿವಾನ ಬಹಾದ್ದೂರ ವಿ ಒಸ್ವಾಮ ಐಯಂಗರ್ 'ಗುನ್ಹೆಗಾರ ಜಾತಿ' (Criminal Tribes) ಕಾಯ್ದೆಯ ಬಗೆಗೆ ತಮ್ಮ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸಿದರು.

> I venture to doubt wether a statute which Empowers the Executive to declare a whole Community as criminal tribes and bring it under the very stringent and penal provisions of the Act can be Justified in these advancing times, some of the specific provisions at this Act are so gaining and capable of so much misuse that they require to be modified at an early date it is to be hoped that the local Government will cause no more time in taking on the question of ending or mending the present Act and rules and they by rendering Justice to the large classes of people who are being group by them.

೧೮.೧೦.೧೯೩೬ರಂದು ಆಂಧ್ರ ಪ್ರದೇಶದ ನೇರಲಾ ಊರಿನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಪಂಡಿತ ಜವಾಹರಲಾಲ್ ನೆಹರೂರವರು ಗುನ್ಹೆಗಾರ ಜಾತಿಗಳ ಬಗ್ಗೆ ಮಾತನಾಡುತ್ತ ಗುನ್ಹೆಗಾರ ಜಾತಿ ಕಾಯ್ದೆ ಜಾರಿಗೊಳಿಸಿದ್ದು ಸಮಂಜಸವಾಗಿಲ್ಲವೆಂದು ನುಡಿದರು. ಈ ವಿಷಯ ಕಾಂಗ್ರೆಸ್ ಪಕ್ಷದಲ್ಲಿ ಚರ್ಚೆಯಾಗತೊಡಗಿತು.

> I am aware of this monstrous provision of Criminal Tribes Act which constitutes a negation of civil liberty. Wide publicity should be given to its working and an attempt made to have the Act removed from the Statute Book. No tribe could be classified as criminal as such and the whole prinicipal is out of consonance with all civilized principles of criminal Justice and treatment of offenders

೧೦.೧೦.೧೯೪೩ರಂದು ಬಿಹಾರ ಪ್ರಾಂತದಲ್ಲಿ ಗುನ್ಹೆಗಾರ ಜನಾಂಗಗಳ ಮಹಾಸಭೆಯಲ್ಲಿ ರಾಜ್ಯಪಾಲ ಶ್ರೀ ಎಂ ಎಸ್ ಆಣೆ ಅಧ್ಯಕ್ಷತೆ ವಹಿಸಿ ಯಾವ ವ್ಯಕ್ತಿ ತಪ್ಪು ಮಾಡಿರುತ್ತಾನೆ ಅವನು ಅಪರಾಧಿ. ಅವನ ಕುಟುಂಬವಾಗಲಿ, ಇಡೀ ಸಮುದಾಯ ವಾಗಲಿ ಅಪರಾಧಿ ಅಲ್ಲವೆಂದು ಹೇಳಿದರು.

ಇಷ್ಟೆಲ್ಲ ವಿರೋಧಗಳು ಆಗುತ್ತಿದ್ದರೂ ಬ್ರಿಟಿಷ್ ಸರ್ಕಾರ ಮಣಿಯಲಿಲ್ಲ. ಈ ಕಾಯ್ದೆಯನ್ನು ಜಾರಿಯಲ್ಲಿ ಇಟ್ಟು ಗುನ್ಹೆಗಾರ ಜನಾಂಗಗಳ ಸುಧಾಹರಣೆಗಳಿಗಾಗಿ ಪ್ರಯತ್ನ ಮಾಡಿತು. ಹಲವಾರು ಸವಲತ್ತುಗಳನ್ನು ಜಾರಿಗೊಳಿಸಿ ಅಮಲಿನಲ್ಲಿ ತಂದಿತು.

೧. ಗುನ್ಹೆಗಾರ ಜಾತಿ ಮಕ್ಕಳ ಶಿಕ್ಷಣಕ್ಕಾಗಿ ಪ್ರತ್ಯೇಕ ಶಾಲೆಗಳನ್ನು ಸ್ಥಾಪಿಸಿ ಮಕ್ಕಳ ಶಿಕ್ಷಣ ಸುಧಾರಣೆಗೆ ಪ್ರಯತ್ನಿಸಿತು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿತ್ತು.

೨. ಯುವಕರಿಗೆ ವೃತ್ತಿಪರ ತರಬೇತಿಗಳನ್ನು ನೀಡಿ ಸ್ವಂತ ಉದ್ಯೋಗ ಮಾಡಲು ಅಣಿಗೊಳಿಸುತ್ತಿತ್ತು.

೩. ಗುನ್ಹೆಗಾರ ಸಮುದಾಯಗಳಿಗೆ ಸರ್ಕಾರಿ ನೌಕರಿಗಳನ್ನು ನೇರವಾಗಿ ನೀಡಲಾಗುತ್ತಿತ್ತು.

೪. ಆರೋಗ್ಯ ಕಾಯ್ದುಕೊಳ್ಳಲು ಪ್ರತ್ಯೇಕ ಆಸ್ಪತ್ರೆಗಳನ್ನು ಸ್ಥಾಪಿಸಿ ಔಷಧೋಪಚಾರವನ್ನು ಮಾಡುತ್ತಿದ್ದರು. ಸೆಟ್ಲಮೆಂಟ ವಸಾಹತು ಅಧಿಕಾರಿಗಳು ಸ್ವತಃ ಮನೆಗಳಿಗೆ ಸಂದರ್ಶನ ನೀಡಿ ಸ್ವಚ್ಛತೆಯ ಬಗೆಗೆ ವಿಚಾರಿಸುತ್ತಿದ್ದರು.

೫. ಸಾಂಸ್ಕೃತಿಕ ಚಟುವಟಿಕೆ, ಕಲೆಗಳಿಗೆ ಹೆಚ್ಚು ಮಹತ್ವವನ್ನು ಕೊಟ್ಟು ಕಲಾಕಾರರಿಗೆ ಪ್ರೋತ್ಸಾಹ ಕೊಡಲಾಗುತ್ತಿತ್ತು. ಕಂಜರಭಾಟರು ಕಸೂತಿ ಮಾಡಿದ ಬಟ್ಟೆಗಳನ್ನು ಲಂಡನಕ್ಕೆ ಕಳುಹಿಸುತಿದ್ದರು ಎಂದು ಹಿರಿಯರು ಹೇಳುತ್ತಾರೆ. .

೬. ಒಳ್ಳೆಯ ಕ್ರೀಡಾಪಟುಗಳನ್ನು ಗುರುತಿಸಿ ಅವರಿಗೆ ತರಬೇತಿಯನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದರು. ಕ್ರೀಡಾ ಕ್ಲಬ್‌ಗಳನ್ನು ಸ್ಥಾಪಿಸಿ ಈ ಜನರಿಗೆ ಉಚಿತವಾಗಿ ಕ್ರೀಡಾ ಸಾಮಗ್ರಿಗಳನ್ನು ಕೊಡುತ್ತಿದ್ದರು. ಪ್ರತಿಯೊಂದು ಸೆಟ್ಲಮೆಂಟಿನಲ್ಲಿ ಗುನ್ಹೆಗಾರ ಸಮುದಾಯದ ಕ್ರೀಡಾಪಟುಗಳಿಗೆ ಪ್ರತ್ಯೇಕ ಆಟದ ಬಯಲುಗಳು ಇದ್ದವು. ಈಗ ಆ ಕ್ರೀಡಾಕ್ಲಬ್‌ಗಳು ಬಂದಾಗಿದ್ದರೂ ಈ ಜನರು ತಮ್ಮ ಆಟದ ಗುರಿಯನ್ನು ಸಾಧಿಸುತ್ತಿದ್ದಾರೆ.

೭. ವಾಸಕ್ಕಾಗಿ ಮನೆಗಳನ್ನು ಉಚಿತವಾಗಿ ಕೊಡುತ್ತಿದ್ದರು.

೮. ಗುನ್ಹೆಗಾರ ಜನರಿಗೆ ಪ್ರತ್ಯೇಕ ಪಡಿತರ ಅಂಗಡಿಗಳು ಇದ್ದು ಅವರಿಗೆ ಬೇಕಾಗುವ ಆಹಾರ ವಸ್ತುಗಳನ್ನು ಪೂರೈಕೆ ಮಾಡುತ್ತಿದ್ದರು.

೯. ಮಹಿಳೆಯರಿಗೆ ವೃತ್ತಿಪರ ತರಬೇತಿಗಳನ್ನು ನೀಡುತ್ತಿದ್ದರು.

೧೦. ಬಾಲ ಮಂದಿರ ಮತ್ತು ವಸತಿನಿಯಲಗಳನ್ನು ಸ್ಥಾಪಿಸಿದ್ದರು.

೧೧. ಕಂಜರಭಾಟ ಸಮುದಾಯದ ಜಾತಿ ಪಂಚಾಯತಿಯು ವೈಶಿಷ್ಟ್ಯತೆಯನ್ನು ಪಡೆದಿದೆ. ಬ್ರಿಟಿಷ್‌ರು ಇವರ ಪಂಚಾಯತಿ ಕಾರ್ಯವನ್ನು ವೀಕ್ಷಿಸುತ್ತಿದ್ದರು. ಇವರು ಕೊಡುವ ನಿರ್ಣಯಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರು.

೧೯೩೬ರಲ್ಲಿ ಪ್ರಕಟಗೊಂಡ ಅನುವಲ್ ಅಡ್ಮಿಸ್ಟ್ರೇಷನ್ ರಿಪೋರ್ಟ್ ಆನ್ ದ ವರ್ಕಿಂಗ್ ಆಫ್ ದ ಸೆಂಟ್ರಲ್ ಟ್ರೈಬ್ ಆಕ್ಟ್ ಇನ್ ದ ಬಾಂಬೆ ಪ್ರೆಸಿಡೆನ್ಸಿ, ಭಾಗ-೧, (Govt.Central Press:Bombay:1936)ರ ಪ್ರಕಾರ ಸೆಟ್ಲಮೆಂಟ್ ಪ್ರದೇಶದಲ್ಲಿರುವ ಕಂಜರಭಾಟರ ಜನಸಂಖ್ಯಾ ಮಾಹಿತಿ ಈ ಕೆಳಗಿನಂತಿದೆ.

ಕ್ರ.ಸಂ.	ಸೆಟ್ಲಮೆಂಟ್	ಜನಸಂಖ್ಯೆ
೧.	ಹುಬ್ಬಳ್ಳಿ	೨೩೩
೨.	ಗದಗ	೬೬
೩.	ಸೊಲಾಪುರ	೨೯೮
೪.	ಬಿಜಾಪುರ	೧೭
೫.	ನೀರ	೧೧
೬.	ಅಹ್ಮದಾಬಾದ್	೫೯೭
೭.	ಧೂಳ	೭
೮.	ಜಲಗಾಂವ್	೪೫
೯.	ದಾಹೂದ್	೨
೧೦.	ಅಂಬರನಾಥ	೧೩
೧೧.	ಮುಂಡುವಾ	೧೧
	ಒಟ್ಟು	೧೩೦೫

ಹಾಗೇ ೧೯೪೭-೪೮ರ ರಿಪೋರ್ಟ್‌ನಲ್ಲಿ ಬಾಂಬೆ ಪ್ರೆಸಿಡೆನ್ಸಿ ಸೆಟ್ಲಮೆಂಟ್ ಪ್ರದೇಶದಲ್ಲಿರುವ ಕಂಜರಭಾಟರ ಜನಸಂಖ್ಯೆ ವಿವರ ಹೀಗಿದೆ.

ಕ್ರ.ಸಂ.	ಸೆಟ್ಲಮೆಂಟ್	ಜನಸಂಖ್ಯೆ
೦೧	ಸೋಲಾಪುರ	೧೦೨
೦೨	ಹುಬ್ಬಳ್ಳಿ	೪೦
೦೩	ಗದಗ	೫೮
೦೪	ಬಿಜಾಪುರ	೧೦
೦೫	ಅಹ್ಮದಾಬಾದ್	೨೦೩
೦೬	ಜಲಗಾಂವ್	೫
೦೭	ಮುಂಡುವಾ	೧
	ಒಟ್ಟು	೪೧೯

೧೯೪೭-೪೮ರಲ್ಲಿ ಬಾಂಬೆ ಪ್ರೆಸಿಡೆನ್ಸಿಯ ಸೆಟ್ಲಮೆಂಟ್ ಪ್ರದೇಶದಿಂದ ಹೊರಗಿರುವ ಕಂಜರಭಾಟರ ಜನಸಂಖ್ಯಾ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಊರುಗಳು	ಜನಸಂಖ್ಯೆ
೦೧	ಭಾರ್ಸಿ	೧೬೬
೦೨	ಹುಬ್ಬಳ್ಳಿ	೯೪
೦೩	ಅಹ್ಮದಾಬಾದ್	೫೩೭
೦೪	ಮುಂಡುವಾ	೧೦
	ಒಟ್ಟು	೮೨

ಬ್ರಿಟಿಷರು ಇವರ ಅಭಿವೃದ್ಧಿಗಾಗಿ ಯೋಜನೆಗಳನ್ನು ಜಾರಿಗೊಳಿಸಿ ಸುಧಾರಣೆ ಮಾಡಲು ಪ್ರಯತ್ನಿಸಿದರು. ೧೯೪೭ರಲ್ಲಿ ಭಾರತ ದೇಶ ಸ್ವತಂತ್ರವಾಯಿತು. ಗುನ್ಹೇಗಾರ ಬುಡಕಟ್ಟಿನವರಿಗೆ ಗುರುತಿನ ಚೀಟಿಗಳನ್ನು ಕೊಡಲಾಗಿತ್ತು. ಇವರು ಹಳ್ಳಿ ಹಳ್ಳಿಗಳಿಗೆ ಸಂಚರಿಸಿ ಭಿಕ್ಷಾಟನೆ ಮಾಡಲು ಗುರುತಿನ ಚೀಟಿಯನ್ನು ಊರಿನ ಗೌಡರಿಗೆ, ತಲಾಟಿಯರಿಗೆ ತೋರಿಸಿ ಕಾಳುಕಡಿಗಳನ್ನು ಸಂಗ್ರಿಸುತ್ತಿದ್ದರು. ಒಂದು ಊರಲ್ಲಿ ೨-೩ ದಿನಗಳಿಗಿಂತ ಹೆಚ್ಚು ಇರಲು ಕೊಡುತ್ತಿರಲಿಲ್ಲ. ಕಾರಣ ಇವರನ್ನು ಅಪರಾಧಿಗಳಂತೆ ಸ್ಥಳೀಯರು ಕಾಣುತಿದ್ದರು. ಪೋಲಿಸರು ವಿಚಾರಣೆ ಮಾಡಿದರೆ ಗುರುತಿನ ಚೀಟಿಯನ್ನು ತೋರಿಸುತ್ತಿದ್ದರು. ನಮ್ಮ ದೇಶ ಸ್ವತಂತ್ರವಾಗಿ ೬೦ ವರ್ಷಗಳು ಗತಿಸಿದವು. ಸ್ವತಂತ್ರ ಭಾರತದಲ್ಲಿ ವಾಸಕ್ಕೆ ಮನೆಯಿಲ್ಲ, ದುಡಿಯಲು ಉದ್ಯೋಗವಿಲ್ಲ, ಊಳಲು ಭೂಮಿ ಇಲ್ಲ, ಶಿಕ್ಷಣ ಪಡೆಯಲು ಅನುವು ಇಲ್ಲ. ಈಗಿನ ಸರ್ಕಾರಗಳು ಮತಕ್ಕಾಗಿ ಅಷ್ಟೇ ಉಪಯೋಗಿಸಿಕೊಳ್ಳುತ್ತಿವೆ. ನಮಗೆ ದೇಶದ ಬಗೆಗೆ ಅಭಿಮಾನ ಇದೆ. ಆದರೆ, ಸ್ವತಂತ್ರ ಭಾರತದಲ್ಲಿ ಯಾವ ಸುಖವನ್ನು ಕಾಣಲು ಸಾಧ್ಯವಾಗುತ್ತಿಲ್ಲ. ಬ್ರಿಟಿಷರ ಕಾಲದಲ್ಲಿ ನಾವು ಸುಖಿಗಳಾಗಿದ್ದೆವು ಎಂದು ಹಿರಿಯರು ಹೇಳುವರು.

ಅಖಿಲ ಭಾರತ ಗುನ್ಹೆಗಾರ ಜಾತಿ ಅಧಿವೇಶನವು ೧೯೬೦ರಲ್ಲಿ ಮಹಾರಾಷ್ಟ್ರದ ಸೊಲ್ಲಾಪುರದ ಸೆಟ್ಲಮೆಂಟದಲ್ಲಿ ಜರುಗಿತು. ಈ ಅಧಿವೇಶನದಲ್ಲಿ ದೇಶದ ಮೂಲೆ ಮೂಲೆಗಳಿಂದ ಸಾವಿರಾರು ಜನರು ಸೇರಿದ್ದರು. ಪ್ರಧಾನ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರು ಅವರು ಗುನ್ಹೆಗಾರ ಜಾತಿಗಳ ಬಗೆಗೆ ಅಧಿವೇಶನದಲ್ಲಿ ಮಾತನಾಡಿ ಗುನ್ಹೆಗಾರ ಜಾತಿಗಳನ್ನು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದಲ್ಲಿ ಸೇರಿಸುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ೧೯೮೯ರಲ್ಲಿ ಮತ್ತೆ ಗುನ್ಹೆಗಾರ ಜಾತಿಗಳ ಅಧಿವೇಶನ ಸೊಲ್ಲಾಪುರದಲ್ಲಿ ನಡೆಯಿತು. ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ರಾಜೀವ ಗಾಂಧಿಯವರು ಭಾಗವಹಿಸಿ ಮಾತನಾಡಿದರು. ಈ ರೀತಿ ಗುನ್ಹೆಗಾರ ಜಾತಿಗಳು ತಮ್ಮ ದುಃಖವನ್ನು ಸರ್ಕಾರದ ಎದುರಿಗೆ ತೋಡಿಕೊಂಡರು ಇದುವರೆಗೆ ಯಾವ ಪ್ರತಿಫಲ ದೊರೆಯದೆ ಇರುವುದು ವಿಷಾದನೀಯ. ಸಮುದಾಯದ ಪೂರ್ವಜರು ಬಡತನದಲ್ಲಿಯೆ ಹುಟ್ಟಿ ಬಡತನದಲ್ಲಿ ಸತ್ತು ಹೋಗಿದ್ದಾರೆ. ಇಂದಿಗೂ ಬಡತನದ ಭೂತ ಬೆನ್ನುಬಿಡದು. ಗುನ್ಹೆಗಾರ ಜಾತಿಗಳಲ್ಲಿ ಕೆಲ ಜಾತಿಗಳು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿಸಲ್ಪಟ್ಟಿವೆ. ಕರ್ನಾಟಕದ ಕಂಜರಬಾಟ ಜಾತಿ ಮಾತ್ರ ಹಿಂದುಳಿದ ವರ್ಗ(ಓಬಿಸಿ)ದಲ್ಲಿ ಉಳಿದುಕೊಂಡಿದೆ. ಈಗ ಇವರು ಯಾವ ಅಪರಾಧಗಳನ್ನು ಮಾಡುವುದಿಲ್ಲ. ಕೂಲಿ ಅಥವಾ ಇನ್ನಿತರ ಯಾವುದೇ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಎಷ್ಟೋ ಜನರು ಸಂಚಾರಿ ಬದುಕನ್ನು ತೊರೆದು ಹಳ್ಳಿ, ಪಟ್ಟಣಗಳಲ್ಲಿ ಸರ್ಕಾರಿ ಸ್ಥಳಗಳಲ್ಲಿ ಗುಡಿಸುಲುಗಳನ್ನು ನಿರ್ಮಿಸಿಕೊಂಡು ಸ್ಥಿರವಾಗಿ ನೆಲೆ ನಿಲ್ಲಲು ನಿರ್ಧರಿಸಿ ನೆಲೆಸಿದ್ದಾರೆ. ಕೆಲವರು ಯಾವ ಆಧಾರ ಇಲ್ಲದ ಕಾರಣ ಭಿಕ್ಷಾಟನೆ ವೃತ್ತಿಗೆ ಅಂಟಿಕೊಂಡು ಸಂಚರಿಸುತ್ತಾರೆ. "ಕಂಜರಭಾಟ" ಜಾತಿಯನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿ ಇವರ ಮಕ್ಕಳ ಭವಿಷ್ಯ ಉಜ್ವಲ ಮಾಡಬೇಕೆಂಬುದೇ ಇವರ ಮುಖ್ಯ ಬೇಡಿಕೆಯಾಗಿದೆ.

೧೧

ಸಮಸ್ಯೆ, ಸಂಘಟನೆ ಮತ್ತು ಪರಿಹಾರ

ಅಲೆಮಾರಿಗಳಾಗಿ ಜೀವನ ಸಾಗಿಸುತ್ತಿದ್ದ ಕಂಜರಭಾಟರು ಇಂದು ಒಂದೇ ಕಡೆ ನೆಲೆಸತೊಡಗಿದ್ದಾರೆ. ಇವರು ಒಂದೇ ಕಡೆ ನೆಲೆ ನಿಂತಂತೆ ಇಂದು ಕಂಡುಬರುವುದಾದರೂ ಅಲೆಮಾರಿತನವನ್ನು ಸಂಪೂರ್ಣವಾಗಿ ತ್ಯಜಿಸಿರುವುದಿಲ್ಲ. ಹೀಗಾಗಿ ಇವರು ಇಂದು ಅರೆ ಅಲೆಮಾರಿಗಳಾಗಿ ರೂಪಗೊಂಡಿದ್ದಾರೆ.

ಕಾಡಿನ ಅಂಚಿನಲ್ಲಿಯೇ, ಊರಿನ ಹೊರಭಾಗಗಳಲ್ಲಿಯೇ ಕೇವಲ ತಾತ್ಕಾಲಿಕ ಗುಡಾರಗಳನ್ನು ರಚಿಸಿಕೊಂಡು ವಾಸಿಸುತ್ತಿದ್ದ ಇವರು ಇಂದು ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ನಿಗದಿತ ಸ್ಥಳದಲ್ಲಿ ಹುಲ್ಲಿನ ಗುಡಿಸಲು, ಚಿಕ್ಕ ಹಂಚಿನ ಮನೆಗಳನ್ನು ರಚಿಸಿಕೊಂಡು ಅವುಗಳಲ್ಲಿ ವಾಸಿಸತೊಡಗಿದ್ದಾರೆ.

ಆಧುನಿಕತೆಯ ಪರಿಣಾಮವಾಗಿ ನಿರಕ್ಷರಿಗಳಾಗಿದ್ದವರು ಅಲ್ಪ ಪ್ರಮಾಣದಲ್ಲಾದರೂ ಸಾಕ್ಷರರಾಗಿದ್ದಾರೆ. ಆಧುನಿಕ ಆಟಗಳಾದ ಹಾಕಿಯಂತಹ ಆಟಗಳಲ್ಲಿ ಇವರಿಗೆ ಪ್ರವೇಶ ದೊರೆತಿರುವುದು ಬಹುಶಃ ಆಧುನಿಕತೆಯ ಪ್ರಭಾವದಿಂದಲೇ.

ಯುವಕರು ಆಧುನಿಕ ಉಡುಪುಗಳಾದ ಪ್ಯಾಂಟ್, ಷರ್ಟ್, ಮಹಿಳೆಯರು ಲಂಗ ಹಾಕುವುದನ್ನು ಬಿಟ್ಟು ಚೂಡಿದಾರ, ಸೀರೆ ಉಡುವುದನ್ನು ಕಲಿತಿದ್ದಾರೆ. ಇತ್ತೀಚಿನ ಪೀಳಿಗೆಯಲ್ಲಿ ಭಿಕ್ಷಾಟನೆ ಕಡಿಮೆಯಾಗಿದ್ದು ದುಡಿಮೆಯಲ್ಲಿ ಹೆಚ್ಚು ಆಸಕ್ತಿ ತೋರಿಸಲಾರಂಭಿಸಿದ್ದಾರೆ. ಮಕ್ಕಳನ್ನು ಶಾಲೆಗೆ ಕಳಿಸಿ ವಿದ್ಯಾವಂತರನ್ನಾಗಿ ಮಾಡಬೇಕು ಎನ್ನುವ ಪ್ರಜ್ಞೆ ಕಂಡುಬರುತ್ತದೆ.

ಕುಡಿತಗಳಲ್ಲಿಯೇ ಸಮಯವನ್ನು ವ್ಯರ್ಥ ಮಾಡುತ್ತಿದ್ದವರು ತಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳುತ್ತಿರುವುದು ಮತ್ತು ಪ್ರಸ್ತುತ ವ್ಯವಸ್ಥೆಗೆ ಸ್ಪಂದಿಸುತ್ತಿರುವುದು ವಿಶೇಷ.

ಬದುಕಿನಲ್ಲಿ ಇಷ್ಟೆಲ್ಲಾ ಬದಲಾವಣೆಗಳು ಕಂಡು ಬಂದರೂ ಆಧುನಿಕತೆಯ ಪರಿಣಾಮದಿಂದಾಗಿ ಇನ್ನು ನಿಕೃಷ್ಟ ಸ್ಥಿತಿಗೆ ತಳ್ಳಲ್ಪಡುತ್ತಿದೆ. ಹಿಂದೆ ಸೈನಿಕರಿಗಾಗಿಯೇ, ಕಬ್ಬಿಣ ವಸ್ತು ತಯಾರಿಸುವ ಕಸುಬಿನಲ್ಲಿ ಸ್ವಾಭಿಮಾನದಿಂದ ಬದುಕುತ್ತಿದ್ದವರು ಅಪರಾಧಿ ಪಂಗಡವಾಗಿ ರೂಪಾಂತರಗೊಳ್ಳಲು ಆಧುನಿಕತೆಯೇ ಕಾರಣವಾಗಿದೆ. ಇಂದು ಜಾಗತೀಕರಣವೆಂಬ ರಾಕ್ಷಸ

ತೃತೀಯ ರಾಷ್ಟ್ರಗಳನ್ನು ವ್ಯಾಪಿಸುತ್ತಿರುವುದನ್ನು ಗಮನಿಸಿದರೆ ಇಂತಹ ತಳ ಸಮುದಾಯಗಳ ಪಾಡು ಗಾಳಿಗೆ ಇಕ್ಕ ತರಗಲೆಯ ಪಾಡಾಗುವುದರಲ್ಲಿ ಎರಡು ಮಾತಿಲ್ಲ.

ಆರ್ಥಿಕವಾಗಿ ಹಿಂದುಳಿದಿರುವಿಕೆ : ಅಲೆಮಾರಿ ಕಂಜರಭಾಟರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರು. ಹೀಗಾಗಿ ಆಧುನಿಕ ಉದ್ಯೋಗಗಳಿಂದ ವಂಚಿತ ರಾಗಿದ್ದಾರೆ. ಮೂಲ ವೃತ್ತಿ ಭಿಕ್ಷಾಟನೆಗೆ ಬೆನ್ನು ಹತ್ತಿ ತಾತ್ಕಾಲಿಕ ಸುಖವನ್ನು ಕಾಣುತ್ತಾ ಮಕ್ಕಳ ಭವಿಷ್ಯದ ಬಗೆಗೆ ಚಿಂತನೆ ಇಲ್ಲದಿರುವುದು ಶಾಪವಾಗಿದೆ. ಹಳ್ಳಿಗಳಲ್ಲಿ ಸಣ್ಣ ಗುಡಿಸಲು ಹಾಕಿಕೊಂಡು ಜೀವನ ಸಾಗಿಸುವ ಜನರ ಆರ್ಥಿಕತೆ ಸುಧಾರಿಸಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಇವರ ಅಭಿವೃದ್ಧಿಗೆ ಗಮನ ನೀಡದಿರುವುದು ಇವರ ಹಿಂದುಳಿದಿರುವಿಕೆಗೆ ಕಾರಣವಾಗಿದೆ.

ಶೈಕ್ಷಣಿಕ ಹಿಂದುಳಿದಿರುವಿಕೆ : ಕರ್ನಾಟಕದಲ್ಲಿ ವಾಸಿಸುವ ಕಂಜರಭಾಟರಲ್ಲಿ ೦-೪ ರೊಳಗಿನ ವಯೋಮಾನದ ಮಕ್ಕಳು ಶೇ. ೧೦.೯೯ರಷ್ಟಿದ್ದಾರೆ. ಇವರನ್ನು ಹೊರತುಪಡಿಸಿ ಶಿಕ್ಷಣ ಪಡೆಯಲು ಯೋಗ್ಯರಾದವರು ಶೇ. ೮೯.೦೧ರಷ್ಟಿದ್ದಾರೆ. ಆದರೆ ಇವರಲ್ಲಿ ಸಾಕ್ಷರರಾದವರ ಪ್ರಮಾಣ ಕೇವಲ ಶೇ. ೨೪.೨೫ (೨೦೦೭ರ ಸಮೀಕ್ಷೆ)ರಷ್ಟು ಮಾತ್ರವಾಗಿದೆ. ಅದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣಕ್ಕಿಂತ ಮಹಿಳೆಯರ ಸಾಕ್ಷರತಾ ಪ್ರಮಾಣ ಈ ಸಮುದಾಯದಲ್ಲಿ ತುಂಬಾ ಕಡಿಮೆ ಇರುವುದು ಸಮೀಕ್ಷೆಯ ಮೂಲಕ ತಿಳಿದುಬರುತ್ತದೆ. ಕರ್ನಾಟಕ ರಾಜ್ಯದ ಸರಾಸರಿ ಸಾಕ್ಷರರ ಪ್ರಮಾಣ ಶೇಕಡ ೬೫.೦೪ (೨೦೦೧ರ ಜನಗಣತಿ). ಕಂಜರಭಾಟರಲ್ಲಿ ಅನಕ್ಷರಸ್ಥರ ಪ್ರಮಾಣವು ಅತ್ಯಧಿಕವಾಗಿದೆ. ಅಂದರೆ ಒಟ್ಟು ಅನಕ್ಷರಸ್ಥರು ಶೇಕಡ ೭೫.೭೫ ರಷ್ಟಿದ್ದಾರೆ.

ಇತ್ತೀಚಿನ ದಶಕದಲ್ಲಿ ಈ ಸಮುದಾಯದ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಸಾಕ್ಷರರಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗೆ ಹೋಗುವ ಮಕ್ಕಳಲ್ಲಿ ಪುರುಷರಿಗಿಂತ ಮಹಿಳೆಯರ ಪ್ರಮಾಣವೇ ಹೆಚ್ಚಾಗಿ ಕಂಡುಬರುತ್ತಿದೆ(ಕೋಷ್ಟಕ:೧೧.೧). ಆದರೆ, ಪ್ರೌಢಶಿಕ್ಷಣದ ಮುಂದಿನ ಶಿಕ್ಷಣ ಪಡೆಯುವವರಲ್ಲಿ ಪುರುಷರ ಪ್ರಮಾಣಕ್ಕಿಂತ ಮಹಿಳೆಯರ ಪ್ರಮಾಣವು ಕಡಿಮೆಯಾಗುತ್ತಲೇ ಸಾಗಿದೆ. ಪ್ರೌಢ ಶಿಕ್ಷಣದವರೆಗಿನ ಶಿಕ್ಷಣವು ಇವರ ಪಾಲಿಗೆ ಇಂದು ಅನುಪಯುಕ್ತವೆಂದೇ ಹೇಳಬಹುದು. ಶೇಕಡ ೯೧ ರಷ್ಟು ಸಾಕ್ಷರರು ಇಲ್ಲಿಯೇ ಕಾಣಸಿಗುವರು. ಮೆಟ್ರಿಕ್ ನಂತರದ ಸಾಕ್ಷರರಲ್ಲಿ ಇಡೀ ರಾಜ್ಯದಲ್ಲಿ ಕೇವಲ ೩೮ ಜನ ಸಾಖಲಾಗಿರುವುದು ಇವರ ಶೈಕ್ಷಣಿಕ ಹಿಂಬಿಳುವಿಕೆಗೆ ಸಾಕ್ಷಿಯಾಗಿರುವುದು. ಕೇವಲ ೧೨ ಜನ ಪದವಿಧರರು ಇವರಲ್ಲಿ ಕಾಣಸಿಗುವರು. ಒಟ್ಟಾರೆಯಾಗಿ ಗಮನಿಸಿದರೆ ಇತ್ತೀಚೆಗೆ ಕಂಜರಭಾಟರ ಮಕ್ಕಳಲ್ಲಿ ಶಾಲೆಗೆ ಹೋಗುವವರ ಪ್ರಮಾಣ ಹೆಚ್ಚಾಗುತ್ತಿದೆ. ಆದರೆ ಅದೇ ಪ್ರಮಾಣವನ್ನು ಮೇಲಿನ ಹಂತಗಳಿಗೆ ಹೋದಂತೆಲ್ಲಾ ಕಾಣಲು ಸಾಧ್ಯವಾಗುವುದಿಲ್ಲ. ಅದರಲ್ಲೂ ಮಹಿಳೆಯರ ಸಾಕ್ಷರತಾ ಪ್ರಮಾಣವು ತುಂಬಾ ಶೋಚನಿಯ ಸ್ಥಿತಿಯಲ್ಲಿದೆ.

ಕೋಷ್ಟಕ:೧೧.೧ ಕಂಜರಭಾಟರ ಶೈಕ್ಷಣಿಕ ಸ್ಥಾನಮಾನ (ಶೇಕಡಗಳಲ್ಲಿ)

ವಿವರಗಳು	ಪುರುಷ	ಸ್ತ್ರೀ	ಒಟ್ಟು
ಒಟ್ಟು ಜನಸಂಖ್ಯೆ	೧೦೦೧	೧೦೦೦	೨೦೦೧
ಸಾಕ್ಷರತೆಗೆ ಅನರ್ಹರರು	೧೦೪	೧೧೬	೨೨೦
ಸಾಕ್ಷರತೆಗೆ ಅರ್ಹರು	೮೯೭	೮೮೪	೧೭೮೧
ಸಾಕ್ಷರರು	೨೫೩	೧೭೯	೪೩೨
ಮೆಟ್ರಿಕ್ ಪೂರ್ವ ಸಾಕ್ಷರತೆ	೨೨೧	೧೭೩	೩೯೪
ಪ್ರಾಥಮಿಕ ಶಿಕ್ಷಣ	೪೬	೫೪	೧೦೦
ಮಾಧ್ಯಮಿಕ	೭೦	೭೩	೧೪೩
ಪ್ರೌಢ	೧೦೫	೪೬	೧೫೧
ಮೆಟ್ರಿಕ್ ನಂತರದ ಸಾಕ್ಷರತೆ	೩೨	೬	೩೮
ಪದವಿ ಪೂರ್ವ	೧೮	೩	೨೧
ಡಿಪ್ಲೋಮ	೫	೦	೫
ಪದವಿ	೭	೩	೧೦
ಸ್ನಾತಕೋತ್ತರ	೧	೦	೧
ಇತರೆ	೧	೦	೧

ರಾಜಕೀಯ ಸ್ಥಿತಿಗತಿ : ಕಂಜರಭಾಟರು ಅಲೆಮಾರಿಗಳು ಕೆಲಸಗಳನ್ನು ಹುಡುಕಿಕೊಂಡೋ ಇಲ್ಲವೆ ಭಿಕ್ಷಾಟನೆಗಾಗಿಯೋ ಊರಿಂದೂರಿಗೆ ಅಲೆದಾಡುತ್ತಿರುತ್ತಾರೆ. ಹಾಗಾಗಿ ಇವರಲ್ಲಿ ಎಷ್ಟೋ ಜನ ಇನ್ನು ಮತಚಲಾವಣೆ ಮಾಡಲು ಸಾಧ್ಯವೇ ಆಗಿಲ್ಲ. ಏಕೆಂದರೆ ಮತದಾರರ ಪಟ್ಟಿಯಲ್ಲಿಯೇ ಇವರ ಹೆಸರುಗಳು ಇರುವುದಿಲ್ಲ. ನಿಯಮಾನುಸಾರ ಇವರಲ್ಲಿಯ ೧೭ ವರ್ಷದೊಳಗಿನ ೮೫೧ ಮಕ್ಕಳು ಮತದಾನಕ್ಕೆ ಅರ್ಹರಾಗಿರುವುದಿಲ್ಲ. ೧೮ ವಯೋಮಾನದ ಮೇಲಿನ ೧೧೫೦ ಜನ ಮತದಾನ ಮಾಡಲು ಅರ್ಹರಿದ್ದರೂ ಮತದಾರರ ಪಟ್ಟಿಯಲ್ಲಿ ಇರುವವರ ಸಂಖ್ಯೆ ಕೇವಲ ೪೩೦ ಮಾತ್ರ. ಈ ಪಟ್ಟಿಯಿಂದ ಹೊರಗೆ ಉಳಿದವರ ಸಂಖ್ಯೆ ಅತ್ಯಧಿಕವಾಗಿದೆ. ಅಲ್ಪಸಂಖ್ಯೆತರು ಮತ್ತು ರಾಜ್ಯದಾದ್ಯಂತ ಚದುರಿಹೋಗಿರುವ ಇವರ ರಾಜಕೀಯ ಸಂಘಟನೆ ಕನಸಿನ ಮಾತಾಗಿದೆ. ಇದುವರೆಗೂ ಸರಕಾರದ ಯಾವುದೇ ರಾಜಕೀಯ ಸ್ಥಾನಮಾನಗಳು ಪಡೆದಿರುವ ದಾಖಲೆಗಳು ಪ್ರಾಪ್ತವಾಗಿಲ್ಲ.

ಸರ್ಕಾರಿ ಸೌಲಭ್ಯಗಳು : ಕಂಜರಭಾಟರಲ್ಲಿ ಒಟ್ಟು ೩೬ ಮಹಿಳೆಯರು ವಿಧವಾ ವೇತನ ಪಡೆಯುತ್ತಿದ್ದಾರೆ. ಹಾಗೇ ಅಂಗವಿಕಲರ ವೇತನವನ್ನು ಒಟ್ಟು ೯ ಜನ ಪಡೆಯುತ್ತಿದ್ದು ಅದರಲ್ಲಿ ೪ ಜನ ಪುರುಷರು ೫ ಮಹಿಳೆಯರು ಇದ್ದಾರೆ.

ಕೋಷ್ಟಕ:೧೧.೨ ಸರ್ಕಾರಿ ಸೌಲಭ್ಯಗಳು

ಕ್ರ.ಸಂ.	ವೇತನ	ಗಂಡು	ಹೆಣ್ಣು	ಒಟ್ಟು
೧.	ವಿಧುರ ವಿಧವೆ	೨	೬೬	೬೮
೨.	ವಿಧವಾ ವೇತನ	೦	೪೦	೪೦
೩.	ಅಂಗವಿಕರ ವೇತನ	೪	೫	೯
೪.	ವೃದ್ಧರು	೩೫	೩೦	೬೫
೫.	ವೃದ್ಧಾಪ್ಯ ವೇತನ	೦	೧	೧
೬.	ಶಿಷ್ಯವೇತನ	೧	೦	೧

ವಿಧವಾ ಮತ್ತು ಅಂಗವಿಕಲರ ಮಾಷಾಸನವನ್ನು ತಕ್ಕಮಟ್ಟಿಗೆ ಪಡೆಯಲು ಸಾಧ್ಯವಾಗಿದೆ. ವೃದ್ಧರು ಮತ್ತು ಶಾಲೆಗೆ ಹೋಗುವ ಮಕ್ಕಳು ಇದ್ದಾಗಲೂ ಮಾಷಾಸನ ಪಡೆಯಲು ಸಾಧ್ಯವಾಗಿಲ್ಲ. ಇವರು ಈ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇದರಿಂದ ಇವರಿಗೆ ಇಂತಹ ಸರ್ಕಾರಿ ಯೋಜನೆ ಅಥವಾ ಸೌಲಭ್ಯಗಳ ಕುರಿತು ಯಾವುದೇ ಹೆಚ್ಚಿನ ಮಾಹಿತಿ ಇಲ್ಲದಿರುವುದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಪರಿಹಾರೋಪಾಯಗಳು : ಕಂಜರಭಾಟರ ನೆಲೆಯುವಿಕೆಗೆ ತಲೆಯ ಮೇಲೊಂದು ಸೂರು ನೀಡಬೇಕಾಗಿದೆ. ಒಂದು ಕಡೆ ನೆಲೆಯೂರಿದರೆ ಮಕ್ಕಳ ಶಿಕ್ಷಣದ ಬಗೆಗೂ ಅಭಿರುಚಿ ಹುಟ್ಟಬಹುದು. ಮಕ್ಕಳಿಗೆ ಹಾಸ್ಟೆಲ್ ಸೌಕರ್ಯವಾಗಬೇಕು. ಶಿಕ್ಷಣಕ್ಕೆ ಬೇಕಾಗುವ ಪ್ರತಿಯೊಂದು ಸವಲತ್ತು ದೊರೆಯಬೇಕು. ಶಿಕ್ಷಣ ಪಡೆದ ಮೇಲೆ ದುಡಿಯಲು ಉದ್ಯೋಗ ದೊರೆಯಬೇಕು. ಅಲೆಮಾರಿಗಳಿಗೆ ಊಳಲು ಭೂಮಿಯನ್ನು ನೀಡಿ ಅವರ ಉಪಜೀವನ ಸಾಗಿಸಲು ಅನುವು ಮಾಡಿಕೊಡಬೇಕು. ಹಾಗೂ ಇವರಿಗೆ ಕೊಳಚೆರಹಿತ ಪ್ರದೇಶದಲ್ಲಿ ವಸತಿ, ನೀರು, ವಿದ್ಯುತ್, ಶೌಚಾಲಯ, ಸಮುದಾಯ ಭವನ, ಸಮುದಾಯಕ್ಕೆ ಹತ್ತಿರವಾಗಿ ಅಂಗನವಾಡಿ ಶಾಲೆಯನ್ನು ಸರ್ಕಾರ ಮೂಲಭೂತ ಸೌಲಭ್ಯಗಳಾಗಿ ಒದಗಿಸಬೇಕು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಾಡು, ಕುಣಿತದ ತರಬೇತಿ ನೀಡಿ ಇವರ ಕಲೆಗೆ ಪ್ರೋತ್ಸಾಹ ದೊರೆಯುವಂತಾಗಬೇಕು. ಈ ಸಮುದಾಯದಲ್ಲಿ ಒಳ್ಳೆಯ ಕ್ರೀಡಾಪಟುಗಳಿದ್ದು ಅವರಿಗೆ ತರಬೇತಿ ಹಾಗೂ ವಸತಿ ನಿಲಯಗಳಲ್ಲಿ ಪ್ರವೇಶ ದೊರೆಯಬೇಕು. ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕವಾಗಿ ಅತೀ ಹಿಂದುಳಿದ ಈ ಸಮುದಾಯಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶೇಷ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಳ್ಳಬೇಕು.

ವಿಶೇಷವಾದ ಬೇಡಿಕೆ

ಕಂಜರಭಾಟ, ಭಾಟರನ್ನು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸಬೇಕು. ಕಂಜರಭಾಟ, ಸಾಂಸಿ ಹಾಗೂ ಛಾರಾ ಇವು ಒಂದೇ ಜಾತಿಗೆ ಸೇರಿದವುಗಳು. ಕಂಜರಭಾಟ

ಮತ್ತು ಅದರ ಪರ್ಯಾಯ ಪದಗಳು ಬಿಹಾರ, ಚಂಡೀಗಡ್, ಛತ್ತಿಸಗಢ್, ದೆಹಲಿ, ಹರಿಯಾಣ, ಹಿಮಾಚಲ ಪ್ರದೇಶ, ಜಾರಖಂಡ್, ಮಧ್ಯ ಪ್ರದೇಶ, ಮಹಾರಾಷ್ಟ್ರ, ಪಂಜಾಬ, ರಾಜಸ್ತಾನ, ಉತ್ತರಾಂಚಲ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿವೆ. 'ಕಂಜರಭಾಟ' ಮತ್ತು 'ಛಾರಾ' 'ಸಾಂಸಿ' ಇವು ಒಂದೇ ಎಂದು ಬ್ರಿಟಿಷ್ ಸರ್ಕಾರ ೧೯೩೩ರಲ್ಲಿಯ ತನ್ನ ವರದಿಯಲ್ಲಿ ಪ್ರಕಟಿಸಿದೆ. ಬಾಂಬೆ ಸರ್ಕಾರದ ೧೯೪೭-೪೮ನೇ ವರ್ಷದ ವಾರ್ಷಿಕ ವರದಿಯಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಿಂದ ಪ್ರಕಟಗೊಳಿಸಿದ ವರದಿಯಲ್ಲಿಯೂ 'ನಾಟ', 'ಕಂಜರ', 'ಕಂಜರಿ', ಇವು ಕಂಜರಭಾಟ ಜಾತಿಗಳಾಗಿರುವುದನ್ನು ದಾಖಲಿಸಲಾಗಿದೆ.

೧೯೩೩ರಲ್ಲಿ ಮುಂಬೈ ಅಧಿಪತ್ಯವು ಮೀಸಲಾತಿಯ ಪಟ್ಟಿಯನ್ನು ಪ್ರಕಟಿಸಿ ೧೯೪೨ರಲ್ಲಿ ಪರಿಷ್ಕೃತಗೊಳಿಸಿತು. ಈ ಪಟ್ಟಿಯ ಸೆಕ್ಷನ್ ೩. ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿಯ ಕ್ರ ಸಂ ೨೬. ಛಾರಾ, ೫೬. ಕಂಜರಿ, ೫೭. ಕಂಜರ್ ಭಾಟ್, ೧೦೫. ಸಾಂಸಿಯ ಪದಗಳು ದಾಖಲಾಗಿವೆ.

ಭಾರತ ಸರಕಾರದ ಪರಿಶಿಷ್ಟರ ೨೦೦೨ರ ಮತ್ತು ಹಿಂದುಳಿದ ವರ್ಗಗಳ ೨೦೦೩ರ ಪರಿಷ್ಕೃತ ಪಟ್ಟಿಯ ಪ್ರಕಾರ ಭಾರತದ ಈ ಕೆಳಗಿನ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಂಜರಭಾಟ ಮತ್ತು ಅದರ ಪರ್ಯಾಯ ಪದಗಳ ಸಂವಿಧಾನಿಕ ಮೀಸಲಾತಿಯ ಸ್ಥಾನಮಾನದ ವಿವರ ಹೀಗಿದೆ.

ಕೋಷ್ಟಕ:೧೧.೩ ಭಾರತೀಯ ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳಲ್ಲಿ ಕಂಜರಭಾಟರು

ರಾಜ್ಯ	ಪರಿಶಿಷ್ಟ ಜಾತಿ		ಹಿಂದುಳಿದ ಜಾತಿ
೧. ಆಂಧ್ರ ಪ್ರದೇಶ			೨೫. ಕಂಜರ ಭಾಟ
೨. ಬಿಹಾರ	೨೭.	ಕಂಜರ	
೩. ಚಂಡೀಗಡ್	೩೨.	ಸಾಂಸಿ,ಭೇಡಕೂಟ,ಮನೇಶ	
೪. ಛತ್ತಿಸಗಢ್	೨೭.	ಕಂಜರ	
	೪೧.	ಸಾಂಸಿ, ಸಾಂಸಿಯ	
೫. ದೆಹಲಿ	೨೦.	ಕಂಜರ ಅಥವಾ ಗಿಯರಾಹ	
	೩೨.	ಸಾಂಸಿ ಅಥವಾ ಭೇಡಕೂಟ	
೬. ಗುಜರಾತ			೧೨. ಛಾರಾ, ಸಾಂಸಿ, ಆಡೋಡಿಯ
೭. ಹರಿಯಾಣ	೩೨.	ಸಾಂಸಿ, ಭೇಡಕೂಟ, ಮನೇಶ	೩೨. ಕಂಜರ, ಕಂಚನ

೮. ಹಿಮಾಚಲಪ್ರದೇಶ	೪೮.	ಸಾಂಸಿ, ಭೇಡಕೂಟ, ಮನೇಶ	೩೨.	ಕಂಜರ, ಕಂಚನ
೯. ಜಮ್ಮು ಕಾಶ್ಮೀರ			೧೪.	ಸಾಂಸಿ
೧೦. ಜಾರಖಂಡ್	೧೪.	ಕಂಜರ		
೧೧. ಕರ್ನಾಟಕ			೩೨.	ಕಂಜಿರಭಟ, ಖಂಜರಭಾಟ, ಕಂಜಿರಭಾಟ
			೩೩.	ಕಂಜಾರಿ, ಕಂಜರ, ಕಂಜಿರ
			೪೪.	ಸಾಂಸಿಯ
೧೨. ಮಧ್ಯಪ್ರದೇಶ	೨೮.	ಕಂಜರ		
	೪೫.	ಸಾಂಸಿ, ಸಾಂಸಿಯ		
೧೩. ಮಹಾರಾಷ್ಟ್ರ	೫೫.	ಸಾಂಸಿ	೧೭೮.	ಭಾರಾ, ಕಂಜರ ಕಂಜರ ಭಾಟ್, ನಟ್
೧೪ ಒರಿಸ್ಸಾ			೬೦	ಕಂಜರ
೧೫. ಪಂಜಾಬ	೩೨.	ಸಾಂಸಿ, ಭೇಡಕೂಟ ಮನೇಶ	೮.	ಕಂಜರ ಅಥವಾ ಕಂಚನ
೧೬. ಪಶ್ಚಿಮಬಂಗಾಳ	೨೮.	ಕಂಜರ		
೧೭. ರಾಜಸ್ತಾನ	೩೩.	ಕಂಜರ, ಕುಂಜರ		
	೫೨.	ಸಾಂಸಿ		
೧೮. ಉತ್ತರಾಂಚಲ	೪೨.	ಕಂಜರ		
೧೯. ಉತ್ತರಪ್ರದೇಶ	೨೦.	ಭಾಂತು		
	೪೨.	ಕಂಜರ		
	೬೪.	ಸಾಂಸಿಯ		

ಕರ್ನಾಟಕ ಸರಕಾರದ ಸಮಾಜ ಕಲ್ಯಾಣ ಸಚಿವಾಲಯವು ಕರ್ನಾಟಕ ರಾಜ್ಯಪತ್ರವನ್ನು ಏಪ್ರಿಲ್ ೧೧, ೨೦೦೨ ರಂದು ಹೊರಡಿಸಿದೆ. ಈ ಪ್ರಕಾರ ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ ೧ರ ಕ್ರಮ ಸಂಖ್ಯೆ ೨೨ ಎ. ಖಂಜಿರ್ ಭಾಟ್, ಬಿ. ಕಂಜರ್, ಸಿ. ಖಂಜರ್ ಭಾಟ್, ೪೫. ಸಾಂಸಿಯ, ೬೫ ಎ. ಚಾರ, ಬಿ. ಚಾರ್, ಸಿ. ಚ್ಛಾರ್, ೭೭ ಎ. ಕಂಜರಿ, ಬಿ. ಕಂಜಿರ್ ಎಂಬೀ ಹೆಸರುಗಳಲ್ಲಿ ಕಂಜರಭಾಟ ಸಮುದಾಯಕ್ಕೆ ಮೀಸಲಾತಿಯನ್ನು ಕಲ್ಪಿಸಲಾಗಿದೆ.

ಕರ್ನಾಟಕ ಮತ್ತು ಆಂಧ್ರ ಪ್ರದೇಶ ರಾಜ್ಯಗಳನ್ನು ಹೊರತುಪಡಿಸಿದರೆ ದೇಶದೆಲ್ಲೆಡೆ ಕಂಜರಭಾಟರನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರಿಸಲಾಗಿದೆ. ಶೇಷ ರಾಜ್ಯಗಳಲ್ಲಿಯೂ ಪರಿಶಿಷ್ಟರ ಪಟ್ಟಿಗೆ ಸೇರಲು ಇವರಿಗೆ ಎಲ್ಲ ಅರ್ಹತೆಗಳಿದ್ದರೂ ಇದುವರೆಗೂ ಸಾಧ್ಯವಾಗಲಿಲ್ಲ. ಈ ಕುರಿತು ರಾಜ್ಯ ಮತ್ತು ಕೇಂದ್ರ ಸರಕಾರಗಳಿಗೆ ಸಮುದಾಯದ ಸಂಘಟನೆ ಹಲವಾರು ಸಲ ಮನವಿಗಳನ್ನು ನೀಡಿದೆ. ಆದರೂ, ತಕ್ಕ ಪ್ರತಿಫಲ ಪ್ರಾಪ್ತವಾಗಲಿಲ್ಲ. ಈ ಕುರಿತು ಎಲ್ಲರೂ ಗಂಭೀರವಾಗಿ ಚಿಂತಿಸುವುದು ಅಗತ್ಯವಾಗಿದೆ. ಆ ಕಾರಣಕ್ಕಾಗಿ ಸಮುದಾಯವು ಸಂಘಟನೆಯನ್ನು ಕಟ್ಟಿಕೊಂಡಿದೆ. ಅಖಿಲ ಕರ್ನಾಟಕ ಕಂಜರಭಾಟ ಸಂಘದ ಪದಾಧಿಕಾರಿಗಳ ವಿವರ ಹೀಗಿದೆ.

ಅಖಿಲ ಕರ್ನಾಟಕ ಕಂಜರಭಾಟ ಸಮಾಜ ಸಂಘದ ಪದಾಧಿಕಾರಿಗಳ ಪಟ್ಟಿ

ಸ್ಥಾನ	ಹೆಸರು
ಅಧ್ಯಕ್ಷ	ಅಮರಸಿಂಗ ಬದಾಮಿ ಬಾಗಡೆ, ಹುಬ್ಬಳ್ಳಿ
ಉಪಾಧ್ಯಕ್ಷ	೧. ಅನಾರ ಬಾಳು ಗಾಗಡೆ, ಗದಗ
	೨. ಸಾಗರ ಬಾಬು ನವಲೆ, ಹುಬ್ಬಳ್ಳಿ
	೩. ಕೈಲಾಸ ನವೀನ ಬಾಟುಂಗೆ, ಬಿಜಾಪುರ
ಪ್ರಧಾನ ಕಾರ್ಯದರ್ಶಿ :	ಬಾದಲ ಪಿ. ನವಲೆಕರ, ಹುಬ್ಬಳ್ಳಿ
ಕಾರ್ಯದರ್ಶಿ	೧. ಕದಮ ಲೈನ್ಯಾ ಗಾಗಡೆ, ದಾಂಡೇಲಿ
	೨. ಸುಭಾಸ ಸುಬಾನ ಮೀಣೆಕರ್, ಹುಬ್ಬಳ್ಳಿ
	೩. ಮನೋಜ ಶಿವಲಾಲ ಬಾಗಡೆ, ಬಿಜಾಪುರ
ಖಜಾಂಚಿ	ಅಕ್ಕು ಬದಾಮಿ ಬಾಗಡೆ, ಗದಗ
ಸಹ ಖಜಾಂಚಿ	ಚೈಸಿಂಗ ಝಿಣು ಬಾಗಡೆ, ಬಿಜಾಪುರ
ಸಂಘಟನಾ ಕಾರ್ಯದರ್ಶಿ:	ರಮೇಶ ಮಾಣಿಕ ಗಾಗಡೆ, ಗದಗ
ಸಹ ಸಂಘಟನಾ ಕಾರ್ಯದರ್ಶಿ:	೧. ಸುರೇಶ ಟಿ ಮಾಛರೆ, ಹುಬ್ಬಳ್ಳಿ
	೨. ಸುಭಾಸ ವಜೀರ ಬಾಗಡೆ, ದಾಂಡೇಲಿ
	೩. ಮಾಣಿಕ ಅಪ್ಪರ ಬಾಗಡೆ, ಹುಬ್ಬಳ್ಳಿ
ಸದಸ್ಯರು	೧. ಸೀನ್ಯಾ ಮಸೇರಾಮ ಮೀಣೆಕರ, ದಾಂಡೇಲಿ
	೨. ಮೋಹನ ಲೇಮು ಕಟ್ಟಿಮನಿ, ಗದಗ
	೩. ರಮೇಶ ಅಪ್ಪರ ಬಾಗಡೆ, ಗದಗ
	೪. ಸುರೇಶ ಪ್ರಭು ಮಾಛರೆ, ಅಜ್ಜನಕಟ್ಟಿ
	೫. ಅನಿಲ ಸಾಬು ಬುಟುಂಗೆ, ಮುಧೋಳ
	೬. ಪಂಜಾಬ ಬಾಗಡೆ, ಬೆಲ್ಲದ ಬಾಗೇವಾಡಿ
	೭. ದೀಪಕ ಲಾಲಚಂದ ಬಾಗಡೆ, ಹುಬ್ಬಳ್ಳಿ

೮. ರಮೇಶ ಲೇಮು ಕಟ್ಟಿಮನಿ, ಗದಗ
೯. ಮಾಣಿಕ ಅಪ್ಸರ್ ಬಾಗಡೆ, ಹುಬಳ್ಳಿ
೧೦. ರಾಜು ಶಿವಲಾಲ್ ಗಾಗಡೆ, ಹುಬಳ್ಳಿ

ಅಖಿಲ ಭಾರತೀಯ ಸೈಸಮಲ್ ಭಾಂತು ಕಂಜರಭಾಟ ಸಮಾಜದ ಸಂಘವು ೧೯೮೮ರಲ್ಲಿ ಹರಿಯಾಣದ ಮಹ್ಮದಪೂರದಲ್ಲಿ ಶ್ರೀ ಮಹಾತ್ಮಾ ರೋಶನಜಿ ಮಹಾರಾಜರ ಹಿರಿತನದಲ್ಲಿ ಸ್ಥಾಪನೆಯಾಯಿತು. ಇಲ್ಲಿ ದೆಹಲಿ, ಪಂಜಾಬ, ಕರ್ನಾಟಕ, ರಾಜಸ್ಥಾನ, ಹರಿಯಾಣ, ಗುಜರಾತ, ಮಧ್ಯ ಪ್ರದೇಶ, ಮಹಾರಾಷ್ಟ್ರ ಮುಂತಾದ ರಾಜ್ಯಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ರಾಜಸ್ಥಾನದ ಜೋಧಪುರ, ದೆಹಲಿ, ಮಹಾರಾಷ್ಟ್ರದ ಪೂನಾ, ಗುಜರಾತದ ಅಹ್ಮದಾಬಾದ ಮುಂತಾದ ಕಡೆಗೆ ರಾಷ್ಟ್ರಮಟ್ಟದ ಸಮಾಜದ ಸಭೆಗಳು ಜರುಗಿದವು. ೧೯೯೬ರಲ್ಲಿ ಈ ಸಮುದಾಯದ ಅಖಿಲ ಭಾರತೀಯ ಸಂಘಟನೆಯ ನಿಯೋಗ ಶ್ರೀಮಾನ ಶರದ್ ಪವಾರವರ ಮುಖಂಡತ್ವದಲ್ಲಿ ಅಂದಿನ ಪ್ರಧಾನಿ ಸನ್ಮಾನ್ಯ ಶ್ರೀ ಎಚ್ ಡಿ ದೇವೇಗೌಡ ಅವರಿಗೆ ಭೇಟಿಯಾಗಿ ಪರಿಶಿಷ್ಟ ಪಂಗಡದಲ್ಲಿ ಈ ಸಮುದಾಯ ಸೇರಿಸುವಂತೆ ಮನವಿ ಸಲ್ಲಿಸಲಾಗಿದೆ. ಈ ನಿಯೋಗದಲ್ಲಿ ಕರ್ನಾಟಕದ ಜೆ ವ್ಹಿ ಬಾಗಡೆ, ಅನಾರ ಗಾಗಡೆ, ಪ್ರತಾಪ ಮಾಛರೆ ಭಾಗವಹಿಸಿದ್ದರು. ೩೧.೮.೨೦೦೫ ರಂದು ಜರುಗಿದ ದೆಹಲಿಯಲ್ಲಿಯ ಮಹಾ ಅಧಿವೇಶನದಲ್ಲಿಯೂ ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಲಾಯಿತು. ಇದೇ ರೀತಿ ದೇಶದ ಹಲವಾರು ರಾಜ್ಯಗಳಲ್ಲಿ ಸಂಘವು ಸಭೆ ಸಮಾರಂಭಗಳನ್ನು ನಡೆಯಿಸಿ ಸಮುದಾಯದ ಕುಂದುಕೊರತೆಗಳ ಬಗೆಗೆ ಸಾರ್ವಜನಿಕರ ಗಮನ ಸೆಳೆದಿದೆ. ೨೦೦೬ರಲ್ಲಿ ಕರ್ನಾಟಕದ ಗದುಗಿನಲ್ಲಿ ಸಭೆ ನಡೆಸಲಾಗಿದೆ. ಸ್ಥಳೀಯ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಕಂಜರಭಾಟರ ಸಂಘಟನೆಗಳು ಸಮುದಾಯದ ಸಮಸ್ಯೆಗಳ ಪರಿಹಾರಕ್ಕಾಗಿ ಹೆಣಗುತ್ತಿವೆ. ಪ್ರಸ್ತುತ ರಾಷ್ಟ್ರೀಯ ಮಟ್ಟದ ಸಂಘದ ಪದಾಧಿಕಾರಿಗಳ ವಿವರ ಹೀಗಿದೆ.

ಅಖಿಲ ಭಾರತೀಯ ಸೈಸಮಲ್ ಕಂಜರಭಾಟ ಸಮಾಜ ಸಂಘದ ಪದಾಧಿಕಾರಿಗಳ ಪಟ್ಟಿ

ಸ್ಥಾನ	**ಹೆಸರು**
ಸಂರಕ್ಷಕರು	ಮಹಾತ್ಮ ರೋಶನಜಿ ಮಹಾರಾಜ, ರಾಜಸ್ಥಾನ
ಚೀಫ್ ಅಡ್ವಾಯಿಜರ್	ಮೋರಚಂದ ಭಾಟ, ಪೂನಾ
ಅಧ್ಯಕ್ಷ	ಕವಿಚಂದ ಭಾಟ, ಮಹಾರಾಷ್ಟ್ರ
ಉಪಾಧ್ಯಕ್ಷ	೧. ಜೆ ವ್ಹಿ ಬಾಗಡೆ, ಕರ್ನಾಟಕ
	೨. ಸುನೀಲ ಮಲಕೆ, ಮಹಾರಾಷ್ಟ್ರ
	೩. ಅಭಯಸಿಂಗ ಬಿಜಾವತ, ರಾಜಸ್ಥಾನ
	೪. ಮಂಗತರಾಮ ಮಾಲ್ಹಾ, ಪಂಜಾಬ

ಪ್ರಧಾನ ಕಾರ್ಯದರ್ಶಿ	:	ರತನ ಕೊಡೇಕರ, ಗುಜರಾತ
ಕಾರ್ಯದರ್ಶಿ	:	೧. ರಮೇಶ ರಾಹಿ, ದೆಹಲಿ
		೨. ಪ್ರಕಾಶ ರಾವಳಕರ, ಮಹಾರಾಷ್ಟ್ರ
ಖಜಾಂಚಿ	:	ಮುಕೇಶ ಮೀಣೇಕರ, ಪೂನಾ
ಸಂಘಟನಾ ಕಾರ್ಯದರ್ಶಿ	:	೧. ಮಹೇಂದ್ರ ಸಿಂಗ್ ಭಾನಾ, ದೆಹಲಿ
		೨. ಸಮೀರ ಛಾರಾ, ಗುಜರಾತ
ಸದಸ್ಯರು		೧. ಡಾ ಆರ್ ಸಿ ಸಿಸೋದಿಯಾ, ಮಧ್ಯ ಪ್ರದೇಶ
		೨. ರವಿ ನವಲೆ, ಮುಂಬಾಯಿ
		೩. ವಿಭೂಷಣ ತಮಾಯಚೆ, ಪೂನಾ
		೪. ದಿನಕರ ಬಾಗಡೆ, ನಂದುರಬಾರ
		೫. ಧರ್ಮಪಾಲ ಸಿಂಗ ಧಮ್ಮಾ, ಉತ್ತರ ಪ್ರದೇಶ
		೬. ಚತರರಾಮ ದೇಶಬಂಧು, ರಾಜಸ್ಥಾನ

ಕ್ರಿಮಿನಲ್ ಟ್ರಾಯಿಬ್ಸ ಸೆಟ್ಲಮೆಂಟ ನಿಯಮಗಳ ಷರತ್ತಿನ ಪ್ರತಿ

ಜ. ಕ್ರಿ. ಧಾ.

ಹೆಸರು. [illegible]

ಜಾತಿ. [illegible]

ರಜಿಸ್ಟರ ನಂಬರು. X-೪೩೦ [illegible] ವರೆಗೆ [illegible] ಸೆಟ್ಲಮೆಂಟ

ದಿಂದ ಸನ್ ೧೯೩೬ನೇ ಇಸ್ವಿಯ ಮುಂಬಯಿ ಕ್ರಿಮಿನಲ್ ಟ್ರಾಯಿಬ್ಸ ಸೆಟ್ಲಮೆಂಟ ನಿಯಮಗಳ ಪ್ರತಿ ೧೦ನೇ ನಿಯಮದನ್ವಯ ಅವನ ಅಕ್ರಿಯು ಸಹಿತ, ಅವನು ಕೆಳಗೆ ನಮೂದಿಸಿದ ಶರ್ತುಗಳ ಪ್ರಕಾರ ಗೊತ್ತುಪಡಿಸಿದ ಮುದ್ದತ್ತಿನ ವರೆಗೆ ಅಂದರೆ ಆರು ವರ್ಷಗಳ ವರೆಗೆ ತಪ್ಪದೆ ನಡೆಯಲಿಕ್ಕೆ ಕಬೂಲ ಮಾಡಿದ್ದರಿಂದ ಬಿಡಲಾಗಿದೆ.

೧ (ಅ) ಅವನು ಸೆಟ್ಲಮೆಂಟದ ಪ್ರೀ ೯ ನಿಯಮದ ಸೆಟ್ಲಮೆಂಟ ಮ್ಯಾನೇಜರರು ನಿಯಮಿಸಿದ ಜಾಗದಲ್ಲಿರತಕ್ಕದ್ದು.

(ಬ) ಅವನು ತನ್ನ ಮಕ್ಕಳನ್ನು ಅವರು ಹನ್ನೆರಡು ವರ್ಷದವರಾಗುವ ವರೆಗೆ ಸೆಟ್ಲಮೆಂಟದ ಶಾಲೆಗೆ ಕಳಿಸತಕ್ಕದ್ದು.

(ಕ) ಅವನು ಶರೀಫ ರೀತಿಯಿಂದ ವರ್ತಿಸಬೇಕು.

(ಡ) ಸೆಟ್ಲಮೆಂಟದ ಮ್ಯಾನೇಜರರು ನಿಯಮಿಸಿದ ಅಧಿಕಾರಿಯ ಮುಂದೆ ಅವನು ಪ್ರತಿವಾರಕ್ಕೊಮ್ಮೆ ಹಾಜರಿ ಕೊಡತಕ್ಕದ್ದು.

(ಇ) ರಾತ್ರಿ ೯ ಘಂಟೆ ಮತ್ತು ಬೆಳಗಿನ ೬ ಘಂಟೆ ಇವುಗಳ ನಡುವೆ ಪ್ರೀ ಕಾಲನಿಯ ಹದ್ದಿನಿಂದ ೯ ಮೈಲ ಹಾಕಿ ಹೋಗುವ ಅವಶ್ಯಕತೆ ಬಿದ್ದಲ್ಲಿ ಅವನು ಸೆಟ್ಲಮೆಂಟ ಮ್ಯಾನೇಜರರ ಕಡೆಯಿಂದ ಪಾಸ ತೆಗೆದುಕೊಳ್ಳತಕ್ಕದ್ದು. ಸದರಿ ಮ್ಯಾನೇಜರರಿಗೆ ಆರು ತಿಂಗಳದ ತನಕ ಅವನಿಗೆ ಬೇಕಾದ ಸ್ಥಳಕ್ಕೆ ಹೋಗಲಿಕ್ಕೆ ಕೊಡುವ ಅಧಿಕಾರವುಂಟು. ಆರು ತಿಂಗಳದಕಿಂತ ಹೆಚ್ಚು ಮುದ್ದತಿಯ ಪಾಸನ್ನು ಮ್ಹ ಕ್ರಿಮಿನಲ್ ಟ್ರಾಯಿಬ್ಸ ಸೆಟಲ್‌ಮೆಂಟ ಆಫೀಸರರು ಕೊಡುವರು.

ಈ ಮೇಲೆ ನಮೂದಿಸಿದ ಶರ್ತುಗಳಲ್ಲಿ ಯಾವುದಾದರೂ ಒಂದು ಶರ್ತು ಸಹಾ ಉಲ್ಲಂಘಿಸಿದಲ್ಲಿ ಮ್ಹ ಕ್ರಿಮಿನಲ್ ಟ್ರಾಯಿಬ್ಸ ಸೆಟ್ಲಮೆಂಟ ಆಫೀಸರ ಸಾ|| ಬಹದ್ದೂರರವರ ಮರ್ಜಿಯನ್ವಯ ಅವನಿಗೆ ಮಾಡಿದ ಬಿಡುಗಡೆಯ ಹುಕುಮನ್ನು ರದ್ದು ಮಾಡಿ ಅವನು ಪುನಃ ಸೆಟ್ಲಮೆಂಟದಲ್ಲಿ ಇಡಲ್ಪಡಲಿಕ್ಕೆ ಭಾಗೀದಾರನಾಗುವನು. ಈ ಬಗ್ಗೆ ಮಾಡಿದ ತೀರ್ಪು ಮ್ಹ ಕ್ರಿಮಿನಲ್ ಟ್ರಾಯಿಬ್ಸ ಸೆಟ್ಲಮೆಂಟ ಆಫೀಸರ ಸಾ|| ಬ|| ರವರದ್ದೇ ಕೊನೆಯ ತೀರ್ಪು.

ಮೇಲೆ ನಮೂದಿಸಿದ ಶರ್ತುಗಳ ಕಬೂಲ ಮಾಡಿ ಯಾವ ತಾರೀಖಿಗೆ ಸೆಟ್ಲಮೆಂಟದ ಹದ್ದಿಯನ್ನು ಬಿಟ್ಟು ಪ್ರೀ ಕಾಲನಿಯಲ್ಲಿ ಇರಲಿಕ್ಕೆ ಹೋಗುವನೋ ಆ ತಾರೀಖಿನಿಂದ ಈ "ಲಾಯಸೆನ್ಸ" ದ ಮುದ್ದತ್ತು ಆರಂಭವಾಗುವದು.

ತಾರೀಖು ೧೨-೯-೨೮

ಕ್ರಿಮಿನಲ್ ಟ್ರಾಯಿಬ್ಸ ಸೆಟ್ಲಮೆಂಟ
ಆಫೀಸರ ಧಾರವಾಡ.

ಮೇಲೆ ನಮೂದಿಸಿದ ಕಲಮುಗಳನ್ನು ಓದಿ ಹೇಳಿದ್ದು ಕೇಳಿದೆ. ಇವಕ್ಕೆ ನಾನು ಕಬೂಲ ಇದ್ದೇನೆ.

T. [signature]
[redacted] ಸಹಿ. Rohany [signature]
21.2.28

ನಾನು ತಿಳಿಸಿ ಹೇಳಿದ ಮತ್ತು ಇವನು ಅವುಗಳಿಗೆ ಕಬೂಲ ಮಾಡ್ಡಿದನು.

21.2.28 G. L. Bradbury
ಮ್ಯಾನೆ: ಸೆಟ್ಲಮೆಂಟ
Hubli

ಇವನು ಶ್ರೀ ಕಾಲನಿಯಾಫೀಸರಿಂದ ಸೆಟ್ಲಮೆಂಟವನ್ನು 21-2-28 ತಾರೀಖಿನ ದಿವಸ ಬಿಟ್ಟನು.

21-2-28 G. L. Bradbury
ಮ್ಯಾನೇಜರ ಸೆಟ್ಲಮೆಂಟ
Hubli

(ಫ್ರೀ ಕಾಲನಿ) ಬಿಡುಗಡೆ ಕರಾರು ಪತ್ರಿಕೆಯ ಪ್ರತಿ

C. P.—(J) Jb 12—400—12-36 (Supz.)3° [Spl.—B.O.D. 56 k
I. H.D., No. 6538/8 dated 31-1- 6

Condition Form of License (Free Colony) for Wandering Tribes.

(ಫ್ರೀ ಕಾಲನಿ) ಬಿಡುಗಡೆ ಕರಾರು ಪತ್ರಿಕೆ

ಹೆಸರು [illegible]

ಜಾತಿ [illegible]

ರಜಿಸ್ಟರ ನಂಬರು S.P.U.R./231/[illegible] ವರಿಗೆ [illegible] ಸೆಟ್ಲಮೆಂಟ

ದಿಂದ ಸನ್ ೧೯೨೪ನೇ ಇಸವಿಯ ಮುಂಬಯಿ ಕ್ರಿಮಿನಲ್ ಟ್ರಾಯಿ... ನಿಯಮಗಳ ಪ್ರ... ...ನಿಯಮ ನನ್ವಯ ಅವನ ಆಶ್ರಿತರು ಸಹಿತ, ಅವನು ಕೆಳಗೆ ನಮೂದಿಸಿ ಪ್ರಕಾರ ಗೊತ್ತುಪಡಿಸಿದ ಮುದ್ದತ್ತಿನ ವರೆಗೆ ಅಂದರೆ ಎಂಟು ವರ್ಷಗಳ ವರೆಗೆ ತಪ್ಪದೆ ನಡೆಯಲಿಕ್ಕೆ ಕಬೂಲ ಮಾಡಿದ್ದಕ್ಕೆ ಬಿಡಲ್ಪಡುವದು. ಈ ಮುದ್ದತ್ತು ಮೇ। ಬ್ಯಾಕವರ್ಡ ಕ್ಲಾಸ ಆಫೀಸರ ಸಾಹೇಬರವರ ಮರ್ಜಿ ಅನ್ವಯ ಬೆಳಸಲ್ಪಡಬಹುದು.

(ಅ) ಅವನು [illegible] ಸೆಟ್ಲಮೆಂಟದ ಫ್ರೀ ಕಾಲನಿಯಲ್ಲಿ ಸೆಟ್ಲಮೆಂಟ ಮ್ಯಾನೇಜರರು ನಿಯಮಿಸಿದ ಜಾಗಾದಲ್ಲಿರತಕ್ಕದ್ದು.

(ಬ) ಅವನು ತನ್ನ ಮಕ್ಕಳನ್ನು ಅವರು ಹನ್ನೆರಡು ವರ್ಷದವರಾಗುವವರೆಗೆ ಸೆಟ್ಲಮೆಂಟದ ಶಾಲೆಗೆ ಕಳಿಸತಕ್ಕದ್ದು.

(ಕ) ಅವನು ಚಲೋ ರೀತಿಯಿಂದ ವರ್ತಿಸಬೇಕು.

(ಡ) ಸೆಟ್ಲಮೆಂಟದ ಮ್ಯಾನೇಜರರು ನಿಯಮಿಸಿದ ಅಧಿಕಾರಿಯ ~~ಮುಂದೆ ಹಾಜರಿ~~ ಪ್ರತಿವಾರ ಕ್ಯಾವೆಟ್ಟು ಹಾಜರಿ ಕೊಡಬೇಕು.

ಟಿಪ್ಪಣಿ :—ಪ್ರತಿ ... ಬಳಗುವ... ... ಫ್ರೀ ಕಾಲನಿಯು ಹದ್ದಿನಿಂದ ಗೈರಹಾಜರ ಆಗುವ ಅಗತ್ಯವಿದ್ದ ಪ್ರಸಂಗದಲ್ಲಿ ಅವನು ಸೆಟ್ಲಮೆಂಟ ಮ್ಯಾನೇಜರರ ಪ...ಯಿಂದ ಪಾಸ ತೆಗೆದುಕೊಳ್ಳತಕ್ಕದ್ದು. ಸದರೀ ಮ್ಯಾನೇಜರರಿಗೆ ಆರು ... ತಿಂಗಳ ... ಅವನಿಗೆ ಬೇಕಾದ ಸ್ಥಳಕ್ಕೆ ಹೋಗಲಿಕ್ಕೆ ಪಾಸ ಕೊಡುವ ಅಧಿಕಾರವುಂಟು. ...ರು ತಿಂಗಳಕ್ಕಿಂತ ಹೆಚ್ಚು ಮುದ್ದತಿನ ಪಾಸನ್ನು ಮೇ। ಬ್ಯಾಕವರ್ಡ ಕ್ಲಾಸ ಆಫೀಸರರೇ ಕೊಡುವರು.

(ಫ) ಅವನು ಒಂದು ನೆಟ್ಟಗಿದ್ದ ಮನೆಯನ್ನು ಕಟ್ಟಿದ್ದಾನೆಂದೂ ಮತ್ತು ಮೊದಲಿನಂತೆ ತನ್ನ ಜಾತಿಯ ತಿರುಗಾಟದ ಚಟಗಳನ್ನು ಪುನಃ ಪ್ರಾರಂಭಿಸಲಿಕ್ಕಿಲ್ಲೆಂದೂ ಮೇ। ಬ್ಯಾಕವರ್ಡ ಕ್ಲಾಸ ಆಫೀಸರ ಸಾ॥ ಬ॥ ರವರಿಗೆ ಖಾತ್ರಿ ಮಾಡಿಕೊಟ್ಟರೆ, ಅವನು ತನ್ನ 'ಲಾಯಸೆನ್ಸ'ದ ಮುದ್ದತ್ತಿನ ಕಡೆಯ ಎರಡು ವರ್ಷಗಳಲ್ಲಿ ಹಾಜರಿ ಕೊಡುವದಾಗಲಿ ಅಥವಾ ರಾತ್ರಿ ಗೈರಹಾಜರ ಇರುವದಕ್ಕೆ ಪಾಸು ಪಡೆಯುವದಾಗಲಿ ಅವಶ್ಯವಿಲ್ಲ.

ಈ ಮೇಲೆ ನಮೂದಿಸಿದ ಶರ್ತುಗಳ ಪೈಕಿ ಯಾವದಾದರೂ ಒಂದು ಶರ್ತು ಸಹಾ ಉಲ್ಲಂಘಿಸಿದಲ್ಲಿ ಮೇ। ಬ್ಯಾಕವರ್ಡ ಕ್ಲಾಸ ಆಫೀಸರ ಸಾ॥ ಬಹದ್ದೂರರವರ ಮರ್ಜಿಯನ್ವಯ ಅವನಿಗೆ ಮಾಡಿದ ಬಿಡುಗಡೆಯ ಹುಕುಮನ್ನು ರದ್ದು ಮಾಡಿ ಅವನು ಪುನಃ ಸೆಟ್ಲಮೆಂಟದಲ್ಲಿ ಇಡಲ್ಪಡಲಿಕ್ಕೆ ಜವಾಬದಾರನಾಗುವನು. ಈ ಬಾಬತ್ತು ಮಾಡಿದ ತೀರ್ಪು ಮೇ। ಬ್ಯಾಕವರ್ಡ ಕ್ಲಾಸ ಆಫೀಸರ ಸಾ॥ ಬ॥ ರವರದೇ ಕೊನೆಯ ತೀರ್ಪು.

ಮೇಲೆ ನಮೂದಿಸಿದ ಶರ್ತುಗಳಿಗೆ ಕಬೂಲ ಮಾಡಿ ಯಾವ ತಾರೀಖಿಗೆ ಸೆಟ್ಲಮೆಂಟದ ಹದ್ದನ್ನು ಬಿಟ್ಟು ಫ್ರೀ ಕಾಲನಿಯಲ್ಲಿ ಇರಲಿಕ್ಕೆ ಹೋಗುವನೋ ಆ ತಾರೀಖಿನಿಂದ ಈ "ಲಾಯಸೆನ್ಸ"ದ ಮುದ್ದತ್ತು ಆರಂಭವಾಗುವದು.

ತಾರೀಖು 23-3-1936

[signature]
ಬ್ಯಾಕವರ್ಡ ಕ್ಲಾಸ ಆಫೀಸರ,
ಪುಣೆ

ಮೇಲೆ ನಮೂದಿಸಿದ ಶರ್ತುಗಳನ್ನು ಓದಿ ಹೇಳಿದ್ದು ಕೇಳಿದೆ. ಅವಕ್ಕೆ ನಾನು ಕಬೂಲು ಇದ್ದೇನೆ:

ಸಹಿ

ನಾನು ತಿಳಿಸಿ ಹೇಳಿದೆ ಮತ್ತು ಅವನು ಅವುಗಳಿಗೆ ಕಬೂಲ ಮಾಡಿದನು

ಮ್ಯಾನೇಜರ ಸೆಟ್ಲಮೆಂಟ

ಅವನು ಫ್ರೀ ಕಾಲನಿಯಲ್ಲಿರಲಿಕ್ಕೆ ಸೆಟ್ಲಮೆಂಟವನ್ನು 8/4/39 ತಾರೀಖಿನ ದಿವಸ ಬಿಟ್ಟನು

ಮ್ಯಾನೇಜರ ಸೆಟ್ಲಮೆಂಟ

ಅಂಕಿಅಂಶಗಳು: ೧. ಪರಿಶಿಷ್ಟ ಜಾತಿಯ ಕಂಜರಭಾಟ, ಸಾಂಸಿ, ಸಾಂಸಿಯ... ಸಮುದಾಯದ ರಾಜ್ಯವಾರು ಮತ್ತು ಲಿಂಗವಾರು ಜನಸಂಖ್ಯೆ (೨೦೦೧)

ಕೇಂದ್ರಾಡಳಿತ ಪ್ರದೇಶ / ರಾಜ್ಯ	ಸಮುದಾಯ	ಒಟ್ಟು ಗ್ರಾಮೀಣ ನಗರ	ಜನಸಂಖ್ಯೆ		
			ಒಟ್ಟು	ಗಂಡು	ಹೆಣ್ಣು
I	II	III	IV	V	VI
ಉತ್ತರ ಪ್ರದೇಶ	**ಕಂಜರ**	**ಒಟ್ಟು**	**೯೩,೨೦೭**	**೪೮,೯೯೩**	**೪೪,೨೧೪**
		ಗ್ರಾಮೀಣ	೫೫,೪೦೭	೨೯,೦೮೭	೨೬,೩೨೦
		ನಗರ	೩೭,೮೦೦	೧೯,೯೦೬	೧೭,೮೯೪
	ಸಾಂಸಿಯ	**ಒಟ್ಟು**	**೮,೬೩೯**	**೪,೫೧೪**	**೪,೧೨೫**
		ಗ್ರಾಮೀಣ	೫,೬೩೪	೨,೯೬೮	೨,೬೬೬
		ನಗರ	೩,೦೦೫	೧,೫೪೬	೧,೪೫೯
ಚಂಡೀಗಢ	**ಸಾಂಸಿ...**	**ಒಟ್ಟು**	**೨೯೭೪**	**೧,೪೭೬**	**೧,೪೯೮**
		ಗ್ರಾಮೀಣ	೧೧೩	೬೨	೫೧
		ನಗರ	೨,೮೬೧	೧,೪೧೪	೧,೪೪೭
ಛತ್ತೀಸ್‌ಘರ್	**ಕಂಜರ**	**ಒಟ್ಟು**	**೭೪**	**೪೦**	**೩೪**
		ಗ್ರಾಮೀಣ	೧೦	೫	೫
		ನಗರ	೬೪	. ೩೫	೨೯
	ಸಾಂಸಿ...	**ಒಟ್ಟು**	**೮೧**	**೪೦**	**೪೧**
		ಗ್ರಾಮೀಣ	೪೫	೧೯	೨೬
		ನಗರ	೩೬	೨೧	೧೫೩
ಜಾರ್ಖಂಡ	**ಕಂಜರ**	**ಒಟ್ಟು**	**೮೨೮**	**೪೨೩**	**೪೦೫**
		ಗ್ರಾಮೀಣ	೧೯	೧೦	೯
		ನಗರ	೮೦೯	೪೧೩	೩೯೬
ದೆಹಲಿ	**ಕಂಜರ..**	**ಒಟ್ಟು**	**೧೦,೭೪೩**	**೫,೪೬೪**	**೫,೨೭೯**
		ಗ್ರಾಮೀಣ	೧೯೬	೧೦೩	೯೩
		ನಗರ	೧೦,೫೪೭	೫,೩೬೧	೫,೧೮೬
	ಸಾಂಸಿ...	**ಒಟ್ಟು**	**೧೮,೯೭೫**	**೯,೭೭೧**	**೯,೨೦೪**
		ಗ್ರಾಮೀಣ	೯೯೬	೫೦೭	೪೮೯
		ನಗರ	೧೭,೯೭೯	೯,೨೬೪	೮,೭೧೫

I	II	III	IV	V	VI
ಪಶ್ಚಿಮ ಬಂಗಾಳ	ಕಂಜರ	ಒಟ್ಟು	೨೭೯	೧೪೪	೧೩೫
		ಗ್ರಾಮೀಣ	೧೨೪	೭೦	೫೪
		ನಗರ	೧೫೫	೭೪	೮೧
ಬಿಹಾರ್	ಕಂಜರ	ಒಟ್ಟು	೧,೬೨೦	೮೬೦	೭೬೦
		ಗ್ರಾಮೀಣ	೯೧೪	೪೮೮	೪೨೬
		ನಗರ	೭೦೬	೩೭೨	೩೩೪
ಮಧ್ಯಪ್ರದೇಶ	ಕಂಜರ	ಒಟ್ಟು	೧೧,೭೧೫	೫,೯೭೩	೫,೭೪೨
		ಗ್ರಾಮೀಣ	೮,೬೬೪	೪,೩೭೨	೪,೨೯೨
		ನಗರ	೩,೦೫೧	೧,೬೦೧	೧,೪೫೦
	ಸಾಂಸಿ...	ಒಟ್ಟು	೪,೭೮೫	೨,೪೭೩	೨,೩೧೨
		ಗ್ರಾಮೀಣ	೪,೧೯೯	೨,೧೫೧	೨,೦೪೮
		ನಗರ	೫೮೬	೩೨೨	೨೬೪
ರಾಜಸ್ಥಾನ	ಕಂಜರ...	ಒಟ್ಟು	೩೭,೯೭೧	೧೯,೪೫೧	೧೮,೫೨೦
		ಗ್ರಾಮೀಣ	೩೨,೫೯೨	೧೬,೬೨೮	೧೫,೯೬೪
		ನಗರ	೫,೩೭೯	೨,೮೨೩	೨,೫೫೬
	ಸಾಂಸಿ	ಒಟ್ಟು	೬೦,೩೬೫	೩೦,೫೨೮	೨೯,೮೩೭
		ಗ್ರಾಮೀಣ	೪೦,೪೯೬	೨೦,೫೫೯	೧೯,೯೩೭
		ನಗರ	೧೯,೮೬೯	೯,೯೬೯	೯,೯೦೦
ಮಹಾರಾಷ್ಟ್ರ	ಸಾಂಸಿ	ಒಟ್ಟು	೩೮೯	೨೦೯	೧೮೦
		ಗ್ರಾಮೀಣ	೨೬	೧೮	೮
		ನಗರ	೩೬೩	೧೯೧	೧೭೨
ಹರಿಯಾಣ	ಸಾಂಸಿ...	ಒಟ್ಟು	೩೭,೪೬೨	೧೯,೫೯೫	೧೭,೮೬೭
		ಗ್ರಾಮೀಣ	೩೨,೨೬೦	೧೬,೮೩೪	೧೫,೪೨೬
		ನಗರ	೫,೨೦೨	೨,೭೬೧	೨,೪೪೧

ಆಧಾರ : ಭಾರತದ ಜನಗಣತಿ ವರದಿ ೨೦೦೧

ಅಂಕಿಅಂಶಗಳು: ೨. ಕಂಜರಭಾಟ ಸಮುದಾಯದ ಜನಸಂಖ್ಯೆ (೨೦೦೭)

ಜಿಲ್ಲೆ	ತಾಲೂಕು	ಗ್ರಾಮ ಪಂಚಾಯತ	ಪುರಸಭೆ	ನೆಲೆ	ಕುಟುಂಬ	ಜನಸಂಖ್ಯೆ		
						ಪುರುಷ	ಸ್ತ್ರೀ	ಒಟ್ಟು
I	II	III	IV	V	VI	VII	VIII	IX
ಬಾಗಲಕೋಟ	ಮುಧೋಳ		ಮುಧೋಳ	ಮುಧೋಳ	೧೫	೪೪	೨೯	೭೩
ಬೆಂಗಳೂರು	ಬೆಂಗಳೂರು		ಬೆಂಗಳೂರು	ವಿನಾಯಕ ನಗರ	೧	೨	೨	೪
ಬೆಳಗಾವಿ	ಚಿಕ್ಕೋಡಿ		ಚಿಕ್ಕೋಡಿ	ಚಿಕ್ಕೋಡಿ	೬	೧೭	೧೩	೩೦
	ಗೋಕಾಕ	ಅಜ್ಜನಕಟ್ಟಿ		ಅಜ್ಜನಕಟ್ಟಿ	೫	೧೦	೧೧	೨೧
	ಹುಕ್ಕೇರಿ	ಬೆಲ್ಲದಬಾಗೆವಾಡಿ		ಚಿಕ್ಕೋಡಿ ರೋಡ	೧೩	೨೧	೨೨	೪೩
	ರಾಯಬಾಗ		ರಾಯಬಾಗ	ರಾಯಬಾಗ	೨೬	೬೨	೫೩	೧೧೫
		ನಿಪ್ಪಾಣಿ		ನಿಪ್ಪಾಣಿ	೪	೧೪	೬	೨೦
ಬಿಜಾಪುರ	ಬಿಜಾಪುರ		ಬಿಜಾಪುರ	ಜೇಲದರ್ಗಾ	೬೩	೧೩೭	೧೩೩	೨೭೦
				ರಂಗಮಸೀದಿ	೩೯	೮೨	೯೧	೧೭೩
	ಮುದ್ದೆಬಿಹಾಳ್		ಮುದ್ದೆಬಿಹಾಳ್	ಮುದ್ದೆಬಿಹಾಳ್	೫	೫	೯	೧೪
ದಾವಣಗೆರೆ	ಹರಿಹರ		ಹರಿಹರ	ರೇಲ್ವೆ ವಸತಿ	೧	೧	೨	೩
ದಾರವಾಡ	ದಾರವಾಡ		ದಾರವಾಡ	ಗ್ರಾಮೀಣ ಬ್ಯಾಂಕ ಹತ್ತಿರ	೫	೧೦	೭	೧೭
	ಹುಬ್ಬಳ್ಳಿ		ಹುಬ್ಬಳ್ಳಿ	ಸೆಟ್ಲಮೆಂಟ್ ಹಾಗೂ ಆರ್‌ಜಿಎಸ್	೧೭೭	೩೨೩	೩೪೫	೬೬೮

I	II	III	IV	V	VI	VII	VIII	IX
ಗದಗ	ಗದಗ		ಗದಗ	ಗದಗ ಸೆಟ್ಲಮೆಂಟ	೪೭	೧೦೩	೧೦೦	೨೦೩
	ನರಗುಂದ		ನರಗುಂದ	ನರಗುಂದ	೧		೧	೧
	ರೋಣ		ಗಜೆಂದ್ರಗಡ	ಗಜೇಂದ್ರಗಡ	೧	೨	೨	೪
ಹಾವೇರಿ	ಶಿಗ್ಗಾಂವ	ಮಣಕಟ್ಟಿ		ಕೃಷ್ಣಾ ನಗರ	೧	೧	೧	೨
		ಬಂಕಾಪುರ		ಬಂಕಾಪುರ	೫	೧೦	೧೧	೨೧
		ತಡಸ		ಮುತ್ತಹಳ್ಳಿ	೧೨	೨೩	೨೫	೪೮
		ಕಾಮನಹಳ್ಳಿ		ಕಾಮನಹಳ್ಳಿ	೪	೩	೫	೮
ಉತ್ತರ ಕನ್ನಡ	ಹಳಿಯಾಳ		ದಾಂಡೇಲಿ	ಗಾಂಧಿ ನಗರ	೪೯	೧೨೦	೧೨೨	೨೪೨
ಕೋಲಾರ	ಬಂಗಾರಪೇಟೆ		ಬಂಗಾರಪೇಟೆ	ಬಿಇಎಂಎಲ್ ನಗರ೧	೧	೨	೨	೪
ಮೈಸೂರು	ಮೈಸೂರು		ಮೈಸೂರು	ಮೈಸೂರು	೪	೬	೮	೧೭
				ಒಟ್ಟು	೪೮೫	೧೦೦೧	೧೦೦೦	೨೦೦೧

ಅಂಕಿಅಂಶಗಳು: ೩. ಕರ್ನಾಟಕದ ಕಂಜರಭಾಟರ ದೈವಗಳು (೨೦೦೭)

ಕ್ರ ಸಂ	ಜಿಲ್ಲೆ	ತಾಲೂಕು	ನೆಲೆ	ಕುಟುಂಬ	ದೈವಗಳು					
					ಭವಾನಿ	ಹನುಮಾನ	ಕಾಳಿಕ	ನಾಗದೇವತೆ	ರಾಮದೇವ್	ರಾಣಿಬಾಯಿ
I	II	III	IV	V	VI	VII	VIII	IX	X	XI
೧	ಬಾಗಲಕೋಟ	ಮುಧೋಳ	ಮುಧೋಳ	೧೫	೩	೩	೨		೫	೨
೨	ಬೆಂಗಳೂರು	ಬೆಂಗಳೂರು	ವಿನಾಯಕ ನಗರ	೧		೧				
೩	ಬೆಳಗಾವಿ	ಚಿಕ್ಕೋಡಿ	ಚಿಕ್ಕೋಡಿ	೬	೪		೨			
		ಗೋಕಾಕ್	ಅಜ್ಜನಕಟ್ಟಿ	೫		೧	೩		೧	
		ಹುಕ್ಕೇರಿ	ಚಿಕ್ಕೋಡಿ ರೋಡ	೧೩			೧೩			
		ರಾಯಬಾಗ	ರಾಯಬಾಗ	೨೭					೨೭	
			ನಿಪ್ಪನಾಳ	೪			೨		೨	
೪	ಬಿಜಾಪುರ	ಬಿಜಾಪುರ	ಜೇಲದರ್ಗಾ	೬೩					೬೩	
			ರಂಗಮಸೀದಿ	೩೯					೩೯	
		ಮುದ್ದೇಬಿಹಾಳ್	ಮುದ್ದೇಬಿಹಾಳ್	೫			೫			
೫	ದಾವಣಗೆರೆ	ಹರಿಹರ	ರೇಲ್ವೆ ವಸತಿ	೧		೧				
೬	ಧಾರವಾಡ	ಧಾರವಾಡ	ಗ್ರಾಮೀಣ ಬ್ಯಾಂಕ ಹತ್ತಿರ	೫		೨	೩			
		ಹುಬ್ಬಳ್ಳಿ	ಸೆಟ್ಲಮೆಂಟ್ ಹಾಗೂ ಆರ್‌ಜಿಎಸ್	೧೮೮		೨೮	೪೦	೨೦	೯೦	

I	II	III	IV	V	VI	VII	VIII	IX	X	XI
೭	ಗದಗ	ಗದಗ	ಗದಗ ಸೆಟ್ಲಮೆಂಟ	೪೭					೪೭	
		ನರಗುಂದ	ನರಗುಂದ	೧		೧				
		ರೋಣ	ಗಜೇಂದ್ರಗಡ	೧		೧				
೮	ಹಾವೇರಿ	ಶಿಗ್ಗಾಂವ	ಕೃಷ್ಣಾ ನಗರ	೧		೧				
			ಬಂಕಾಪುರ	೫					೫	
			ಮುತ್ತಹಳ್ಳಿ	೧೨			೩		೬	
			ಕಾಮನಹಳ್ಳಿ	೪			೨	೨		
೯	ಉತ್ತರ ಕನ್ನಡ	ಹಳಿಯಾಳ	ಗಾಂಧಿ ನಗರ	೪೯		೮	೨೯		೧೨	
೧೦	ಕೋಲಾರ	ಬಂಗಾರಪೇಟೆ	ಬಿಇಎಂಎಲ್ ನಗರ೧	೧		೧				
೧೧	ಮೈಸೂರು	ಮೈಸೂರು	ಮೈಸೂರು	೪		೪				
				೪೮೫	೭	೫೧	೧೦೪	೨೨	೨೯೯	೨

ಅಂಕಿಅಂಶಗಳು: ೪. ಕರ್ನಾಟಕದ ಕಂಜರಭಾಟರ ಖಾನದಾನಗಳು (೨೦೦೭)

ಜಿಲ್ಲೆ	ತಾಲೂಕು	ನೆಲೆ	ಕುಟುಂಬ	ಬಿಡ್ಡಾ	ಮಾಲಾ
ಬಾಗಲಕೋಟ	ಮುಧೋಳ	ಮುಧೋಳ	೧೫	೨	೧೩
ಬೆಂಗಳೂರು	ಬೆಂಗಳೂರು	ವಿನಾಯಕ ನಗರ	೧	೦	೧
ಬೆಳಗಾವಿ	ಚಿಕ್ಕೋಡಿ	ಚಿಕ್ಕೋಡಿ	೬	೨	೪
	ಗೋಕಾಕ್	ಅಜ್ಜನಕಟ್ಟಿ	೫	೨	೩
	ಹುಕ್ಕೇರಿ	ಚಿಕ್ಕೋಡಿ ರೋಡ	೧೩	೦	೧೩
	ರಾಯಬಾಗ	ರಾಯಬಾಗ	೨೬	೧೧	೧೫
		ನಿಪ್ಪನಾಳ	೪	೨	೨
ಬಿಜಾಪುರ	ಬಿಜಾಪುರ	ಜೇಲದರ್ಗಾ	೬೩	೨೦	೪೩
		ರಂಗಮಸೀದಿ	೩೯	೧೮	೨೧
	ಮುದ್ದೇಬಿಹಾಳ್	ಮುದ್ದೇಬಿಹಾಳ್	೫	೫	೦
ದಾವಣಗೆರೆ	ಹರಿಹರ	ರೇಲ್ವೆ ವಸತಿ	೧	೦	೧
ಧಾರವಾಡ	ಧಾರವಾಡ	ಗ್ರಾಮೀಣ ಬ್ಯಾಂಕ ಹತ್ತಿರ	೫	೦	೫
	ಹುಬ್ಬಳ್ಳಿ	ಸೆಟ್ಲಮೆಂಟ್ ಹಾಗೂ ಆರ್‌ಜಿಎಸ್	೧೭೭	೬೫	೧೧೨
ಗದಗ	ಗದಗ	ಗದಗ ಸೆಟ್ಲಮೆಂಟ	೪೭	೨೧	೨೬
	ನರಗುಂದ	ನರಗುಂದ	೧	೦	೧
	ರೋಣ	ಗಜೇಂದ್ರಗಡ	೧	೦	೧
ಹಾವೇರಿ	ಶಿಗ್ಗಾಂವ	ಕೃಷ್ಣಾ ನಗರ	೧	೦	೧
		ಬಂಕಾಪುರ	೫	೧	೪
		ಮುತ್ತಹಳ್ಳಿ	೧೨	೧	೧೧
		ಕಾಮನಹಳ್ಳಿ	೪	೩	೧
ಉತ್ತರ ಕನ್ನಡ	ಹಳಿಯಾಳ	ಗಾಂಧಿ ನಗರ	೪೯	೧೭	೩೨
ಕೋಲಾರ	ಬಂಗಾರಪೇಟೆ	ಬಿಇಎಂಎಲ್ ನಗರ೧	೧	೦	೧
ಮೈಸೂರು	ಮೈಸೂರು	ಮೈಸೂರು	೪	೧	೩
ಒಟ್ಟು			೪೮೫	೧೭೧	೩೧೪

ಕಂಜರಭಾಟ ಸಮುದಾಯದ ಮಾಹಿತಿದಾರರ ವಿವರ

ಸಂ.	ಮಾಹಿತಿದಾರರ ಹೆಸರು	ವಯಸ್ಸು	ಕಸಬು	ವಾಸಸ್ಥಳ
೦೧	ಸುರೇಶ ಪ್ರಭು ಮಾಥರೆ	೪೫	ಕೂಲಿ	ಅಜ್ಜನಕಟ್ಟಿ
೦೨	ಜೈಸಿಂಗ ಝಿಣು ಬಾಗಡೆ	೫೨	ಕೂಲಿ	ಬಿಜಾಪುರ
೦೩	ಕೈಲಾಸ ನವೀನ ಬಾಟುಂಗೆ	೫೦	ಕೂಲಿ	ಬಿಜಾಪುರ
೦೪	ಮನೋಜ ಶಿವಲಾಲ ಬಾಗಡೆ	೪೯	ಕೂಲಿ	ಬಿಜಾಪುರ
೦೫	ಶಾನಾಬಾಯಿ ಬಾಟುಂಗೆ	೭೨	ಮನೆಕೆಲಸ	ಬಿಜಾಪುರ
೦೬	ಗಿಡ್ಡು ನೆಥಲೆ	೯೨	ಮನೆಕೆಲಸ	ಬೆಲ್ಲದ ಬಾಗೇವಾಡಿ
೦೭	ಬಾಬ್ಬಿವಜೀರ ಬಾಗಡೆ	೫೦	ಕೂಲಿ	ದಾಂಡೇಲಿ
೦೮	ಕದಮ ಲೈನ್ಯಾ ಗಾಗಡೆ	೫೩	ಕೂಲಿ	ದಾಂಡೇಲಿ
೦೯	ಲೈನ್ಯಾ ಗಾಗಡೆ	೯೧	ನೌಕರದಾರ	ದಾಂಡೇಲಿ
೧೦	ಸಿನ್ಯಾ ಮಸೇರಾಮ ಮೀಣೆಕರ	೬೯	ಕೂಲಿ	ದಾಂಡೇಲಿ
೧೧	ಅಕ್ಕು ಬಾದಾಮಿ ಬಾಗಡೆ	೬೫	ನಿವೃತ್ತ ನೌಕರ	ಗದಗ
೧೨	ಅನಾರ ಬಾಳು ಗಾಗಡೆ	೬೮	ನಿವೃತ್ತ ನೌಕರ	ಗದಗ
೧೩	ಅನಸೂಯಾ ಅಪ್ಸರ ಬಾಗಡೆ	೭೨	ಭಿಕ್ಷಾಟನೆ	ಗದಗ
೧೪	ಬೇನು ಬಾಳು ಭಾಟ	೭೫	ನಿವೃತ್ತ ನೌಕರ	ಗದಗ
೧೫	ಗುಲಶನ ಮಾಣಿಕ ಗಾಗಡೆ	೭೬	ಒಕ್ಕಲುತನ	ಗದಗ
೧೬	ಕಲಾವತಿ ಪಾಪಣ್ಣಾ ನವಲೆ	೪೯	ಭಿಕ್ಷಾಟನೆ	ಗದಗ
೧೭	ಮೋಹನ ಲೇಮು ಕಟ್ಟಿಮನಿ	೬೨	ನಿವೃತ್ತ ನೌಕರ	ಗದಗ
೧೮	ಪನ್ನಾ ಜೆ ಬಾಗಡೆ	೫೬	ಮನೆಕೆಲಸ	ಗದಗ
೧೯	ರಮೇಶ ಅಪ್ಪರ ಬಾಗಡೆ	೬೦	ನಿವೃತ್ತ ನೌಕರ	ಗದಗ
೨೦	ರಮೇಶ ಲೇಮು ಕಟ್ಟಿಮನಿ	೫೫	ನಿವೃತ್ತ ನೌಕರ	ಗದಗ
೨೧	ರಮೇಶ ಮಾಣಿಕಗಾಗಡೆ	೫೫	ನಿವೃತ್ತ ನೌಕರ	ಗದಗ
೨೧	ಸಾವನ ಪೀತಾಂಬರ ನವಲೆ	೫೦	ನೌಕರದಾರ	ಗದಗ
೨೨	ಸುರೇಶ ಮೋಹನ ಕಟ್ಟಿಮನಿ	೩೩	ರೀಕ್ಷಾ ಚಾಲಕ	ಗದಗ
೨೩	ಶಾನಾ ಮಲ್ಲ್ಯಾ ನವಲೆ	೬೦	ಭಿಕ್ಷಾಟನೆ	ಗದಗ
೨೪	ವಿಮಲಾ ಅಕ್ಕು ಬಾಗಡೆ	೫೮	ಮನೆಕೆಲಸ	ಗದಗ
೨೫	ಅಮರಸಿಂಗ್ ಬಿ ಬಾಗಡೆ	೫೯	ರೈಲ್ವೆ ನೌಕರ	ಹುಬ್ಬಳ್ಳಿ
೨೬	ಅನುಪ ಶಿವಲಾಲಾ ಬಾಗಡೆ	೪೭	ನಿವೃತ್ತ ನೌಕರ	ಹುಬ್ಬಳ್ಳಿ
೨೭	ಬನಾರ ಬಾಬು ಭಾಟ್	೭೧	ನಿವೃತ್ತ ನೌಕರ	ಹುಬಳ್ಳಿ
೨೮	ಬಾದಲ ಪಿ. ನವಲೇಕರ್	೪೮	ಶಿಕ್ಷಕ	ಹುಬ್ಬಳ್ಳಿ

೨೯	ಗೋಪಿ ಬಾಬು ನವಲೆ	೮೦	ಭಿಕ್ಷಾಟನೆ	ಹುಬ್ಬಳ್ಳಿ
೩೦	ಕಿಶೋರಿ ಅಮರುಬಾಗಡೆ	೫೪	ಮನೆಕೆಲಸ	ಹುಬ್ಬಳ್ಳಿ
೩೧	ಲೈಲಾ ವಜೀರ ನವಲೆ	೬೩	ಮನೆಕೆಲಸ	ಹುಬ್ಬಳ್ಳಿ
೩೨	ನಿಂಗಾ ಶಿವಲಾಲ ಗಾಗಡೆ	೬೯	ಕೂಲಿ	ಹುಬ್ಬಳ್ಳಿ
೩೩	ಪ್ರತಾಪ ಚಾವಸ ಮಾಛರೆ	೬೪	ನಿವೃತ್ತ ನೌಕರ	ಹುಬ್ಬಳ್ಳಿ
೩೪	ರಘು ತೋಕರಸಿಂಗ್ ಮಾಛರೆ	೫೩	ಸರಕಾರಿ ನೌಕರ	ಹುಬಳ್ಳಿ
೩೫	ರಾಜು ಶಿವಲಾಲ ಗಾಗಡೆ	೫೬	ಸರಕಾರಿ ನೌಕರ	ಹುಬಳ್ಳಿ
೩೬	ರೇಶ್ಮಿ ಸಾಗರ ನವಲೆ	೫೨	ಮನೆಕೆಲಸ	ಹುಬ್ಬಳ್ಳಿ
೩೭	ಸಾಗರ ಬಾಬು ನವಲೆ	೫೯	ರೈಲ್ವೆ ನೌಕರ	ಹುಬ್ಬಳ್ಳಿ
೩೮	ಸುಭಾಸ್ ಸುಭಾನ ಮೀಣೆಕರ್	೫೩	ರೈಲ್ವೆ ನೌಕರ	ಹುಬ್ಬಳ್ಳಿ
೩೯	ಸುರೇಶ ತೋಕರಸಿಂಗ್ ಮಾವುರ್	೫೪	ರೈಲ್ವೆ ನೌಕರ	ಹುಬ್ಬಳ್ಳಿ
೪೦	ಉಷಾ ರಘು ಮಾಛರೆ	೪೫	ಮನೆಕೆಲಸ	ಹುಬ್ಬಳ್ಳಿ
೪೧	ವಜೀರ ಸೋಮಯ್ಯ	೭೩	ನಿವೃತ್ತ ನೌಕರ	ಹುಬ್ಬಳ್ಳಿ
೪೨	ಜೈತನಸಾಬು ಬಾಟುಂಗೆ	೭೫	ಮನೆಕೆಲಸ	ಮುಧೋಳ
೪೩	ಹಾಂಡಿ ಗೌರ್‍ನರ	೮೯	ಭಿಕ್ಷಾಟನೆ	ರಾಯಬಾಗ
೪೪	ರಮೇಶ ರಾಹಿ	೫೪	ನೌಕರಸ್ಥ	ದೆಹಲಿ
೪೫	ಸಂಗು ಮಲಕೆ	೮೩	ಕೂಲಿ	ಇಚಲಕರಂಜಿ
೪೬	ಸಾಗರ ಜಿಲ್ಲಾ ಭಾಟ	೭೪	ಕೃಷಿ	ಇಚಲಕರಂಜಿ
೪೭	ವಿಜಯಸಿಂಗ್ ಗಾಗಡೆ	೭೯	ಕೂಲಿ	ಇಚಲಕರಂಜಿ
೪೮	ಜಪಾನ ವಜೀರ ಬಾಗಡೆ	೬೧	ಕೂಲಿ	ಕೊಲ್ಲಾಪುರ
೪೯	ಜಗದೀಶ ಭಾಟ	೬೫	ವ್ಯಾಪಾರಿ	ಪೂನಾ
೫೦	ಕವಿಚಂದ ಭಾಟ	೬೦	ಮಾಜಿ ಮೇಯರ	ಪೂನಾ
೫೧	ಮೋರಚಂದ ಭಾಟ	೫೬	ವಕೀಲರು	ಪೂನಾ

ಪರಾಮರ್ಶನ ಸೂಚಿ

ಕನ್ನಡ

ದೇಸಾಯಿ, ಹೇಮಲತಾ., "ಗದಗಿನ ಕಂಜರ ಭಾಟ ಜನಾಂಗ" *ಬಿಸಿಲ ಬದುಕು* (ದಾವಣಗೆರೆ: ಸೆಪ್ಟೆಂಬರ್ ೧೯೯೭), ಪುಟ ೬೮ ೭೧.

ಹಂಪ, ನಾಗರಾಜಯ್ಯ., *ದ್ರಾವಿಡಭಾಷಾವಿಜ್ಞಾನ* (ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೯೧).

ಹಿತ್ತೈಪಿ., "ಅಭಿವೃದ್ಧಿಯ ನಿರಿಕ್ಷೆಯಲ್ಲಿ ಕಂಜರಭಾಟ ಸಮಾಜ" *ನವೋದಯ* ದಿನಪತ್ರಿಕೆ, ಗದಗ, ೨೧.೧೨.೧೯೯೫.

ಕಟ್ಟೀ, ವೆಂಕಟರಂಗೋ(ಅನು)., *ಗ್ಯಾಝೆಟೀಯರು ಮುಂಬಯೀ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು: ಧಾರವಾಡ ಬೆಳಗಾವಿ ವಿಜಾಪುರ ಕಾನಡಾ ಈ ನಾಲ್ಕು ಜಿಲ್ಲೆಗಳದ್ದು* (ಮುಂಬಯಿ: ಗವರ್ನಮೆಂತ ಸೆಂತ್ರಲ್ ಬುಕ್ ಡಿಪೊ, ೧೮೯೩; ಪುನರ್ ಮುದ್ರಣ. ೧೯೮೪, ಹೊಸ ದೆಹಲಿ: ಏಷಿಯನ್ ಎಜುಕೇಷನಲ್ ಸರ್ವೀಸೆಸ್).

ಕಿಟ್ಟೆಲ್, ಎಫ್., *ಕನ್ನಡ ಇಂಗ್ಲಿಷ್ ಡಿಕ್ಷನರಿ* (ನವದೆಹಲಿ: ಏಷಿಯನ್ ಎಜುಕೇಷನಲ್ ಸರ್ವಿಸೆಸ್, ೧೯೯೩).

ಮೇತ್ರಿ, ಕೆ ಎಂ., *ಬುಡಕಟ್ಟು ಕುಲಕಸುಬುಗಳು* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೨).

ಪ್ರಶಾಂತ, ಎಚ್ ಡಿ (ಸಂ)., *ಜನಸಮುದಾಯ ಸಂಪುಟ* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೦).

ರೈ, ಎ ಸುಬ್ಬಣ್ಣ...(ಸಂ)., *ದ್ರಾವಿಡ ನಿಘಂಟು* (ಹಂಪಿ: ಕನ್ನಡ ವಿಶ್ವವಿದ್ಯಾಲಯ, ೨೦೦೧).

ಹಿಂದಿ

ದಕ್ಷಿಣ ಭಜರಂಗೆ (ಲೇ)., "ಛಾರಾನಗರ ಮೇ ಏಕ್ ದಿನ್ ಬುಧನ ಏಕ ನಾಟಕ" ಪಾಂಡೆ, ಅನಿಲ್‌ಕುಮಾರ (ಸಂ)., *ಬುಧನ್*, ದೆಹಲಿ: ರಾಹುಲ್ ಸಾಂಕೃತ್ಯಾಯನ ಪ್ರತಿಷ್ಠಾನ, ಸಂಪುಟ ೧, ಸಂಚಿಕೆ ೨, ಏಪ್ರಿಲ್ ಜೂನ್ ೨೦೦೧, ಪುಟ ೨೧-೩೪.

ಜಾಟ, ಖೂಬಚಂದ್., *ಕಂಜರ ಭಾಷಾ* (*ಭಾಂತು ಸಮಾಜ*) (ಜಬಲಪುರ: ಕಂಜರ್ ಮೋಹಲ್ಲಾ, ೨೦೦೩).

ಜಾಟ, ಪ್ರಭಾತಚಂದ(ಸಂ)., *ಜಾಟ ಕಂಜರ ಸಮಾಜ ಪಂಚಾಯತ ಸಮಿತಿ* (ಜಬ್ಬರ್‌ಪುರ: ಕಂಜರ್ ಮೊಹಲ್ಲಾ, ೨೦೦೭).

ರಾಮರೂಪ ಭಾನೆರಿಯಾ (ಲೇ)., "ಸಾಂಸಿ ಜಾತಿ ಕಿ ಕಹಾನಿ ಉಸಕಿ ಅಪನಿ ಜುಬಾನಿ" ಸಿಸೋದಿಯ, ಆರ್ ಸಿ (ಸಂ)., *ಭಾರತ ವರ್ಷ ಮೇ ಜಾತಿಪ್ರಥಾ ಕಾ ಪ್ರಾದುರ್ಭಾವ*

(ಭೂಪಾಲ್: ಸಾಂಸಿ ಸಮಾಜ ಸುಧಾರ ಸಂಘ), ೧೯೯೪ ಪುಟ ೩೪-೩೫.
ಸಿಸೋದಿಯ, ಆರ್ ಸಿ (ಸಂ)., *ಭಾರತ ವರ್ಷ ಮೇ ಜಾತಿಪ್ರಥಾ ಕಾ ಫ್ರಾದುರ್ಭಾವ* (ಭೂಪಾಲ್: ಸಾಂಸಿ ಸಮಾಜ ಸುಧಾರ ಸಂಘ), ೧೯೯೪ ಪುಟ ೧,೨,೪,೩೪,೩೫.

ಮರಾಠಿ

ಭಾಟ, ಮೋರಚಂದ., *ಸಂಸಮಲ್ ಜಾತ ಪಂಚಾಯತ್ ಕಾಯ್ದಾ ಕನೂನ ಘಟನಾ ಸಮಿತಿ,* (ಪುಣೆ: ಅಖಿಲ ಭಾರತೀಯ ಸಂಸಮಲ್ ಕಂಜರಭಾಟ ಸಮಾಜ ಸಂಘ, ೨೦೦೦).
ಮೀಣೆಕರ್, ಅಜೀತ್., *ಫಿರಸ್ತೂ* (ಇಚಲಕರಂಜಿ: ಸಲೋನಿ ಅಜೀತ್ ಮೀಣೇಕರ್, ೧೯೯೭).
ರಾಠೋಡ, ಮೋತಿರಾಜ., *ಪಾಲ ನಿವಾಸಿ ಭಟಕ್ಯಾ ಜಮಾತಿ* (ಔರಂಗಾಬಾದ: ಬಂಜಾರ ಕರಮಚಾರಿ ಸಂಘಟನ ಮಹಾರಾಷ್ಟ್ರ, ೨೦೦೭).

ಇಂಗ್ಲಿಷ್

Ananthakrishna Iyer, L K., *The Mysore Tribes and Castes* (Mysore: The Mysore University, 1930; rpt. 1998, New Delhi: Mittal Publications), 5 Vols.
Annual Report of the working of the Criminal Tribes Act for the year 1946-47 (Poona: Yeravada prison Press, 1950)
Annual Report of the working of the Criminal Tribes Act for the year 1947-48 (Poona: Yeravada prison Press, 1950)
Ayyangar, Ananthasayanam (Chairman)., *Report on the Criminal Tribes Act Enquiry Committee, 1949-50* (New Delhi: Ministry of Home Affairs, Government of India).
Bagade, J V., " Letter to the Prime Minister from Kanjarbhaats" Devy, G N (editor)., *Budhan* (Vadodara: DNT Rights Action Group), vol. IV, Issue. 2, April-June 2001, pp. 21-23.
Brochure on Reservation for Scheduled Castes, Scheduled Tribes and Other Categories of Backward Classes in Services and Posts (Bangalore: Government Press, 1987).
Brochure on Reservation and Concessions for Scheduled Castes, Scheduled Tribes and Other Backward Classes...(New Delhi: A Nabhi Publications, 2004).
Crooke, W., *The Tribes and Castes of the North - Western India* (Calcutta: Government Printing Press, 1896; rpt. 1975, Delhi: Cosmo Publications), vol. I, p. 294, vol.III, vol. IV, pp.56-57.
Das, A K., *Handbook on Scheduled Castes and Tribes of West Bengal,*

Series No. 8 (Calcutta: Tribal Welfare Department, Government of West Bengal, 1966).

Devy, G N (Chairman)., Technical Advisory Group on Denotified Nomadic and Semi-nomadic Tribes Report, 2006 (New Delhi: Ministry of Social Justice and Empowerment, Government of India).

Eustace J Kitts, *A Compendium of the Castes and Tribes found in India: Census of India 1881* (Byculla: Education Sociey Press,1885; rpt.1982, Gurgaon: The Academic Press, Gurgaon).

Enthoven, R E., *The Tribes and Castes of Bombay* (Bombay: Government Central Press,1922; rpt. 1975, Delhi: Cosmo Publications) Vol.II, p.157, vol. III, p. 126.

Fuchs, S., *At the Bottom of Indian Society* (New Delhi: Munshiram Manoharlal, 1981).

Hassan, S S., *The Castes and Tribes of H E H Nizam's Dominions* (Bombay: Government Central Press, 1920; rpt. 1989, New Delhi: Asian Educational Services).

Havanur, L G (Chairman)., *Karnataka Backward Classes Commission Report* (Bangalore: Government Press, 1975), 5 Vols.

Ibbetson, D., *Panjab Castes: Races Castes and Tribes of the People of Panjab* (Lahore: Government Press, 1916; rpt. 1981, New Delhi: Cosmo Publications), p.288.

Lakhan Gusain (Artical) "Endangered Language: A Case Study of Sansiboli", Thirumalai, M S (ed)., *Language in India,* Vol. 2, 9th December 2002

Larely, W B., Bihar and Orissa, *Census of India, 1931,* Part II (rpt. 1987, New Delhi: Usha Publications), p. 130.

Lawrence, D'souza S J., *Kanjara Bhat* (Bijapur: UNESCO Learning Centre, 2004)

Mathur, U B., 'Ethnographic Atlas of Rajasthan' *Census of Inida*, 1961 (Delhi: Manager of Publications, 1969), vol. 14, Part 9, pp. 78-79.

Mazumdar, D N., *Races and Cultures of India* (New Delhi: Asia Publishing House, 1944).

Misra, P K, Rajalakshmi, C R, Verghese, I., *Nomads in the Mysore City* (Calcutta: Anthropological Survey of India, 1971).


Nagan Gowda, R (Chairman)., *Mysore Backward Classes Committee Report* (Bangalore: Government Press, 1979).

Nanjundayya, H V., *The Ethnographic Survey of Mysore* (Bangalore: Government Press, 1906).

Pandya, R V., Special Table on SC and ST, Social Cultural Tables v, Series 10, Madhya Pradesh, Part II - C (i), *Census of India 1971* (Delhi: Controller of Publications, 1975).

Raghaviah, V., *Nomads* (Delhi: Bharatiya Adim Jati Sevak Sangh, 1968).
Ravivarma Kumar (Chairman)., *The Karnataka State Commission for Backward Classes Special Report -2000* (Bangalore: Government Press, 2000).
Reddy, O Chinnappa (Chairman).,Report of the Karnataka Third Backward Classes Commission (Bangalore: Government Press, 1990), 2 Vols.
Risley, H H.,*The Caste and Tribes of Bengal* (Calcutta: Bengal Secretariat Press, 1891; rpt.1981, Calcutta: Firma Mukhopadhyay), vol. II, pp. 129-30, 419.
Rose, H A., *Glossary of the Tribes and Castes of the Punjab and NWF Province* (Lahor: Government Press, 1919; rpt. 1980, Delhi: Amar Prakashan) vol.II, p.474, vol.III, pp. 163-65.
Russell, R V and Hiralal, *The Tribes and Castes of the Central Provinces of India* (London: Macmillan and Co., 1916; rpt. 1975, New Delhi:Cosmo Publications),vol. I, vol. II, pp. 386-94.
Shashi, S S., *The World of Nomads*(New Delhi: Lotus Press, 2006).
Sher, Sher Singh., *Sansis of Punjab* (Delhi: Munshiram Manoharlal, 1965).
Singh, K S., *The Scheduled Castes* (Delhi: Oxford University, Press,1993) People of Inida National Series, vol. 2
...., *The Scheduled Tribes* (Delhi: Oxford University, Press,1994) People of Inida National Series, vol. 3
...., *India's Communities* (Delhi: Oxford University, Press,1998) People of Inida National Series, vol.4-6.
.... (General Editor)., *People of India : Karnataka* (New Delhi: Anthropological Survey of India, 2003) Volume XXVI.

The Annual Administration Report on the Working of the Criminal Tribes Act in the Bombay Presidency Part - I (Bombay: Govt. Central Press, 1936)
'The Castes of Marwar', 1894, *Census of India, 1892*, vol. II, pp.195-96.
The New Encyclopaedia Britannica (The University of Chicago, 1992)
Thurrston, E., *Ethnographic Notes on Southern India* (Madrss: Government Press, 1906).
..........., *Castes and Tribes of Southern India* (Madrss: Government Press, 1909; rpt. 1975, Delhi: Cosmo Publications) 7 vols.
Venkataswamy, T (Chairman).,Report of the Karnataka Second Backward Classes Commission (Bangalore: Government Press, 1986), 3 Vols.



ಗುಡಾರದ ಮುಂದೆ ಅಲೆಮಾರಿತನದ ಬದುಕು



ವಿಶ್ರಾಂತಿ ಸಮಯದಲ್ಲಿ ಗುಡಾರದ ಮುಂದೆ ನೃತ್ಯ



ಶ್ರೀ ರಾಮದೇವಜಿ (ಅಲಖ) ಪೂಜೆ




ಭಟ್ಟಿ ಸರಾಯಿ ತಯಾರಿಸುತ್ತಿರುವುದು




ಗುಡಾರದ ಮುಂದೆ ಪಾತ್ರೆ ತೊಳೆಯುತ್ತಿರುವುದು




ಗುಡಾರದ ಮುಂದೆ ನಿಂತ ವಯೋವೃದ್ಧ



ದೇವರ ಕೀರ್ತನೆ ಮತ್ತು ಭಜನೆ ಮಾಡುತ್ತಿರುವವರು




ಸತ್ತ ವ್ಯಕ್ತಿಯ ಅಸ್ಥಿಗಳನ್ನು ನದಿಯಲ್ಲಿ ಬಿಡುತ್ತಿರುವುದು



ಸಂಚಾರಿ ಮಹಿಳೆಯರು ಟೆಂಟನಲ್ಲಿ ವಿಶ್ರಮಿಸುತ್ತಿರುವುದು




ಕತ್ತೆಯ ಮೇಲೆ ಜೀವನೋಪಾಯದ ಸಾಮಗ್ರಿಗಳೊಂದಿಗೆ ವಲಸೆ ಹೋಗುತ್ತಿರುವುದು




ವ್ಯಾಜ್ಯಗಳ ತೀರ್ಮಾನದ ಜಾತಿ ಪಂಚಾಯತಿ




ಮುಕ್ತಿಧಾಮದಲ್ಲಿ ಅಡಿಗೆ ಮಾಡುತ್ತಿರುವುದು



ರಾಷ್ಟ್ರೀಯ ವಿಮುಕ್ತ, ಅಲೆಮಾರಿ ಆಯೋಗದ ಅಧ್ಯಕ್ಷರಾದ ಶ್ರೀ ಬಾಲಕೃಷ್ಣ ಎಸ್ ರೇಣಕೆ ಅವರಿಗೆ ಮನವಿ ಸಲ್ಲಿಸುತ್ತಿರುವುದು (ಬಿಜಾಪುರ)



ಡಾ ಗಣೇಶ ದೇವಿ, ಶ್ರೀ ಬಾಲಕೃಷ್ಣ ಎಸ್ ರೇಣಕೆಯವರ ಜೊತೆಗೆ ಲೇಖಕರು



ಶ್ರೀಮತಿ ಮಹಾಶ್ವೇತಾದೇವಿಯವರೊಂದಿಗೆ ಲೇಖಕರು (ದೆಹಲಿ)



ಸೆಟ್ಲಮೆಂಟ ಅಧಿಕಾರಿಯ ಚಿತ್ರ (ಗದಗ)



ಶವದ ಸುತ್ತ ಕುಳಿತುಕೊಂಡು ರೋಧಿಸುತ್ತಿರುವುದು



ಗುಡಾರದ ಮುಂದೆ ಅಡಿಗೆ ಮಾಡುತ್ತಿರುವುದು



ಕಂಜರಭಾಟ ದಂಪತಿಗಳು



ಶ್ರೀ ಕೃಷ್ಣ ಜಯಂತಿ ಉತ್ಸವದಲ್ಲಿ ಮೊಸರು ಗಡಿಗೆ ಒಡೆಯುತ್ತಿರುವುದು



ಅಲೆಮಾರಿ
ಸಮುದಾಯಗಳ
ಅಧ್ಯಯನಮಾಲೆ

ನಮ್ಮದು ಬಹುಸಂಸ್ಕೃತಿಗಳ ಸಮಾಜ. ಗಣತಿಯಲ್ಲಿ ಲೆಕ್ಕಕ್ಕೆ ಸಿಕ್ಕವು ಕೆಲವಾದರೆ ಸಿಗದವು ಹಲವು. ಲೆಕ್ಕಕ್ಕೆ ಸಿಕ್ಕಿಯೂ ಪರಿಗಣನೆಗೆ ಬಾರದೆ ತಪ್ಪು ನಮೂದಾಗಿರುವ ಸಮುದಾಯಗಳು ಇನ್ನೂ ಹಲವಾರಿವೆ.

ಈ ನೆಲದ ಅಲೆಮಾರಿ ಸಮುದಾಯಗಳಿಗೆ ಇಂದಿಗೂ ಹೇಳಿಕೊಳ್ಳುವ ಒಂದು ನಿರ್ದಿಷ್ಟ ನೆಲೆ ಇಲ್ಲ. ಅವರಿಗೆ ಅವರದೇ ಆದ ಭೂಮಿಕಾಣಿ ಊರುಕೇರಿ ಎಂಬುವು ಇಲ್ಲ. ಎಷ್ಟೋ ಅಲೆಮಾರಿ ಸಮುದಾಯಗಳಿಗೆ ನಿರ್ದಿಷ್ಟವಾದ ಹೆಸರೂ ಇಲ್ಲ. ಬಹುನಾಮಗಳಿಗೆ ಒಳಗಾಗಿರುವುದರಿಂದ ಅದರಿಂದಾಗುವ ಅನ್ಯಾಯದ ಅರಿವಿಲ್ಲದೆ ಆ ಸಮುದಾಯಗಳು ಬದುಕಿವೆ. ಅವುಗಳ ನಿಜವಾದ ವಸ್ತುನಿಷ್ಠ ಸಂಗತಿಯ ಅಧ್ಯಯನದ ಫಲ ಈ ಮಾಲಿಕೆ.

ಈ ಮಾಲಿಕೆಯಲ್ಲಿ ಇಪ್ಪತ್ತೆರಡು ಅಲೆಮಾರಿ ಸಮುದಾಯಗಳ ಅಧ್ಯಯನವಿದೆ. ಆಯಾ ಸಮುದಾಯ ಮೂಲಗಳಿಂದ ಬಂದು ಅಕ್ಷರ ಜಗತ್ತಿಗೆ ತೆರೆದುಕೊಂಡಿರುವ ಎಚ್ಚೆತ್ತ ಯುವಕರು ತಮ್ಮ ತಮ್ಮ ಸಮುದಾಯಗಳ ಬಗ್ಗೆ ಕ್ಷೇತ್ರಾಧ್ಯಯನ ನಡೆಸಿ ಕಟ್ಟಿಕೊಟ್ಟಿರುವ ವಸ್ತುನಿಷ್ಠ ಅಧ್ಯಯನವಿದು. ನೊಂದ ನೋವ ನೊಂದವರೇ ನಿವೇದಿಸಿರುವ ವ್ಯಥಾನಕವಿದು.

ಪ್ರೊ ಎಸ್ ಜಿ ಸಿದ್ಧರಾಮಯ್ಯ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು



ISBN 81-7713-231-8